# ಡಾ॥ ಎನ್.ನಾಗಾಂಬಿಕಾದೇವಿ, ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 25.11.2019 ರಂದು ಅಪರಾಹ್ನ 12.00 ಗಂಟೆಗೆ ಶ್ರೀ ವಿಶ್ವೇಶ್ವರಯ್ಯ ಸಭಾಂಗಣ, ಜಿಲ್ಲಾ ಪಂಚಾಯತ್ ನಲ್ಲಿ ನಡೆಸಲಾದ ಚಿಕ್ಕಬಳ್ಳಾಪುರ ಜಿಲ್ಲೆಯ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯ ನಡಾವಳಿಗಳು.

********

<u>ಅಧ್ಯಕ್ಷತೆ</u>: ಡಾ॥ ಎನ್.ನಾಗಾಂಬಿಕಾದೇವಿ, ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಸಹಕಾರ ಇಲಾಖೆ ಹಾಗೂ ಚಿಕ್ಕಬಳ್ಳಾಪುರ
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು.

<u>ಸಭೆಯಲ್ಲಿ ಹಾಜರಿದ್ದವರು</u> :

1) ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ ಜಿಲ್ಲೆ.
2) ಅಪರ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.
3) ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ.
4) ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಬಳ್ಳಾಪುರ.
5) ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಚಿಕ್ಕಬಳ್ಳಾಪುರ.
6) ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಚಿಕ್ಕಬಳ್ಳಾಪುರ.
7) ಜಿಲ್ಲಾ ಅಧಿಕಾರಿಗಳು, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಚಿಕ್ಕಬಳ್ಳಾಪುರ.
8) ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ.
9) ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ ಇಲಾಖೆ, ಚಿಕ್ಕಬಳ್ಳಾಪುರ.
10) ಹಿರಿಯ ಸಹಾಯಕ ನಿರ್ದೇಶಕರು, ವಾರ್ತ ಮತ್ತು ಪ್ರಚಾರ ಇಲಾಖೆ, ಚಿಕ್ಕಬಳ್ಳಾಪುರ.
11) ಉಪನಿರ್ದೇಶಕರು, ರೇಷ್ಮೆ ಇಲಾಖೆ, ಚಿಕ್ಕಬಳ್ಳಾಪುರ.
12) ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಚಿಕ್ಕಬಳ್ಳಾಪುರ.
13) ಉಪನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಚಿಕ್ಕಬಳ್ಳಾಪುರ.
14) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಚಿಕ್ಕಬಳ್ಳಾಪುರ.
15) ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ಚಿಕ್ಕಬಳ್ಳಾಪುರ.
16) ಕಾರ್ಯಪಾಲಕ ಅಭಿಯಂತರರು, ಕುಡಿಯುವ ನೀರು & ನೈರ್ಮಲ್ಯ ವಿಭಾಗ ಚಿಕ್ಕಬಳ್ಳಾಪುರ.
17) ಜಿಲ್ಲೆಯ ಎಲ್ಲಾ ತಹಶೀಲ್ದಾರ್‌ಗಳು ಚಿಕ್ಕಬಳ್ಳಾಪುರ ಜಿಲ್ಲೆ.
18) ಜಿಲ್ಲೆಯ ಎಲ್ಲಾ ಕಾರ್ಯನಿರ್ವಾಹಣಾಧಿಕಾರಿಗಳು, ಚಿಕ್ಕಬಳ್ಳಾಪುರ.
19) ಇತರೆ ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಡಾ॥ ಎನ್.ನಾಗಾಂಬಿಕಾ ದೇವಿ, ಭಾ.ಆ.ಸೇ., ರವರಿಗೆ ಅಪರ ಜಿಲ್ಲಾಧಿಕಾರಿಗಳು, ರವರು ಸ್ವಾಗತ ಕೋರಿ ಜಿಲ್ಲೆಯ ಎಲ್ಲಾ ಇಲಾಖೆಗಳ ಪ್ರಗತಿ ಪರಿಶೀಲನೆ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಲು ಕೋರಿದರು. ನಂತರ ಸಭೆಯನ್ನು ಪ್ರಾರಂಭಿಸಿ ಈ ಕೆಳಕಂಡ ಇಲಾಖೆಗಳ ಬಗ್ಗೆ ಪ್ರಗತಿ ಪರಿಶೀಲನೆಯನ್ನು ನಡೆಸಲಾಯಿತು.

<u>ಇಲಾಖಾವಾರು ಪ್ರಗತಿ ಪರಿಶೀಲನೆ:-</u>

1) <u>ಕೃಷಿ ಇಲಾಖೆ :-</u>

ಜಂಟಿ ನಿರ್ದೇಶಕರು, ಕೃಷಿ ಇಲಾಖೆ ರವರು ಮಾತನಾಡಿ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ಉತ್ತಮ ಮಳೆಯಾಗಿರುವುದರಿಂದ ಮುಂಗಾರುನಲ್ಲಿ ಒಟ್ಟು 154000 ಹೆಕ್ಟೆರ್‌ನಷ್ಟು ಪ್ರದೇಶದಲ್ಲಿ

ಬಿತ್ತನೆ ಗುರಿಯನ್ನು ಹೊಂದಲಾಗಿ 131358 ಹೆಕ್ಟರ್‌ನಷ್ಟು ಪ್ರದೇಶದಲ್ಲಿ 85.30% ರಷ್ಟು ಬಿತ್ತನೆಯಾಗಿದ್ದು, ರಾಗಿ ಮತ್ತು ಮುಸಕಿನ ಜೋಳ ಬೆಳೆಗಳು ಉತ್ತಮವಾದ ಇಳುವರಿಯಾಗಿರುತ್ತದೆಂದು ತಿಳಿಸಿದರು.

- 2018ರ ಮುಂಗಾರು ಹಂಗಾಮಿನ ಬೆಳೆ ವಿಮೆಯನ್ನು ಒಟ್ಟು 22514 ರೈತರಿಗೆ ಒಟ್ಟು 3762.77 ಲಕ್ಷಗಳನ್ನು ಬಿಡುಗಡೆಗೊಳಿಸಬೇಕಾಗಿದ್ದು, ಈ ಪೈಕಿ 3114.51 ಲಕ್ಷಗಳು ಬಿಡುಗಡೆಯಾಗಿದ್ದು, ಒಟ್ಟು 18884 ರೈತರಿಗೆ ಜಮೇ ಮಾಡಲಾಗಿರುತ್ತದೆಂದು 2019-20ನೇ ಸಾಲಿನಲ್ಲಿ ಒಟ್ಟು 10421 ಫಲಾನುಭವಿಗಳು ನೊಂದಣಿಯಾಗಿರುವುದಾಗಿ ತಿಳಿಸಿದರು. 2018ನೇ ಸಾಲಿನ ಉಳಿದ ಫಲಾನುಭವಿಗಳಿಗೂ ಶಿಘ್ರವಾಗಿ ಬೆಳೆವಿಮೆಯ ಮೊತ್ತವನ್ನು ಪಾವತಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆಯನ್ನು ಆಯೋಜಿಸಿ ಸಂಬಂಧಪಟ್ಟ ವಿಮೇ ಕಂಪನಿಗೆ ಸೂಚಿಸಲಾಗಿರುತ್ತದೆಂದು ತಿಳಿಸಿದರು. ಬಾಕಿ ಇರುವ ಫಲಾನುಭವಿಗಳಿಗೆ ಬೆಳೆ ವಿಮೆ ಮೊತ್ತವನ್ನು ತುರ್ತಾಗಿ ಪಾವತಿಸಲು ಕ್ರಮವಹಿಸಲು ಸೂಚಿಸಿದರು.
- ಬೆಳೆ ಸಮೀಕ್ಷೆ ಕಾರ್ಯವು ಜಿಲ್ಲೆಯಲ್ಲಿ 98% ರಷ್ಟು ಪ್ರಗತಿಯನ್ನು ಸಾಧಿಸಿದ್ದು, ಬಾಕಿ ಇರುವ ಬೆಳೆ ಸಮೀಕ್ಷೆಯಲ್ಲಿ ನ್ಯೂನ್ಯತೆಗಳಿಂದ ಛಾಯಚಿತ್ರಗಳು ಮತ್ತು ಬೆಳೆಗಳಿಗೆ ಹೊಂದಾಣಿಕೆಯಾಗದ ಕಾರಣ ಪುನರ್ ಪರಿಶೀಲನೆ ಮಾಡಿ ಬೆಳೆ ಸಮೀಕ್ಷೆ ಕೈಗೊಳ್ಳಲು ನಿರ್ದೇಶನದ ಮೇರೆಗೆ ಪುನರ್ ಪರಿಶೀಲನೆ ಮಾಡಿ ಶೇ 100 ರಷ್ಟು ಪ್ರಗತಿ ಸಾಧಿಸುವುದಾಗಿ ತಿಳಿಸಿದರು.
- ಕೃಷಿ ಇಲಾಖೆಯ ಯೋಜನೆಗಳಾದ ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ಶೇ 93 ರಷ್ಟು ಸಾಧನೆಯನ್ನು ಮಾಡಿದ್ದು, ಪಿ.ಎಂ.ಕೆ.ಎಸ್.ವೈ. ಯೋಜನೆಯಡಿಯಲ್ಲಿ ಶೇ 60ರಷ್ಟು ಸಾಧನೆಯನ್ನು ಮಾಡಿದ್ದು, ಈ ಯೋಜನೆಯನ್ನು ಶೇ 100ರಷ್ಟು ಪ್ರಗತಿ ಸಾಧಿಸಲು ಸೂಚಿಸಿದರು.
- ಪಿ.ಎಂ. ಕಿಸಾನ್ ಯೋಜನೆಯಡಿಯಲ್ಲಿ ಮರಣ ಹೊಂದಿದವರು ಒಟ್ಟು 63503 ಮತ್ತು ಅನಿವಾಸಿಗಳು 31613 ಜಿಲ್ಲೆಯಲ್ಲಿ ಇರುವುದರಿಂದ ಈ ಬಗ್ಗೆ ತಹಶೀಲ್ದಾರ್ ಗಳು ಹಾಗೂ ಕಂದಾಯ ಅಧಿಕಾರಿಗಳು ಪರಿಶೀಲಿಸಿ ಸಂಬಂಧಪಟ್ಟ ವಾರಸುದಾರರಿಗೆ ಖಾತೆ ವರ್ಗಾಯಿಸಿ, ಪಿ.ಎಂ. ಕಿಸಾನ್ ಯೋಜನೆಯನ್ನು ಫಲಾನುಭವಿಗಳಿಗೆ ತಲುಪಿಸಲು ಕ್ರಮವಹಿಸಲು ಸೂಚಿಸಿದರು.
- ಎನ್.ಎಫ್.ಎಸ್.ಎಂ.ಯೋಜನೆಯಡಿ ದ್ವಿದಳ ಧಾನ್ಯಗಳ ವಿವಿಧ ತಾಂತ್ರಿಕತೆಗಳಾದ ತೊಗರಿಯಲ್ಲಿ ಯಾಂತ್ರೀಕೃತ/ಕೂರಿಗೆ ಬಿತ್ತನೆ, ತೊಗರಿಯಲ್ಲಿ ನಾಟಿ ಪದ್ಧತಿ ಹಾಗೂ ಒರಟು ಧಾನ್ಯಗಳ ತಾಂತ್ರಿಕತೆಗಳಾದ ಸಮಗ್ರ ಬೆಳೆ ನಿರ್ವಹಣೆ - ಗುಚ್ಛ ಪ್ರಾತ್ಯಕ್ಷಿಕೆಗಳು, ಮೆಕ್ಕೆ ಜೋಳ-ದ್ವಿದಳ ಧಾನ್ಯ ಅಂತರ ಬೆಳೆ, ಮೆಕ್ಕೆ ಜೋಳ- ತೊಗರಿ ಅಂತರ ಬೆಳೆ ಮತ್ತು ನ್ಯೂಟ್ರಿ ಸಿರಿಯಲ್ಸ್‌ಗಳ ತಾಂತ್ರಿಕತೆಗಳಾದ ರಾಗಿ-ಸಾಲು ಬಿತ್ತನೆ/ ಯಾಂತ್ರೀಕೃತ/ನಾಟಿ ಬಿತ್ತನೆ/ದ್ವಿದಳ ಧಾನ್ಯ ಅಂತರ ಬೆಳೆತಾಂತ್ರಿಕತೆಯಡಿ 3201 ಹೆ. ಗುರಿ ಹೊಂದಿದ್ದು, KSRSAC ಸಂಸ್ಥೆಯವರು ಅಭಿವೃದ್ಧಿಪಡಿಸಿರುವ ಮೊಬೈಲ್ ಆಪ್‌ನ ಮುಖಾಂತರ ರೈತರನ್ನು ನೊಂದಾಯಿಸಿ ತಂತ್ರಾಂಶದಲ್ಲಿ 2611 ಹೆ. ಅಳವಡಿಸುವುದರಲ್ಲಿ ರಾಜ್ಯದಲ್ಲಿಯೇ ಚಿಕ್ಕಬಳ್ಳಾಪುರ ಜಿಲ್ಲೆಯು ಮೊದಲ ಸ್ಥಾನದಲ್ಲಿದೆ ಎಂದು ತಿಳಿಸಿದರು. ಉಸ್ತುವಾರಿ ಕಾರ್ಯದರ್ಶಿಗಳು ಅಭಿನಂದನೆಯನ್ನು ಸಲ್ಲಿಸಿದರು.

**(ಕ್ರಮ: ಜಿಲ್ಲಾಧಿಕಾರಿಗಳು, ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು ಮತ್ತು ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಜಿಲ್ಲೆಯ ಎಲ್ಲಾ ತಹಶೀಲ್ದಾರ್‌ಗಳು, ಚಿಕ್ಕಬಳ್ಳಾಪುರ)**

## 2) <u>ತೋಟಗಾರಿಕಾ ಇಲಾಖೆ:-</u>

ಉಪನಿರ್ದೇಶಕರು, ತೋಟಾಗಾರಿಕೆ ಇಲಾಖೆ, ಚಿಕ್ಕಬಳ್ಳಾಪುರ ರವರು ಮಾತನಾಡಿ, ತೋಟಾಗಾರಿಕಾ ಇಲಾಖೆಗೆ ಸಂಬಂಧಿಸಿದಂತೆ, ಯೋಜನೆಗಳಾದ ಪಿ.ಎಮ್.ಕೆ.ಎಸ್.ವೈ (ಸೂಕ್ಷ್ಮ ನೀರಾವರಿ), ರಾಷ್ಟೀಯ ತೋಟಾಗಾರಿಕೆ ಮಿಷನ್, ರಾಷ್ಟೀಯ ಕೃಷಿ ವಿಕಾಸ ಯೋಜನೆ, ಸಮಗ್ರ ತೋಟಗಾರಿಕೆ ಅಭಿವೃಧ್ಧಿ ಯೋಜನೆ, ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ಶೇ 94.89ರಷ್ಟು ಪ್ರಗತಿ ಸಾಧಿಸಲಾಗಿದೆಯೆಂದು ತಿಳಿಸಿದರು.

ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ತೋಟಗಾರಿಕೆ ಬೆಳೆಗಳಿಗೆ ಉತ್ತಮ ಮಾರುಕಟ್ಟೆಯ ಸೌಲಭ್ಯವನ್ನು ಕಲ್ಪಿಸಿ, ಅವಶ್ಯಕ ಕಂಪನಿಯೊಂದಿಗೆ ಉತ್ತಮ ಸಂಬಂಧವನ್ನು ಹೊಂದಿ ರೈತರು ಬೆಳೆದ ತರಕಾರಿಗಳನ್ನು ಹಾಳಗಾದಂತೆ ಮಾರುಕಟ್ಟೆಗೆ ತಲುಪಿಸಲು ಕ್ರಮವಹಿಸಲು ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ, ಚಿಕ್ಕಬಳ್ಳಾಪುರ)**

3) **ರೇಷ್ಮೆ ಇಲಾಖೆ : –**

ಉಪನಿರ್ದೇಶಕರು, ರೇಷ್ಮೆ ಇಲಾಖೆ, ಚಿಕ್ಕಬಳ್ಳಾಪುರ ರವರು ಮಾತನಾಡಿ, ಇಲಾಖೆಯ ಕಾರ್ಯಕ್ರಮಗಳ ಯೋಜನೆಗಳನ್ನು ಉತ್ತಮ ಗುರಿಯನ್ನು ಸಾಧಿಸಿಲಾಗಿದೆ ಎಂದು ತಿಳಿಸಿದರು,

ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ರೇಷ್ಮೆ ಬೆಳೆಯ ದರದ ಬಗ್ಗೆ ವಿಚಾರಿಸಿದಾಗ ಉಪನಿರ್ದೇಶಕರು ರೇಷ್ಮೆ ಬೆಳೆಯ ದರವು 350/– ರಿಂದ 400/– ರೂಗಳ ವರೆಗೆ ಹೆಚ್ಚಾಗಿರುತ್ತದೆ ಎಂದು ತಿಳಿಸಿದರು.

ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ರೇಷ್ಮೆ ಬೆಳೆಯನ್ನು ಹೆಚ್ಚಾಗಿ ಬೆಳೆಯುವಂತೆ ಕ್ರಮ ಕೈಗೊಳ್ಳಲು ಸೂಚಿಸಿದರು.

**(ಕ್ರಮ ; ರೇಷ್ಮೆ ಉಪನಿರ್ದೇಶಕರು, ಚಿಕ್ಕಬಳ್ಳಾಪುರ)**

4) **ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ:–**

ಉಪ ನಿರ್ದೇಶಕರು, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವೆ ಇಲಾಖೆ, ರವರು ಮಾತನಾಡಿ, ರೈತರ ಬಳಿ ಲಭ್ಯವಿರುವ ಮೇವು ಮುಂದಿನ 12 ವಾರಗಳ ಅವಧಿಗೆ ಸಾಕಾಗುತ್ತದೆ ಎಂದು ತಿಳಿಸಿದರು. ಮುಂಗಾರು ಹಂಗಾಮಿನಲ್ಲಿ ಉತ್ತಮ ಮಳೆ ಆದ ಕಾರಣ ರಾಗಿ ಮತ್ತು ಮುಸಕಿನ ಜೋಳದ ಬೆಳೆಗಳ ಇಳುವರಿ ಹಚ್ಚಿರುವುದರಿಂದ ಮೇವಿಗಾಗಿ ಯಾವುದೇ ತೊಂದರೆ ಇರುವುದಿಲ್ಲ ಮತ್ತು ಈಗಾಗಲೇ ಜಿಲ್ಲೆಯಲ್ಲಿ ಸ್ಥಾಪಿಸಲಾಗಿದ್ದ ಗೋಶಾಲೆಗಳನ್ನು ಮುಚ್ಚಲಾಗಿದ್ದು ಎಂದು ತಿಳಿಸಿದರು.

ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಈ ಜಿಲ್ಲೆಯಲ್ಲಿ 03 ತಾಲ್ಲೂಕುಗಳನ್ನು ಬರ ಪೀಡಿತ ತಾಲ್ಲೂಕುಗಳೆಂದು ಸರ್ಕಾರವು ಘೋಷಿಸಿರುವುದರಿಂದ ಸದರಿ ತಾಲ್ಲೂಕುಗಳಲ್ಲಿ ಜಾನುವಾರಿಗಳಿಗೆ ಮೇವಿನ ಕೊರತೆಯಾಗದಂತೆ ಮುಂಜಾಗ್ರತೆ ಕ್ರಮ ಕೈಗೊಳ್ಳಲು ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಚಿಕ್ಕಬಳ್ಳಾಪುರ)**

5) **ಕುಡಿಯುವ ನೀರಿನ ಸರಬರಾಜು ಕುರಿತು:–**

ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಚಿಕ್ಕಬಳ್ಳಾಪುರ ರವರು ಮಾತನಾಡಿ, ಪ್ರಸ್ತುತ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಒಟ್ಟು 78 ಗ್ರಾಮಗಳಿಗೆ ಕುಡಿಯುವ ನೀರಿನ ಸಮಸ್ಯೆ ಇದ್ದು, 21 ಗ್ರಾಮಗಳಲ್ಲಿ ಟ್ಯಾಂಕರ್‌ಗಳ ಮೂಲಕ ಮತ್ತು 57 ಗ್ರಾಮಗಳಲ್ಲಿ ಖಾಸಗಿ ಕೊಳವೆಬಾವಿಗಳ ಮುಖಾಂತರ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ ಎಂದು ತಿಳಿಸಿದರು.

- ನಗರ ಪ್ರದೇಶದ ವ್ಯಾಪ್ತಿಯಲ್ಲಿ ಚಿಂತಾಮಣಿ ತಾಲ್ಲೂಕಿನಲ್ಲಿ ಒಟ್ಟು 20 ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, 35 ಟ್ಯಾಂಕರ್‌ಗಳ ಮುಖಾಂತರ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ ಎಂದು ತಿಳಿಸಿದರು.
- ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲು ಸೂಚಿಸಿದರು. ಮತ್ತು ಶುದ್ಧ ನೀರು ಘಟಕಗಳು ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸುವಂತೆ ಕ್ರಮ ಕೈಗೊಳ್ಳಲು ಸೂಚಿಸಿದರು.
- ಜಕ್ಕಲಮಡಗು ಜಲಾಶಯದಲ್ಲಿ ನೀರು ಬಂದಿರುವುದರಿಂದ 05 ಗ್ರಾಮಗಳಿಗೆ ನೀರು ಸರಬರಾಜು ಮಾಡುವ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸೂಚಿಸಿದರು.
- ಬರ ಪೀಡಿತ ತಾಲ್ಲೂಕುಗಳಲ್ಲಿ ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗದಂತೆ ಕ್ರಮವಹಿಸಲು ಸೂಚಿಸದರು.

**(ಕ್ರಮ: ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ/ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳು, ಜಿಲ್ಲಾ ಪಂಚಾಯಿತಿ/ ಜಿಲ್ಲಾ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ/ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಜಿಲ್ಲೆಯ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು)**

6) <u>ನರೇಗಾ ಯೋಜನೆ:-</u>

ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಮಾತನಾಡಿ, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ 2019-20 ನೇ ಸಾಲಿನಲ್ಲಿ ಶೇ. 76.19 ರಷ್ಟು ಪ್ರಗತಿಯನ್ನು ಸಾಧಿಸಲಾಗಿದೆ. ಎಂದು ತಿಳಿಸಿದರು.

ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ನರೇಗಾ ಕಾಮಗಾರಿಗಳಲ್ಲಿ ಹಿಂದಿನ ಸಾಲಿನಲ್ಲಿ ಕಾಮಗಾರಿ ಪೂರ್ಣಗೊಳ್ಳದೇ ಇರುವುದು ಗಮನಕ್ಕೆ ಬಂದಿರುವುದರಿಂದ ಜಿಲ್ಲೆಯ ಎಲ್ಲಾ ಕಾರ್ಯನಿರ್ವಹಣಾಧಿಕಾರಿಗಳಿಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಹಾಗೂ ಚಾಲ್ತಿಯಲ್ಲಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸೂಚಿಸಿದರು.

- ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿಯಲ್ಲಿ ನಿಗಧಿಪಡಿಸಿರುವ ಗುರಿಯನ್ನು ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಪ್ರಗತಿ ಸಾಧಿಸಲು ಸೂಚಿಸಿದರು.

**(ಕ್ರಮ: ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ)**

7) **ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ** ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿನಿಲಯವನ್ನು ನಿರ್ಮಿಸಲು ಒಂದು ನಿವೇಶನ ಅವಶ್ಯಕತೆ ಇರುವುದರಿಂದ ಈಗಾಗಲೇ ಬಾಗೇಪಲ್ಲಿ ತಹಶೀಲ್ದಾರ್ ರವರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಈ ವಾರದಲ್ಲಿಯೇ ಸ್ಥಳವನ್ನು ಗುರುತಿಸಿ, ಜಮೀನನ್ನು ಮಂಜೂರು ಮಾಡಲು ಸೂಚಿಸಿದರು.

**(ಕ್ರಮ: ಜಿಲ್ಲಾಧಿಕಾರಿಗಳು, ತಹಶೀಲ್ದಾರ್, ಬಾಗೇಪಲ್ಲಿ ತಾಲ್ಲೂಕು,)**

- 15 ಅಂಶಗಳ ಕಾರ್ಯಕ್ರಮಗಳ ಬಗ್ಗೆ ಸಭೆಗಳನ್ನು ನಡೆಸಿ, ಪುನರಾವಲೋಕನ ಮಾಡಲು ಸೂಚಿಸಿದರು.
- ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ಪಾವತಿಸಲು ತುರ್ತಾಗಿ ಕ್ರಮ ಕೈಗೊಳ್ಳಲು ಸೂಚಿಸಿದರು.

**(ಕ್ರಮ: ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಜಿಲ್ಲಾ ಅಧಿಕಾರಿಗಳು, ಹಿಂದುಳಿದ/ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮತ್ತು ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಚಿಕ್ಕಬಳ್ಳಾಪುರ)**

8) <u>ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ :-</u>

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳು ಮಾತನಾಡಿ, ಜಿಲ್ಲೆಯಲ್ಲಿ ಅಂಗನವಾಡಿ ಮಕ್ಕಳಿಗೆ ಬಿಸಿಯೂಟ ಯೋಜನೆ ವ್ಯವಸ್ಥಿತವಾಗಿ ನಡೆಯುತ್ತಿದೆ ಎಂದು ತಿಳಿಸಿದರು.

- ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಅಂಗನವಾಡಿ ಕಟ್ಟಡಗಳ ಬಗ್ಗೆ ವಿಚಾರಿಸಿದಾಗ, ಉಪನಿರ್ದೇಶಕರು ಮಾತನಾಡಿ, ನಗರ ಪ್ರದೇಶಗಳಲ್ಲಿ 113 ನಿವೇಶನಗಳು, 113 ನಿವೇಶನಗಳ ಪೈಕಿ ಈಗಾಗಲೇ 11 ನಿವೇಶನಗಳನ್ನು ನೀಡಿರುತ್ತಾರೆ. ಗ್ರಾಮಾಂತರ ಪ್ರದೇಶಗಳಲ್ಲಿ 450 ಪ್ರದೇಶಗಳಲ್ಲಿ ನಿವೇಶನಗಳು ಅವಶ್ಯಕವಾಗಿರುತ್ತವೆಂದು ತಿಳಿಸಿದರು. ನಿವೇಶನವಿಲ್ಲದ ಅಂಗನವಾಡಿ ಕಟ್ಟಡಗಳನ್ನು ಸಮೀಪದಲ್ಲಿರುವ ಶಾಲೆ ಕಟ್ಟಡಗಳಲ್ಲಿ ಅಂಗನವಾಡಿ ಕೇಂದ್ರಗಳನ್ನು ನಿರ್ವಹಿಸಲು ಸೂಚಿಸಿದರು.
- ಮಕ್ಕಳ ಅಪೌಷ್ಠಿಕತೆ ಮಟ್ಟವನ್ನು ಹಿಂದಿನ ಸಭೆಯಲ್ಲಿ 221 ರಿಂದ 197 ಕ್ಕೆ ಕಡಿಮೆ ಮಾಡಲಾಗಿದೆ ಅಪೌಷ್ಠಿಕತೆ ಮಕ್ಕಳನ್ನು ಆರೋಗ್ಯ ಕೇಂದ್ರದಲ್ಲಿ ಸೇರ್ಪಡೆ ಮಾಡಿ ಅವರ ಪೌಷ್ಠಿಕ ಮಟ್ಟವನ್ನು ಸುಧಾರಿಸುವ ಕಾರ್ಯವನ್ನು ಮಾಡಲಾಗುತ್ತಿದೆ ಎಂದು ತಿಳಿಸಿದರು.
- ಮಕ್ಕಳಿಗೆ ಒತ್ತಡ ನೀಡದೆ ಮೌಖಿಕ ಶಿಕ್ಷಣವನ್ನು ನೀಡುವುದರ ಮೂಲಕ ಮಕ್ಕಳಿಗೆ ಶೈಕ್ಷಣಿಕ ಉತ್ಸಾಹವನ್ನು ಹೆಚ್ಚಿಸಲು ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಯೋಜನಾ ನಿರ್ದೇಶಕರು ನಗರಾಭಿವೃದ್ಧಿ ಇಲಾಖೆ, ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಚಿಕ್ಕಬಳ್ಳಾಪುರ)**

9. **ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ:**

ಉಪನಿರ್ದೇಶಕರು, ಸಾರ್ವಜನಿಕ ಇಲಾಖೆ ರವರು ಮಾತನಾಡಿ, ಹಿಂದಿನ ಸಭೆಯ ನಿರ್ದೇಶನದಂತೆ ಶಾಲೆಗಳಲ್ಲಿ ಭಾಷಾ ವಿಷಯಗಳಲ್ಲಿ ಮಕ್ಕಳ ಕಲಿಕಾ ಗುಣಮಟ್ಟ ಖಾತ್ರಿಪಡಿಸಿಕೊಳ್ಳಲು SPELL BEE ಸ್ಪರ್ಧೆಗಳನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ನಡೆಸಿ ಕ್ಲಸ್ಟರ್, ತಾಲ್ಲೂಕು ಮತ್ತು ಜಿಲ್ಲಾ ಹಂತದ ಸ್ಪರ್ಧೆಗಳನ್ನು ನಡೆಸಿ ಬಹುಮಾನಗಳನ್ನು ನೀಡಲಾಗಿದೆ. ಕನ್ನಡ ಭಾಷೆಯ ಸ್ಪರ್ಧೆಗಳ ವಿಜೇತರಿಗೆ ನವೆಂಬರ್-1 ರ ರಾಜ್ಯೋತ್ಸವದ ದಿನದಂದು ಬಹುಮಾನಗಳನ್ನು ನೀಡಲಾಗಿದೆಂದು ತಿಳಿಸಿದರು.

- ಮಕ್ಕಳಲ್ಲಿ ಕಲಿಕಾ ಮಟ್ಟವನ್ನು ಹೆಚ್ಚಿಸುವಲ್ಲಿ ಸಮರ್ಪಕವಾಗಿ ಕರ್ತವ್ಯ ನಿರ್ವಹಿಸಿದ ಶಿಕ್ಷಕರಿಗೆ ಅಭಿನಂದನಾ ಪತ್ರವನ್ನು ಮತ್ತು ಭಾಷಾ ಕಲಿಕಾ ಮಟ್ಟವನ್ನು ಹೆಚ್ಚಿಸಿದ ಶಾಲೆಗಳಿಗೆ ಪುರಸ್ಕಾರವನ್ನು ನೀಡಲು ಸೂಚಿಸಿದರು.
- ಮಕ್ಕಳಲ್ಲಿ ಕಲಿಕಾ ಮಟ್ಟವನ್ನು ಹಂತ ಹಂತವಾಗಿ ಹೆಚ್ಚಿಸಲು ಕ್ರಮ ಕೈಗೊಳ್ಳಲು ಸೂಚಿಸಿದರು.
- ವಿದ್ಯಾರ್ಥಿಗಳಲ್ಲಿರುವ ವಿಶೇಷ ಪ್ರತಿಭೆಗಳನ್ನು ಹೊರತರುವ ಕಾರ್ಯಕ್ರಮಗಳ ಕಾರ್ಯಾಗಾರವನ್ನು ಆಯೋಜಿಸಿ, ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಧನವನ್ನು ನೀಡಲು ಸೂಚಿಸಿದರು.
- ಶಿಕ್ಷಣವು ವಿದ್ಯಾರ್ಥಿಗಳ ಬೆಳವಣಿಗೆಯ ಭದ್ರ ಬುನಾದಿಯಾಗಿರುವುದರಿಂದ ಜಿಲ್ಲೆಯ ಎಲ್ಲಾ ಅಧಿಕಾರಿಗಳು ಶಾಲೆಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಚರ್ಚಿಸಿ ಅವರಿಗೆ ಅವಶ್ಯವಿರುವ ಮಾರ್ಗದರ್ಶನವನ್ನು ನೀಡುವಂತೆ ಮತ್ತು ಶೈಕ್ಷಣಿಕ ಉತ್ಸಾಹವನ್ನು ಹೆಚ್ಚಿಸುವಂತೆ ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆ, ಜಿಲ್ಲಾ ಮಟ್ಟದ ಅಧಿಕಾರಿಗಳು, ಚಿಕ್ಕಬಳ್ಳಾಪುರ)**

10) **ಆರೋಗ್ಯ ಇಲಾಖೆ:-**

ಜಿಲ್ಲಾ ಆರೋಗ್ಯಾಧಿಕಾರಿಗಳು ಮಾತನಾಡಿ, ಆಯುಷ್ಮಾನ್ ಭಾರತ್ ಯೋಜನೆಯಡಿ ಪ್ರತಿ ಕುಟುಂಬಕ್ಕೆ ಒಂದರಂತೆ ಒಟ್ಟು 1,47,430 ಕಾರ್ಡ್‌ಗಳನ್ನು ವಿತರಿಸಲಾಗಿರುತ್ತದೆ ಎಂದು ತಿಳಿಸಿದರು. ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಯಶಸ್ವಿನಿ ಯೋಜನೆಯು ರಾಜ್ಯಮಟ್ಟದಲ್ಲಿ ಪ್ರಶಂಸೆಗೊಂಡಂತೆ ಆಯುಷ್ಮಾನ್ ಯೋಜನೆಯನ್ನು ಇನ್ನೂ ಹೆಚ್ಚು ಜನರಿಗೆ ತಲುಪುವ ರೀತಿಯಲ್ಲಿ ಅವಶ್ಯವಿರುವ ಪ್ರಚಾರ ಕೈಗೊಳ್ಳಲು ಸೂಚಿಸಿದರು. ಜಿಲ್ಲಾ ಆಸ್ಪತ್ರೆಯಲ್ಲಿ 10 ಬೆಡ್‌ಗಳ ಎನ್.ಆರ್.ಸಿ ವಾರ್ಡ್‌ಗಳನ್ನು ಸ್ಥಾಪಿಸಿದ್ದು, ಈ ಕಾರ್ಯಕ್ರಮವನ್ನು ತಾಲ್ಲೂಕು ಆಸ್ಪತ್ರೆಗಳಲ್ಲಿ ಕಾರ್ಯರೂಪಕ್ಕೆ ತರುವಂತೆ ಸೂಚಿಸಿದರು.

**(ಕ್ರಮ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಚಿಕ್ಕಬಳ್ಳಾಪುರ)**

11) **ಕಂದಾಯ ಇಲಾಖೆ :-**

ಅಪರ ಜಿಲ್ಲಾಧಿಕಾರಿಗಳು ಮಾತನಾಡಿ, ಸಕಾಲ ಯೋಜನೆಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯು ಸೆಪ್ಟೆಂಬರ್ ಮತ್ತು ಅಕ್ಟೋಬರ್ ಮಾಹೆಯಲ್ಲಿ ರಾಜ್ಯದಲ್ಲಿಯೇ ಪ್ರಥಮ ಸ್ಥಾನವನ್ನು ಪಡೆದಿರುತ್ತದೆ ಎಂದು ತಿಳಿಸಿದರು.

ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಎಲ್ಲಾ ಅಧಿಕಾರಿಗಳಿಗೂ ಅಭಿನಂದನೆಯನ್ನು ಸಲ್ಲಿಸಿದರು.

- ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಬಾಕಿಯಿರುವ ಪಹಣಿ ಕಾಲಂ 3 & 9ಕ್ಕೂ ತಾಳೆಯಿಲ್ಲದ ಒಟ್ಟು 4470 ಪ್ರಕರಣಗಳಿದ್ದು, ಸದರಿ ಪ್ರಕರಣಗಳನ್ನು ಇತ್ಯರ್ಥಪಡಿಸಲು ವಿಶೇಷ ಕಾರ್ಯಾಗಾರವನ್ನು ಹಮ್ಮಿಕೊಳ್ಳುವುದರ ಮೂಲಕ ಎಲ್ಲಾ ತಹಶೀಲ್ದಾರ್‌ಗಳು ತುರ್ತಾಗಿ ವಿಲೇವಾರಿಗೊಳಿಸಲು ಸೂಚಿಸಿದರು.
- ಜಿಲ್ಲೆಯಲ್ಲಿ 20 ಗ್ರಾಮಗಳಿಗೆ ರುದ್ರಭೂಮಿ ಸೌಲಭ್ಯವಿಲ್ಲದಿರುವುದು ಕಂಡು ಬಂದಿದ್ದು, ಸದರಿ ಗ್ರಾಮಗಳಿಗೆ ಜಮೀನನ್ನು ಗುರುತಿಸಿ, ರುದ್ರಭೂಮಿ ಸೌಲಭ್ಯವನ್ನು ಒದಗಿಸಿ, ಅಭಿವೃದ್ಧಿಪಡಿಸಲು ಸೂಚಿಸಿದರು.
- ಸಾಮಾಜಿಕ ಭದ್ರತಾ ಯೋಜನೆಯಡಿಯಲ್ಲಿ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳಿಗೆ ಆಧಾರ್ ಜೋಡಣೆಯನ್ನು ಶೇ100 ರಷ್ಟು ಸಾಧಿಸಲು ಸೂಚಿಸಿದರು.

- ಸರ್ಕಾರದಿಂದ ಬಿಡುಗಡೆಯಾಗಬೇಕಾದ ಅನುದಾನದ ವಿವರಗಳನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಕಛೇರಿಗೆ ವರದಿಯನ್ನು ಸಲ್ಲಿಸಲು ಸೂಚಿಸಿದರು.
- ಭೂದಾಖಲೆಗಳ ಇಲಾಖೆಯಲ್ಲಿ ಸಾರ್ವಜನಿಕರಿಗೆ ಕಾಲಕಾಲಕ್ಕೆ ಅರ್ಜಿಗಳನ್ನು ವಿಲೇವಾರಿ ಮಾಡುತ್ತಿರುವ ಬಗ್ಗೆ ಪರಿಶೀಲಿಸಲು ಅಪರ ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.

**(ಕ್ರಮ: ಉಪವಿಭಾಗಾಧಿಕಾರಿಗಳು ಹಾಗೂ ಜಿಲ್ಲೆಯ ಎಲ್ಲಾ ತಹಶೀಲ್ದಾರ್, ಚಿಕ್ಕಬಳ್ಳಾಪುರ ಜಿಲ್ಲೆ.)**

12) **<u>ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ :-</u>**

ಉಪನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ರವರು ಮಾತನಾಡಿ, ಜಿಲ್ಲೆಯಲ್ಲಿ ಕೃಷಿ ಇಲಾಖೆ ನೀಡಿರುವ ಮಾಹಿತಿಯಂತೆ ಮುಂಗಾರು ಋತುವಿನಲ್ಲಿ 69,415 ಮೆ.ಟನ್ ರಾಗಿ ಮತ್ತು 1,57,506 ಮೆ.ಟನ್ ಮುಸಕಿನ ಜೋಳ ಇಳುವರಿ ಆಗುವುದಾಗಿ ಮಾಹಿತಿ ನೀಡಿರುತ್ತಾರೆ. ಕೇಂದ್ರ ಸರ್ಕಾರದವರು ಪ್ರತಿ ಕ್ವಿಂಟಾಲ್ ರಾಗಿಗೆ ರೂ 3150/- ಮತ್ತು ಪ್ರತಿ ಕ್ವಿಂಟಾಲ್ ಮುಸಕಿನ ಜೋಳಕ್ಕೆ ರೂ 1750/- ಬೆಂಬಲ ಬೆಲೆ ನಿಗಧಿಪಡಿಸಿರುತ್ತಾರೆ. ಆದರೆ ಮಾರುಕಟ್ಟೆಯಲ್ಲಿ ಬೆಂಬಲ ಬೆಲೆಗಿಂತಲೂ ಕಡಿಮೆ ಧರ ಇರುವುದರಿಂದ ದಿನಾಂಕ: 09/11/2019ರಂದು ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಸಭೆ ನಡೆಸಿ, ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಜಿಲ್ಲೆಯ ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಬಾಗೇಪಲ್ಲಿ ಮತ್ತು ಗೌರಿಬಿದನೂರು 05 ತಾಲ್ಲೂಕು ಕೇಂದ್ರಗಳಲ್ಲಿ ಬೆಂಬಲ ಬೆಲೆ ಖರೀದಿ ಕೇಂದ್ರಗಳನ್ನು(MSP) ತೆರೆಯಲು ಸರ್ಕಾರಕ್ಕೆ ಮತ್ತು ಆಹಾರ ಇಲಾಖೆ ಆಯುಕ್ತರಿಗೆ ಶಿಫಾರಸ್ಸು ಪತ್ರವನ್ನು ಬರೆಯಲಾಗಿರುತ್ತದೆ.

ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಜಿಲ್ಲೆಯಲ್ಲಿ ಸ್ಥಾಪಿಸುವ ಬೆಂಬಲ ಬೆಲೆ ಖರೀದಿ ಕೇಂದ್ರಗಳಿಗೆ ಬರುವ ಬೆಳೆಗಳು ಉತ್ತಮ ಗುಣ ಮಟ್ಟದಿಂದ ಕೂಡಿರುವ ಬಗ್ಗೆ ಪರಿಶೀಲಿಸಲು ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ.)**

- ಅರಣ್ಯ ಇಲಾಖೆಯವರು ಮನೆಗಳಿಗೆ ಸಸಿಗಳನ್ನು ನೀಡುವುದರ ಮೂಲಕ ಮನೆಗಳಲ್ಲಿ ಗಾರ್ಡನ್ (Home Forest) ಗಳನ್ನು ಬೆಳೆಸುವಂತೆ ಮತ್ತು ಗಾರ್ಡನ್ ಬೆಳೆಸಿದವರಿಗೆ ಜನವರಿ 26 ದಿನದಂದು ಪುರಸ್ಕಾರ ನೀಡುವಂತೆ ಅರಣ್ಯ ಇಲಾಖೆಗೆ ಸೂಚಿಸಿದರು.

**(ಕ್ರಮ: ಅರಣ್ಯಾಧಿಕಾರಿಗಳು, ಅರಣ್ಯ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ.)**

- ಸರ್ಕಾರವು ಈಗಾಗಲೇ ಇ-ಆಫೀಸ್ ತಂತ್ರಾಂಶವನ್ನು ಅನುಷ್ಠಾನಗೊಳಿಸಲು ಆದೇಶಿಸಿರುವುದರಿಂದ ಜಿಲ್ಲೆಯ ಎಲ್ಲಾ ಇಲಾಖೆಗಳು ಇ-ಆಫೀಸ್ ತಂತ್ರಾಂಶದಲ್ಲಿಯೇ ಕಡತಗಳ ವಿಲೇವಾರಿ ಮಾಡಲು ಸೂಚಿಸಿದರು.

**(ಕ್ರಮ: ಜಿಲ್ಲೆಯ ಎಲ್ಲಾ ಅಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ.)**

- ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಮತ್ತು ಸಂಸದರ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಪೂರ್ಣಗೊಂಡ ಕಾಮಗಾರಿಗಳನ್ನು ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಿಗೆ ಹಸ್ತಾಂತರ ಮಾಡಲು ಮತ್ತು ಬಾಕಿ ಇರುವ ಕಾಮಗಾರಿಗಳನ್ನು ಪೂರ್ಣಗೊಳಿಸುವರೆಗೂ ಹೊಸದಾದ ಕಾಮಗಾರಿಗಳನ್ನು ಮಂಜೂರು ಮಾಡಬಾರದೆಂದು ತಿಳಿಸಿದರು.

**(ಕ್ರಮ: ಜಿಲ್ಲಾಧಿಕಾರಿಗಳು, ಕಾರ್ಯಪಾಲಕ ಅಭಿಯಂತರರು, ಪಿ.ಡಬ್ಲ್ಯೂ.ಡಿ.ಇಲಾಖೆ, ಪಿಆರ್ಇಡಿ, ಇಲಾಖೆ, ಮತ್ತು ಇತರೆ ಕಾರ್ಯಪಾಲಕ ಅಭಿಯಂತರರು, ಚಿಕ್ಕಬಳ್ಳಾಪುರ ಜಿಲ್ಲೆ.)**

ಈ ಮೇಲ್ಕಂಡ ಇಲಾಖೆಗಳ ಬಗ್ಗೆ ಪ್ರಗತಿ ಪರಿಶೀಲನೆಯನ್ನು ನಡೆಸಿ ನೀಡಿದ ನಿರ್ದೇಶನಗಳಂತೆ ಅಗತ್ಯ ಕ್ರಮಗಳನ್ನು ಕೈಗೊಂಡು ಮುಂದಿನ ಸಭೆಯ ಒಳಗಾಗಿ ಸಂಬಂಧಪಟ್ಟ ಎಲ್ಲಾ ಇಲಾಖೆಗಳ ಅಧಿಕಾರಿಗಳಿಗೂ ಅನುಪಾಲನಾ ವರದಿಯನ್ನು ಸಲ್ಲಿಸಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು. ಕಾರ್ಯನಿರ್ವಾಹಣಾಧಿಕಾರಿಗಳು, ತಾಲ್ಲೂಕು ಪಂಚಾಯತ್, ಚಿಕ್ಕಬಳ್ಳಾಪುರ ರವರು ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

**(ಡಾ. ಎನ್.ನಾಗಾಂಬಿಕಾದೇವಿ)**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಹಕಾರ ಇಲಾಖೆ ಮತ್ತು
ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ,
ಕರ್ನಾಟಕ ಸರ್ಕಾರ, ಬೆಂಗಳೂರು.

ಪ್ರತಿಯನ್ನು:

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರಿಗೆ ಕಳುಹಿಸುತ್ತಾ ಸಭಾ ನಡಾವಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಿದೆ.
3. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ರವರಿಗೆ ಕಳುಹಿಸುತ್ತಾ ಸಭಾ ನಡಾವಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಿದೆ.
4. ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ರವಾನಿಸುತ್ತಾ ಸಭಾ ನಡಾವಳಿಗೆ ಅನುಪಾಲನ ವರದಿಯನ್ನು ಸಲ್ಲಿಸಲು ಸೂಚಿಸಿದೆ.
5. ಜಿಲ್ಲೆಯ ಎಲ್ಲಾ ಆಯುಕ್ತರು, ನಗರ ಸಭೆ / ಪೌರಾಯುಕ್ತರು ಪುರಸಭೆ ರವರಿಗೆ ಕಳುಹಿಸುತ್ತಾ ಸಭಾ ನಡಾವಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಿದೆ.
6. ಹೆಚ್ಚುವರಿ ಪ್ರತಿ.

**ಡಾ॥ ಎನ್.ನಾಗಾಂಬಿಕಾದೇವಿ, ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 25.11.2019 ರಂದು ಅಪರಾಹ್ನ 12.00 ಗಂಟೆಗೆ ಶ್ರೀ ವಿಶ್ವೇಶ್ವರಯ್ಯ ಸಭಾಂಗಣ, ಜಿಲ್ಲಾ ಪಂಚಾಯತ್ ನಲ್ಲಿ ನಡೆಸಲಾದ ಚಿಕ್ಕಬಳ್ಳಾಪುರ ಜಿಲ್ಲೆಯ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯ ನಡಾವಳಿಗಳು.**

********

**ಅಧ್ಯಕ್ಷತೆ: ಡಾ॥ ಎನ್.ನಾಗಾಂಬಿಕಾದೇವಿ,** ಭಾ.ಆ.ಸೇ.,
**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,**
**ಸಹಕಾರ ಇಲಾಖೆ ಹಾಗೂ ಚಿಕ್ಕಬಳ್ಳಾಪುರ**
**ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು.**

ಸಭೆಯಲ್ಲಿ ಹಾಜರಿದ್ದವರು :

1) ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ ಜಿಲ್ಲೆ.
2) ಅಪರ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.
3) ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ.
4) ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಬಳ್ಳಾಪುರ.
5) ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಚಿಕ್ಕಬಳ್ಳಾಪುರ.
6) ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಚಿಕ್ಕಬಳ್ಳಾಪುರ.
7) ಜಿಲ್ಲಾ ಅಧಿಕಾರಿಗಳು, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಚಿಕ್ಕಬಳ್ಳಾಪುರ.
8) ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ.
9) ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ ಇಲಾಖೆ, ಚಿಕ್ಕಬಳ್ಳಾಪುರ.
10) ಹಿರಿಯ ಸಹಾಯಕ ನಿರ್ದೇಶಕರು, ವಾರ್ತ ಮತ್ತು ಪ್ರಚಾರ ಇಲಾಖೆ, ಚಿಕ್ಕಬಳ್ಳಾಪುರ.
11) ಉಪನಿರ್ದೇಶಕರು, ರೇಷ್ಮೆ ಇಲಾಖೆ, ಚಿಕ್ಕಬಳ್ಳಾಪುರ.
12) ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಚಿಕ್ಕಬಳ್ಳಾಪುರ.
13) ಉಪನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಚಿಕ್ಕಬಳ್ಳಾಪುರ.
14) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಚಿಕ್ಕಬಳ್ಳಾಪುರ.
15) ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ಚಿಕ್ಕಬಳ್ಳಾಪುರ.
16) ಕಾರ್ಯಪಾಲಕ ಅಭಿಯಂತರರು, ಕುಡಿಯುವ ನೀರು & ನೈರ್ಮಲ್ಯ ವಿಭಾಗ ಚಿಕ್ಕಬಳ್ಳಾಪುರ.
17) ಜಿಲ್ಲೆಯ ಎಲ್ಲಾ ತಹಶೀಲ್ದಾರ್‌ಗಳು ಚಿಕ್ಕಬಳ್ಳಾಪುರ ಜಿಲ್ಲೆ.
18) ಜಿಲ್ಲೆಯ ಎಲ್ಲಾ ಕಾರ್ಯನಿರ್ವಾಹಣಾಧಿಕಾರಿಗಳು, ಚಿಕ್ಕಬಳ್ಳಾಪುರ.
19) ಇತರೆ ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಡಾ॥ ಎನ್.ನಾಗಾಂಬಿಕಾ ದೇವಿ, ಭಾ.ಆ.ಸೇ., ರವರಿಗೆ ಅಪರ ಜಿಲ್ಲಾಧಿಕಾರಿಗಳು, ರವರು ಸ್ವಾಗತ ಕೋರಿ ಜಿಲ್ಲೆಯ ಎಲ್ಲಾ ಇಲಾಖೆಗಳ ಪ್ರಗತಿ ಪರಿಶೀಲನೆ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಲು ಕೋರಿದರು. ನಂತರ ಸಭೆಯನ್ನು ಪ್ರಾರಂಭಿಸಿ ಈ ಕೆಳಕಂಡ ಇಲಾಖೆಗಳ ಬಗ್ಗೆ ಪ್ರಗತಿ ಪರಿಶೀಲನೆಯನ್ನು ನಡೆಸಲಾಯಿತು.

ಇಲಾಖಾವಾರು ಪ್ರಗತಿ ಪರಿಶೀಲನೆ:-

1) ಕೃಷಿ ಇಲಾಖೆ :-

ಜಂಟಿ ನಿರ್ದೇಶಕರು, ಕೃಷಿ ಇಲಾಖೆ ರವರು ಮಾತನಾಡಿ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ಉತ್ತಮ ಮಳೆಯಾಗಿರುವುದರಿಂದ ಮುಂಗಾರುನಲ್ಲಿ ಒಟ್ಟು 154000 ಹೆಕ್ಟೇರ್‌ನಷ್ಟು ಪ್ರದೇಶದಲ್ಲಿ

ಬಿತ್ತನೆ ಗುರಿಯನ್ನು ಹೊಂದಲಾಗಿ 131358 ಹೆಕ್ಟರ್‌ನಷ್ಟು ಪ್ರದೇಶದಲ್ಲಿ 85.30% ರಷ್ಟು ಬಿತ್ತನೆಯಾಗಿದ್ದು, ರಾಗಿ ಮತ್ತು ಮುಸಕಿನ ಜೋಳ ಬೆಳೆಗಳು ಉತ್ತಮವಾದ ಇಳುವರಿಯಾಗಿರುತ್ತದೆಂದು ತಿಳಿಸಿದರು.

- 2018ರ ಮುಂಗಾರು ಹಂಗಾಮಿನ ಬೆಳೆ ವಿಮೆಯನ್ನು ಒಟ್ಟು 22514 ರೈತರಿಗೆ ಒಟ್ಟು 3762.77 ಲಕ್ಷಗಳನ್ನು ಬಿಡುಗಡೆಗೊಳಿಸಬೇಕಾಗಿದ್ದು, ಈ ಪೈಕಿ 3114.51 ಲಕ್ಷಗಳು ಬಿಡುಗಡೆಯಾಗಿದ್ದು, ಒಟ್ಟು 18884 ರೈತರಿಗೆ ಜಮೇ ಮಾಡಲಾಗಿರುತ್ತದೆಂದು 2019-20ನೇ ಸಾಲಿನಲ್ಲಿ ಒಟ್ಟು 10421 ಫಲಾನುಭವಿಗಳು ನೊಂದಣಿಯಾಗಿರುವುದಾಗಿ ತಿಳಿಸಿದರು. 2018ನೇ ಸಾಲಿನ ಉಳಿದ ಫಲಾನುಭವಿಗಳಿಗೂ ಶೀಘ್ರವಾಗಿ ಬೆಳೆವಿಮೆಯ ಮೊತ್ತವನ್ನು ಪಾವತಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆಯನ್ನು ಆಯೋಜಿಸಿ ಸಂಬಂಧಪಟ್ಟ ವಿಮೇ ಕಂಪನಿಗೆ ಸೂಚಿಸಲಾಗಿರುತ್ತದೆಂದು ತಿಳಿಸಿದರು. ಬಾಕಿ ಇರುವ ಫಲಾನುಭವಿಗಳಿಗೆ ಬೆಳೆ ವಿಮೆ ಮೊತ್ತವನ್ನು ತುರ್ತಾಗಿ ಪಾವತಿಸಲು ಕ್ರಮವಹಿಸಲು ಸೂಚಿಸಿದರು.
- ಬೆಳೆ ಸಮೀಕ್ಷೆ ಕಾರ್ಯವು ಜಿಲ್ಲೆಯಲ್ಲಿ 98% ರಷ್ಟು ಪ್ರಗತಿಯನ್ನು ಸಾಧಿಸಿದ್ದು, ಬಾಕಿ ಇರುವ ಬೆಳೆ ಸಮೀಕ್ಷೆಯಲ್ಲಿ ನ್ಯೂನ್ಯತೆಗಳಿಂದ ಛಾಯಚಿತ್ರಗಳು ಮತ್ತು ಬೆಳೆಗಳಿಗೆ ಹೊಂದಾಣಿಕೆಯಾಗದ ಕಾರಣ ಪುನರ್ ಪರಿಶೀಲನೆ ಮಾಡಿ ಬೆಳೆ ಸಮೀಕ್ಷೆ ಕೈಗೊಳ್ಳಲು ನಿರ್ದೇಶನದ ಮೇರೆಗೆ ಪುನರ್ ಪರಿಶೀಲನೆ ಮಾಡಿ ಶೇ 100 ರಷ್ಟು ಪ್ರಗತಿ ಸಾಧಿಸುವುದಾಗಿ ತಿಳಿಸಿದರು.
- ಕೃಷಿ ಇಲಾಖೆಯ ಯೋಜನೆಗಳಾದ ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ಶೇ 93 ರಷ್ಟು ಸಾಧನೆಯನ್ನು ಮಾಡಿದ್ದು, ಪಿ.ಎಂ.ಕೆ.ಎಸ್.ವೈ. ಯೋಜನೆಯಡಿಯಲ್ಲಿ ಶೇ 60ರಷ್ಟು ಸಾಧನೆಯನ್ನು ಮಾಡಿದ್ದು, ಈ ಯೋಜನೆಯನ್ನು ಶೇ 100ರಷ್ಟು ಪ್ರಗತಿ ಸಾಧಿಸಲು ಸೂಚಿಸಿದರು.
- ಪಿ.ಎಂ. ಕಿಸಾನ್ ಯೋಜನೆಯಡಿಯಲ್ಲಿ ಮರಣ ಹೊಂದಿದವರು ಒಟ್ಟು 63503 ಮತ್ತು ಅನಿವಾಸಿಗಳು 31613 ಜಿಲ್ಲೆಯಲ್ಲಿ ಇರುವುದರಿಂದ ಈ ಬಗ್ಗೆ ತಹಶೀಲ್ದಾರ್ ಗಳು ಹಾಗೂ ಕಂದಾಯ ಅಧಿಕಾರಿಗಳು ಪರಿಶೀಲಿಸಿ ಸಂಬಂಧಪಟ್ಟ ವಾರಸುದಾರರಿಗೆ ಖಾತೆ ವರ್ಗಾಯಿಸಿ, ಪಿ.ಎಂ. ಕಿಸಾನ್ ಯೋಜನೆಯನ್ನು ಫಲಾನುಭವಿಗಳಿಗೆ ತಲುಪಿಸಲು ಕ್ರಮವಹಿಸಲು ಸೂಚಿಸಿದರು.
- ಎನ್.ಎಫ್.ಎಸ್.ಎಂ.ಯೋಜನೆಯಡಿ ದ್ವಿದಳ ಧಾನ್ಯಗಳ ವಿವಿಧ ತಾಂತ್ರಿಕತೆಗಳಾದ ತೊಗರಿಯಲ್ಲಿ ಯಾಂತ್ರೀಕೃತ/ಕೂರಿಗೆ ಬಿತ್ತನೆ, ತೊಗರಿಯಲ್ಲಿ ನಾಟಿ ಪದ್ಧತಿ ಹಾಗೂ ಒರಟು ಧಾನ್ಯಗಳ ತಾಂತ್ರಿಕತೆಗಳಾದ ಸಮಗ್ರ ಬೆಳೆ ನಿರ್ವಹಣೆ - ಗುಚ್ಛ ಪ್ರಾತ್ಯಕ್ಷಿಕೆಗಳು, ಮೆಕ್ಕೆ ಜೋಳ-ದ್ವಿದಳ ಧಾನ್ಯ ಅಂತರ ಬೆಳೆ, ಮೆಕ್ಕೆ ಜೋಳ- ತೊಗರಿ ಅಂತರ ಬೆಳೆ ಮತ್ತು ನ್ಯೂಟ್ರಿ ಸಿರಿಯಲ್ಸ್‌ಗಳ ತಾಂತ್ರಿಕತೆಗಳಾದ ರಾಗಿ-ಸಾಲು ಬಿತ್ತನೆ/ ಯಾಂತ್ರೀಕೃತ/ನಾಟಿ ಬಿತ್ತನೆ/ದ್ವಿದಳ ಧಾನ್ಯ ಅಂತರ ಬೆಳೆತಾಂತ್ರಿಕತೆಯಡಿ 3201 ಹೆ. ಗುರಿ ಹೊಂದಿದ್ದು, KSRSAC ಸಂಸ್ಥೆಯವರು ಅಭಿವೃದ್ದಿಪಡಿಸಿರುವ ಮೊಬೈಲ್ ಆಪ್‌ನ ಮುಖಾಂತರ ರೈತರನ್ನು ನೊಂದಾಯಿಸಿ ತಂತ್ರಾಂಶದಲ್ಲಿ 2611 ಹೆ. ಅಳವಡಿಸುವುದರಲ್ಲಿ ರಾಜ್ಯದಲ್ಲಿಯೇ ಚಿಕ್ಕಬಳ್ಳಾಪುರ ಜಿಲ್ಲೆಯು ಮೊದಲ ಸ್ಥಾನದಲ್ಲಿದೆ ಎಂದು ತಿಳಿಸಿದರು. ಉಸ್ತುವಾರಿ ಕಾರ್ಯದರ್ಶಿಗಳು ಅಭಿನಂದನೆಯನ್ನು ಸಲ್ಲಿಸಿದರು.

**(ಕ್ರಮ: ಜಿಲ್ಲಾಧಿಕಾರಿಗಳು, ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು ಮತ್ತು ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಜಿಲ್ಲೆಯ ಎಲ್ಲಾ ತಹಶೀಲ್ದಾರ್‌ಗಳು, ಚಿಕ್ಕಬಳ್ಳಾಪುರ)**

## 2) ತೋಟಗಾರಿಕಾ ಇಲಾಖೆ:-

ಉಪನಿರ್ದೇಶಕರು, ತೋಟಾಗಾರಿಕೆ ಇಲಾಖೆ, ಚಿಕ್ಕಬಳ್ಳಾಪುರ ರವರು ಮಾತನಾಡಿ, ತೋಟಾಗಾರಿಕಾ ಇಲಾಖೆಗೆ ಸಂಬಂಧಿಸಿದಂತೆ, ಯೋಜನೆಗಳಾದ ಪಿ.ಎಮ್.ಕೆ.ಎಸ್.ವೈ (ಸೂಕ್ಷ್ಮ ನೀರಾವರಿ), ರಾಷ್ಟೀಯ ತೋಟಾಗಾರಿಕೆ ಮಿಷನ್, ರಾಷ್ಟೀಯ ಕೃಷಿ ವಿಕಾಸ ಯೋಜನೆ, ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ, ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ಶೇ 94.89ರಷ್ಟು ಪ್ರಗತಿ ಸಾಧಿಸಲಾಗಿದೆಯೆಂದು ತಿಳಿಸಿದರು.

ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ತೋಟಗಾರಿಕೆ ಬೆಳೆಗಳಿಗೆ ಉತ್ತಮ ಮಾರುಕಟ್ಟೆಯ ಸೌಲಭ್ಯವನ್ನು ಕಲ್ಪಿಸಿ, ಅವಶ್ಯಕ ಕಂಪನಿಯೊಂದಿಗೆ ಉತ್ತಮ ಸಂಬಂಧವನ್ನು ಹೊಂದಿ ರೈತರು ಬೆಳೆದ ತರಕಾರಿಗಳನ್ನು ಹಾಳಗಾದಂತೆ ಮಾರುಕಟ್ಟೆಗೆ ತಲುಪಿಸಲು ಕ್ರಮವಹಿಸಲು ಸೂಚಿಸಿದರು.

(ಕ್ರಮ: ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ, ಚಿಕ್ಕಬಳ್ಳಾಪುರ)

3) **ರೇಷ್ಮೆ ಇಲಾಖೆ : –**

ಉಪನಿರ್ದೇಶಕರು, ರೇಷ್ಮೆ ಇಲಾಖೆ, ಚಿಕ್ಕಬಳ್ಳಾಪುರ ರವರು ಮಾತನಾಡಿ, ಇಲಾಖೆಯ ಕಾರ್ಯಕ್ರಮಗಳ ಯೋಜನೆಗಳನ್ನು ಉತ್ತಮ ಗುರಿಯನ್ನು ಸಾಧಿಸಿಲಾಗಿದೆ ಎಂದು ತಿಳಿಸಿದರು.

ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ರೇಷ್ಮೆ ಬೆಳೆಯ ದರದ ಬಗ್ಗೆ ವಿಚಾರಿಸಿದಾಗ ಉಪನಿರ್ದೇಶಕರು ರೇಷ್ಮೆ ಬೆಳೆಯ ದರವು 350/- ರಿಂದ 400/- ರೂಗಳ ವರೆಗೆ ಹೆಚ್ಚಾಗಿರುತ್ತದೆ ಎಂದು ತಿಳಿಸಿದರು.

ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ರೇಷ್ಮೆ ಬೆಳೆಯನ್ನು ಹೆಚ್ಚಾಗಿ ಬೆಳೆಯುವಂತೆ ಕ್ರಮ ಕೈಗೊಳ್ಳಲು ಸೂಚಿಸಿದರು.

**(ಕ್ರಮ ; ರೇಷ್ಮೆ ಉಪನಿರ್ದೇಶಕರು, ಚಿಕ್ಕಬಳ್ಳಾಪುರ)**

4) **ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ:–**

ಉಪ ನಿರ್ದೇಶಕರು, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವೆ ಇಲಾಖೆ, ರವರು ಮಾತನಾಡಿ, ರೈತರ ಬಳಿ ಲಭ್ಯವಿರುವ ಮೇವು ಮುಂದಿನ 12 ವಾರಗಳ ಅವಧಿಗೆ ಸಾಕಾಗುತ್ತದೆ ಎಂದು ತಿಳಿಸಿದರು. ಮುಂಗಾರು ಹಂಗಾಮಿನಲ್ಲಿ ಉತ್ತಮ ಮಳೆ ಆದ ಕಾರಣ ರಾಗಿ ಮತ್ತು ಮುಸಕಿನ ಜೋಳದ ಬೆಳೆಗಳ ಇಳುವರಿ ಹಚ್ಚಿರುವುದರಿಂದ ಮೇವಿಗಾಗಿ ಯಾವುದೇ ತೊಂದರೆ ಇರುವುದಿಲ್ಲ ಮತ್ತು ಈಗಾಗಲೇ ಜಿಲ್ಲೆಯಲ್ಲಿ ಸ್ಥಾಪಿಸಲಾಗಿದ್ದ ಗೋಶಾಲೆಗಳನ್ನು ಮುಚ್ಚಲಾಗಿದ್ದು ಎಂದು ತಿಳಿಸಿದರು.

ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಈ ಜಿಲ್ಲೆಯಲ್ಲಿ 03 ತಾಲ್ಲೂಕುಗಳನ್ನು ಬರ ಪೀಡಿತ ತಾಲ್ಲೂಕುಗಳೆಂದು ಸರ್ಕಾರವು ಘೋಷಿಸಿರುವುದರಿಂದ ಸದರಿ ತಾಲ್ಲೂಕುಗಳಲ್ಲಿ ಜಾನುವಾರಿಗಳಿಗೆ ಮೇವಿನ ಕೊರತೆಯಾಗದಂತೆ ಮುಂಜಾಗ್ರತೆ ಕ್ರಮ ಕೈಗೊಳ್ಳಲು ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಚಿಕ್ಕಬಳ್ಳಾಪುರ)**

5) **ಕುಡಿಯುವ ನೀರಿನ ಸರಬರಾಜು ಕುರಿತು:–**

ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಚಿಕ್ಕಬಳ್ಳಾಪುರ ರವರು ಮಾತನಾಡಿ, ಪ್ರಸ್ತುತ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಒಟ್ಟು 78 ಗ್ರಾಮಗಳಿಗೆ ಕುಡಿಯುವ ನೀರಿನ ಸಮಸ್ಯೆ ಇದ್ದು, 21 ಗ್ರಾಮಗಳಲ್ಲಿ ಟ್ಯಾಂಕರ್‌ಗಳ ಮೂಲಕ ಮತ್ತು 57 ಗ್ರಾಮಗಳಲ್ಲಿ ಖಾಸಗಿ ಕೊಳವೆಬಾವಿಗಳ ಮುಖಾಂತರ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ ಎಂದು ತಿಳಿಸಿದರು.

- ನಗರ ಪ್ರದೇಶದ ವ್ಯಾಪ್ತಿಯಲ್ಲಿ ಚಿಂತಾಮಣಿ ತಾಲ್ಲೂಕಿನಲ್ಲಿ ಒಟ್ಟು 20 ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, 35 ಟ್ಯಾಂಕರ್‌ಗಳ ಮುಖಾಂತರ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ ಎಂದು ತಿಳಿಸಿದರು.
- ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲು ಸೂಚಿಸಿದರು. ಮತ್ತು ಶುದ್ಧ ನೀರು ಘಟಕಗಳು ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸುವಂತೆ ಕ್ರಮ ಕೈಗೊಳ್ಳಲು ಸೂಚಿಸಿದರು.
- ಜಕ್ಕಲಮಡಗು ಜಲಾಶಯದಲ್ಲಿ ನೀರು ಬಂದಿರುವುದರಿಂದ 05 ಗ್ರಾಮಗಳಿಗೆ ನೀರು ಸರಬರಾಜು ಮಾಡುವ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸೂಚಿಸಿದರು.
- ಬರ ಪೀಡಿತ ತಾಲ್ಲೂಕುಗಳಲ್ಲಿ ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗದಂತೆ ಕ್ರಮವಹಿಸಲು ಸೂಚಿಸದರು.

**(ಕ್ರಮ: ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ/ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳು, ಜಿಲ್ಲಾ ಪಂಚಾಯಿತಿ/ ಜಿಲ್ಲಾ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ/ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಜಿಲ್ಲೆಯ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು)**

6) **ನರೇಗಾ ಯೋಜನೆ:-**

ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಮಾತನಾಡಿ, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ 2019-20 ನೇ ಸಾಲಿನಲ್ಲಿ ಶೇ. 76.19 ರಷ್ಟು ಪ್ರಗತಿಯನ್ನು ಸಾಧಿಸಲಾಗಿದೆ. ಎಂದು ತಿಳಿಸಿದರು.

ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ನರೇಗಾ ಕಾಮಗಾರಿಗಳಲ್ಲಿ ಹಿಂದಿನ ಸಾಲಿನಲ್ಲಿ ಕಾಮಗಾರಿ ಪೂರ್ಣಗೊಳ್ಳದೇ ಇರುವುದು ಗಮನಕ್ಕೆ ಬಂದಿರುವುದರಿಂದ ಜಿಲ್ಲೆಯ ಎಲ್ಲಾ ಕಾರ್ಯನಿರ್ವಹಣಾಧಿಕಾರಿಗಳಿಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಹಾಗೂ ಚಾಲ್ತಿಯಲ್ಲಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸೂಚಿಸಿದರು.

- ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿಯಲ್ಲಿ ನಿಗಧಿಪಡಿಸಿರುವ ಗುರಿಯನ್ನು ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಪ್ರಗತಿ ಸಾಧಿಸಲು ಸೂಚಿಸಿದರು.

**(ಕ್ರಮ: ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ)**

7) **ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ** ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿನಿಲಯವನ್ನು ನಿರ್ಮಿಸಲು ಒಂದು ನಿವೇಶನ ಅವಶ್ಯಕತೆ ಇರುವುದರಿಂದ ಈಗಾಗಲೇ ಬಾಗೇಪಲ್ಲಿ ತಹಶೀಲ್ದಾರ್ ರವರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಈ ವಾರದಲ್ಲಿಯೇ ಸ್ಥಳವನ್ನು ಗುರುತಿಸಿ, ಜಮೀನನ್ನು ಮಂಜೂರು ಮಾಡಲು ಸೂಚಿಸಿದರು.

**(ಕ್ರಮ: ಜಿಲ್ಲಾಧಿಕಾರಿಗಳು, ತಹಶೀಲ್ದಾರ್, ಬಾಗೇಪಲ್ಲಿ ತಾಲ್ಲೂಕು,)**

- 15 ಅಂಶಗಳ ಕಾರ್ಯಕ್ರಮಗಳ ಬಗ್ಗೆ ಸಭೆಗಳನ್ನು ನಡೆಸಿ, ಪುನರಾವಲೋಕನ ಮಾಡಲು ಸೂಚಿಸಿದರು.
- ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ಪಾವತಿಸಲು ತುರ್ತಾಗಿ ಕ್ರಮ ಕೈಗೊಳ್ಳಲು ಸೂಚಿಸಿದರು.
  **(ಕ್ರಮ: ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಜಿಲ್ಲಾ ಅಧಿಕಾರಿಗಳು, ಹಿಂದುಳಿದ/ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮತ್ತು ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಚಿಕ್ಕಬಳ್ಳಾಪುರ)**

8) **ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ :-**

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳು ಮಾತನಾಡಿ, ಜಿಲ್ಲೆಯಲ್ಲಿ ಅಂಗನವಾಡಿ ಮಕ್ಕಳಿಗೆ ಬಿಸಿಯೂಟ ಯೋಜನೆ ವ್ಯವಸ್ಥಿತವಾಗಿ ನಡೆಯುತ್ತಿದೆ ಎಂದು ತಿಳಿಸಿದರು.

- ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಅಂಗನವಾಡಿ ಕಟ್ಟಡಗಳ ಬಗ್ಗೆ ವಿಚಾರಿಸಿದಾಗ, ಉಪನಿರ್ದೇಶಕರು ಮಾತನಾಡಿ, ನಗರ ಪ್ರದೇಶಗಳಲ್ಲಿ 113 ನಿವೇಶನಗಳು, 113 ನಿವೇಶನಗಳ ಪೈಕಿ ಈಗಾಗಲೇ 11 ನಿವೇಶನಗಳನ್ನು ನೀಡಿರುತ್ತಾರೆ. ಗ್ರಾಮಾಂತರ ಪ್ರದೇಶಗಳಲ್ಲಿ 450 ಪ್ರದೇಶಗಳಲ್ಲಿ ನಿವೇಶನಗಳು ಅವಶ್ಯಕವಾಗಿರುತ್ತವೆಂದು ತಿಳಿಸಿದರು. ನಿವೇಶನವಿಲ್ಲದ ಅಂಗನವಾಡಿ ಕಟ್ಟಡಗಳನ್ನು ಸಮೀಪದಲ್ಲಿರುವ ಶಾಲೆ ಕಟ್ಟಡಗಳಲ್ಲಿ ಅಂಗನವಾಡಿ ಕೇಂದ್ರಗಳನ್ನು ನಿರ್ವಹಿಸಲು ಸೂಚಿಸಿದರು.
- ಮಕ್ಕಳ ಅಪೌಷ್ಠಿಕತೆ ಮಟ್ಟವನ್ನು ಹಿಂದಿನ ಸಭೆಯಲ್ಲಿ 221 ರಿಂದ 197 ಕ್ಕೆ ಕಡಿಮೆ ಮಾಡಲಾಗಿದೆ ಅಪೌಷ್ಠಿಕತೆ ಮಕ್ಕಳನ್ನು ಆರೋಗ್ಯ ಕೇಂದ್ರದಲ್ಲಿ ಸೇರ್ಪಡೆ ಮಾಡಿ ಅವರ ಪೌಷ್ಠಿಕ ಮಟ್ಟವನ್ನು ಸುಧಾರಿಸುವ ಕಾರ್ಯವನ್ನು ಮಾಡಲಾಗುತ್ತಿದೆ ಎಂದು ತಿಳಿಸಿದರು.
- ಮಕ್ಕಳಿಗೆ ಒತ್ತಡ ನೀಡದೆ ಮೌಖಿಕ ಶಿಕ್ಷಣವನ್ನು ನೀಡುವುದರ ಮೂಲಕ ಮಕ್ಕಳಿಗೆ ಶೈಕ್ಷಣಿಕ ಉತ್ಸಾಹವನ್ನು ಹೆಚ್ಚಿಸಲು ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಯೋಜನಾ ನಿರ್ದೇಶಕರು ನಗರಾಭಿವೃದ್ಧಿ ಇಲಾಖೆ, ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಚಿಕ್ಕಬಳ್ಳಾಪುರ)**

9) <u>ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ:</u>

ಉಪನಿರ್ದೇಶಕರು, ಸಾರ್ವಜನಿಕ ಇಲಾಖೆ ರವರು ಮಾತನಾಡಿ, ಹಿಂದಿನ ಸಭೆಯ ನಿರ್ದೇಶನದಂತೆ ಶಾಲೆಗಳಲ್ಲಿ ಭಾಷಾ ವಿಷಯಗಳಲ್ಲಿ ಮಕ್ಕಳ ಕಲಿಕಾ ಗುಣಮಟ್ಟ ಖಾತ್ರಿಪಡಿಸಿಕೊಳ್ಳಲು SPELL BEE ಸ್ಪರ್ಧೆಗಳನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ನಡೆಸಿ ಕ್ಲಸ್ಟರ್, ತಾಲ್ಲೂಕು ಮತ್ತು ಜಿಲ್ಲಾ ಹಂತದ ಸ್ಪರ್ಧೆಗಳನ್ನು ನಡೆಸಿ ಬಹುಮಾನಗಳನ್ನು ನೀಡಲಾಗಿದೆ. ಕನ್ನಡ ಭಾಷೆಯ ಸ್ಪರ್ಧೆಗಳ ವಿಜೇತರಿಗೆ ನವೆಂಬರ್-1 ರ ರಾಜ್ಯೋತ್ಸವದ ದಿನದಂದು ಬಹುಮಾನಗಳನ್ನು ನೀಡಲಾಗಿದೆಂದು ತಿಳಿಸಿದರು.

- ಮಕ್ಕಳಲ್ಲಿ ಕಲಿಕಾ ಮಟ್ಟವನ್ನು ಹೆಚ್ಚಿಸುವಲ್ಲಿ ಸಮರ್ಪಕವಾಗಿ ಕರ್ತವ್ಯ ನಿರ್ವಹಿಸಿದ ಶಿಕ್ಷಕರಿಗೆ ಅಭಿನಂದನಾ ಪತ್ರವನ್ನು ಮತ್ತು ಭಾಷಾ ಕಲಿಕಾ ಮಟ್ಟವನ್ನು ಹೆಚ್ಚಿಸಿದ ಶಾಲೆಗಳಿಗೆ ಪುರಸ್ಕಾರವನ್ನು ನೀಡಲು ಸೂಚಿಸಿದರು.
- ಮಕ್ಕಳಲ್ಲಿ ಕಲಿಕಾ ಮಟ್ಟವನ್ನು ಹಂತ ಹಂತವಾಗಿ ಹೆಚ್ಚಿಸಲು ಕ್ರಮ ಕೈಗೊಳ್ಳಲು ಸೂಚಿಸಿದರು.
- ವಿದ್ಯಾರ್ಥಿಗಳಲ್ಲಿರುವ ವಿಶೇಷ ಪ್ರತಿಭೆಗಳನ್ನು ಹೊರತರುವ ಕಾರ್ಯಕ್ರಮಗಳ ಕಾರ್ಯಗಾರವನ್ನು ಆಯೋಜಿಸಿ, ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಧನವನ್ನು ನೀಡಲು ಸೂಚಿಸಿದರು.
- ಶಿಕ್ಷಣವು ವಿದ್ಯಾರ್ಥಿಗಳ ಬೆಳವಣಿಗೆಯ ಭದ್ರ ಬುನಾದಿಯಾಗಿರುವುದರಿಂದ ಜಿಲ್ಲೆಯ ಎಲ್ಲಾ ಅಧಿಕಾರಿಗಳು ಶಾಲೆಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಚರ್ಚಿಸಿ ಅವರಿಗೆ ಅವಶ್ಯವಿರುವ ಮಾರ್ಗದರ್ಶನವನ್ನು ನೀಡುವಂತೆ ಮತ್ತು ಶೈಕ್ಷಣಿಕ ಉತ್ಸಾಹವನ್ನು ಹೆಚ್ಚಿಸುವಂತೆ ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆ, ಜಿಲ್ಲಾ ಮಟ್ಟದ ಅಧಿಕಾರಿಗಳು, ಚಿಕ್ಕಬಳ್ಳಾಪುರ)**

10) <u>ಆರೋಗ್ಯ ಇಲಾಖೆ:-</u>

ಜಿಲ್ಲಾ ಆರೋಗ್ಯಾಧಿಕಾರಿಗಳು ಮಾತನಾಡಿ, ಆಯುಷ್ಮಾನ್ ಭಾರತ್ ಯೋಜನೆಯಡಿ ಪ್ರತಿ ಕುಟುಂಬಕ್ಕೆ ಒಂದರಂತೆ ಒಟ್ಟು 1,47,430 ಕಾರ್ಡ್‌ಗಳನ್ನು ವಿತರಿಸಲಾಗಿರುತ್ತದೆ ಎಂದು ತಿಳಿಸಿದರು. ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಯಶಸ್ವಿನಿ ಯೋಜನೆಯು ರಾಜ್ಯಮಟ್ಟದಲ್ಲಿ ಪ್ರಶಂಸೆಗೊಂಡಂತೆ ಆಯುಷ್ಮಾನ್ ಯೋಜನೆಯನ್ನು ಇನ್ನೂ ಹೆಚ್ಚು ಜನರಿಗೆ ತಲುಪುವ ರೀತಿಯಲ್ಲಿ ಅವಶ್ಯವಿರುವ ಪ್ರಚಾರ ಕೈಗೊಳ್ಳಲು ಸೂಚಿಸಿದರು. ಜಿಲ್ಲಾ ಆಸ್ಪತ್ರೆಯಲ್ಲಿ 10 ಬೆಡ್‌ಗಳ ಎನ್.ಆರ್.ಸಿ ವಾರ್ಡ್‌ಗಳನ್ನು ಸ್ಥಾಪಿಸಿದ್ದು, ಈ ಕಾರ್ಯಕ್ರಮವನ್ನು ತಾಲ್ಲೂಕು ಆಸ್ಪತ್ರೆಗಳಲ್ಲಿ ಕಾರ್ಯರೂಪಕ್ಕೆ ತರುವಂತೆ ಸೂಚಿಸಿದರು.

**(ಕ್ರಮ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಚಿಕ್ಕಬಳ್ಳಾಪುರ)**

11) <u>ಕಂದಾಯ ಇಲಾಖೆ :-</u>

ಅಪರ ಜಿಲ್ಲಾಧಿಕಾರಿಗಳು ಮಾತನಾಡಿ, ಸಕಾಲ ಯೋಜನೆಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯು ಸೆಪ್ಟಂಬರ್ ಮತ್ತು ಅಕ್ಟೋಬರ್ ಮಾಹೆಯಲ್ಲಿ ರಾಜ್ಯದಲ್ಲಿಯೇ ಪ್ರಥಮ ಸ್ಥಾನವನ್ನು ಪಡೆದಿರುತ್ತದೆ ಎಂದು ತಿಳಿಸಿದರು.

ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಎಲ್ಲಾ ಅಧಿಕಾರಿಗಳಿಗೂ ಅಭಿನಂದನೆಯನ್ನು ಸಲ್ಲಿಸಿದರು.

- ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಬಾಕಿಯಿರುವ ಪಹಣಿ ಕಾಲಂ 3 & 9ಕ್ಕೂ ತಾಳೆಯಿಲ್ಲದ ಒಟ್ಟು 4470 ಪ್ರಕರಣಗಳಿದ್ದು, ಸದರಿ ಪ್ರಕರಣಗಳನ್ನು ಇತ್ಯರ್ಥಪಡಿಸಲು ವಿಶೇಷ ಕಾರ್ಯಗಾರವನ್ನು ಹಮ್ಮಿಕೊಳ್ಳುವುದರ ಮೂಲಕ ಎಲ್ಲಾ ತಹಶೀಲ್ದಾರ್‌ಗಳು ತುರ್ತಾಗಿ ವಿಲೇವಾರಿಗೊಳಿಸಲು ಸೂಚಿಸಿದರು.
- ಜಿಲ್ಲೆಯಲ್ಲಿ 20 ಗ್ರಾಮಗಳಿಗೆ ರುದ್ರಭೂಮಿ ಸೌಲಭ್ಯವಿಲ್ಲದಿರುವುದು ಕಂಡು ಬಂದಿದ್ದು, ಸದರಿ ಗ್ರಾಮಗಳಿಗೆ ಜಮೀನನ್ನು ಗುರುತಿಸಿ, ರುದ್ರಭೂಮಿ ಸೌಲಭ್ಯವನ್ನು ಒದಗಿಸಿ, ಅಭಿವೃದ್ಧಿಪಡಿಸಲು ಸೂಚಿಸಿದರು.
- ಸಾಮಾಜಿಕ ಭದ್ರತಾ ಯೋಜನೆಯಡಿಯಲ್ಲಿ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳಿಗೆ ಆಧಾರ್ ಜೋಡಣೆಯನ್ನು ಶೇ100 ರಷ್ಟು ಸಾಧಿಸಲು ಸೂಚಿಸಿದರು.

* ಸರ್ಕಾರದಿಂದ ಬಿಡುಗಡೆಯಾಗಬೇಕಾದ ಅನುದಾನದ ವಿವರಗಳನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಕಛೇರಿಗೆ ವರದಿಯನ್ನು ಸಲ್ಲಿಸಲು ಸೂಚಿಸಿದರು.
* ಭೂದಾಖಲೆಗಳ ಇಲಾಖೆಯಲ್ಲಿ ಸಾರ್ವಜನಿಕರಿಗೆ ಕಾಲಕಾಲಕ್ಕೆ ಅರ್ಜಿಗಳನ್ನು ವಿಲೇವಾರಿ ಮಾಡುತ್ತಿರುವ ಬಗ್ಗೆ ಪರಿಶೀಲಿಸಲು ಅಪರ ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.

**(ಕ್ರಮ: ಉಪವಿಭಾಗಾಧಿಕಾರಿಗಳು ಹಾಗೂ ಜಿಲ್ಲೆಯ ಎಲ್ಲಾ ತಹಶೀಲ್ದಾರ್, ಚಿಕ್ಕಬಳ್ಳಾಪುರ ಜಿಲ್ಲೆ.)**

**12) <u>ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ :-</u>**

ಉಪನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ರವರು ಮಾತನಾಡಿ, ಜಿಲ್ಲೆಯಲ್ಲಿ ಕೃಷಿ ಇಲಾಖೆ ನೀಡಿರುವ ಮಾಹಿತಿಯಂತೆ ಮುಂಗಾರು ಋತುವಿನಲ್ಲಿ 69,415 ಮೆ.ಟನ್ ರಾಗಿ ಮತ್ತು 1,57,506 ಮೆ.ಟನ್ ಮುಸಕಿನ ಜೋಳ ಇಳುವರಿ ಆಗುವುದಾಗಿ ಮಾಹಿತಿ ನೀಡಿರುತ್ತಾರೆ. ಕೇಂದ್ರ ಸರ್ಕಾರದವರು ಪ್ರತಿ ಕ್ವಿಂಟಾಲ್ ರಾಗಿಗೆ ರೂ 3150/- ಮತ್ತು ಪ್ರತಿ ಕ್ವಿಂಟಾಲ್ ಮುಸಕಿನ ಜೋಳಕ್ಕೆ ರೂ 1750/- ಬೆಂಬಲ ಬೆಲೆ ನಿಗಧಿಪಡಿಸಿರುತ್ತಾರೆ. ಆದರೆ ಮಾರುಕಟ್ಟೆಯಲ್ಲಿ ಬೆಂಬಲ ಬೆಲೆಗಿಂತಲೂ ಕಡಿಮೆ ಧರ ಇರುವುದರಿಂದ ದಿನಾಂಕ: 09/11/2019ರಂದು ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಸಭೆ ನಡೆಸಿ, ಸಭೇಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಜಿಲ್ಲೆಯ ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಬಾಗೇಪಲ್ಲಿ ಮತ್ತು ಗೌರಿಬಿದನೂರು 05 ತಾಲ್ಲೂಕು ಕೇಂದ್ರಗಳಲ್ಲಿ ಬೆಂಬಲ ಬೆಲೆ ಖರೀದಿ ಕೇಂದ್ರಗಳನ್ನು(MSP) ತೆರೆಯಲು ಸರ್ಕಾರಕ್ಕೆ ಮತ್ತು ಆಹಾರ ಇಲಾಖೆ ಆಯುಕ್ತರಿಗೆ ಶಿಫಾರಸ್ಸು ಪತ್ರವನ್ನು ಬರೆಯಲಾಗಿರುತ್ತದೆ.

ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಜಿಲ್ಲೆಯಲ್ಲಿ ಸ್ಥಾಪಿಸುವ ಬೆಂಬಲ ಬೆಲೆ ಖರೀದಿ ಕೇಂದ್ರಗಳಿಗೆ ಬರುವ ಬೆಳೆಗಳು ಉತ್ತಮ ಗುಣ ಮಟ್ಟದಿಂದ ಕೂಡಿರುವ ಬಗ್ಗೆ ಪರಿಶೀಲಿಸಲು ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ.)**

* ಅರಣ್ಯ ಇಲಾಖೆಯವರು ಮನೆಗಳಿಗೆ ಸಸಿಗಳನ್ನು ನೀಡುವುದರ ಮೂಲಕ ಮನೆಗಳಲ್ಲಿ ಗಾರ್ಡನ್ (Home Forest) ಗಳನ್ನು ಬೆಳೆಸುವಂತೆ ಮತ್ತು ಗಾರ್ಡನ್ ಬೆಳೆಸಿದವರಿಗೆ ಜನವರಿ 26 ದಿನದಂದು ಪುರಸ್ಕಾರ ನೀಡುವಂತೆ ಅರಣ್ಯ ಇಲಾಖೆಗೆ ಸೂಚಿಸಿದರು.

**(ಕ್ರಮ: ಅರಣ್ಯಾಧಿಕಾರಿಗಳು, ಅರಣ್ಯ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ.)**

* ಸರ್ಕಾರವು ಈಗಾಗಲೇ ಇ-ಆಫೀಸ್ ತಂತ್ರಾಂಶವನ್ನು ಅನುಷ್ಠಾನಗೊಳಿಸಲು ಆದೇಶಿಸಿರುವುದರಿಂದ ಜಿಲ್ಲೆಯ ಎಲ್ಲಾ ಇಲಾಖೆಗಳು ಇ-ಆಫೀಸ್ ತಂತ್ರಾಂಶದಲ್ಲಿಯೇ ಕಡತಗಳ ವಿಲೇವಾರಿ ಮಾಡಲು ಸೂಚಿಸಿದರು.

**(ಕ್ರಮ: ಜಿಲ್ಲೆಯ ಎಲ್ಲಾ ಅಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ.)**

* ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಮತ್ತು ಸಂಸದರ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಪೂರ್ಣಗೊಂಡ ಕಾಮಗಾರಿಗಳನ್ನು ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಿಗೆ ಹಸ್ತಾಂತರ ಮಾಡಲು ಮತ್ತು ಬಾಕಿ ಇರುವ ಕಾಮಗಾರಿಗಳನ್ನು ಪೂರ್ಣಗೊಳಿಸುವರೆಗೂ ಹೊಸದಾದ ಕಾಮಗಾರಿಗಳನ್ನು ಮಂಜೂರು ಮಾಡಬಾರದೆಂದು ತಿಳಿಸಿದರು.

**(ಕ್ರಮ: ಜಿಲ್ಲಾಧಿಕಾರಿಗಳು, ಕಾರ್ಯಪಾಲಕ ಅಭಿಯಂತರರು, ಪಿ.ಡಬ್ಲ್ಯೂ.ಡಿ.ಇಲಾಖೆ, ಪಿಆರ್ಇಡಿ, ಇಲಾಖೆ, ಮತ್ತು ಇತರೆ ಕಾರ್ಯಪಾಲಕ ಅಭಿಯಂತರರು, ಚಿಕ್ಕಬಳ್ಳಾಪುರ ಜಿಲ್ಲೆ.)**

ಈ ಮೇಲ್ಕಂಡ ಇಲಾಖೆಗಳ ಬಗ್ಗೆ ಪ್ರಗತಿ ಪರಿಶೀಲನೆಯನ್ನು ನಡೆಸಿ ನೀಡಿದ ನಿರ್ದೇಶನಗಳಂತೆ ಅಗತ್ಯ ಕ್ರಮಗಳನ್ನು ಕೈಗೊಂಡು ಮುಂದಿನ ಸಭೆಯ ಒಳಗಾಗಿ ಸಂಬಂಧಪಟ್ಟ ಎಲ್ಲಾ ಇಲಾಖೆಗಳ ಅಧಿಕಾರಿಗಳಿಗೂ ಅನುಪಾಲನಾ ವರದಿಯನ್ನು ಸಲ್ಲಿಸಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು. ಕಾರ್ಯನಿರ್ವಾಹಣಾಧಿಕಾರಿಗಳು, ತಾಲ್ಲೂಕು ಪಂಚಾಯತ್, ಚಿಕ್ಕಬಳ್ಳಾಪುರ ರವರು ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

**(ಡಾ. ಎನ್.ನಾಗಾಂಬಿಕಾದೇವಿ)**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಹಕಾರ ಇಲಾಖೆ ಮತ್ತು
ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ,
ಕರ್ನಾಟಕ ಸರ್ಕಾರ, ಬೆಂಗಳೂರು.

ಪ್ರತಿಯನ್ನು:

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರಿಗೆ ಕಳುಹಿಸುತ್ತಾ ಸಭಾ ನಡಾವಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಿದೆ.
3. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ರವರಿಗೆ ಕಳುಹಿಸುತ್ತಾ ಸಭಾ ನಡಾವಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಿದೆ.
4. ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ರವಾನಿಸುತ್ತಾ ಸಭಾ ನಡಾವಳಿಗೆ ಅನುಪಾಲನ ವರದಿಯನ್ನು ಸಲ್ಲಿಸಲು ಸೂಚಿಸಿದೆ.
5. ಜಿಲ್ಲೆಯ ಎಲ್ಲಾ ಆಯುಕ್ತರು, ನಗರ ಸಭೆ / ಪೌರಾಯುಕ್ತರು ಪುರಸಭೆ ರವರಿಗೆ ಕಳುಹಿಸುತ್ತಾ ಸಭಾ ನಡಾವಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಿದೆ.
6. ಹೆಚ್ಚುವರಿ ಪ್ರತಿ.

**ಶ್ರೀಮತಿ ಉಮಾ ಮಹಾದೇವನ್, ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ದಿನಾಂಕ : 30.11.2019 ರಂದು ಕೋಲಾರ ಜಿಲ್ಲೆಗೆ ಕ್ಷೇತ್ರ ಪ್ರವಾಸ ಮಾಡಿದ ಬಗ್ಗೆ ವರದಿ.**

**30ನೇ ನವೆಂಬರ್ 2019:** ಕೋಲಾರಕ್ಕೆ ಭೇಟಿ

- ಕೋಲಾರ ಜಿಲ್ಲೆಯ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಉಪ ಕಾರ್ಯದರ್ಶಿಗಳು ಹಾಗೂ ಇತರೆ ಜಿಲ್ಲಾ ಮಟ್ಟದ ಇಲಾಖಾ ಮುಖ್ಯಸ್ಥರೊಂದಿಗೆ ಕೋಲಾರ ಜಿಲ್ಲೆಯ ಪ್ರಗತಿ ಕುರಿತು ಚರ್ಚಿಸಲಾಯಿತು.
- ಬೆಂಗಳೂರಿನಿಂದ ಕೋಲಾರಕ್ಕೆ ಕೆ.ಸಿ.ವ್ಯಾಲಿ ನೀರನ್ನು ಸಂಸ್ಕರಿಸಿ ಸರಬರಾಜು ಮಾಡುವ ಕುರಿತು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಲಾಯಿತು.
- 2021ರ ಜನಗಣತಿ ಕಾರ್ಯದ ಸಿದ್ಧತೆ ಕುರಿತು ಚರ್ಚಿಸಲಾಯಿತು

10/12/19.

(ಉಮಾ ಮಹಾದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ.

**ದಿನಾಂಕ:25.10.2019 ರಂದು ಬೆಳಿಗ್ಗೆ 11.00 ಗಂಟೆಗೆ ಶ್ರೀಮತಿ ಉಮಾಮಹದೇವನ್,ಭಾ.ಆ.ಸೇ., ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ 2019-20ನೇ ಸಾಲಿನ 23.10.2019ರ ಅಂತ್ಯದವರೆಗಿನ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು.**

ಪ್ರಾರಂಭದಲ್ಲಿ ಜಿಲ್ಲಾಧಿಕಾರಿಗಳು, ಕೋಲಾರರವರು ಸಭೆಯಲ್ಲಿ ಉಪಸ್ಥಿತರಿದ್ದ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಗೆ ಮತ್ತು ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಇಲಾಖಾವಾರು ಪ್ರಗತಿ ಪರಿಶೀಲನೆಯನ್ನು ಪ್ರಾರಂಭಿಸಿದರು.

ಜಿಲ್ಲಾಧಿಕಾರಿಗಳು ಜಿಲ್ಲೆಯ ಮಳೆ ಪರಿಸ್ಥಿತಿಯ ಬಗ್ಗೆ ಮಾಹಿತಿ ನೀಡಿ, ಜನವರಿ 2019 ಮಾಹೆಯಿಂದ ಅಕ್ಟೋಬರ್ ಮಾಹೆಯವರೆಗೆ 635ಮಿಮೀ ಮಳೆಯಾಗಬೇಕಾಗಿದ್ದು, 636ಮಿಮೀ ಮಳೆಯಾಗಿರುತ್ತದೆ. ಮಳೆಯ ಕೊರತೆಯಾಗಿಲ್ಲ ನೈರುತ್ಯ ಮಾನ್ಸೂನ್ ಮಳೆ 387ಮಿಮೀ. ಆಗಬೇಕಾಗಿದ್ದು, 351ಮಿಮೀ ಮಳೆಯಾಗಿದ್ದು, ಶೇ.9ರಷ್ಟು ಕೊರತೆಯುಂಟಾಗಿರುತ್ತದೆಂದು ತಿಳಿಸಿದರು.

**ಗ್ರಾಮಾಂತರ ಕುಡಿಯುವ ನೀರಿನ ಸಮಸ್ಯೆ:-**

ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯಿರುವ 45ಗ್ರಾಮಗಳಿಗೆ ಟ್ಯಾಂಕರ್ ಮೂಲಕ ಹಾಗೂ 71 ಸಮಸ್ಯಾತ್ಮಕ ಗ್ರಾಮಗಳಿಗೆ ಖಾಸಗಿ ಕೊಳವೆಬಾವಿಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ ಎಂದು ತಿಳಿಸಿದರು. ಪಟ್ಟಣ ಪ್ರದೇಶದಲ್ಲಿ 28ವಾರ್ಡುಗಳಲ್ಲಿ ನೀರಿನ ಸಮಸ್ಯೆಯಿದ್ದು, ಟ್ಯಾಂಕರ್ ಮೂಲಕ 75 ಟ್ರಿಪ್ ನೀರು ಸರಬರಾಜು ಮಾಡಲಾಗುತ್ತಿದೆ.

2019-20ನೇ ಸಾಲಿನಲ್ಲಿ NRDWP ಯೋಜನೆಯಡಿ ರೂ.38.64ಕೋಟಿಗಳ ಅನುದಾನ ಹಂಚಿಕೆಯಾಗಿದ್ದು, ಈ ಅನುದಾನದಡಿ ಒಟ್ಟಾರೆ 711 ಸಂಖ್ಯೆ ಕಾಮಗಾರಿಗಳನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆಯಾಗಿರುತ್ತದೆ. 2018-19ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಬರಗಾಲ ಪರಿಸ್ಥಿತಿಯಿದ್ದು, ಸಮಸ್ಯಾತ್ಮಕ ಗ್ರಾಮಗಳಿಗೆ ನೀರು ಒದಗಿಸುವ ಸಲುವಾಗಿ ಅನುಮೋದಿತ ಕ್ರಿಯಾ ಯೋಜನೆ ಹೊರತು ಪಡಿಸಿ ಹೆಚ್ಚುವರಿಯಾಗಿ ರೂ.11.51ಕೋಟಿಗಳ ವೆಚ್ಚದಲ್ಲಿ ಕೊಳವೆ ಬಾವಿಗಳನ್ನು ಕೊರೆಯಿಸಲಾಗಿದ್ದು, ಅನುದಾನ ಕೋರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ರೂ.11.00ಕೋಟಿ ಅನುದಾನ ಬಿಡುಗಡೆಯಾಗಿದ್ದು, ರೂ.9.00ಕೋಟಿ ಅನುದಾನ ಖರ್ಚು ಮಾಡಲಾಗಿದೆ ಎಂದು ಕಾರ್ಯಪಾಲಕ ಅಭಿಯಂತರರು ಮಾಹಿತಿ ನೀಡಿದರು.

**ಕೃಷಿ ಇಲಾಖೆ:-**

2019-20ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯಲ್ಲಿ 1,02,000 ಹೆಕ್ಟೇರ್ ಬಿತ್ತನೆ ಕ್ಷೇತ್ರದ ಗುರಿಯಿದ್ದು, ಶೇ.76ರಷ್ಟು ಬಿತ್ತನೆಕಾರ್ಯವಾಗಿದ್ದು, ರಾಗಿ ಬೆಳೆ ಚೆನ್ನಾಗಿ ಬಂದಿರುವುದಾಗಿ ಅಧಿಕಾರಿಗಳು ಮಾಹಿತಿ ನೀಡಿದರು. ಕಳೆದ ಸಾಲಿನಲ್ಲಿ ಇದೇ ವೇಳೆಗೆ ಶೇ.69ರಷ್ಟು ಬಿತ್ತನೆ ಯಾಗಿತ್ತು ಎಂದು ತಿಳಿಸಿದರು.

2018ರ ಮುಂಗಾರು ಹಂಗಾಮಿನಲ್ಲಿ 52,320 ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆಗಳು ಹಾನಿಗೊಳಗಾಗಿದ್ದು, ಶೇ.33ಕ್ಕಿಂತ ಹೆಚ್ಚು ಹಾನಿಗೊಳಗಾದ ಪ್ರದೇಶ 39,438ಹೆಕ್ಟೇರ್ ಆಗಿದ್ದು, ಒಟ್ಟು 60,340 ರೈತರಿಗೆ ರೂ.27.00 ಕೋಟಿಗಳ ಇನ್‌ಪುಟ್ ಸಬ್ಸಿಡಿಯನ್ನು ವಿತರಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. 2018ರ ಹಿಂಗಾರು ಹಂಗಾಮಿನಲ್ಲಿ ಜಿಲ್ಲೆಯ 9178ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆಗಳು ಹಾನಿಗೊಳಗಾಗಿದ್ದು, ಇನ್‌ಪುಟ್ ಸಬ್ಸಿಡಿ ವಿತರಿಸಲು ಅವಶ್ಯಕವಿರುವ ಅನುದಾನ ರೂ.624.15ಲಕ್ಷಗಳನ್ನು ಕೋರಿ ಪರಿಹಾರ ತಂತ್ರಾಂಶದಲ್ಲಿ ವಿವರ ನಮೂದಿಸಲಾಗಿದ್ದು, ಪರಿಹಾರ ಮೊತ್ತ ಮೊದಲನೆ ಕಂತು ರೂ.2.00ಕೋಟಿ ಸರ್ಕಾರದಿಂದ ಬಿಡುಗಡೆಯಾಗಿದ್ದು, 6234 ರೈತರಿಗೆ ವಿತರಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯು ಒಟ್ಟು ರೂ.6,000/- ಗಳನ್ನು ರೈತರ ಖಾತೆಗಳಿಗೆ ನೇರವಾಗಿ ಮೂರು ಕಂತುಗಳಲ್ಲಿ ಜಮೆ ಮಾಡುವ ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಸದರಿ ಸವಲತ್ತು ಪಡೆಯಲು ಜಿಲ್ಲೆಯಲ್ಲಿ 1,70,000ರೈತರು ನೋಂದಣಿ ಮಾಡಿಕೊಂಡಿರುತ್ತಾರೆಂದು ತಿಳಿಸಿದರು.

ಬೆಳೆ ಸಮೀಕ್ಷೆ (Crop survey) ಶೇ.98ರಷ್ಟು ಮುಗಿದಿದ್ದು, ಕೃಷಿ ಭಾಗ್ಯ ಯೋಜನೆಯಡಿ ಶೇ.99ರಷ್ಟು ಪ್ರಗತಿ ಸಾಧನೆಯಾಗಿರುತ್ತದೆ. ಲಘು ನೀರಾವರಿ ಅಡಿ ಆರ್.ಸಿ. ವ್ಯಾಜ್ಯಗಳಿಂದಾಗಿ ಶೇ.35ರಷ್ಟು ಹಾಗೂ ಕೃಷಿ ಅಭಿಯಾನ ಯೋಜನೆಯಡಿ ಶೇ.75ರಷ್ಟು ಪ್ರಗತಿ ಸಾಧನೆಯಾಗಿರುವುದಾಗಿ ಅಧಿಕಾರಿಗಳು ಮಾಹಿತಿ ನೀಡಿದರು.

**(ಕ್ರಮ:- ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಕೋಲಾರ.)**

**ಪಶುಸಂಗೋಪನೆ ಇಲಾಖೆ:-**

ಜಿಲ್ಲೆಯಲ್ಲಿ ಒಟ್ಟು 2,08,519 ಜಾನುವಾರುಗಳಿದ್ದು, ಜಿಲ್ಲೆಯ ರೈತರಲ್ಲಿ 94569 ಮೆ.ಟನ್ ಮೇವು ದಾಸ್ತಾನಿದ್ದು, ಇದು ಸುಮಾರು 13ವಾರಗಳಿಗೆ ಸಾಕಾಗುತ್ತದೆ. ಮೇವಿನ ಕೊರತೆಯಿರುವುದಿಲ್ಲ. ಏಪ್ರಿಲ್ ಮಾಹೆಯಿಂದ 12175 ಮೇವಿನ ಬೀಜದ ಮಿನಿಕಿಟ್ಟ್‌ಗಳನ್ನು ಇಲಾಖಾವತಿಯಿಂದ ವಿತರಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಜಿಲ್ಲೆಯಲ್ಲಿ ಹಾಲಿನ ಉತ್ಪಾದನೆ ಜಾಸ್ತಿಯಾಗಿರುವುದಾಗಿ ತಿಳಿಸಿದರು. ಕಾಲುಬಾಯಿ ರೋಗಕ್ಕೆ ಲಸಿಕೆ ನೀಡುವ

ಕಾರ್ಯಕ್ರಮ ಚಾಲನೆಯಲ್ಲಿದ್ದು, ಇದುವರೆವಿಗೂ 1,19,000 ಜಾನುವಾರುಗಳಿಗೆ ಲಸಿಕೆ ಹಾಕಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

**ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಇಲಾಖಾವತಿಯಿಂದ ಗಿರಿರಾಜ ಕೋಳಿಗಳನ್ನು ವಿತರಿಸಲಾಗುತ್ತಿದ್ದು, ಇನ್ನು ಮುಂದೆ N.R.L.M. ಗುಂಪುಗಳಿಗೆ ಕೋಳಿಗಳನ್ನು ವಿತರಿಸಿದಲ್ಲಿ ಅಂಗನವಾಡಿ ಕೇಂದ್ರಗಳಿಗೆ ಖರೀದಿಸಲಾಗುವ ಮೊಟ್ಟೆಗಳನ್ನು ಸದರಿ ಗುಂಪುಗಳಿಂದ ಖರೀದಿಸಬಹುದಾಗಿದೆ ಎಂದು ತಿಳಿಸಿದರು. ಅಧಿಕಾರಿಗಳು ಗಿರಿರಾಜ ಕೋಳಿಗಳ ವಿತರಣೆಗಾಗಿ ಕಡಿಮೆ ಅನುದಾನ ಬರುತ್ತಿರುವುದಾಗಿ ತಿಳಿಸಿದರು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಉಪ ನಿರ್ದೇಶಕರು, ಪಶುಸಂಗೋಪನಾ ಇಲಾಖೆ ಹಾಗೂ ಜಿಲ್ಲಾ ಪಂಚಾಯಿತಿಯಲ್ಲಿ N.R.L.M. ಗುಂಪುಗಳಿಗೆ ಅನುದಾನ ಬಿಡುಗಡೆ ಮಾಡುವ ಅಧಿಕಾರಿಗಳಾದ ಯೋಜನಾ ನಿರ್ದೇಶಕರು, ಡಿ.ಆರ್.ಡಿ.ಎ.ಕೋಶ ರವರು ಈ ಬಗ್ಗೆ ಚರ್ಚಿಸಿ ಸೂಕ್ತ ಕ್ರಮವಹಿಸಬೇಕೆಂದು ಸೂಚಿಸಿದರು.**

**(ಕ್ರಮ: ಉಪ ನಿರ್ದೇಶಕರು, ಪಶುಸಂಗೋಪನಾ ಇಲಾಖೆ, ಕೋಲಾರ/
ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ/
ಯೋಜನಾ ನಿರ್ದೇಶಕರು, ಡಿ.ಆರ್.ಡಿ.ಎ.ಕೋಶ.
ಜಿಲ್ಲಾ ಪಂಚಾಯತ್, ಕೋಲಾರ)**

## ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ:-

2019-20ನೇ ಸಾಲಿನಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಡಿ 5000000 ಮಾನವದಿನಗಳ ಸೃಜನೆ ಗುರಿಯಿದ್ದು, 23.10.2019ರವರೆಗೆ 2776964ಲಕ್ಷಗಳ ಮಾನವ ದಿನಗಳ ಸೃಜನೆ ಮಾಡಿ, ಶೇ.55.54ರಷ್ಟು ಪ್ರಗತಿ ಸಾಧನೆ ಮಾಡಿ, ರೂ.14159.4 ಲಕ್ಷಗಳ ಅನುದಾನ ಖರ್ಚು ಮಾಡಿರುವುದಾಗಿ, ಯೋಜನೆಯ ಮಾರ್ಗಸೂಚಿಯನ್ವಯ ಶೇ.60:40ರ ಅನುಪಾತ ಸರಿಹೊಂದಿಸಲು ಕ್ರಮಕೈಗೊಳ್ಳಲಾಗಿದೆ ಎಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದರು.

ರೇಷ್ಮೆಹುಳು ಸಾಕಣೆ ಮನೆಗಳನ್ನು ನರೇಗಾ ಯೋಜನೆಯಡಿಯಲ್ಲಿ ಸೇರ್ಪಡೆ ಮಾಡಬೇಕೆಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವ ಬಗ್ಗೆ ಪ್ರಸ್ತಾಪಿಸಿದ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಈ ಬಗ್ಗೆ ಕೇಂದ್ರಸರ್ಕಾರಕ್ಕೆ ವಿನಂತಿ ಮಾಡಲಾಗಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿಗಳು ಮಾತನಾಡಿ, ಜಿಲ್ಲೆಯ ಎಲ್ಲಾ ಗ್ರಾಮಗಳಿಗೆ ಅವಶ್ಯವಿರುವ ಸ್ಮಶಾನಭೂಮಿಗೆ ಜಾಗ ಮಂಜೂರು ಮಾಡಲಾಗಿದ್ದು, ನರೇಗಾ ಯೋಜನೆಯಡಿ ಸ್ಮಶಾನ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ತಿಳಿಸಿದರು.

**(ಕ್ರಮ: ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು/
ಅನುಷ್ಠಾನ ಇಲಾಖಾಧಿಕಾರಿಗಳು)**

**ತೋಟಗಾರಿಕೆ ಇಲಾಖೆ:-**

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತೋಟಗಾರಿಕೆ ಇಲಾಖೆಯಿಂದ ಮಹಿಳಾ ರೈತರಿಗೆ ಆದ್ಯತೆ ಮೇಲೆ ಸವಲತ್ತುಗಳನ್ನು ವಿತರಿಸಬೇಕೆಂದು ಹಾಗೂ ಸಾವಯವ ಕೃಷಿಕರಿಗೆ (Organic Farmers) ಆದ್ಯತೆ ನೀಡಬೇಕೆಂದು ಸೂಚಿಸಿದರು.

ಜಿಲ್ಲಾಧಿಕಾರಿಗಳು ಮಾತನಾಡಿ, ಕೋಲಾರ ಜಿಲ್ಲೆಯಲ್ಲಿ ಟಮೋಟೊ ಬೆಳೆಗೆ ಊಜಿಕೀಟದ ಹಾವಳಿ ಉಂಟಾಗಿದ್ದು, ಕೀಟದ ನಿಯಂತ್ರಣದ ಕುರಿತು ಕೃಷಿ ವಿಜ್ಞಾನಿಗಳನ್ನು ಕರೆಯಿಸಿ ರೈತರಿಗೆ ಕಾರ್ಯಾಗಾರ ಮಾಡಲಾಗಿದೆ ಎಂದು ತಿಳಿಸಿದರು.

ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ ರವರು ಪ್ರಗತಿ ವಿವರಣೆ ನೀಡಿ, ನರೇಗಾ ಯೋಜನೆಯಡಿ 1,24,000 ಮಾನವದಿನಗಳ ಸೃಜನೆ ಮಾಡಲಾಗಿದೆ ಎಂದು ತಿಳಿಸಿದರು.

**(ಕ್ರಮ:- ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಕೋಲಾರ.)**

**ಸಮಾಜ ಕಲ್ಯಾಣ ಇಲಾಖೆ:-**

ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಪ್ರಗತಿ ವಿವರಣೆ ನೀಡಿ, ಕೋಲಾರ ಜಿಲ್ಲೆ 2018-19ನೇ ಸಾಲಿನಲ್ಲಿ "ಬಹುಮಾನ ಹಣ" ವಿತರಣಾ ಕಾರ್ಯಕ್ರಮದ ಪ್ರಗತಿಯಲ್ಲಿ ರಾಜ್ಯದಲ್ಲೇ ಪ್ರಥಮ ಸ್ಥಾನದಲ್ಲಿರುವುದಾಗಿ ತಿಳಿಸಿದರು. ವಿಧವಾ ಮರು ವಿವಾಹಕ್ಕೆ ಪ್ರೋತ್ಸಾಹಧನ ರೂ.3.00ಲಕ್ಷಗಳನ್ನು ಇಲಾಖಾವತಿಯಿಂದ ಮಂಜೂರು ಮಾಡಲಾಗಿದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಒಟ್ಟು 82 ವಿದ್ಯಾರ್ಥಿನಿಲಯಗಳಿದ್ದು, ಒಟ್ಟು 60 ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡಗಳಿದ್ದು, 14 ವಿದ್ಯಾರ್ಥಿನಿಲಯಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವುದಾಗಿ, ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕಾಗಿ 9 ನಿವೇಶನಗಳು ಮಂಜೂರಾಗಿರುವುದಾಗಿ ಅಧಿಕಾರಿಗಳು ಮಾಹಿತಿ ನೀಡಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಮಕ್ಕಳು ತಂದೆ ತಾಯಿಯರನ್ನು ಬಿಟ್ಟು ವಿದ್ಯಾರ್ಥಿನಿಲಯಗಳಲ್ಲಿ ವಾಸ ಇರುತ್ತಾರೆ. ಈ ಮಕ್ಕಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳಾದ ನೀರು, ಶೌಚಾಲಯ, ಮಂಚ, ಹಾಸಿಗೆ, ಹೊದಿಕೆ, ಲಾಕರ್ ಇವೇ ಮುಂತಾದ ಸೌಲಭ್ಯಗಳನ್ನು ಕಲ್ಪಿಸಿಕೊಡುವುದು ಅಧಿಕಾರಿಗಳ ಕರ್ತವ್ಯವಾಗಿದ್ದು, ಈ ಬಗ್ಗೆ ಅಧಿಕಾರಿಗಳು ಆದ್ಯತೆ ನೀಡಬೇಕೆಂದು ಅದೇ ರೀತಿ ವಿದ್ಯಾರ್ಥಿನಿಲಯಗಳ ದುರಸ್ತಿಗೆ ಮೊದಲ ಆದ್ಯತೆ ನೀಡಬೇಕೆಂದು ಸೂಚಿಸಿದರು. ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕಾಗಿ ಅಗತ್ಯವಿರುವ ಅನುದಾನ ಬಿಡುಗಡೆಗಾಗಿ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿ, ಪ್ರತಿಯನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಕಛೇರಿಗೆ ಸಲ್ಲಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು. ಮುಂದುವರೆದು, ವಿದ್ಯಾರ್ಥಿನಿಲಯಗಳಿಗೆ ಅಗತ್ಯವಿರುವ ಕಾಂಪೌಂಡ್, ಆಟದ ಮೈದಾನ ಕಾಮಗಾರಿಗಳನ್ನು ನರೇಗಾ ಯೋಜನೆಯಡಿ

ಕೈಗೊಳ್ಳಲು ಸೂಚಿಸಿದರು. ಮಕ್ಕಳ ಬಟ್ಟೆ, ಬೆಡ್‌ಶೀಟ್‌ಗಳನ್ನು ಒಗೆಯಲು ಸಿ.ಎಸ್.ಆರ್. ಫಂಡ್‌ನಿಂದ ನೆರವು ಪಡೆದು ಪ್ರತಿ ವಿದ್ಯಾರ್ಥಿನಿಲಯಕ್ಕೆ ವಾಷಿಂಗ್ ಮೆಷೀನ್ ಖರೀದಿಸಬೇಕೆಂದು ಸೂಚಿಸಿದರು.

(ಕ್ರಮ:- ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕೋಲಾರ)

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:-

ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರವರು ಪ್ರಗತಿ ವಿವರಣೆ ನೀಡಿ, ಜಿಲ್ಲೆಯಲ್ಲಿ ಒಟ್ಟು 60 ವಿದ್ಯಾರ್ಥಿನಿಲಯಗಳಿದ್ದು, ಒಟ್ಟು 4551 ವಿದ್ಯಾರ್ಥಿಗಳ ಮಂಜೂರಾತಿ ಸಂಖ್ಯೆಯನ್ನು ಹೊಂದಿರುವುದಾಗಿ ಮಾಹಿತಿ ನೀಡಿದರು. 2019-20ನೇ ಸಾಲಿನಲ್ಲಿ 3707 ವಿದ್ಯಾರ್ಥಿಗಳು ಪ್ರವೇಶ ಪಡೆದಿರುವುದಾಗಿ ತಿಳಿಸಿದರು. ಇಲಾಖಾ ವತಿಯಿಂದ ಪ್ರತಿ ವರ್ಷ 10 ಕಾನೂನು ಪದವೀಧರರನ್ನು ಆಯ್ಕೆ ಮಾಡಿ 04ವರ್ಷಗಳ ಕಾಲ ಪ್ರತಿ ಮಾಹೆ ಒಬ್ಬ ಅಭ್ಯರ್ಥಿಗೆ ರೂ.4,000/- ಶಿಷ್ಯವೇತನವನ್ನು ಮಂಜೂರು ಮಾಡಲಾಗುತ್ತಿದ್ದು, 2019-20ನೇ ಸಾಲಿನಲ್ಲಿ ರೂ.2,32,000/-ಗಳನ್ನು ಮಂಜೂರು ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

(ಕ್ರಮ:- ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕೋಲಾರ)

## ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ:-

ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರು ಪ್ರಗತಿ ವಿವರಣೆ ನೀಡಿ, 2019-20ನೇ ಸಾಲಿನಲ್ಲಿ ವಿದ್ಯಾರ್ಥಿನಿಲಯಗಳಲ್ಲಿ 300 ವಿದ್ಯಾರ್ಥಿಗಳ ಪೈಕಿ 228 ವಿದ್ಯಾರ್ಥಿಗಳು ದಾಖಲಾಗಿರುತ್ತಾರೆ. ಶೇ.75ರಷ್ಟು ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರವೇಶ ಇರುವುದರಿಂದ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳು ದಾಖಲಾಗಿರುವುದಿಲ್ಲವೆಂದು ಮಾಹಿತಿ ನೀಡಿದರು. "ಬಿದಾಯಿ" ಯೋಜನೆಯಡಿ ರೂ.3.50ಕೋಟಿ ಅನುದಾನ ಸರ್ಕಾರದಿಂದ ಬಿಡುಗಡೆಯಾಗಿಲ್ಲವೆಂದು ಅಧಿಕಾರಿಗಳು ಉಸ್ತುವಾರಿ ಕಾರ್ಯದರ್ಶಿಗಳ ಗಮನಕ್ಕೆ ತಂದರು.

**ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ದಾಖಲು ಮಾಡಲು ಅಧಿಕಾರಿಗಳು ಪ್ರಯತ್ನ ಪಡಬೇಕೆಂದು ಸೂಚಿಸಿದರು. ಯಾವುದೇ ಕಾರಣಕ್ಕೂ ಮಕ್ಕಳು ಶಾಲೆ ಬಿಡದಂತೆ ಅಧಿಕಾರಿಗಳು ಕ್ರಮವಹಿಸಬೇಕು. ಈಗಾಗಲೇ ಶಾಲೆ ಬಿಟ್ಟ ಮಕ್ಕಳನ್ನು ಪುನ: ಶಾಲೆಗೆ ದಾಖಲಿಸಲು ಅಧಿಕಾರಿಗಳು ಅಗತ್ಯ ಕ್ರಮವಹಿಸಬೇಕೆಂದು ಸೂಚಿಸಿದರು.**

**ಮುಂದುವರೆದು, ನವೆಂಬರ್ 14 ರಿಂದ 21 ರವರೆಗೆ ಗ್ರಾಮ ಪಂಚಾಯಿತಿಗಳಲ್ಲಿ ಮಕ್ಕಳ ಗ್ರಾಮ ಸಭೆಗಳನ್ನು ಆಯೋಜಿಸಬೇಕಾಗಿದ್ದು, ಸದರಿ ಗ್ರಾಮ ಸಭೆಗಳಲ್ಲಿ ಎಲ್ಲಾ ಅಧಿಕಾರಿಗಳು ಭಾಗವಹಿಸಿ,**

ಮಕ್ಕಳ ಬೇಡಿಕೆ ಬಗ್ಗೆ ಕೇಳಬೇಕು. ಮಕ್ಕಳ ಗ್ರಾಮ ಸಭೆ ನಡೆಯುವ ವೇಳೆಯಲ್ಲಿ ಬೇರೆ ಯಾವುದೇ ಕಾರ್ಯಕ್ರಮಗಳನ್ನು ಆಯೋಜಿಸದಂತೆ ಇಲಾಖಾಧಿಕಾರಿಗಳು ಕ್ರಮವಹಿಸಬೇಕು. ಕೋಲಾರ ಜಿಲ್ಲೆಯಲ್ಲಿ ಮಕ್ಕಳ ಗ್ರಾಮಸಭೆ ಯಶಸ್ವಿಯಾಗಿ ನಡೆಸಬೇಕೆಂದು ಅನುಷ್ಠಾನಾಧಿಕಾರಿಗಳಿಗೆ ಸೂಚಿಸಿದರು.

(ಕ್ರಮ:- ಜಿಲ್ಲಾ ಅಧಿಕಾರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕೋಲಾರ
ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು/
ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕೋಲಾರ)

## ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ:-

ಜಿಲ್ಲಾ ವ್ಯವಸ್ಥಾಪಕರು ಪ್ರಗತಿ ವಿವರಣೆ ನೀಡಿ, ನಿಗಮದ ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ಫಲಾನುಭವಿಗಳ ಪಟ್ಟಿಯನ್ನು ವಿಧಾನಸಭಾ ಕ್ಷೇತ್ರವಾರು ಆಯ್ಕೆ ಸಮಿತಿಗೆ ಸಲ್ಲಿಸಲಾಗಿದೆ. ನೀತಿ ಸಂಹಿತೆ ಇರುವ ಕಾರಣ ಆಯ್ಕೆ ಸಮಿತಿ ನಡೆದಿರುವುದಿಲ್ಲವೆಂದು ಸಭೆಗೆ ಮಾಹಿತಿ ನೀಡಿದರು.

(ಕ್ರಮ:- ಜಿಲ್ಲಾ ವ್ಯವಸ್ಥಾಪಕರು, ಡಿ.ದೇವರಾಜ ಅರಸು ಅಭಿವೃದ್ಧಿ ನಿಗಮ, ಕೋಲಾರ)

## ವಸತಿ:-

2019-20ರ ಎಂಪಿಕ್ ವಾರ್ಷಿಕ ಗುರಿ 7928 ಮನೆಗಳಾಗಿದ್ದು, 2372 ಮನೆಗಳು ಪೂರ್ಣಗೊಂಡಿದ್ದು, 16228 ಮನೆಗಳು ಬಾಕಿಯಿದ್ದು ವಸತಿ ಯೋಜನೆಯಡಿ ರಾಜ್ಯದಲ್ಲಿ 14ನೇ ಸ್ಥಾನದಲ್ಲಿರುವುದಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಾಹಿತಿ ನೀಡಿದರು

ಮುಂದಿನ ಸಭೆಯೊಳಗಾಗಿ ವಸತಿ ಯೋಜನೆಯಡಿ ಪ್ರಗತಿಯನ್ನು ಉತ್ತಮಪಡಿಸಲು ಅನುಷ್ಠಾನಾಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

(ಕ್ರಮ:- ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು)

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:-

ಉಪ ನಿರ್ದೇಶಕರು, ಪ್ರಗತಿ ವಿವರಣೆ ನೀಡಿ, ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಮಕ್ಕಳಿಗೆ ಮತ್ತು ಗರ್ಭಿಣಿಯರಿಗೆ ಪೂರಕ ಪೌಷ್ಠಿಕ ಆಹಾರ ನೀಡಲಾಗುತ್ತಿದ್ದು, ಜಿಲ್ಲೆಯಲ್ಲಿ ಒಟ್ಟು 2061 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಮಾತೃವಂದನಾ ಯೋಜನೆಯಡಿ ಪ್ರಯೋಜನ ಪಡೆದಿರುವ ಫಲಾನುಭವಿಗಳ ಕುರಿತು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ, ಉಪ

ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕೋ-ಆರ್ಡಿನೇಷನ್ ಕಮಿಟಿ ಸಭೆ ನಡೆಸಿ, ಎಷ್ಟು ಮಕ್ಕಳ ಜನನ ಆಗಿದೆ ಎಷ್ಟು ಜನ ಮಾತೃವಂದನಾ ಯೋಜನೆಯಡಿ ಪ್ರಯೋಜನ ಪಡೆದಿದ್ದಾರೆ, ಇನ್ನೂ ಎಷ್ಟು ಜನ ಪ್ರಯೋಜನ ಪಡೆಯಬೇಕಾಗಿದೆ ಎಂಬ ಬಗ್ಗೆ ಚರ್ಚಿಸಿ, ಅರ್ಹರಿರುವ ಎಲ್ಲಾ ಫಲಾನುಭವಿಗಳು ಪ್ರಯೋಜನ ಪಡೆಯಲು ಅಗತ್ಯ ಕ್ರಮವಹಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು. ಜಿಲ್ಲೆಯಲ್ಲಿ ಎಷ್ಟು ಹೆಣ್ಣು ಮಕ್ಕಳ ಜನನ ಆಗಿದೆ, ಎಷ್ಟು ಹೆಣ್ಣು ಮಕ್ಕಳು ಭಾಗ್ಯಲಕ್ಷ್ಮಿ ಯೋಜನೆಯಡಿ ನೋಂದಾಯಿತರಾಗಿದ್ದಾರೆ ಎಂಬ ಬಗ್ಗೆ ಕೋ-ಆರ್ಡಿನೇಷನ್ ಕಮಿಟಿಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪರಿಶೀಲಿಸಬೇಕೆಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಜಿಲ್ಲೆಯಲ್ಲಿ ಪರಿಶಿಷ್ಟವರ್ಗದವರು ಹೆಚ್ಚಾಗಿ ವಾಸಿಸುವ ಕಡೆ ಎಸ್.ಟಿ.ಗುಂಪುಗಳನ್ನು ರಚನೆ ಮಾಡಲು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಸಹಯೋಗದೊಂದಿಗೆ ಕ್ರಮವಹಿಸಬೇಕೆಂದು ಉಪ ನಿರ್ದೇಶಕರಿಗೆ ಸೂಚಿಸಿದರು.

ಅಪೌಷ್ಟಿಕ ಮಕ್ಕಳ ವೈದ್ಯಕೀಯ ವೆಚ್ಚ ಹಾಗೂ ಬಾಲಸಂಜೀವಿನಿ ಯೋಜನೆಯಡಿ ನಿಗಧಿಪಡಿಸಿರುವ ಅನುದಾನವನ್ನು ಪೂರ್ಣವಾಗಿ ಖರ್ಚು ಮಾಡಬೇಕೆಂದು ಜಿಲ್ಲೆಯಲ್ಲಿರುವ 119 ಅಪೌಷ್ಟಿಕ ಮಕ್ಕಳ ಆರೋಗ್ಯ ತಪಾಸಣೆ ನಡೆಸಿ, ಅಗತ್ಯ ಪೌಷ್ಟಿಕಾಂಶ ಗುಳಿಗೆಗಳನ್ನು ವೈದ್ಯರು ಬರೆದುಕೊಡಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಸೂಚಿಸಿದರು. ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ನಿವಾರಣೆ ಮಾಡಲು ಪ್ರಥಮ ಆದ್ಯತೆ ನೀಡಬೇಕೆಂದು ಸೂಚಿಸಿದರು. ಅಂಗನವಾಡಿ ಕಟ್ಟಡಗಳ ದುರಸ್ತಿಗಾಗಿ ನಿಗಧಿಪಡಿಸಿರುವ ರೂ.70.00ಲಕ್ಷಗಳನ್ನು ಆದ್ಯತಾನುಸಾರ ಖರ್ಚುಮಾಡಬೇಕೆಂದು ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದರು. ಅಂಗನವಾಡಿ ಕಾರ್ಯಕರ್ತರ ಗೌರವಧನ ನಿಯಮಿತವಾಗಿ ಸಕಾಲದಲ್ಲಿ ಪಾವತಿಯಾಗುತ್ತಿರುವ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಭೆನಡೆಸಿ ಪರಾಮರ್ಶೆ ನಡೆಸಬೇಕೆಂದು ಸೂಚಿಸಿದರು. ಪ್ರತಿ ಅಂಗನವಾಡಿ ಕೇಂದ್ರದಲ್ಲಿ ಮಕ್ಕಳು ಬೆಳಿಗ್ಗೆ 9.30ಕ್ಕೆ ಹಾಜರಿರಬೇಕು. ಮಕ್ಕಳು ದಿನವಿಡಿ ಹಾಜರಿದ್ದು ಸಂಜೆಗೆ ಮನೆಗೆ ಹೋಗಬೇಕು. ಮಾತೃಪೂರ್ಣ ಯೋಜನೆಯ ಫಲಾನುಭವಿಗಳು ಅರ್ಹ ಫಲಾನುಭವಿಗಳಾಗಿರಬೇಕೆಂದು ತಿಳಿಸಿದರು.

ಅಂಗನವಾಡಿ ಕಟ್ಟಡಗಳ ಪ್ರಗತಿ ಪರಿಶೀಲನೆ ನಡೆಸಿದ ಉಸ್ತುವಾರಿ ಕಾರ್ಯದರ್ಶಿಗಳು 2017-18ನೇ ಸಾಲಿನಲ್ಲಿ 5 ಅಂಗನವಾಡಿ ಕಟ್ಟಡಗಳು ಮಂಜೂರಾಗಿದ್ದು, ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಯಿಂದ ವೆಚ್ಚ ಭರಿಸಬೇಕಾಗಿದ್ದು, ಇನ್ನೂ 1 ಕಟ್ಟಡ ಕಾಮಗಾರಿ ಪ್ರಾರಂಭವಾಗಿಲ್ಲದ ಬಗ್ಗೆ ಪರಿಶೀಲಿಸಿ, ಸದರಿ ಕಟ್ಟಡ ಕಾಮಗಾರಿಯನ್ನು ಕೈಬಿಡಲು ಅನುಷ್ಠಾನ ಏಜೆನ್ಸಿಯಾದ ಪಿ.ಆರ್.ಇ.ಡಿ. ರವರಿಗೆ ಸೂಚಿಸಿದರು. ಪ್ರಗತಿಯಲ್ಲಿರುವ ಕಟ್ಟಡ ಕಾಮಗಾರಿಗಳನ್ನು ಮುಂದಿನ ಮಾಹೆಯೊಳಗಾಗಿ ಪೂರ್ಣಗೊಳಿಸಬೇಕೆಂದು ಅನುಷ್ಠಾನ ಏಜೆನ್ಸಿರವರಿಗೆ ಸೂಚಿಸಿದರು.

ಉಪ ನಿರ್ದೇಶಕರು ಮಾತನಾಡಿ, 250 ಅಂಗನವಾಡಿ ಕಟ್ಟಡಗಳಿಗೆ ಇಲಾಖಾವತಿಯಿಂದ (Matching Grant) ಹೊಂದಾಣಿಕೆಯ ಅನುದಾನ ಬಿಡುಗಡೆಯಾಗಿಲ್ಲವೆಂದು ಉಸ್ತುವಾರಿ

ಕಾರ್ಯದರ್ಶಿಗಳ ಗಮನಕ್ಕೆ ತಂದು, ಸದರಿ ಅನುದಾನವನ್ನು ಶೀಘ್ರ ಬಿಡುಗಡೆಗೊಳಿಸಲು ಇಲಾಖಾ ಮುಖ್ಯಸ್ಥರಿಗೆ ಶಿಫಾರಸ್ಸು ಮಾಡಬೇಕೆಂದು ಕೋರಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಜಿಲ್ಲೆಯಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳಿಗೆ ಶೌಚಾಲಯಗಳಿವೆ ಎಂದು ಅಧಿಕಾರಿಗಳನ್ನು ಪ್ರಶ್ನಿಸಲಾಗಿ, ಅಧಿಕಾರಿಗಳು ವಿವರಣೆ ನೀಡಿ ಜಿಲ್ಲೆಯಲ್ಲಿ ಒಟ್ಟು 2061 ಅಂಗನವಾಡಿ ಕೇಂದ್ರಗಳಿದ್ದು, ಅವುಗಳ ಪೈಕಿ 1179 ಅಂಗನವಾಡಿ ಕೇಂದ್ರಗಳಿಗೆ ಶೌಚಾಲಯಗಳಿರುವುದಾಗಿ ತಿಳಿಸಿದರು. ಎಸ್.ಬಿ.ಎಂ. ಯೋಜನೆಯಡಿ 248 ಶೌಚಾಲಯ ನಿರ್ಮಾಣ ಮಂಜೂರಾಗಿದ್ದು, 65 ಪೂರ್ಣಗೊಂಡಿದ್ದು, 85 ಶೌಚಾಲಯ ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ಅಧಿಕಾರಿಗಳು ಮಾಹಿತಿ ನೀಡಿದರು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಬಾಕಿಯಿರುವ ಶೌಚಾಲಯ ಕಾಮಗಾರಿಗಳನ್ನು ಮುಂದಿನ ಮಾಹೆಯೊಳಗಾಗಿ ಪೂರ್ಣಗೊಳಿಸಬೇಕೆಂದು ಅನುಷ್ಠಾನ ಏಜೆನ್ಸಿಯಾದ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಕೋಲಾರ ಜಿಲ್ಲೆಯಲ್ಲಿ ಒಟ್ಟು ಎಷ್ಟು ಅಂಗನವಾಡಿ ಕೇಂದ್ರಗಳಿವೆ, ಅವುಗಳಿಗೆ ಎಷ್ಟು ಸ್ವಂತ ಕಟ್ಟಡಗಳಿವೆ, ಎಷ್ಟು ಅಂಗನವಾಡಿ ಕೇಂದ್ರಗಳಿಗೆ ಶೌಚಾಲಯಗಳಿವೆ ಎಂಬ ಬಗ್ಗೆ ವಿವರವಾದ ವರದಿಯನ್ನು ಮುಂದಿನ ಸಭೆಗೆ ಮಂಡಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು. ಸೋಮವಾರದೊಳಗಾಗಿ ಎಷ್ಟು ಅಂಗನವಾಡಿ ಕೇಂದ್ರಗಳಿಗೆ ನೀರಿನ ಸೌಲಭ್ಯ ಕಲ್ಪಿಸಲಾಗಿದೆ ಎಂಬ ಬಗ್ಗೆ ಕಾರ್ಯಪಾಲಕ ಅಭಿಯಂತರರು, ಪಿ.ಆರ್.ಇ.ಡಿ. ರವರು ವರದಿ ಸಲ್ಲಿಸಬೇಕೆಂದು ಸೂಚಿಸಿದರು.

(ಕ್ರಮ:– ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೋಲಾರ/ ಕಾರ್ಯಪಾಲಕ ಅಭಿಯಂತರರು, ಪಿ.ಆರ್.ಇ.ಡಿ. ಕೋಲಾರ)

## ಆರೋಗ್ಯ ಇಲಾಖೆ:–

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಜಿಲ್ಲೆಯಲ್ಲಿ ಒಟ್ಟು 282 ಉಪ ಕೇಂದ್ರಗಳಿರುವುದಾಗಿ ತಿಳಿಸಿದರು. 139 ಕಟ್ಟಡಗಳು ವಾಸಯೋಗ್ಯವಾಗಿಲ್ಲವೆಂದು ಮಾಹಿತಿ ನೀಡಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಇನ್ನು ಮುಂದೆ ಗ್ರಾಮ ಪಂಚಾಯಿತಿಗಳಲ್ಲಿ ಕೆ.ಡಿ.ಪಿ. ಸಭೆ ನಡೆಸಲಾಗುವುದು. ಗ್ರಾಮ ಪಂಚಾಯಿತಿ ವ್ಯಾಪ್ತಿಗೊಳಪಡುವ ಎಲ್ಲಾ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿ, ಸಮಸ್ಯೆಗಳ ಬಗ್ಗೆ ತಿಳಿಸಬೇಕು. ಸದರಿ ಸಭೆಗೆ ಎ.ಎನ್.ಎಂ. ಆಶಾ ಕಾರ್ಯಕರ್ತೆಯರನ್ನು ಸಹಾ ಆಹ್ವಾನಿಸಬೇಕೆಂದು ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಪ್ರಗತಿ ವಿವರಣೆ ಮುಂದುವರೆಸಿ, ಜಿಲ್ಲೆಯಲ್ಲಿ ಯಾವುದೇ ಮಲೇರಿಯಾ ಪ್ರಕರಣ ದಾಖಲಾಗಿಲ್ಲವೆಂದು ತಿಳಿಸಿದರು. ಜಿಲ್ಲೆಯಲ್ಲಿ 300 ಪ್ರಕರಣಗಳು ಡೆಂಗ್ಯು ಎಂದು ಅನುಮಾನಿಸಿ ರಕ್ತ ಪರೀಕ್ಷೆಗಾಗಿ ಕಳುಹಿಸಲಾಗಿದ್ದು, 161 ಡೆಂಗ್ಯು ಪಾಸಿಟಿವ್ ಆಗಿದ್ದು, ಪ್ಲೇಟ್‌ಲೆಟ್ಸ್ ಅನಲೈಸ್ ಮಾಡುವ ಸೌಲಭ್ಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಇಲ್ಲವೆಂದು ತಿಳಿಸಿದರು.

(ಕ್ರಮ:- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕೋಲಾರ.)

**ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ:-**

ಅಂಗನವಾಡಿ ಶೌಚಾಲಯಗಳನ್ನು ಶೀಘ್ರ ಪೂರ್ಣಗೊಳಿಸಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

ಯಾವುದೇ ಕಟ್ಟಡ ಕಾಮಗಾರಿಯನ್ನು ಎರಡು ವರ್ಷಗಳ ಒಳಗಾಗಿ ಪೂರ್ಣಗೊಳಿಸತಕ್ಕದ್ದು, ಇಲ್ಲವಾದಲ್ಲಿ ಕಾಮಗಾರಿಯನ್ನು ಕೈಬಿಡಬೇಕೆಂದು ಜಿಲ್ಲಾಧಿಕಾರಿಗಳು ಸೂಚಿಸಿದರು.

(ಕ್ರಮ:- ಕಾರ್ಯಪಾಲಕ ಅಭಿಯಂತರರು, ಪಿ.ಆರ್.ಇ.ಡಿ. ಕೋಲಾರ.)

**ಯೋಜನಾ ವಿಭಾಗ, ಕೆ.ಆರ್.ಆರ್.ಡಿ.ಎ.:-**

ಕಾರ್ಯಪಾಲಕ ಅಭಿಯಂತರರು ಪ್ರಗತಿ ವಿವರಣೆ ನೀಡಿ, ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯಡಿ 2019-20ನೇ ಸಾಲಿನಲ್ಲಿ ಒಟ್ಟು 17 ಕಾಮಗಾರಿಗಳಿಗೆ ರೂ.3199.21ಲಕ್ಷಗಳ ಆರ್ಥಿಕ ಗುರಿ ಹಾಗೂ 32.40ಕಿ.ಮೀ.ಗಳ ಭೌತಿಕ ಗುರಿ ನಿಗಧಿಪಡಿಸಿದ್ದು, 22.10.2019 ರ ಅಂತ್ಯಕ್ಕೆ 17 ಕಾಂಗಾರಿಗಳ 25.07 ಕಿ.ಮೀ. ರಸ್ತೆಯ ಉದ್ದ ಪೂರ್ಣಗೊಂಡಿದ್ದು, ರೂ.2241.00ಲಕ್ಷ ಅನುದಾನ ವೆಚ್ಚ ಭರಿಸಲಾಗಿದೆ ಎಂದು ಮಾಹಿತಿ ನೀಡಿದರು. ಜಿಲ್ಲೆಯಲ್ಲಿ ಇನ್ನೂ 147 ಜನವಸತಿಗಳಿಗೆ ರಸ್ತೆ ಸಂಪರ್ಕ ಕಲ್ಪಿಸಲಾಗಿಲ್ಲವೆಂದು ಮಾಹಿತಿ ನೀಡಿದರು.

(ಕ್ರಮ:- ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಆರ್.ಡಿ.ಎ. ಕೋಲಾರ.)

**ಸ್ವಚ್ಛ ಭಾರತ ಮಿಷನ್:-**

ಘನ ತ್ಯಾಜ್ಯ ಸಂಪನ್ಮೂಲ ನಿರ್ವಹಣಾ ಘಟಕಗಳನ್ನು ಗ್ರಾಮ ಪಂಚಾಯಿತಿಗಳಲ್ಲಿ ಅನುಷ್ಠಾನ ಮಾಡಲು 2014-15ನೇ ಸಾಲಿನಿಂದ 2019-20ನೇ ಸಾಲಿನವರೆಗೆ ಒಟ್ಟು 26 ಪ್ರಸ್ತಾವನೆಗಳನ್ನು ರಾಜ್ಯ ಕಛೇರಿಗೆ ಅನುಮೋದನೆಗೆ ಸಲ್ಲಿಸಿದ್ದು, ಒಟ್ಟು 23 ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲಾಗಿದೆ. ಮುಳಬಾಗಲು ತಾಲ್ಲೂಕಿನ ಉತ್ತನೂರು ಗ್ರಾಮ ಪಂಚಾಯಿತಿಯಲ್ಲಿ ಘಟಕ ನಿರ್ಮಾಣ ಪೂರ್ಣಗೊಂಡಿದೆ. 13 ಗ್ರಾಮ ಪಂಚಾಯಿತಿಗಳಲ್ಲಿ ಘಟಕ ನಿರ್ಮಾಣ ಮಾಡಲು ಟೆಂಡರ್ ಪ್ರಕ್ರಿಯೆಗೆ ಕ್ರಮಕೈಗೊಳ್ಳಲಾಗಿದೆ. 8 ಗ್ರಾಮ ಪಂಚಾಯಿತಿಗಳಿಗೆ ಟೆಂಡರ್ ಅನುಮೋದನೆಯಾಗಿದ್ದು, ಕಾರ್ಯಾದೇಶ ನೀಡಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಜಿಲ್ಲೆಯ ಎಲ್ಲಾ 156 ಗ್ರಾಮ ಪಂಚಾಯಿತಿಗಳಲ್ಲಿ ಈ ವರ್ಷದೊಳಗಾಗಿ ಘನತ್ಯಾಜ್ಯ ಸಂಪನ್ಮೂಲ ನಿರ್ವಹಣಾ ಘಟಕಗಳನ್ನು ಪ್ರಾರಂಭ ಮಾಡಬೇಕು. ಎಸ್.ಆರ್.ಎಲ್.ಎಂ. ಗುಂಪುಗಳನ್ನು ಸದರಿ ಕಾರ್ಯಕ್ರಮದಲ್ಲಿ ಲಿಂಕ್ ಮಾಡಿ, ಘನತ್ಯಾಜ್ಯಗಳ ಸಂಗ್ರಹಣೆ ಹಾಗೂ ವಿಂಗಡಣೆಯನ್ನು ಮಹಿಳೆಯರಿಂದ ಮಾಡಿಸಬೇಕೆಂದು ಸೂಚಿಸಿದರು.

ಘನ ತ್ಯಾಜ್ಯ ನಿರ್ವಹಣಾ ಘಟಕಕ್ಕೆ ಎರಡು ಎಕರೆ ಪ್ರದೇಶ ಮಂಜೂರು ಮಾಡಬೇಕೆಂದು ಸಂಬಂಧಪಟ್ಟ ತಹಸೀಲ್ದಾರರಿಗೆ ಪ್ರಸ್ತಾವನೆ ಸಲ್ಲಿಸಬೇಕೆಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದರು. ಜಾಗದ ಅಲಭ್ಯತೆಯಿಂದಾಗಿ ಒಂದು ಎಕರೆಗೆ ಮಂಜೂರಾತಿ ದೊರೆತಲ್ಲಿ ಅದರಲ್ಲೇ ಘಟಕ ನಿರ್ವಹಿಸಬೇಕಾಗುತ್ತದೆಂದು ತಿಳಿಸಿದರು.

(ಕ್ರಮ:- ಯೋಜನಾ ನಿರ್ದೇಶಕರು, ಡಿ.ಆರ್.ಡಿ.ಎ.ಕೋಶ, ಕೋಲಾರ.)

<u>ಸಾರ್ವಜನಿಕ ಶಿಕ್ಷಣ ಇಲಾಖೆ:-</u>

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಶಾಲೆಗಳಲ್ಲಿ Nutritional Garden ಮಾಡಬೇಕು. ಕಡ್ಡಾಯವಾಗಿ ನುಗ್ಗೆಮರಗಳನ್ನು ಬೆಳೆಸಬೇಕೆಂದು ಹಾಗು ನೆರಳು ನೀಡುವ ಮರಗಳನ್ನು, ಹಣ್ಣಿನ ಮರಗಳನ್ನು ಬೆಳೆಸಬೇಕೆಂದು ಸೂಚಿಸಿದರು. ಶಾಲಾ ಕಟ್ಟಡ ಹಾಗೂ ಅಂಗನವಾಡಿ ಕಟ್ಟಡಗಳನ್ನು ಅನುಷ್ಠಾನ ಏಜೆನ್ಸಿಗಳು ಶೀಘ್ರ ಪೂರ್ಣಗೊಳಿಸಬೇಕೆಂದು ಸೂಚಿಸಿದರು. ಗ್ರಾಮ ಪಂಚಾಯಿತಿಗಳು ಗ್ರಂಥಾಲಯಗಳಲ್ಲಿ ನೋಂದಣಿ ಮಾಡಿಸುವವರಿಂದ ನೋಂದಣಿ ಶುಲ್ಕ ಸಂಗ್ರಹಿಸಬೇಕೆಂದು ಸೂಚಿಸಿದರು. ಗ್ರಾಮ ಪಂಚಾಯಿತಿ ವತಿಯಿಂದ ಉಪಯುಕ್ತ ಮಾಹಿತಿಯುಳ್ಳ ಪುಸ್ತಕಗಳನ್ನು ಗ್ರಂಥಾಲಯಗಳಿಗೆ ಖರೀದಿಸಿ ನೀಡಬೇಕೆಂದು ಸೂಚಿಸಿದರು. ಪ್ರಸಕ್ತ ಸಾಲಿನಲ್ಲಿ ಶಾಲೆ ಬಿಟ್ಟ 531 ಮಕ್ಕಳನ್ನು ಪುನ: ಶಾಲೆಗೆ ಕರೆತರಲು ಶಿಕ್ಷಣ ಇಲಾಖಾಧಿಕಾರಿಗಳು ಎಲ್ಲಾ ಪ್ರಯತ್ನಗಳನ್ನು ಮಾಡಬೇಕೆಂದು ಸೂಚಿಸಿದರು. ಶಾಲೆ ಬಿಟ್ಟ ಮಕ್ಕಳಿಗೆ ಅವರು ಶಾಲೆ ಬಿಟ್ಟ ಸಮಯದ ಗ್ಯಾಪ್ ಅವಧಿಗೆ Bridging course ಮಾಡಿಸಬೇಕೆಂದು ಸೂಚಿಸಿದರು. ಶಾಲೆ ಬಿಟ್ಟ ಮಕ್ಕಳನ್ನು ಶಾಲೆಗೆ ಸೇರಿಸುವ ಬಗ್ಗೆ ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಜಿಲ್ಲಾ ಬಿ.ಸಿ.ಎಂ. ಅಧಿಕಾರಿ, ಜಿಲ್ಲಾ ಅಲ್ಪಸಂಖ್ಯಾತರ ಅಧಿಕಾರಿಗಳು ಕ್ರಮವಹಿಸಬೇಕೆಂದು ಸೂಚಿಸಿದರು. ನರೇಗಾ ಕನ್ವರ್ಜೆನ್ಸ್ ನಲ್ಲಿ ಶಾಲಾ ತೋಟ, ಕಿಚನ್ ಗಾರ್ಡನ್ ಮಾಡಿಸಲು ಸೂಚಿಸಿದರು.

(ಕ್ರಮ:- ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕೋಲಾರ.)

**ಕಾರ್ಮಿಕ ಇಲಾಖೆ:-**

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಕಾರ್ಮಿಕರ ವೇತನದಿಂದ ಇ.ಎಸ್.ಐ. ಮತ್ತು ಪಿ.ಎಫ್. ವಂತಿಗೆಗಳನ್ನು ಕಟಾಯಿಸಿ ಸಂಬಂಧಪಟ್ಟ ಖಾತೆಗೆ ಜಮೆ ಮಾಡಿರುವ ಬಗ್ಗೆ ಕಾರ್ಮಿಕ ಅಧಿಕಾರಿಗಳು ಪರಿಶೀಲಿಸಬೇಕೆಂದು ಸೂಚಿಸಿದರು.

**(ಕ್ರಮ:- ಕಾರ್ಮಿಕ ಅಧಿಕಾರಿ, ಕಾರ್ಮಿಕ ಇಲಾಖೆ, ಕೋಲಾರ.)**

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:-**

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಗ್ರಾಮಾಂತರ ಪ್ರದೇಶದಿಂದ ಬರುವ ಹೆಣ್ಣು ಮಕ್ಕಳು ಶಾಲೆಗೆ ಹೋಗುವುದಕ್ಕೆ ಬಸ್ಸಿನ ವ್ಯವಸ್ಥೆ ಮಾಡಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು. ಜಿಲ್ಲಾಧಿಕಾರಿಗಳ ಕಛೇರಿಯ ಬಳಿ ಬಸ್ಸುಗಳ ನಿಲುಗಡೆ ಮಾಡಬೇಕೆಂದು ಜಿಲ್ಲಾಧಿಕಾರಿಗಳು ಸೂಚಿಸಿದರು. ಕೆಲವು ಬಸ್ಸುಗಳಲ್ಲಿ ಪಾಸುಗಳಿರುವ ವಿದ್ಯಾರ್ಥಿಗಳನ್ನು ಬಿಡುವುದಿಲ್ಲ. ಈ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮವಹಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಲಾಯಿತು.

**(ಕ್ರಮ:- ವಿಭಾಗೀಯ ನಿಯಂತ್ರಣಾಧಿಕಾರಿ, ಕೆ.ಎಸ್.ಆರ್.ಟಿ.ಸಿ, ಕೋಲಾರ.)**

**ಸಣ್ಣ ನೀರಾವರಿ ಇಲಾಖೆ:-**

ಕಾರ್ಯಪಾಲಕ ಅಭಿಯಂತರರು ವಿವರಣೆ ನೀಡಿ, ಕೆ.ಸಿ.ವ್ಯಾಲಿ ಯೋಜನೆಯಡಿ ಜಿಲ್ಲೆಯ 35 ಕೆರೆಗಳನ್ನು ಈಗಾಗಲೇ ತುಂಬಿಸಲಾಗಿದೆ. ದೊಡ್ಡ ದೊಡ್ಡ ಕೆರೆಗಳನ್ನು ಪೂರ್ಣವಾಗಿ ತುಂಬಿಸಿ ಮುಂದಿನ ಕೆರೆಗೆ ನೀರು ಸರಬರಾಜು ಮಾಡಿದಲ್ಲಿ ಹೆಚ್ಚಿನ ಅವಧಿ ಹಿಡಿಯುವುದು. ಆದ್ದರಿಂದ ಶೇ.50ರಷ್ಟು ಕೆರೆ ತುಂಬಿದ ನಂತರ ಮುಂದಿನ ಕೆರೆಗೆ ನೀರು ಹರಿಸಲಾಗುವುದು. ಪುನಃ ಕೊನೆಯ ಕೆರೆಯಿಂದ ಪ್ರತಿ ಕೆರೆಯನ್ನು ಪೂರ್ಣವಾಗಿ ತುಂಬಿಸಲಾಗುವುದು. ಈ ಬಗ್ಗೆ ಜನರಲ್ಲಿ ತಪ್ಪು ಕಲ್ಪನೆಗಳಾಗಬಾರದೆಂದು ಸಭೆಯಲ್ಲಿ ತಿಳಿಸಿದರು.

**(ಕ್ರಮ:- ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ, ಕೋಲಾರ.)**

**ಯುವಸಬಲೀಕರಣ ಇಲಾಖೆ:-**

ಸಹಾಯಕ ನಿರ್ದೇಶಕರು ಮಾತನಾಡಿ, ಜಿಲ್ಲೆಯ ಕ್ರೀಡಾಂಗಣಗಳ ಅಭಿವೃದ್ಧಿಗಾಗಿ ಜಿಲ್ಲೆಯಲ್ಲಿ ಸ್ಥಾಪಿತವಾಗಿರುವ ಕೈಗಾರಿಕೋದ್ಯಮಿಗಳಿಂದ ಹಣ ಒದಗಿಸಲು ನಿರ್ದೇಶನ ನೀಡಬೇಕೆಂದು ಕೋರಿದರು.

**ಲೋಕೋಪಯೋಗಿ ಇಲಾಖೆ:-**

ಕಾರ್ಯಪಾಲಕ ಅಭಿಯಂತರರು ಮಾತನಾಡಿ, ಜಿಲ್ಲೆಯಲ್ಲಿನ ಹದಗೆಟ್ಟಿರುವ ರಸ್ತೆಗಳ ನಿರ್ಮಾಣಕ್ಕಾಗಿ ರೂ.11.00ಕೋಟಿಗಳ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಅನುದಾನ ಬಿಡುಗಡೆ ಮಾಡಿಸಿಕೊಡಬೇಕೆಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ಕೋರಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**(ಉಮಾ ಮಹದೇವನ್, ಭಾ.ಆ.ಸೇ.,)**
**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,(ಪಂ.ರಾಜ್)**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು**
**ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು.**

ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಜಲಸಂಪನ್ಮೂಲ ಇಲಾಖೆ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಇವರ ಅಧ್ಯಕ್ಷತೆಯಲ್ಲಿ ದಿನಾಂಕ:8.11.2019 ರಂದು 11.00 ಗಂಟೆಗೆ ಅತಿವೃಷ್ಟಿ/ಪ್ರವಾಹದ ಕುರಿತು ಪರಿಶೀಲನಾ ಸಭೆಯ ನಡುವಳಿಗಳು.

ಸಭೆಗೆ ಹಾಜರಿದ್ದ ಅಧಿಕಾರಿಗಳು:

1. ಜಿಲ್ಲಾಧಿಕಾರಿಗಳು ಬೆಳಗಾವಿ ಜಿಲ್ಲೆ
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ.
3. ಅಪರ ಜಿಲ್ಲಾಧಿಕಾರಿಗಳು, ಬೆಳಗಾವಿ
4. ಆಯುಕ್ತರು, ಮಹಾನಗರ ಪಾಲಿಕೆ, ಬೆಳಗಾವಿ
5. ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಳಗಾವಿ.
6. ಉಪವಿಭಾಗಾಧಿಕಾರಿಗಳು, ಬೆಳಗಾವಿ, ಬೈಲಹೊಂಗಲ, ಚಿಕ್ಕೋಡಿ.
7. ಅಧೀಕ್ಷಕ ಅಭಿಯಂತರರು, ಹೆಸ್ಕಾಂ ಬೆಳಗಾವಿ,ಚಿಕ್ಕೋಡಿ.
8. ಜಂಟಿ ಕೃಷಿ ನಿರ್ದೇಶಕರು, ಬೆಳಗಾವಿ.
9. ಉಪ-ನಿರ್ದೇಶಕರು, ಪಶು ಪಾಲನೆ ಇಲಾಖೆ, ಬೆಳಗಾವಿ.
10. ಉಪ-ನಿರ್ದೇಶಕರು, ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಳಗಾವಿ.
11. ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳು, ಬೆಳಗಾವಿ .
12. ಅಪರ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳು, ಚಿಕ್ಕೋಡಿ
13. ಉಪ-ನಿರ್ದೇಶಕರು ತೋಟಗಾರಿಕೆ ಇಲಾಖೆಬೆಳಗಾವಿ.
14. ಉಪ-ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ ಬೆಳಗಾವಿ.
15. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಬೆಳಗಾವಿ.
16. ಉಪ-ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಳಗಾವಿ, ಚಿಕ್ಕೋಡಿ.
17. ಉಪ-ನಿರ್ದೇಶಕರು ವಾರ್ತಾ ಮತ್ತು ಪ್ರಚಾರ ಇಲಾಖೆ ಬೆಳಗಾವಿ.
18. ಅಧೀಕ್ಷಕ ಅಭಿಯಂತರರು, ಕನೀನಿನಿ ಜಿಆರ್‌ಬಿಸಿಸಿ ವೃತ್ತ ಹಿಡಕಲ್ ಡ್ಯಾಂ.
19. ಅಧೀಕ್ಷಕ ಅಭಿಯಂತರರು, ಕನೀನಿನಿ ಜಿಆರ್‌ಬಿಸಿಸಿ ವೃತ್ತ ನವಿಲುತೀರ್ಥ .
20. ಕಾರ್ಯನಿರ್ವಾಹಕ ಅಭಿಯಂತರು, ಗ್ರಾಕುನೀ& ನೈರ್ಮಲ್ಯ ವಿಭಾಗ, ಬೆಳಗಾವಿ, ಚಿಕ್ಕೋಡಿ.
21. ತಹಶೀಲ್ದಾರರು, ಬೆಳಗಾವಿ, ಖಾನಾಪೂರ, ಹುಕ್ಕೇರಿ, ಬೈಲಹೊಂಗಲ, ಕಿತ್ತೂರು, ಸವದತ್ತಿ, ರಾಮದುರ್ಗ, ಗೋಕಾಕ, ಚಿಕ್ಕೋಡಿ, ರಾಯಬಾಗ, ಅಥಣಿ, ಮೂಡಲಗಿ, ಕಾಗವಾಡ, ನಿಪ್ಪಾಣಿ.

ಸಭೆಯ ಪ್ರಾರಂಭದಲ್ಲಿ ಹಾಜರಿದ್ದ ಎಲ್ಲ ಅಧಿಕಾರಿಗಳವರನ್ನು ಅಪರ ಜಿಲ್ಲಾಧಿಕಾರಿಗಳು ಬೆಳಗಾವಿ ಇವರು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು. ಬೆಳಗಾವಿ ಜಿಲ್ಲೆಯ ಕುರಿತು ಸಾಮಾನ್ಯ ಮಾಹಿತಿ ಹಾಗೂ ಋತುಮಾನ ಪರಿಸ್ಥಿತಿಯ ಬಗ್ಗೆ ಸಭೆಗೆ ಮಾಹಿತಿಯನ್ನು ನೀಡಿದರು.

ಜಿಲ್ಲೆಯಲ್ಲಿ ಆಗಿರುವ ಮಳೆಯ ವಿವರವನ್ನು ಜಂಟಿ ಕೃಷಿ ನಿರ್ದೇಶಕರು, ಬೆಳಗಾವಿ ಇವರು ದಿನಾಂಕ:01.11.2019 ರಿಂದ08.11.2019ವರೆಗೆ 11.00 ಮಿಮೀ ವಾಡಿಕೆ ಮಳೆಯಾಗಿದ್ದು, 24 ಮಿಮೀ ವಾಸ್ತವಿಕ ಮಳೆ ಆಗಿರುತ್ತದೆ. ಶೇ 130ರಷ್ಟು ಮಳೆ ಆಗಿದೆ. 2019ನೇ ಹಿಂಗಾರು ಹಂಗಾಮಿನಲ್ಲಿ 3,20,202 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಿದ್ದು, ಇದರಲ್ಲಿ 22175 ಹೆಕ್ಟೇರ್ ಪ್ರದೇಶದಲ್ಲಿ

ಬಿತ್ತನೆಯಾಗಿದ್ದು, 6.9% ರಷ್ಟು ಬಿತ್ತನೆ ಆಗಿದೆ ಎಂದು ಸಭೆಗೆ ತಿಳಿಸಿದರು. ಜಿಲ್ಲೆಯಲ್ಲಿ 216793.20 ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆಗಳು, 4578.11 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳು ಹಾಗೂ 56.70 ಹೆಕ್ಟೇರ್ ಪ್ರದೇಶದಲ್ಲಿ ರೇಷ್ಮೆ ಬೆಳೆಗಳು ಹೀಗೆ ಒಟ್ಟು 2,21,428.01 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಗಳು ಹಾನಿಯಾಗಿರುವುದಾಗಿ ಜಂಟಿ ಸಮೀಕ್ಷಾ ವರದಿಯು ಸ್ವೀಕೃತವಾಗಿದೆ. ಸದರಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ಸಭೆಗೆ ವಿವರಿಸಿದರು.

ಜಿಲ್ಲಾಧಿಕಾರಿಗಳು ಮಾತನಾಡಿ, 2018-19ನೇ ಸಾಲಿನ ಹಿಂಗಾರು ಹಂಗಾಮಿಗೆ ಸಂಬಂಧಿಸಿದಂತೆ ಪರಿಹಾರ ತಂತ್ರಾಂಶದಲ್ಲಿ ರೈತರ ವಿವರಗಳನ್ನು ಇಂದೀಕರಣ ಮಾಡಲಾಗುತ್ತಿದೆ. ಒಟ್ಟು 74987 ರೈತರ ಪೈಕಿ ಇದುವರೆಗೆ 69303 ರೈತರ ವಿವರಗಳನ್ನು ಇಂದೀಕರಣ ಮಾಡಲಾಗಿದೆ. 5684 ರೈತರ ವಿವರಗಳನ್ನು ದಾಖಲಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಶೇ 92.42ರಷ್ಟು ಪ್ರಗತಿ ಸಾಧಿಸಲಾಗಿದೆ. 2019ನೇ ಮುಂಗಾರು ಹಂಗಾಮಿನಲ್ಲಿ ಅತಿವೃಷ್ಟಿ/ಪ್ರವಾಹದಿಂದ ಬೆಳೆಹಾನಿಗೊಳಗಾದ ರೈತರ ವಿವರಗಳನ್ನು ಪರಿಹಾರ ತಂತ್ರಾಂಶದಲ್ಲಿ ಇಂದೀಕರಣ ಮಾಡಲಾಗುತ್ತಿದೆ. ಒಟ್ಟು 80267 ರೈತರ ಪೈಕಿ ಇದುವರೆಗೆ 10007 ರೈತರ ವಿವರಗಳನ್ನು ಇಂದೀಕರಣ ಮಾಡಲಾಗಿದೆ. 70,260 ರೈತರ ವಿವರಗಳನ್ನು ದಾಖಲಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಜಿಲ್ಲೆಯಲ್ಲಿ ಒಟ್ಟು 03 ಪರಿಹಾರ ಕೇಂದ್ರಗಳು ಚಾಲ್ತಿಯಲ್ಲಿದೆ. 10 ಜಾನುವಾರು ಶಿಬಿರಗಳನ್ನು ತೆರೆಯಲಾಗಿದೆ. ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ ಬರಪರಿಹಾರ ಕಾರ್ಯಗಳಿಗಾಗಿ ಹಾಗೂ ಅತೀವೃಷ್ಟಿ/ಪ್ರವಾಹದ ಪರಿಹಾರಗಳಿಗಾಗಿ ಒಟ್ಟು ರೂ. 89198.51 ಲಕ್ಷ ಲಭ್ಯವಿದ್ದು, ಇದರಲ್ಲಿ ಜಿಲ್ಲೆಯ ಎಲ್ಲ ತಹಶೀಲ್ದಾರರಿಗೆ ಜಿಲ್ಲೆಯಲ್ಲಿ ತೆರೆಯಲಾದ ಪರಿಹಾರ ಕೇಂದ್ರಗಳ ನಿರ್ವಹಣೆ, ಜನ-ಜಾನುವಾರುಗಳ ರಕ್ಷಣೆಗಾಗಿ ಕೈಗೊಂಡ ರಕ್ಷಣಾ ಕಾರ್ಯಗಳಿಗೆ ತಗುಲಿದ ವೆಚ್ಚಗಳನ್ನು ಭರಿಸಲು ಹಾಗೂ ಅತೀವೃಷ್ಟಿ/ಪ್ರವಾಹದಿಂದ ಉಂಟಾಗಬಹುದಾದ ಮಾನವ, ಜೀವ ಹಾನಿ, ಜಾನುವಾರು, ಮನೆಗಳ ಹಾನಿಗಳಿಗೆ ಸರ್ಕಾರದ ಮಾರ್ಗಸೂಚಿಯ ಅನ್ವಯ ಪರಿಹಾರದ ಮೊತ್ತವನ್ನು ವಿತರಿಸಲು ಒಟ್ಟು ರೂ.16573.38ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಬಂದು ಬಿದ್ದಿರುವ ಗಿಡಗಂಟಿಗಳು, ಮಣ್ಣಿನ ಕೆಸರನ್ನು, ಕಸಕಡ್ಡಿ (Debris), ಪ್ರವಾಹದ ನೀರನ್ನು (Draining off flood water in affected area) ತೆರವುಗೊಳಿಸುವುದು ಹಾಗೂ ಮೃತ ದೇಹಗಳನ್ನು/ಶವಗಳನ್ನು ವಿಲೇವಾರಿ (Disposal of dead bodies/Carcases) ಮಾಡುವ ಕ್ರಮಗಳನ್ನು ಸಂಬಂಧಿಸಿದ ಆಯಾ ಗ್ರಾಮ ಪಂಚಾಯತಗಳ ಮೂಲಕ ಕೈಗೊಳ್ಳಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ಬೆಳಗಾವಿ ಇವರಿಗೆ ರೂ.200.00ಲಕ್ಷ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳಿಗೆ ರೂ.36.00ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ನೆರೆ ಹಾವಳಿಯಿಂದ ಅಲ್ಪಸ್ವಲ್ಪ ಹಾನಿಗೊಳಗಾದ (ಶೇ 15ರಿಂದ ಶೇ25ರಷ್ಟು) ಮನೆಗಳಿಗೆ ಸಂಬಂಧಿಸಿದಂತೆ ಹಾನಿಗೊಳಗಾದ ಪ್ರತಿ ಮನೆಗೆ ರೂ.25,000/-ಗಳಂತೆ ಪರಿಹಾರ ಧನವನ್ನು ನೀಡಲು ತಹಶೀಲ್ದಾರರಿಗೆ ಒಟ್ಟು ರೂ.11871.00 ಲಕ್ಷ ಹಾಗೂ ಪ್ರಧಾನ ವ್ಯವಸ್ಥಾಪಕರು ರಾಜೀವ ಗಾಂಧಿ ವಸತಿ ನಿಗಮ ನಿಯಮಿತ ಬೆಂಗಳೂರು ಇವರಿಗೆ ರೂ.11468.46ಲಕ್ಷ ಒಟ್ಟು ರೂ..23339.46 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಅತಿವೃಷ್ಟಿ/ಪ್ರವಾಹದಿಂದ ಹಾನಿಗೊಳಗಾದ ಸಂತ್ರಸ್ತರಿಗೆ ಉಚಿತವಾಗಿ ಆಹಾರ ಕಿಟ್‌ಗಳನ್ನು ವಿತರಿಸಲು ವಿಶೇಷ ಆಹಾರ ಪ್ಯಾಕೆಟ್‌ಗಳನ್ನು ಸಿದ್ದಪಡಿಸಿದ ಬಿಲ್ಲು ರೂ.241.22ಲಕ್ಷಗಳನ್ನು ವ್ಯವಸ್ಥಾಪಕರು, ಟಿಎಪಿಸಿಎಂಎಸ್ ಸಂಕೇಶ್ವರ ಹಾಗೂ ಸೀಮೆ ಎಣ್ಣೆ ಪೂರೈಕೆದಾರರಿಗೆ ಬಿಡುಗಡೆ ಮಾಡಲಾಗಿದೆ. ನದಿಗಳು ಅಪಾಯದ ಮಟ್ಟಕ್ಕಿಂತ ಹೆಚ್ಚಿಗೆ ಹರಿದಿದ್ದರಿಂದ ನಡುಗಡ್ಡೆಯಾದ ಪ್ರದೇಶಗಳಲ್ಲಿನ ಸಂತ್ರಸ್ತರಿಗೆ ಹೆಲಿಕಾಪ್ಟರಗಳ ಮೂಲಕ ಆಹಾರದ ಪೊಟ್ಟಣ, ಟವೇಲ್, ಮೇಣದ ಬತ್ತಿ, ಬೆಂಕಿ ಪೊಟ್ಟಣಗಳನ್ನು, ನೀರನ್ನು ಪೂರೈಸಿದ ಬಗ್ಗೆ ಪೂರೈಕೆದಾರರಿಗೆ ಮೊತ್ತವನ್ನು ಸಂದಾಯ ಮಾಡಲು ಉಪನಿರ್ದೇಶಕರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಬೆಳಗಾವಿ ಇವರಿಗೆ ರೂ. 6,91,840/-ಗಳನ್ನು ಬಿಡುಗಡೆ ಮಾಡಲಾಗಿದೆ. 2019ರ ಅಗಸ್ಟ ತಿಂಗಳಿನಲ್ಲಿ ಅತಿವೃಷ್ಟಿಯಿಂದ ಹಾನಿಯಾದ ವಿದ್ಯುತ ಮಗ್ಗದ ಪ್ರತಿ ಫಲಾನುಭವಿಯಾದ ಮಗ್ಗದ ಮಾಲೀಕರಿಗೆ

ಸಿದ್ದಪಡಿಸಲಾಗುತ್ತಿರುವ ವಸ್ತುಗಳ ಹಾನಿಗೆ ಒಟ್ಟು ರೂ. 25,000/-ಗಳ ಪರಿಹಾರ ವಿತರಿಸಲು ಜಿಲ್ಲೆಯ ತಹಶೀಲ್ದಾರರಿಗೆ ಒಟ್ಟು ರೂ. 115.25 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಮಾನ್ಯ ಸರ್ಕಾರದ ಆದೇಶ ಕ್ರ:ಆರ್‌ಡಿ 131 ಟಿಎನ್‌ಆರ್ 2019 ದಿನಾಂಕ:30.09.2019ರಡಿ ಸರ್ಕಾರದ ಆದೇಶ 2019ರ ಅಗಸ್ಟ ತಿಂಗಳಿನಲ್ಲಿ ಪ್ರವಾಹದಿಂದ ಹಾನಿಗೊಳಗಾದ ಮೂಲಭೂತ ಸೌಕರ್ಯಗಳ ಪುನರ್ ಸ್ಥಾಪನೆ ಮತ್ತು ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲು ರೂ.200.00ಕೋಟಿ ಅನುದಾನ ಬಿಡುಗಡೆಯಾಗಿದೆ. ಪಂಚಾಯತ ರಾಜ ಇಂಜಿನಿಯರಿಂಗ ಇಲಾಖೆ, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ, ಹೆಸ್ಕಾಂ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣ ಇಲಾಖೆಗಳಿಂದ ಕ್ರಿಯಾ ಯೋಜನೆಯನ್ನು ಪಡೆಯಲಾಗಿದ್ದು, ಪ್ರವಾಹದಿಂದ ಹಾನಿಗೊಳಗಾದ ಮೂಲಭೂತ ಸೌಕರ್ಯಗಳ ಪುನರ್ ಸ್ಥಾಪನೆ ಮತ್ತು ದುರಸ್ತಿ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಪ್ರಸ್ತುತ ದಿನಾಂಕ:21.10.2019ರಂದು ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಬೆಂಗಳೂರು ಇವರ ಅಧ್ಯಕತೆಯಲ್ಲಿ ಜರುಗಿದ ವಿಡಿಯೋ ಸಂವಾದದಲ್ಲಿ ನಿರ್ದೇಶಿಸಿದಂತೆ ಹಾಗೂ ಸರ್ಕಾರದ ಆದೇಶ ದಿನಾಂಕ:30.09.2019ರಡಿ ಸರ್ಕಾರದ ಆದೇಶ ದಿನಾಂಕ:19.10.2019ರಡಿ ಮೂಲಭೂತ ಸೌಕರ್ಯಗಳಾದ ರಸ್ತೆ, ಸೇತುವೆ, ಅಂಗನವಾಡಿ ಕಟ್ಟಡಗಳು, ಕುಡಿಯುವ ನೀರು ಸರಬರಾಜು ಯೋಜನೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡಗಳ ಕಾಮಗಾರಿಗಳನ್ನು ಕೈಗೊಳ್ಳಲು ಆದೇಶಿಸಲಾಗಿದೆ. ಆದ್ದರಿಂದ ಮೇಲೆ ವಿವರಿಸಿದ ಕಾಮಗಾರಿಗಳ ಅಂದಾಜು ಪತ್ರಿಕೆಗಳನ್ನು ಸಲ್ಲಿಸಲು ಸಂಬಂಧಿಸಿದ ಅನುಷ್ಠಾನಾಧಿಕಾರಿಗಳಿಗೆ ತಿಳಿಸಲಾಗಿತ್ತು. ಪ್ರವಾಹದಿಂದ ಹಾನಿಗೊಳಗಾದ ರೂ.40.00ಲಕ್ಷಗಳ ಮೊತ್ತದಲ್ಲಿ 20 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡಗಳ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆಯನ್ನು ನೀಡಿ, ಶೇ 50ರಷ್ಟು ರೂ.20.00ಲಕ್ಷಗಳನ್ನು ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜನೀಯರಿಂಗ ವಿಭಾಗ ಧಾರವಾಡ ಇವರಿಗೆ ಬಿಡುಗಡೆ ಮಾಡಲಾಗಿದೆ. ಬೆಳಗಾವಿ, ಖಾನಾಪೂರ, ಬೈಲಹೊಂಗಲ, ಸವದತ್ತಿ, ರಾಮದುರ್ಗ ತಾಲೂಕುಗಳಲ್ಲಿ ಪ್ರವಾಹದಿಂದ ಹಾನಿಗೊಳಗಾದ 95 ಕುಡಿಯುವ ನೀರಿನ ದುರಸ್ತಿ ಕಾಮಗಾರಿಗಳನ್ನು ರೂ.80.40ಲಕ್ಷಗಳ ಮೊತ್ತದ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆಯನ್ನು ನೀಡಿ, 94 ಕಾಮಗಾರಿಗಳ ಅಂದಾಜು ಪತ್ರಿಕೆಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿ, ಒಟ್ಟು ರೂ.80.40 ಲಕ್ಷಗಳ ಮೊತ್ತದ ಶೇ 50 ರಷ್ಟು ರೂ.40.20 ಲಕ್ಷಗಳನ್ನು ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಬೆಳಗಾವಿ ಇವರಿಗೆ ಬಿಡುಗಡೆ ಮಾಡಲಾಗಿದೆ. ಜಿಲ್ಲೆಯಲ್ಲಿ ಪ್ರವಾಹದಿಂದ ಹಾನಿಗೊಳಗಾದ ಸರ್ಕಾರಿ ಪ್ರೌಢ, ಪ್ರಾಥಮಿಕ ಶಾಲೆಗಳ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲು ಒಟ್ಟು ರೂ.6182.34 ಲಕ್ಷಗಳ ಮೊತದಲ್ಲಿ 1888 ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆಯನ್ನು ಹಾಗೂ ಕಾಮಗಾರಿಗಳ ಅಂದಾಜು ಪತ್ರಿಕೆಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿ, ಒಟ್ಟು ಮೊತ್ತದ ಶೇ 50ರಷ್ಟು ರೂ.3091.17 ಲಕ್ಷಗಳ ಮೊತ್ತವನ್ನು ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ಅದೇ ರೀತಿ ಜಿಲ್ಲೆಯಲ್ಲಿ ಪ್ರವಾಹದಿಂದ ಹಾನಿಗೊಳಗಾದ ಅಂಗನವಾಡಿ ಕಟ್ಟಡಗಳ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲು ಒಟ್ಟು ರೂ.668.58 ಲಕ್ಷಗಳ ಮೊತದಲ್ಲಿ 447 ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆಯನ್ನು ಹಾಗೂ ಕಾಮಗಾರಿಗಳ ಅಂದಾಜು ಪತ್ರಿಕೆಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿ, ಒಟ್ಟು ಮೊತ್ತದ ಶೇ 50ರಷ್ಟು ರೂ.334.29 ಲಕ್ಷಗಳ ಮೊತ್ತವನ್ನು ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ಪಿಡಿ ಖಾತೆಯಲ್ಲಿ ಲಭ್ಯವಿರುವ ರೂ.45166.37 ಲಕ್ಷ ಮೊತ್ತವನ್ನು ಅತೀವೃಷ್ಟಿ/ಪ್ರವಾಹದ ಪರಿಹಾರಗಳಿಗಾಗಿ ಬಳಸಿಕೊಳ್ಳಲಾಗುವುದು. ಸದರಿ ಅನುದಾನವನ್ನು ಅವಶ್ಯಕತೆಗೆ ಅನುಸಾರವಾಗಿ ಬಳಸಿಕೊಳ್ಳಲಾಗುವುದು ಎಂದು ಸಭೆಗೆ ವಿವರಿಸಿದರು.

ಮುಂದುವರೆದು, ಅತಿವೃಷ್ಟಿ/ಪ್ರವಾಹದಿಂದಾಗಿ ರಾಜೀವ ಗಾಂಧಿ ವಸತಿ ನಿಗಮ ನಿಯಮಿತ ತಂತ್ರಾಂಶದಲ್ಲಿ ಒಟು43438ಮನೆಗಳ ವಿವರಗಳನ್ನು ದಾಖಲಿಸಿ ಈ ಕಚೇರಿಯಿಂದ ಅನುಮೋದನೆಯಾಗಿದ್ದು, ಇವುಗಳಲ್ಲಿ 39654 ಮನೆಗಳಿಗೆ ಒಟ್ಟು ರೂ.173.87 ಕೋಟಿ ಪರಿಹಾರ ವಿತರಿಸಲಾಗಿದೆ. 91.28 % ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ಸಭೆಗೆ ವಿವರಿಸಿದರು.

ಈ ಕೆಳಕಂಡ ಕ್ರಮಗಳನ್ನು ಕೈಕೊಳ್ಳುವಂತೆ ಸಭೆಗೆ ಹಾಜರಿದ್ದ ಎಲ್ಲ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.

1. ಜಿಲ್ಲೆಯ ಎಲ್ಲ ತಹಶೀಲ್ದಾರರು ಅತಿವೃಷ್ಟಿ/ಪ್ರವಾಹದಿಂದ ಹಾನಿಗೊಳಗಾದ ಮನೆಗಳಿಗೆ ಸಂಬಂಧಿಸಿದಂತೆ, ರಾಜೀವ ಗಾಂಧಿ ವಸತಿ ನಿಗಮ ನಿಯಮಿತ ಇವರ ತಂತ್ರಾಂಶದಲ್ಲಿ "ಸಿ" ವರ್ಗಿಕರಣದ ಮನೆಗಳಿಗೆ ಸಂಬಂಧಿಸಿದಂತೆ ಪಟ್ಟಿಯನ್ನು ಜನರೇಟ್ ಮಾಡಿ, ಅರ್ಹ ಫಲಾನುಭವಿಗಳ ಖಾತೆಗೆ ಪರಿಹಾರವನ್ನು ವಿತರಣೆ ಮಾಡಲು ಕ್ರಮ ಕೈಗೊಳ್ಳಬೇಕು.
2. "ಬಿ" ವರ್ಗೀಕರಣದ ಮನೆಗಳಿಗೆ ಸಂಬಂಧಿಸಿದಂತೆ 2ನೇ ಹಂತದ ಪರಿಹಾರ ವಿತರಣೆ ಮಾಡಲು ಪಟ್ಟಿಯನ್ನು ತಹಶೀಲ್ದಾರರು, ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕು ಪಂಚಾಯತ ಇವರು ಜಂಟಿಯಾಗಿ ಸಹಿಯನ್ನು ಮಾಡಬೇಕು. ಸದರಿ ಪಟ್ಟಿಗೆ ಉಪವಿಭಾಗಾಧಿಕಾರಿಗಳು ಕೌಂಟರ ಸಹಿಯನ್ನು ಮಾಡಿ, ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬೇಕು. ಜಿಪಿಎಸ್ ಟ್ಯಾಗಿಂಗ ಮಾಡಲು ಬಾಕಿ ಇರುವ ಪ್ರಕರಣಗಳನ್ನು ಹಾಗೂ ತಹಶೀಲ್ದಾರ ಅಡಿಟ್ ಮಾಡಲು ಬಾಕಿಯಿರುವ ಎಲ್ಲ ಪ್ರಕರಣಗಳನ್ನು ಇತ್ಯರ್ಥಗೊಳಿಸಬೇಕು.

3. ಸಂಬಂಧಿಸಿದ ತಹಶೀಲ್ದಾರರು ಎನ್‌ಡಿಆರ್‌ಎಫ್/ಎಸ್‌ಡಿಆರ್‌ಎಫ್ ಮಾರ್ಗಸೂಚಿಯನ್ವಯ ಅರ್ಹ ಸಂತ್ರಸ್ತ ಕುಟುಂಬವನ್ನು ಆಯ್ಕೆ ಮಾಡಿ, ಪರಿಹಾರ ಧನವನ್ನು ವಿತರಿಸಲು ನಿಯಮಾನುಸಾರ ಕ್ರಮ ಜರುಗಿಸಿ, ಪರಿಹಾರವನ್ನು ವಿತರಣೆ ಮಾಡಿದ ಬಗ್ಗೆ ದೃಢೀಕೃತ ಫೋಟೋಗಳ ದಾಖಲೆಗಳನ್ನು ನಿರ್ವಹಿಸತಕ್ಕದ್ದು. ಬಿಡುಗಡೆ ಮಾಡಿದ ಅನುದಾನವನ್ನು ಸರ್ಕಾರವು ಕಾಲ-ಕಾಲಕ್ಕೆ ಹೊರಡಿಸಿದ ಮಾರ್ಗಸೂಚಿಗಳನ್ವಯ ಅರ್ಹ ಸಂತ್ರಸ್ತರಿಗೆ ಪರಿಹಾರ ಧನವನ್ನು ವಿತರಣೆ ಮಾಡತಕ್ಕದ್ದು. ಒಂದು ವೇಳೆ ಅರ್ಹ ಸಂತ್ರಸ್ತ ಕುಟುಂಬವನ್ನು ಆಯ್ಕೆ ಮಾಡುವಲ್ಲಿ ಹಾಗೂ ಪರಿಹಾರ ಧನ ವಿತರಣೆ ಮಾಡಲು ಯಾವುದೇ ಲೋಪದೋಷಗಳು ಉಂಟಾದಲ್ಲಿ ಸಂಬಂಧಿಸಿದ ತಹಶೀಲ್ದಾರರನ್ನು ನೇರವಾಗಿ ಜವಾಬ್ದಾರರನ್ನಾಗಿ ಮಾಡಲಾಗುವದು. ಜಿಲ್ಲೆಯ ಎಲ್ಲ ಉಪವಿಭಾಗಾಧಿಕಾರಿಗಳು ಅರ್ಹ ಸಂತ್ರಸ್ತ ಕುಟುಂಬಗಳಿಗೆ ಪರಿಹಾರ ಸಂದಾಯವಾಗುತ್ತಿರುವ ಬಗ್ಗೆ, ಸರ್ಕಾರದ ನಿರ್ದೇಶನಗಳು ಪಾಲನೆಯಾಗುತ್ತಿರುವ ಬಗ್ಗೆ ಮೇಲ್ವಿಚಾರಣೆಯನ್ನು ಕೈಗೊಳ್ಳತಕ್ಕದ್ದು.

4. ಅತಿವೃಷ್ಟಿ/ಪ್ರವಾಹದಿಂದಾಗಿ ಉಂಟಾದ ಹಾನಿಗಳಿಗೆ ಸಂಬಂಧಿಸಿದಂತೆ, ಪರಿಹಾರ ಧನ ವಿತರಿಸಲು ಬಾಕಿಯಿರುವ ಎಲ್ಲ ಪ್ರಕರಣಗಳನ್ನು ನಿಯಮಾನುಸಾರ ಇತ್ಯರ್ಥಪಡಿಸಿ, ಸೂಕ್ತ ಪರಿಹಾರ ಧನವನ್ನು ವಿತರಿಸಲು ಜಿಲ್ಲೆಯ ಎಲ್ಲ ಉಪವಿಭಾಗಾಧಿಕಾರಿಗಳು/ತಹಶೀಲ್ದಾರರು ಕ್ರಮ ಜರುಗಿಸತಕ್ಕದ್ದು.

5. ಪಂಚಾಯತ ರಾಜ್ ಇಂಜನೀರಿಂಗ ಇಲಾಖೆಯ ಅಧಿಕಾರಿಗಳು ಸಾರ್ವಜನಿಕ ಆಸ್ತಿಗಳ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲು ತ್ವರಿತಗತಿಯಲ್ಲಿ ಅಂದಾಜು ಪತ್ರಿಕೆಗಳನ್ನು ಜಿಲ್ಲಾಧಿಕಾರಿಗಳಿಗೆ

ಸಲ್ಲಿಸಿ, ಅನುಮೋದನೆಯನ್ನು ಪಡೆದುಕೊಂಡು ಕಾಮಗಾರಿಗಳನ್ನು ತೀವ್ರಗತಿಯಲ್ಲಿ ಪೂರ್ಣಗೊಳಿಸಬೇಕು.

6. 2018-19ನೇ ಸಾಲಿನ ಹಿಂಗಾರು ಹಂಗಾಮಿಗೆ ಸಂಬಂಧಿಸಿದಂತೆ ಹಾಗೂ 2019ನೇ ಮುಂಗಾರು ಹಂಗಾಮಿನಲ್ಲಿ ಅತಿವೃಷ್ಟಿ/ಪ್ರವಾಹದಿಂದ ಬೆಳೆ ಹಾನಿಗಳಿಗೆ ಸಂಬಂಧಿಸಿದಂತೆ ಪರಿಹಾರ ತಂತ್ರಾಂಶದಲ್ಲಿ ರೈತರ ವಿವರಗಳನ್ನು ಇಂದೀಕರಣ ಕಾರ್ಯವನ್ನು ಆದಷ್ಟು ಬೇಗನೆ ಪೂರ್ಣಗೊಳಿಸಲು ಸೂಚನೆಗಳನ್ನು ನೀಡಲಾಯಿತು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಜಲಸಂಪನ್ಮೂಲ ಇಲಾಖೆ ಹಾಗೂ ಬೆಳಗಾವಿ
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

**ದಿನಾಂಕ: 13.11.2019 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಹಾಗೂ ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಶ್ರೀ ಅಂಜುಮ್ ಪರ್ವೇಜ್ ರವರ ಅಧ್ಯಕ್ಷತೆಯಲ್ಲಿ ಜರುಗಿದ ಬೆಂಗಳೂರು ನಗರ ಜಿಲ್ಲೆಯ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭಾ ನಡವಳಿ.**

**ಹಾಜರಿದ್ದವರು: ಅನುಬಂಧ 1 ರಲ್ಲಿ ಲಗತ್ತಿಸಲಾಗಿದೆ.**

ಪ್ರಥಮವಾಗಿ- ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಹಾಗೂ ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು ಸಭೆಯಲ್ಲಿ ಉಪಸ್ಥಿತರಿದ್ದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಹಾಗೂ ಸಭೆಗೆ ಹಾಜರಿದ್ದ ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ಬೆಂಗಳೂರು ನಗರ ಜಿಲ್ಲೆಯ ಅಪರ ಜಿಲ್ಲಾಧಿಕಾರಿಗಳು ಸಭೆಗೆ ಸ್ವಾಗತಿಸಿ, ಸಭೆಯನ್ನು ನಡೆಸಿಕೊಡುವಂತೆ ಅಧ್ಯಕ್ಷರನ್ನು ಕೋರಿದರು. ನಂತರ ಅಧ್ಯಕ್ಷರು ಈ ಕೆಳಕಂಡ ಇಲಾಖೆಯ ಕಾರ್ಯಕ್ರಮಗಳ ಪ್ರಗತಿಯನ್ನು ಪರಿಶೀಲಿಸಿದರು.

**1.ಕೃಷಿ ಇಲಾಖೆ:**

ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನ ಕೃಷಿಗೆ ಸಂಬಂಧಿಸಿದಂತೆ ಹಮ್ಮಿಕೊಳ್ಳಲಾದ ಚಟುವಟಿಕೆಗಳ ಬಗ್ಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಪರಿಶೀಲಿಸಿದಾಗ, ಜಿಲ್ಲೆಯಲ್ಲಿ 2019 ಜನವರಿ ಮಾಹೆಯಿಂದ ನವೆಂಬರ್ 6ನೇ ತಾರೀಖಿನವರೆಗೆ 798 ಮಿಲಿ ಮೀಟರ್ ವಾಸ್ತವ ಮಳೆಯಾಗಿದೆ. ಒಟ್ಟು 20154 ಹೆಕ್ಟೇರ್ ವಿಸ್ತೀರ್ಣದ ಗುರಿಗೆ 16690 ಹೆಕ್ಟೇರ್ ವಿಸ್ತೀರ್ಣದಲ್ಲಿ ಬಿತ್ತನೆಯಾಗಿದ್ದು, ಶೇ.83 ರಷ್ಟು ಪ್ರಗತಿಯಾಗಿದೆ. ಕಳೆದ ವರ್ಷಕ್ಕಿಂತ ಉತ್ತಮ ಇಳುವರಿ ಬರುವ ನಿರೀಕ್ಷೆಯಲ್ಲಿದೆ. ರಸಗೊಬ್ಬರ ಹಾಗೂ ಬಿತ್ತನೆ ಬೀಜಗಳ ಪೂರೈಕೆಗೆ ಸಂಬಂಧಿಸಿದಂತೆ ರೈತರಿಗೆ ಹಂಚಿಕೆ ಮಾಡಲಾಗಿದ್ದು, ಯಾವುದೇ ಸಮಸ್ಯೆ ಇರುವುದಿಲ್ಲ. ರಸಗೊಬ್ಬರ ಹಾಗೂ ಬಿತ್ತನೆ ಬೀಜಗಳ ದಾಸ್ತಾನು ಇರುತ್ತದೆಯೆಂದು ಇಲಾಖಾ ಅಧಿಕಾರಿಗಳು ತಿಳಿಸಿದರು.

ಬೆಳೆ ಸಮೀಕ್ಷೆ ಪ್ರಗತಿ ಪರಿಶೀಲಿಸಿ, ಬೆಂಗಳೂರು ಉತ್ತರ ಹಾಗೂ ಆನೇಕಲ್ ತಾಲ್ಲೂಕುಗಳಲ್ಲಿ ಪ್ರಗತಿ ಕಡಿಮೆ ಇರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ, ಸಮೀಕ್ಷೆಯನ್ನು ಚುರುಕುಗೊಳಿಸುವಂತೆ ಸಂಬಂಧಪಟ್ಟ ತಹಶೀಲ್ದಾರ್ ಹಾಗೂ ಜಂಟಿ ಕೃಷಿ ನಿರ್ದೇಶಕರು ನಿರ್ದೇಶನ ನೀಡಿದರು.

(ಕ್ರಮ: ಜಂಟಿ ಕೃಷಿ ನಿರ್ದೇಶಕರು, ಬೆಂಗಳೂರು ನಗರ ಜಿಲ್ಲೆ ಹಾಗೂ ತಹಶೀಲ್ದಾರ್, ಬೆಂಗಳೂರು ಉತ್ತರ ಮತ್ತು ಆನೇಕಲ್ ತಾಲ್ಲೂಕು)

**2. ಪಶು ಸಂಗೋಪನೆ ಇಲಾಖೆ:**

ಜಾನುವಾರುಗಳಿಗೆ ಮೇವಿನ ಲಭ್ಯತೆ ಬಗ್ಗೆ ಸಭೆಯಲ್ಲಿ ಪರಿಶೀಲಿಸಿದಾಗ, ಜಿಲ್ಲೆಯಲ್ಲಿ ಒಟ್ಟು 1.45ಲಕ್ಷ ಜಾನುವಾರುಗಳಿದ್ದು, ದಿನಾಂಕ: 08.11.2019 ಕ್ಕೆ ಒಟ್ಟು 73053.82 ಮೆ.ಟನ್ ಮೇವು ಲಭ್ಯವಿದ್ದು, ಇದು ಇನ್ನು 15 ವಾರಗಳಿಗೆ ಸಾಕಾಗುತ್ತಿದ್ದು, ಸದ್ಯಕ್ಕೆ ಯಾವುದೇ ಮೇವಿನ ಕೊರತೆ ಇರುವುದಿಲ್ಲವೆಂದು ಹಾಗೂ ಕ್ಯಾಂಪ್‌ಗಳನ್ನು ಬೆಂಗಳೂರು ನಗರ ಜಿಲ್ಲೆಯ 3 ತಾಲ್ಲೂಕುಗಳಲ್ಲಿ 4 ಕಡೆ ಆಗಸ್ಟ್ ಮಾಹೆಯಲ್ಲಿ ನಡೆಸಲಾಗಿರುವುದಾಗಿ ಅಧಿಕಾರಿಗಳು ಸಭೆಗೆ ತಿಳಿಸಿದರು. ಮುಂದುವರೆದು ಮೇವು

ದಾಸ್ತಾನಿಗೆ ಸಂಬಂಧಿಸಿದಂತೆ ಆನೇಕಲ್ ತಾಲ್ಲೂಕು, ರಾಮಕೃಷ್ಣಾಪುರದಲ್ಲಿರುವ ಕೃಷಿ ತರಬೇತಿ ಕೇಂದ್ರದಲ್ಲಿ ದಿನಾಂಕ: 08.08.2019 ರಲ್ಲಿ 4.72 ಮೆ.ಟನ್ ಮೇವು ಖರೀದಿಸಿದ್ದು, ಈ ಪೈಕಿ ದಿನಾಂಕ: 08.11.2019 ರವರೆವಿಗೆ 1.89 ಮೆ.ಟನ್ ಮೇವು ಖರ್ಚಾಗಿ ಬಾಕಿ 2.38 ಮೆ.ಟನ್ ಇದ್ದು ಮೇವಿನ ಸಮಸ್ಯೆ ಇಲ್ಲವೆಂದು ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಗೆ ತಿಳಿಸಿದರು.

ಜಾನುವಾರುಗಳಿಗೆ ಮೇವಿನ ಕೊರತೆಯಾಗದಂತೆ ಹಾಗೂ ರಾಸುಗಳಿಗೆ ಲಸಿಕೆಗಳನ್ನು ಕ್ರಮಬದ್ಧ ಅವಧಿಯಲ್ಲಿ ಪೂರೈಸುವಂತೆ ಕ್ರಮವಹಿಸಲು ಸೂಚನೆ ನೀಡಲಾಯಿತು.

(ಕ್ರಮ: ಉಪ ನಿರ್ದೇಶಕರು, ಪಶು ಸಂಗೋಪನಾ ಇಲಾಖೆ, ಬೆಂಗಳೂರು ನಗರ ಜಿಲ್ಲೆ)

**3. ಗ್ರಾಮೀನ ಕುಡಿಯುವ ನೀರು :**

2019–20ನೇ ಸಾಲಿನಲ್ಲಿ ಪ್ರಕೃತಿ ವಿಕೋಪ ಅನುದಾನದಡಿ ಕುಡಿಯುವ ನೀರಿನ ಪುನಶ್ಚೇತನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಒಟ್ಟು 7 ವಿಧಾನಸಭಾ ಕ್ಷೇತ್ರಗಳಲ್ಲಿ 66 ಕಾಮಗಾರಿಗಳಿಗೆ ಅನುದಾನೆಯಾಗಿದ್ದು, ಪ್ರಗತಿ ಶೂನ್ಯವಾಗಿರುವುದನ್ನು ಮಾನ್ಯ ಅಧ್ಯಕ್ಷರು ಪರಿಶೀಲಿಸಿದಾಗ ಮುಂದುವರೆದು ಅಪರ ಜಿಲ್ಲಾಧಿಕಾರಿಗಳು ಮಾತನಾಡುತ್ತಾ, ಅಕ್ಟೋಬರ್ 2019ರ ಮಾಹೆಯಲ್ಲಿ ಆದೇಶ ಬಿಡುಗಡೆಯಾಗಿರುವುದಾಗಿ ಸಭೆಗೆ ತಿಳಿಸಿದಾಗ, ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರಿಗೆ ಸರಿಯಾದ ಸಮಯದಲ್ಲಿ ಮಂಜೂರಾದ ಅನುದಾನವನ್ನು ವೆಚ್ಚ ಮಾಡಿ ಪ್ರಗತಿ ಸಾಧಿಸುವಂತೆ ತಿಳಿಸುತ್ತಾ, ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು 66 ಕಾಮಗಾರಿಗಳ ಪ್ರಗತಿ ಬಗ್ಗೆ ಮರು ಚರ್ಚೆ ಮಾಡುವಂತೆ ಮಾನ್ಯ ಅಧ್ಯಕ್ಷರು ಸೂಚನೆ ನೀಡಿದರು.

ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ಹಾಗೂ ಬೆಂಗಳೂರು ಉತ್ತರ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಒಟ್ಟು 13 ಗ್ರಾಮಗಳಲ್ಲಿ ಪ್ರತಿ ದಿನ 37 ಬಾರಿ (ಟ್ರಿಪ್) ಕುಡಿಯುವ ನೀರನ್ನು ಟ್ಯಾಂಕರ್ ಮೂಲಕ ಸರಬರಾಜು ಮಾಡಲಾಗುತ್ತಿದೆ. ಈ ಪೈಕಿ 9 ಗ್ರಾಮಗಳಿಗೆ ಪ್ರತಿ ದಿನ ಟ್ಯಾಂಕರ್ ಮೂಲಕ ನೀರನ್ನು ಸರಬರಾಜು ಮಾಡಲಾಗುತ್ತಿದೆಯೆಂದು ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದವರು ತಿಳಿಸಿದರು

ಕಾರ್ಯಪಾಲಕ ಅಭಿಯಂತರರು ಮಾತನಾಡುತ್ತಾ, ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯ ಒಂದು ನಗರ ಸಭೆ ಹಾಗೂ 5 ಪುರಸಭೆಗಳಿಗೆ ಕುಡಿಯುವ ನೀರು ಸರಬರಾಜಿಗೆ ಸಂಬಂಧಿಸಿದಂತೆ ನವೆಂಬರ್ ಮಾಹೆಯಲ್ಲಿ ಒಟ್ಟು ಲಭ್ಯವಿರುವ ಅನುದಾನ ರೂ.389.21 ಲಕ್ಷ ಈ ಪೈಕಿ ಇಲ್ಲಿಯವರೆವಿಗೆ ರೂ.187.34 ಲಕ್ಷ ಅನುದಾನ ವೆಚ್ಚವಾಗಿ ಬಾಕಿ ರೂ.201.87 ಲಕ್ಷ ಬಾಕಿ ಇರುವುದಾಗಿ ಸಭೆಗೆ ತಿಳಿಸಿದರು. ಮುಂದುವರೆದು, ಮಾನ್ಯ ಅಧ್ಯಕ್ಷರು ಸೂರ್ಯಸಿಟಿವರೆಗೆ ಕಾವೇರಿ ಪೈಪ್ ಲೈನ್ ಆಗಿರುವ ಬಗ್ಗೆ ಪ್ರಶ್ನಿಸಿದಾಗ, ಕೆಲವೊಂದು ಪ್ರದೇಶ ಬಾಕಿ ಇರುವುದಾಗಿ ಕಾರ್ಯಪಾಲಕ ಅಭಿಯಂತರರು ಉತ್ತರಿಸಿದರು.

ಟಾಸ್ಕ್ ಫೋರ್ಸ್ ಇತರೆ ಯೋಜನೆ ಹೊರತುಪಡಿಸಿ ಬೆಂಗಳೂರು ನಗರ ಜಿಲ್ಲೆಯಲ್ಲಿ ರೂ.5.00 ಲಕ್ಷಕ್ಕಿಂತ ಕಡಿಮೆ ಮೊತ್ತದ ಹಾಗೂ ರೂ.5.00 ಕ್ಕಿಂತ ಹೆಚ್ಚಿನ ಮೊತ್ತದ ಕಾಮಗಾರಿಗಳ ವಿವರವನ್ನು ಪರಿಶೀಲಿಸಿ, ಮುಂದುವರೆದ ಕಾಮಗಾರಿಗಳು ಹಾಗೂ ಹೊಸ ಕಾಮಗಾರಿಗಳು ಸೇರಿ ಒಟ್ಟು 282 ಕಾಮಗಾರಿಗಳಾಗಿದ್ದು, ಈ ಪೈಕಿ ಮುಂದುವರೆದ 80 ಕಾಮಗಾರಿಗಳು ಮಾತ್ರ ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಗಳು ಬಾಕಿ ಇದೆ. ಅಲ್ಲದೆ ಆರ್ಥಿಕ ವರ್ಷ ಅಂತ್ಯಗೊಳ್ಳಲು ಕೆಲವೇ ತಿಂಗಳು ಮಾತ್ರ ಬಾಕಿ ಇರುವ ಬಗ್ಗೆ ಪ್ರಸ್ತಾಪ ಮಾಡುತ್ತಾ, ಟೆಂಡರ್ ಮೂಲಕ ಆಯ್ಕೆಯಾಗುವ ಕಾಮಗಾರಿಗಳು

ನಿಧಾನವಾಗುತ್ತದೆ. ಆದರೆ ಟೆಂಡರ್ ರಹಿತ ಕಾಮಗಾರಿಗಳನ್ನು ಬೇಗ ಮುಗಿಸಲು ಪ್ರಯತ್ನ ಪಡುವಂತೆ ಹಾಗೂ ಮಾರ್ಚ್ ಅಂತ್ಯದೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮವಹಿಸುವಂತೆ ಮಾನ್ಯ ಅಧ್ಯಕ್ಷರು ಸೂಚನೆ ನೀಡಿದರು.

ಶುದ್ಧ ಕುಡಿಯುವ ನೀರಿನ ಘಟಕಗಳಿಗೆ ಸಂಬಂಧಿಸಿದಂತೆ ವಿವಿಧ ಏಜೆನ್ಸಿ ಮುಖಾಂತರ ತಹಲ್‌ವರೆವಿಗೆ ಒಟ್ಟು 683 ಭೌತಿಕ ಗುರಿ ನಿಗಧಿಪಡಿಸಿದ್ದು, ಈ ಪೈಕಿ 51 ಕಾಮಗಾರಿಗಳು ವಿವಿಧ ಕಾರಣಗಳಿಂದ ಬಾಕಿ ಉಳಿದಿದ್ದು, ಉಳಿದ 624 ಘಟಕಗಳು ಸ್ಥಾಪನೆಯಾಗಿದೆ. ಇದರಲ್ಲಿ 614 ಘಟಕಗಳು ಸುಸ್ಥಿತಿಯಲ್ಲಿದ್ದು, 10 ಘಟಕಗಳು ಕಾರ್ಯನಿರ್ವಹಿಸುತ್ತಿಲ್ಲ. 9 ನಿರ್ವಹಣೆ ಹಾಗೂ ದುರಸ್ತಿ ತೊಂದರೆ, ಉಳಿದ ಒಂದು ಘಟಕ ಇತರೆ ತೊಂದರೆ ಇರುವುದಾಗಿ ಕಾರ್ಯಪಾಲಕ ಅಭಿಯಂತರರು ಸಭೆಗೆ ತಿಳಿಸಿದರು. ಮುಂದುವರೆದು, ಟೆಂಡರ್ ಪ್ರಕ್ರಿಯೆಗೆ ಅನುಮೋದನೆ ನೀಡುವ ಬಗ್ಗೆ ವಿಚಾರಿಸಿ, ಕುಡಿಯುವ ನೀರಿನ ಗುಣಮಟ್ಟದ ಬಗ್ಗೆ ಪ್ರಯೋಗಾಲಯದಲ್ಲಿ ಪರೀಕ್ಷೆ ಮಾಡುವ ಬಗ್ಗೆ ಪ್ರಶ್ನಿಸಿದಾಗ, ವರ್ಷಕ್ಕೆ 2 ಸಾರಿ ಕುಡಿಯುವ ನೀರಿನ ಗುಣಮಟ್ಟವನ್ನು ಪರೀಕ್ಷೆ ಮಾಡಲಾಗುವುದೆಂದು ತಿಳಿಸಿದಾಗ, ಶುದ್ಧ ಕುಡಿಯುವ ನೀರಿನ ಬೆಲೆಯ ಬಗ್ಗೆ ಚರ್ಚಿಸಿದಾಗ, 5 ರೂಪಾಯಿಗೆ 20 ಲೀಟರ್ ಕುಡಿಯುವ ನೀರನ್ನು ಪಡೆಯಬಹುದಾಗಿದೆಯೆಂದು ಇಲಾಖಾ ಅಧಿಕಾರಿಗಳು ಸಭೆಗೆ ತಿಳಿಸಿದರು.

2019–20ನೇ ಸಾಲಿಗೆ ಬೆಂಗಳೂರು ನಗರ ಜಿಲ್ಲೆಯ ಪ್ರಕೃತಿ ವಿಕೋಪ ಪರಿಹಾರ ನಿಧಿಯ ಅನುದಾನದಡಿ ಒಟ್ಟು 66 ಕಾಮಗಾರಿಗಳು ಆಯ್ಕೆಯಾಗಿದ್ದು, ಅಂದಾಜು ಮೊತ್ತ ರೂ.99.00 ಲಕ್ಷಗಳಾಗಿದ್ದು, ಈ ಪೈಕಿ 66 ಕಾಮಗಾರಿಗಳು ಪೂರ್ಣಗೊಂಡು ರೂ.94.61 ಲಕ್ಷ ಅನುದಾನ ವೆಚ್ಚವಾಗಿದೆ. ಬಿಲ್ಲುಗಳನ್ನು 3ನೇ ಪಾರ್ಟಿ ತಪಾಸಣೆ ಮಾಡಿಸಿ ಜಿಲ್ಲಾಧಿಕಾರಿಗಳಿಗೆ ಉಳಿಕೆ ಹಣ ಬಿಡುಗಡೆಗಾಗಿ ಕೋರಿಕೆ ಸಲ್ಲಿಸಲಾಗುವುದೆಂದು ಇಲಾಖಾ ಅಧಿಕಾರಿಗಳು ಸಭೆಗೆ ತಿಳಿಸಿದರು. ಅಕ್ಟೋಬರ್ 2019 ರಲ್ಲಿ ಆದೇಶವಾಗಿರುವುದಾಗಿ ಅಪರ ಜಿಲ್ಲಾಧಿಕಾರಿಗಳು ಸಭೆಗೆ ತಿಳಿಸಿದರು. ಮುಂದುವರೆದು, 66 ಕಾಮಗಾರಿಗಳ ಮರು ಪರಿಶೀಲನೆ ಮಾಡುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು.

ತುರ್ತು ಪರಿಹಾರ ಹಾಗೂ ಶಾಶ್ವತ ಪರಿಹಾರ ಯೋಜನೆಯಡಿ ಅನುಕ್ರಮವಾಗಿ ತುರ್ತು ಪರಿಹಾರ ಯೋಜನೆಯಡಿ ಹೊಸದಾಗಿ ಕೊಳವೆ ಬಾವಿ ಕೊರೆದು, ಪಂಪು, ಮೋಟಾರ್ ಅಳವಡಿಸಿ, ಪೈಪ್ ಲೈನ್ ಮಾಡಲು ರೂ.130.00 ಲಕ್ಷಗಳ ಅನುದಾನ ಅಗತ್ಯವಿದೆ. ಶಾಶ್ವತ ಪರಿಹಾರ ಯೋಜನೆಯಡಿ ಮೇಕೆದಾಟು ಬಳಿ ಸಂಗಮದಿಂದ ಪೈಪ್ ಲೈನ್ ಮೂಲಕ ಜಲಸಂಗ್ರಹಣೆ ಮಾಡಿ ಶುದ್ಧೀಕರಣ ಮಾಡಿ ನೀರು ಸರಬರಾಜು ಮಾಡಲು ಸುಮಾರು ರೂ.100.00 ಕೋಟಿ ಹಾಗೂ ಹೆಸರಘಟ್ಟ ಕೆರೆ ಹಾಗೂ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ನೀರನ್ನು ಪಡೆದು ಸಂಗ್ರಹ ಮಾಡಿ ಶುದ್ಧೀಕರಿಸಿದ ನೀರು ಸರಬರಾಜು ಮಾಡಲು ಹೊಸ ಯೋಜನೆ ಕಾರ್ಯಗತಗೊಳಿಸಲು ಸುಮಾರು 70.00 ಕೋಟಿ ಅನುದಾನ ಅಗತ್ಯವಿದೆಯೆಂದು ಕಾರ್ಯಪಾಲಕ ಅಭಿಯಂತರರು ಸಭೆಯ ಗಮನಕ್ಕೆ ತಂದರು. ಒಂದು ಪ್ರಸ್ತಾವನೆ ಸಿದ್ಧಪಡಿಸಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಕಚೇರಿಗೆ ಕಳುಹಿಸಿಕೊಡುವಂತೆ ಸೂಚನೆ ನೀಡಿದರು.

ಅಂತಿಮವಾಗಿ ಸರ್ಕಾರದಿಂದ ಮಂಜೂರಾಗಿರುವ ಅನುದಾನ ವ್ಯಪಗತವಾಗದಂತೆ ಕ್ರಮವಹಿಸುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚನೆ ನೀಡಿದರು.

(ಕ್ರಮ:ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿ.ಪಂ. ಬೆಂಗಳೂರು ನಗರ ಜಿಲ್ಲೆ ಹಾಗೂ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ)

**4. ಶಿಕ್ಷಣ ಇಲಾಖೆ:**

**ಉಚಿತ ಷೂ ಸಾಕ್ಸ್ ವಿತರಣೆ:**

2019-20ನೇ ಸಾಲಿಗೆ 31.10.2019ರ ಅಂತ್ಯಕ್ಕೆ ಶೇ.100 ರಷ್ಟು ಪ್ರಗತಿ ಸಾಧಿಸಿರುವುದನ್ನು ಪರಿಶೀಲಿಸಿ, ಎಲ್ಲಾ ಮಕ್ಕಳಿಗೂ ಷೂ, ಸಾಕ್ಸ್ ತಲುಪಿರುವ ಬಗ್ಗೆ ಪರಿಶೀಲನೆ ಮಾಡಲಾಗಿದೆಯೇ? ಎಂಬ ಬಗ್ಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಪ್ರಶ್ನಿಸಿದಾಗ, ಶಾಲೆಯ ಎಸ್.ಡಿ.ಎಂ.ಸಿ.ಯವರು ಷೂ, ಸಾಕ್ಸ್ ಖರೀದಿ ಮಾಡಿ ಹಂಚಿಕೆ ಮಾಡುತ್ತಿದ್ದಾರೆ. ಅವರಿಗೆ ಮಕ್ಕಳ ಸಂಖ್ಯೆಗನುಗುಣವಾಗಿ ಅನುದಾನವನ್ನು ಹಂಚಿಕೆ ಮಾಡಲಾಗುವುದೆಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರ ಪರವಾಗಿ ಸಭೆಯಲ್ಲಿ ಹಾಜರಿದ್ದ ಶಿಕ್ಷಣ ಅಧಿಕಾರಿಗಳು ಉತ್ತರಿಸಿದರು. ಇಲಾಖೆಯ ಅಧಿಕಾರಿಗಳು ಸಹ ರ‍್ಯಾಡಂ ಆಗಿ ಶಾಲೆಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡುವಂತೆ ಸೂಚನೆ ನೀಡಿದರು.

ಶಿಕ್ಷಕರ ವೇತನಕ್ಕೆ ಸಂಬಂಧಿಸಿದಂತೆ ಭೌತಿಕ ಗುರಿ 1074 ಇದ್ದು, ಒಟ್ಟು ರೂ.3844.512 ಲಕ್ಷ ನಿಗಧಿಯಾಗಿ ಇಲ್ಲಿಯವರೆವಿಗೆ ಬಿಡುಗಡೆಯಾದ ಅನುದಾನ ರೂ.1635.10 ಲಕ್ಷ ಸಾಧನ ರೂ.1099.76 ಲಕ್ಷವಿದ್ದು, ಶೇ.67.26 ರಷ್ಟು ಪ್ರಗತಿಯಾಗಿದೆ. ಈ ಬಗ್ಗೆ ಪರಿಶೀಲನೆ ಮಾಡುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಿಳಿಸಲಾಯಿತು.

(ಕ್ರಮ: ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ ಜಿಲ್ಲೆ ಹಾಗೂ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂ.ಉತ್ತರ ಹಾಗೂ ದಕ್ಷಿಣ ಜಿಲ್ಲೆ)

**5. ಆರ್.ಟಿ.ಇ:**

ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆಯ ಉಪ ನಿರ್ದೇಶಕರು ಸಭೆಗೆ ಗೈರು ಹಾಜರಾಗಿದ್ದು, ಅವರ ಪ್ರತಿನಿಧಿಗಳು ಸರಿಯಾದ ಮಾಹಿತಿಯನ್ನು ಪ್ರಸ್ತುತಪಡಿಸದ ಕಾರಣ 2019ನೇ ಶೈಕ್ಷಣಿಕ ವರ್ಷದಲ್ಲಿ ಆರ್.ಟಿ.ಇ. ಯೋಜನೆಯಡಿ ನಿಗಧಿಪಡಿಸಿದ ಗುರಿ, ಶಾಲೆಗೆ ದಾಖಲಾದ ಮಕ್ಕಳ ಸಂಖ್ಯೆ ವಿವರವನ್ನೊಳಗೊಂಡಂತೆ ಮಾಹಿತಿಯನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಕಛೇರಿಗೆ ಸಲ್ಲಿಸುವಂತೆ ಸೂಚನೆ ನೀಡಲಾಯಿತು.

(ಕ್ರಮ: ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆ)

**6. ಆರೋಗ್ಯ ಮತ್ತು ಕುಟುಂಬ ಕಲ್ಯಾಣ:**

ಬೆಂಗಳೂರು ನಗರ ಜಿಲ್ಲೆಯಲ್ಲಿ ಹೆಚ್1 ಎನ್1, ಚಿಕನ್ ಗೂನ್ಯ ಮತ್ತು ಡೆಂಗ್ಯೂ ಕಾಯಿಲೆಗಳ ನಿಯಂತ್ರಣ ಹಾಗೂ ಮರಣದ ಸಂಖ್ಯೆ ಬಗ್ಗೆ ಚರ್ಚಿಸಿ, ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಹೆಚ್ಚಿನ ಸಾವುಗಳ ಪ್ರಕರಣಗಳನ್ನು ದಿನಪತ್ರಿಕೆಯಲ್ಲಿ ಗಮನಿಸಲಾಗಿದೆ. ರಾಷ್ಟ್ರೀಯ ನಗರ ಆರೋಗ್ಯ ಮಿಷನ್ (NUHM) ಯೋಜನೆ ಬಗ್ಗೆ ಈ ಹಿಂದಿನ ಸಭೆಯಲ್ಲಿ ಚರ್ಚಿಸಿದಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಬರುವ ಆರೋಗ್ಯ ಅಧಿಕಾರಿಗಳನ್ನು ಸಭೆಗೆ ಆಹ್ವಾನಿಸುವಂತೆ ಸೂಚಿಸಲಾಗಿತ್ತು. ಆದುದರಿಂದ ಮುಂದಿನ ಸಭೆಗೆ ಕಡ್ಡಾಯವಾಗಿ ಬಿ.ಬಿ.ಎಂ.ಪಿ. ಆರೋಗ್ಯಾಧಿಕಾರಿಗಳು ತಪ್ಪದೆ ಹಾಜರಾಗುವಂತೆ

ಬಿ.ಬಿ.ಎಂ.ಪಿ. ಆಯುಕ್ತರಿಗೆ ಪತ್ರ ಬರೆಯಲು ಅಪರ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಯಿತು. ಮುಂದುವರೆದು, ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಡೆಂಗ್ಯೂ, ಹೆಚ್1 ಎನ್1, ಚಿಕೂನ್ ಗುನ್ಯಾ, ಮಲೇರಿಯಾ ಇಂತಹ ಸಾಂಕ್ರಾಮಿಕ ಖಾಯಿಲೆಗಳನ್ನು ನಿಯಂತ್ರಿಸಲು ಹೆಚ್ಚಿನ ಕ್ರಮವಹಿಸುವಂತೆ ಸೂಚನೆ ನೀಡಲಾಯಿತು.

ಜನನಿ ಸುರಕ್ಷ ಯೋಜನೆಯ ಪ್ರಗತಿಯನ್ನು ಪರಿಶೀಲಿಸಿ, ಇದರ ಪ್ರಯೋಜನ ಗ್ರಾಮೀಣ ಪ್ರದೇಶದ ಜನರಿಗೆ ತಲುಪುತ್ತಿರುವ ಬಗ್ಗೆ ಪರಿಶೀಲನೆ ಮಾಡುವಂತೆ ಸೂಚನೆ ನೀಡಿದರು.

(ಕ್ರಮ: ಅಪರ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ)

**7. ಸಮಾಜ ಕಲ್ಯಾಣ ಇಲಾಖೆ:**

ಸಮಾಜ ಕಲ್ಯಾಣ ಇಲಾಖೆಯಲ್ಲಿನ ವಿವಿಧ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಅಕ್ಟೋಬರ್ ಮಾಹೆಯ ಅಂತ್ಯಕ್ಕೆ ಶೇ.90.69 ರಷ್ಟು ಪ್ರಗತಿ ಸಾಧಿಸಿರುವುದನ್ನು ಸಭೆಯು ಪರಿಶೀಲಿಸಿ, ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ಮಕ್ಕಳ ದಾಖಲಾತಿ ಕಡಿಮೆ ಇರುವ ಬಗ್ಗೆ ಚರ್ಚಿಸಿದಾಗ, ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ಮಕ್ಕಳ ದಾಖಲಾತಿ ಕಡಿಮೆ ಇದ್ದು, ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಬೇಡಿಕೆ ಹೆಚ್ಚಾಗಿರುವುದರಿಂದ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳನ್ನು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನಾಗಿ ಪರಿವರ್ತಿಸಲು ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಿರುವುದಾಗಿ ಇಲಾಖಾ ಅಧಿಕಾರಿಗಳು ಸಭೆಯ ಗಮನಕ್ಕೆ ತಂದರು. ಸದರಿ ಪ್ರಸ್ತಾವನೆಯನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಕಚೇರಿಗೆ ಸಲ್ಲಿಸುವಂತೆ ಸೂಚಿಸಲಾಯಿತು. ಮುಂದುವರೆದು, ವಿದ್ಯಾರ್ಥಿನಿಲಯಗಳಿಗೆ ನಿವೇಶನದ ಲಭ್ಯತೆ ಬಗ್ಗೆ ಪ್ರಸ್ತಾಪಿಸಿದಾಗ, ಎಲ್ಲಾ ವಿದ್ಯಾರ್ಥಿನಿಲಯಗಳಿಗೆ ನಿವೇಶನ ದೊರೆತಂತಾಗಿದೆ. ಆನೇಕಲ್ ತಾಲ್ಲೂಕಿನ ಒಂದು ವಿದ್ಯಾರ್ಥಿನಿಲಯ ಬಾಕಿ ಇರುವುದಾಗಿ ಇಲಾಖಾ ಅಧಿಕಾರಿಗಳು ಉತ್ತರಿಸಿದರು.

ವಿದ್ಯಾರ್ಥಿ ವೇತನಕ್ಕೆ ಸಂಬಂಧಿಸಿದಂತೆ ಇ-ಗೌರ್ನರ್ ಮುಖಾಂತರ ವಿದ್ಯಾರ್ಥಿವೇತನ ದಾಖಲಾತಿ ಪ್ರಕ್ರಿಯೆ ನಡೆದಿದ್ದು, ಶೇ.100 ರಷ್ಟು ಪ್ರಗತಿಯಲ್ಲಿದೆ. ಆದರೆ 2018-19ನೇ ಸಾಲಿನ ವಿದ್ಯಾರ್ಥಿವೇತನ ಶಿಕ್ಷಣ ಇಲಾಖೆಯಲ್ಲಿ ಬಾಕಿ ಉಳಿದಿರುವುದಾಗಿ ಜಂಟಿ ನಿರ್ದೇಶಕರು ಸಭೆಗೆ ತಿಳಿಸಿದರು. ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಎರಡೂ ಜಿಲ್ಲೆಯ ಉಪ ನಿರ್ದೇಶಕರು ಕ್ರಮವಹಿಸುವಂತೆ ತಿಳಿಸಲಾಯಿತು.

(ಕ್ರಮ: ಜಂಟಿ ನಿರ್ದೇಶಕರು,ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ ಹಾಗೂ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆ)

**8.ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ:**

ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಶೇ.40 ರಷ್ಟು ನ್ಯಾಷನಲ್ ಸ್ಕಾಲರ್ ಪೋರ್ಟಲ್ ಸಂಬಂಧಿಸಿದಂತೆ ಕೆಲವು ಶಾಲೆಗಳು ನೋಂದಣಿ ಮಾಡಿಕೊಂಡಿರುವುದಿಲ್ಲ. ಇದರಿಂದ ಅರ್ಜಿಗಳು ವೀವ್ ಆಗುತ್ತಿಲ್ಲ. ಆದುದರಿಂದ 3 ದಿನದೊಳಗಾಗಿ ನೋಂದಣಿ ಪ್ರಕ್ರಿಯೆ ಮುಗಿಸಲು ಸಂಬಂಧಪಟ್ಟ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕೆಂದು ಜಿಲ್ಲಾ ಅಧಿಕಾರಿಗಳು ಮಾನ್ಯ ಅಧ್ಯಕ್ಷರಲ್ಲಿ ಮನವಿ ಮಾಡಿಕೊಂಡರು. ಈ

ಬಗ್ಗೆ ಪರಿಶೀಲಿಸಿ, ಎರಡೂ ಜಿಲ್ಲೆಯ ಉಪ ನಿರ್ದೇಶಕರು, ಬಿ.ಇ.ಓ.ಗಳು, ಸಿ.ಆರ್.ಪಿ, ಇ.ಸಿ.ಓ.ಮುಖಾಂತರ ಜರೂರಾಗಿ ನೋಂದಣಿ ಕಾರ್ಯಕ್ರಮವನ್ನು 3 ದಿನದೊಳಗಾಗಿ ಪೂರ್ಣಗೊಳಿಸಲು ಸೂಕ್ತ ಕ್ರಮವಹಿಸುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚನೆ ನೀಡಿದರು ಹಾಗೂ ಎರಡೂ ಜಿಲ್ಲೆಯ ಉಪ ನಿರ್ದೇಶಕರು ಯಾವುದೇ ಕಾರಣವನ್ನು ಹೇಳದಂತೆ ದಿನಾಂಕ: 14.11.2019 ರಂದು ಬೆಳಿಗ್ಗೆ 10.00 ಗಂಟೆಗೆ ಅಪರ ಜಿಲ್ಲಾಧಿಕಾರಿಯವರನ್ನು ಸಂಪರ್ಕಿಸಲು ತಿಳಿಸುವಂತೆ ಸಭೆಗೆ ಹಾಜರಿದ್ದ ಶಿಕ್ಷಣ ಅಧಿಕಾರಿಯವರಿಗೆ ತಿಳಿಸಲಾಯಿತು.

(ಕ್ರಮ: ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆ)

**9. ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ:**

2019-20ನೇ ಸಾಲಿನ ವಿವಿಧ ಯೋಜನೆಗಳ ಪ್ರಗತಿ ಪರಿಶೀಲಿಸಿ, ಅರ್ಜಿಗಳು ಮಾನ್ಯ ಶಾಸಕರುಗಳಿಗೆ ಕಳುಹಿಸಲಾಗಿರುವುದಾಗಿ ಷರಾದಲ್ಲಿ ನಮೂದಿಸಿರುತ್ತಾರೆ. ಅಧಿಕಾರಿಗಳು ಫಲಾನುಭವಿಗಳ ಪಟ್ಟಿಯನ್ನು ಪಡೆದು, ನಿಗಧಿಪಡಿಸಿರುವ ಭೌತಿಕ ಹಾಗೂ ಆರ್ಥಿಕ ಗುರಿಯಂತೆ ಪ್ರಗತಿ ಸಾಧಿಸುವಲ್ಲಿ ವಿಫಲರಾಗಿರುತ್ತಾರೆ. ಇದಕ್ಕೆ ಸಮಜಾಯಿಷಿ ನೀಡುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಿಳಿಸಿದಾಗ, ಜಿಲ್ಲಾ ವ್ಯವಸ್ಥಾಪಕರು ಗೈರು ಹಾಜರಾಗಿದ್ದು, ಪ್ರತಿನಿಧಿಸಿದ್ದ ಅಧಿಕಾರಿಯವರು ಸಮರ್ಪಕ ಮಾಹಿತಿಯನ್ನು ಸಭೆಗೆ ಮಂಡಿಸದ ಕಾರಣ ಗೈರು ಹಾಜರಾಗಿರುವ ಜಿಲ್ಲಾ ವ್ಯವಸ್ಥಾಪಕರಿಗೆ ಕಾರಣ ಕೇಳಿ ನೋಟೀಸು ಜಾರಿ ಮಾಡುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚನೆ ನೀಡಿದರು. ಹಾಗೂ ನಿಗಮದ ಪ್ರಗತಿ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಅಪರ ಜಿಲ್ಲಾಧಿಕಾರಿಗಳು ಪರಿಶೀಲನೆ ಮಾಡುವಂತೆ ಸಹ ತಿಳಿಸಿದರು. ದಿನಾಂಕ: 14.11.2019 ರಂದು ಬೆಳಿಗ್ಗೆ 10.30 ಗಂಟೆಗೆ ಜಿಲ್ಲಾ ವ್ಯವಸ್ಥಾಪಕರು, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಕಛೇರಿಗೆ ಭೇಟಿ ನೀಡುವಂತೆ ತಿಳಿಸಲಾಯಿತು.

(ಕ್ರಮ: ಜಿಲ್ಲಾ ವ್ಯವಸ್ಥಾಪಕರು, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು ನಗರ ಜಿಲ್ಲೆ)

**10. ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ:**

2019-20ನೇ ಸಾಲಿಗೆ ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ ಒಟ್ಟು ಭೌತಿಕ ಗುರಿ 1945 ಆರ್ಥಿಕ ಗುರಿ ರೂ.867.05 ನಿಗಧಿಯಾಗಿದ್ದು, ಇಲ್ಲಿಯವರೆಗೆ ರೂ.808.90 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ತಹಲ್‌ವರೆವಿಗೆ ರೂ.515.83 ಲಕ್ಷ ವೆಚ್ಚವಾಗಿ 1231 ಫಲಾನುಭವಿಗಳು ಸವಲತ್ತುಗಳ ಪ್ರಯೋಜನ ಪಡೆದಿರುವುದನ್ನು ಸಭೆಯು ಪರಿಶೀಲಿಸಿತು. ಇಲ್ಲಿಯವರೆವಿಗೆ ಮಾನ್ಯ ಶಾಸಕರ ಬಳಿ ಬಾಕಿ ಉಳಿದಿರುವ ಅರ್ಜಿಗಳ ಬಗ್ಗೆ ಮಾನ್ಯ ಅಧ್ಯಕ್ಷರು ವಿಚಾರಿಸಲಾಗಿ, ಕೇವಲ 5 ಅರ್ಜಿಗಳು ಮಾತ್ರ ಬಾಕಿ ಇರುವುದಾಗಿ ಇಲಾಖಾ ಅಧಿಕಾರಿಗಳು ಸಭೆಗೆ ತಿಳಿಸಿದರು.

11. ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ:

2019-20ನೇ ಸಾಲಿನ ವಿವಿಧ ಯೋಜನೆಗಳ ಭೌತಿಕ ಹಾಗೂ ಆರ್ಥಿಕ ಗುರಿ ಪ್ರಗತಿ ಶೂನ್ಯವಾಗಿರುವುದನ್ನು ಪರಿಶೀಲಿಸಿ, ಸಭೆಗೆ ಜಿಲ್ಲಾ ವ್ಯವಸ್ಥಾಪಕರು ಗೈರು ಹಾಜರಾಗಿದ್ದು, ಇವರಿಗೆ ನೋಟೀಸು ಜಾರಿ ಮಾಡುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚನೆ ನೀಡಿದರು.

(ಕ್ರಮ: ಅಪರ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ)

**12. ರೇಷ್ಮೆ ಇಲಾಖೆ:**

2019-20ನೇ ಸಾಲಿಗೆ ನಿಗಧಿಯಾಗಿರುವ ಭೌತಿಕ ಗುರಿಗೆದುರಾಗಿ ಇಲ್ಲಿಯವರೆವಿಗೆ ಕೇವಲ ಒಂದು ಭೌತಿಕ ಗುರಿ ಸಾಧಿಸಿರುವ ಪ್ರಗತಿ ಪರಿಶೀಲಿಸಿದಾಗ, ಸರ್ಕಾರದಿಂದ ಅನುದಾನ ಬಿಡುಗಡೆಯಾಗಬೇಕಾಗಿದೆ. ಅನುದಾನ ಬಿಡುಗಡೆಯಾದ ನಂತರ ಮಾರ್ಚ್ 2020 ರೊಳಗೆ ಸಂಪೂರ್ಣವಾಗಿ ಪ್ರಗತಿ ಸಾಧಿಸುವುದಾಗಿ ಇಲಾಖಾ ಅಧಿಕಾರಿಗಳು ಸಭೆಗೆ ತಿಳಿಸಿದರು.

**13. ಮೀನುಗಾರಿಕೆ ಇಲಾಖೆ:**

2019-20ನೇ ಸಾಲಿಗೆ ವಿವಿಧ ಕಾರ್ಯಕ್ರಮಗಳಿಗೆ ನಿಗಧಿಯಾಗಿರುವ ಭೌತಿಕ ಹಾಗೂ ಆರ್ಥಿಕ ಗುರಿಗೆದುರಾಗಿ ಪ್ರಗತಿ ಕಡಿಮೆ ಇರುವ ಬಗ್ಗೆ ಪರಿಶೀಲಿಸಿ, ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ ಹಾಗೂ ಮೀನು ಮಾರುಕಟ್ಟೆ ಮತ್ತು ಮತ್ಸ್ಯವಾಹಿನಿಗೆ ಸಹಾಯಧನ ಪ್ರಗತಿ ಶೂನ್ಯವಾಗಿರುವ ಬಗ್ಗೆ ಪ್ರಶ್ನಿಸಿದಾಗ, ಫಲಾನುಭವಿಗಳ ಆಯ್ಕೆಯಾಗಿದ್ದು, ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ ಪ್ರಸ್ತಾವನೆಗೆ ಅನುಮೋದನೆ ದೊರೆತ ನಂತರ 15 ದಿನದೊಳಗಾಗಿ ಆರ್ಥಿಕ ಪ್ರಗತಿ ಸಾಧಿಸಲಾಗುವುದೆಂದು ಇಲಾಖಾ ಅಧಿಕಾರಿಗಳು ಸಭೆಗೆ ತಿಳಿಸಿದರು.

**14. ಗ್ರಾಮ ವಿಕಾಸ ಯೋಜನೆ:**

ಅಕ್ಟೋಬರ್ 2019ರ ಅಂತ್ಯಕ್ಕೆ ಒಟ್ಟು 19 ಕಾಮಗಾರಿಗಳಿಗೆ ಅನುಮೋದಿತ ಮೊತ್ತ ರೂ.1,875.00 ಲಕ್ಷಗಳಾಗಿದ್ದು, ಈ ಪೈಕಿ ಇಲ್ಲಿಯವರೆವಿಗೆ ಬಿಡುಗಡೆಯಾಗಿರುವ ಮೊತ್ತ ರೂ.1,270.05 ಲಕ್ಷಗಳಾಗಿದ್ದು, ರೂ.1,251.87 ಲಕ್ಷ ವೆಚ್ಚವಾಗಿರುವುದನ್ನು ಸಭೆಯು ಪರಿಶೀಲಿಸಲಾಯಿತು. 2ನೇ ಕಂತಿನ ಅನುದಾನ ಬಿಡುಗಡೆಯಾಗಬೇಕಾಗಿರುವುದಾಗಿ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಬೆಂಗಳೂರು ಜಿಲ್ಲೆಯವರು ಸಭೆಗೆ ತಿಳಿಸಿದರು.

**15. ಮುಖ್ಯ ಮಂತ್ರಿ ಗ್ರಾಮ ವಿಕಾಸ ಯೋಜನೆ:**

ಮುಖ್ಯ ಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ ಸಾಧಿಸಿರುವ ಪ್ರಗತಿಯನ್ನು ಸಭೆಯು ಪರಿಶೀಲಿಸಿ, ಈ ಯೋಜನೆಯಡಿ ಯಾವ ಯಾವ ಕಾರ್ಯಕ್ರಮಗಳನ್ನು ರೂಪಿಸಲಾಗುವುದೆಂದು ಮಾನ್ಯ ಅಧ್ಯಕ್ಷರು ಪ್ರಶ್ನಿಸಿದರು. ಇದಕ್ಕೆ ಕಾರ್ಯಪಾಲಕ ಅಭಿಯಂತರರು ಉತ್ತರಿಸುತ್ತಾ, ಚರಂಡಿ, ರಸ್ತೆ, ದೇವಸ್ಥಾನಗಳ ದುರಸ್ಥಿ, ಗ್ರಂಥಾಲಯ, ಆಟದ ಮೈದಾನ, ವ್ಯಾಯಾಮ ಶಾಲೆ, ಸಮುದಾಯಭವನ ನಿರ್ಮಾಣ ಮಾಡಬಹುದಾಗಿದೆಯೆಂದು ಹಾಗೂ 2ನೇ ಕಂತಿನ ಅನುದಾನ ಬಾಕಿ ಇರುವುದಾಗಿ ತಿಳಿಸಿದರು.

**16. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ:**

2017-18ನೇ ಸಾಲಿನಲ್ಲಿ 1.66 ಲಕ್ಷ ಮಾನವ ದಿನಗಳ ಸೃಜನೆಯಾಗಿದ್ದು, ಇಲ್ಲಿಯವರೆವಿಗೆ 4.45 ಕೋಟಿ ರೂ.ಗಳನ್ನು ವೆಚ್ಚ ಮಾಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿರುವುದನ್ನು ಪರಿಶೀಲಿಸಿ, ಹೆಚ್ಚಿನ ಮಾನವ ದಿನಗಳನ್ನು ಸೃಜನೆ ಮಾಡಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಕಾಮಗಾರಿಗಳನ್ನು ಕೈಗೊಳ್ಳುವಂತೆ ಸೂಚನೆ ನೀಡಿದರು.

(ಕ್ರಮ: ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ ಜಿಲ್ಲೆ ಹಾಗೂ ಬೆಂಗಳೂರು ನಗರ ಜಿಲ್ಲೆಯ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು)

**17. ವಸತಿ ಯೋಜನೆ:**

ವಸತಿ ನಿರ್ಮಾಣ ಮನೆಗಳಿಗೆ ಸಂಬಂಧಿಸಿದಂತೆ 4 ತಾಲ್ಲೂಕುಗಳ ಒಟ್ಟು 2538 ಭೌತಿಕ ಗುರಿಗೆದುರಾಗಿ ಇಲ್ಲಿಯವರೆವಿಗೆ 635 ಮನೆಗಳೂ ಪೂರ್ಣಗೊಂಡಿದ್ದು, 1903 ಮನೆಗಳು ಬಾಕಿ ಇದೆ. ವಿವಿಧ ಹಂತದಲ್ಲಿರುವ ಒಟ್ಟು ಮನೆಗಳು 3211 ಆಗಿದ್ದು, 408 ಮನೆಗಳು ಇನ್ನೂ ಪ್ರಾರಂಭವಾಗಬೇಕಾಗಿದೆ ಜಿ.ಪಿ.ಎಸ್. ಆಗಿದ್ದು, ಅನುದಾನ ಬಿಡುಗಡೆಯಾಗಿವುದಿಲ್ಲವೆಂದು ಯೋಜನಾ ನಿರ್ದೇಶಕರು ಸಭೆಗೆ ತಿಳಿಸಿದರು. ಅನುದಾನ ಬಿಡುಗಡೆಗೆ ಸೂಕ್ತ ಕ್ರಮಕೈಗೊಳ್ಳುವಂತೆ ಮಾನ್ಯ ಅಧ್ಯಕ್ಷರು ಸೂಚನೆ ನೀಡಿದರು.

(ಕ್ರಮ: ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ ಜಿಲ್ಲೆ)

ಉದ್ಯೋಗ ಮತ್ತು ಕೌಶಲ್ಯಾಭಿವೃದ್ಧಿ ಇಲಾಖೆಯವರು ಸಭೆಗೆ ಗೈರು ಹಾಜರಾಗಿದ್ದು, ಪ್ರಗತಿ ಪರಿಶೀಲನೆ ಮಾಡುವಂತೆ ಅಪರ ಜಿಲ್ಲಾಧಿಕಾರಿಗಳಿಗೆ ತಿಳಿಸಿದರು.

**18. ವಿಕಲಚೇತನಾ ಇಲಾಖೆ:**

ಬೆಂಗಳೂರು ನಗರ ಜಿಲ್ಲೆಯಲ್ಲಿರುವ ವೈದ್ಯಕೀಯ ಮಂಡಳಿಗಳು ವಿಕಲಚೇತನರಿಗೆ ಯು.ಡಿ.ಐ.ಡಿ. (ವಿಕಲಚೇತನರ ವಿಶಿಷ್ಠ ಗುರುತಿನ ಚೀಟಿ) ನೀಡುವಲ್ಲಿ ವಿಳಂಬವಾಗುತ್ತಿದ್ದು, ಈ ಬಗ್ಗೆ ಇಲಾಖೆಯವರಿಗೆ ಸೂಕ್ತ ನಿರ್ದೇಶನ ನೀಡಬೇಕಾಗಿ ಇಲಾಖಾ ಅಧಿಕಾರಿಗಳು ಮಾನ್ಯ ಅಧ್ಯಕ್ಷರಲ್ಲಿ ಮನವಿ ಮಾಡಿಕೊಂಡರು. ಇದಕ್ಕೆ ಮಾನ್ಯ ಅಧ್ಯಕ್ಷರು ಅಪರ ಜಿಲ್ಲಾಧಿಕಾರಿಗಳಿಗೆ ಎಲ್ಲಾ ವೈದ್ಯಕೀಯ ಮಂಡಳಿಗಳ ಅಧ್ಯಕ್ಷರ ಸಭೆಯನ್ನು ಕರೆದು ಈ ಸಮಸ್ಯೆಯನ್ನು ಬಗೆಹರಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಿದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಈ ಪ್ರಕ್ರಿಯೆಯಲ್ಲಿ ಸಹಕರಿಸುವಂತೆ ತಿಳಿಸಲಾಯಿತು.

(ಕ್ರಮ: ಅಪರ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ

**19. ಕಂದಾಯ ಇಲಾಖೆ:**

**ಅ) ಪಿಂಚಣಿ ಅದಾಲತ್ತು:**

ಬೆಂಗಳೂರು ನಗರ ಜಿಲ್ಲೆಯಲ್ಲಿ 2019-20ನೇ ಸಾಲಿನಲ್ಲಿ 31.10.2019ರ ಮಾಹೆಯ ಅಂತ್ಯಕ್ಕೆ ಒಟ್ಟು 25 ಪಿಂಚಣಿ ಅದಾಲತ್ತನ್ನು ನಡೆದಿದ್ದು, ಒಟ್ಟು 1875 ಅರ್ಜಿಗಳು ಸ್ವೀಕೃತಿಯಾಗಿ ಪೂರ್ಣವಾಗಿ ಅರ್ಜಿಗಳೂ ವಿಲೇವಾರಿಯಾಗಿರುವುದನ್ನು ಸಭೆಯು ಪರಿಶೀಲಿಸಿತು.

**ಆ)ಸಾಮಾಜಿಕ ಭದ್ರತಾ ಯೋಜನೆಗಳು:**

ಬೆಂಗಳೂರು ನಗರ ಜಿಲ್ಲೆಯಲ್ಲಿ ಅಕ್ಟೋಬರ್ 2019ರ ಅಂತ್ಯಕ್ಕೆ ವೃದ್ಯಾಪ್ಯ ವೇತನ, ವಿಧವಾ ವೇತನ, ಅಂಗವಿಕಲ ವೇತನ, ಸಂಧ್ಯಾ ಸುರಕ್ಷ, ಮನಸ್ವಿನಿ ಹಾಗೂ ಮೈತ್ರಿ ಯೋಜನೆಯಡಿ ಸಾಧಿಸಲಾದ ಪ್ರಗತಿಯನ್ನು ಈ ಕೆಳಕಂಡಂತೆ ಪರಿಶೀಲಿಸಲಾಯಿತು.

| ಕಾರ್ಯಕ್ರಮ | ಸ್ವೀಕೃತಿ | ಮಂಜೂರಾತಿ | ತಿರಸ್ಕೃತ | ಬಾಕಿ |
|---|---|---|---|---|
| ವೃದ್ಧಾಪ್ಯ ವೇತನ | 2205 | 1027 | 364 | 814 |
| ವಿಧವಾ ವೇತನ | 1755 | 722 | 252 | 781 |
| ಅಂಗವಿಕಲ ವೇತನ | 844 | 201 | 61 | 582 |
| ಸಂಧ್ಯಾ ಸುರಕ್ಷಾ | 3342 | 944 | 460 | 1938 |
| ಮನಸ್ವಿನಿ | 2655 | 1580 | 270 | 805 |
| ಮೈತ್ರಿ | 114 | 33 | 15 | 66 |
| ಒಟ್ಟು | 10915 | 4507 | 1422 | 4986 |

ವಿವಿಧ ಯೋಜನೆಗಳಡಿ ಜಿಲ್ಲೆಯಲ್ಲಿ ಬಾಕಿ ಇರುವ 4986 ಅರ್ಜಿಗಳ ಬಗ್ಗೆ ಪರಿಶೀಲಿಸಿ, ಸಂಧ್ಯ ಸುರಕ್ಷಾ ಯೋಜನೆಯಡಿ ಹೆಚ್ಚಿನ ಅರ್ಜಿಗಳು ಬಾಕಿ ಇರುವ ಬಗ್ಗೆ ಪ್ರಶ್ನಿಸಿದಾಗ, ಗ್ರಾಮ ಸೇವಕ, ಗ್ರಾಮ ಲೆಕ್ಕಾಧಿಕಾರಿ, ರಾಜಸ್ವ ನಿರೀಕ್ಷಕರ ಹುದ್ದೆಗಳು ಮಂಜೂರಾತಿ ಹುದ್ದೆಗಿಂತ ಕಡಿಮೆ ಇದ್ದು, ಬೆಂಗಳೂರು ನಗರ ಜಿಲ್ಲೆಯಲ್ಲಿ ಹೆಚ್ಚಿನ ಜನಸಂಖ್ಯೆ ಹಾಗೂ ವಲಸೆ ಬಂದ ಜನರ ಸಂಖ್ಯೆ ಜಾಸ್ತಿ ಇರುವುದರಿಂದ ಕಷ್ಟವಾಗುತ್ತಿದೆಯೆಂದು ಕಂದಾಯ ಇಲಾಖಾ ಅಧಿಕಾರಿಗಳು ಸಭೆಗೆ ತಿಳಿಸಿದರು. ಈ ಬಗ್ಗೆ ಒಂದು ಪ್ರಸ್ತಾವನೆಯನ್ನು ಕಂದಾಯ ಇಲಾಖೆಯ ಪ್ರಧಾನ ಕಾಯದರ್ಶಿಯವರಿಗೆ ಸಲ್ಲಿಸುವಂತೆ ಅಪರ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಯಿತು. ಬೆಂಗಳೂರು ಉತ್ತರ ಮತ್ತು ಯಲಹಂಕ ತಾಲ್ಲೂಕು ಕಛೇರಿಯ ಪ್ರಗತಿ ವರದಿ ಕುಂಠಿತವಾಗಿದ್ದು, ಹೆಚ್ಚಿನ ಪ್ರಗತಿ ಸಾಧಿಸುವಂತೆ ಕ್ರಮವಹಿಸಲು

ರಾಷ್ಟ್ರೀಯ ಕುಟುಂಬ ನೆರವು ಯೋಜನೆಯಡಿ ಅಕ್ಟೋಬರ್ 2019ರ ಅಂತ್ಯಕ್ಕೆ 1134 ಅರ್ಜಿಗಳು ಬಾಕಿ ಇದ್ದು, ಇವುಗಳ ವಿಲೇವಾರಿಗೆ ಕಾನೂನು ರೀತ್ಯಾ ಅಗತ್ಯ ಕ್ರಮವಹಿಸುವಂತೆ ತಿಳಿಸಲಾಯಿತು. ಮುಂದುವರೆದು, ಅಂತ್ಯ ಸಂಸ್ಕಾರ ಯೋಜನೆಯಡಿ ರೂ.2.55 ಲಕ್ಷ ಉಳಿಕೆಯಾಗಿರುವುದನ್ನು ಅರ್ಹ ಫಲಾನುಭವಿಗಳಿಗೆ ಆದ್ಯತೆ ಮೇಲೆ ವಿತರಣೆ ಮಾಡಲು ಸೂಚನೆ ನೀಡಲಾಯಿತು.

(ಕ್ರಮ: ಉಪ ವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ/ದಕ್ಷಿಣ ಉಪ ವಿಭಾಗ, ಬೆಂಗಳೂರು ಜಿಲ್ಲೆ)

**20.ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ:**

ಅನ್ನಭಾಗ್ಯ ಯೋಜನೆಯಡಿ ಒಟ್ಟು 523101 ಪಡಿತರ ಚೀಟಿಗಳಿದ್ದು, ಒಟ್ಟು 550 ನ್ಯಾಯಬೆಲೆ ಅಂಗಡಿಗಳು ಕಾರ್ಯನಿರ್ವಹಿಸುತ್ತಿವೆ. ಹೊಸ ಪಡಿತರ ಚೀಟಿ ಅರ್ಜಿಗಳ ಪೈಕಿ 2018-19ನೇ ಸಾಲಿಗೆ ಆನ್‌ಲೈನ್ ಮುಖಾಂತರ 13681 ಅರ್ಜಿಗಳು ಸ್ವೀಕೃತಿಯಾಗಿದ್ದು, ಇಲ್ಲಿಯವರೆವಿಗೆ 7864 ಅರ್ಜಿಗಳು ವಿಲೇವಾರಿಯಾಗಿ ಬಾಕಿ 5817 ಅರ್ಜಿಗಳು ಬಾಕಿ ಇರುವುದನ್ನು ಸಭೆಯು ಪರಿಶೀಲಿಸಿ ಬಾಕಿ ಇರುವ ಅರ್ಜಿಗಳಿಗೆ ತೆಗೆದುಕೊಂಡ ಕ್ರಮದ ಬಗ್ಗೆ ವಿಚಾರಿಸಲಾಗಿ ಕಾರ್ಯನಿರ್ವಾಹಕ ಸಿಬ್ಬಂದಿಗೆ ಅರ್ಜಿಗಳನ್ನು ಆದ್ಯತೆಯ ಮೇರೆಗೆ ಶೀಘ್ರವಾಗಿ ವಿಲೇವಾರಿ ಮಾಡಲು ತಿಳಿಸಲಾಗಿದೆಯೆಂದು ಇಲಾಖಾ ಅಧಿಕಾರಿಗಳು ಸಭೆಗೆ ತಿಳಿಸಿದರು. ಆಹಾರ ನಿರೀಕ್ಷಕರು ಬಂದಂತಹ 5839 ಅರ್ಜಿಗಳನ್ನು ಹಾಗೂ 11188 ಪಡಿತರ ಚೀಟಿಗಳನ್ನು ಅನರ್ಹ ಅರ್ಜಿ ಹಾಗೂ ಪಡಿತರ ಚೀಟಿಗಳೆಂದು ಪರಿಶೀಲನೆ ಮಾಡಿ ವಜಾ ಮಾಡಲಾಗಿರುವುದಾಗಿ ವಿವರಿಸಿದರು. ಮುಂದುವರೆದು, ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಹೊಸದಾಗಿ ಪಡಿತರ ಅಂಗಡಿಗಳಿಗೆ ಅನುಮೋದನೆ ಕೊಡುತ್ತಿರುವ ಬಗ್ಗೆ ವಿಚಾರಿಸಲಾಗಿ, ಮಂಜೂರು ಮಾಡುತ್ತಿರುವುದಾಗಿ ಅಧಿಕಾರಿಗಳು ತಿಳಿಸಿದರು.

2019 ರ ಏಪ್ರಿಲ್ ಮಾಹೆಯಿಂದ ತಹಲ್‌ವರೆವಿಗೆ ಸಕಾಲ ಅಡಿ ಬೆಂಗಳೂರು ನಗರ ಜಿಲ್ಲೆಯ ಒಟ್ಟು 5 ತಾಲ್ಲೂಕುಗಳಿಗೆ ಸಂಬಂಧಿಸಿದಂತೆ 31056 ಅರ್ಜಿಗಳು ಸ್ವೀಕೃತಿಯಾಗಿ ಎಲ್ಲಾ ಅರ್ಜಿಗಳು ವಿಲೇಯಾಗಿರುವುದನ್ನು ಸಭೆಯು ಪರಿಶೀಲಿಸಿತು.

**ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.**

**(ಅಂಜುಮ್ ಪರ್ವೇಜ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ ಹಾಗೂ ಬೆಂಗಳೂರು ನಗರ
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಬೆಂಗಳೂರು ಜಿಲ್ಲೆ.

**ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಇವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ದಿ:25-11-2019ರಂದು ಮಧ್ಯಾಹ್ನ1.30 ಗಂಟೆಗೆ ಜರುಗಿದ ಪ್ರಗತಿ ಪರಿಶೀಲನೆ ಸಭೆಯ ನಡವಳಿಗಳು**

**ಹಾಜರಿದ್ದವರು**:- ಹಾಜರಾತಿ ಲಗತ್ತಿಸಿದೆ

ಪ್ರಾರಂಭದಲ್ಲಿ ಜಿಲ್ಲಾಧಿಕಾರಿಗಳು, ಮಾನ್ಯ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ಸಭೆಯ ಅಧ್ಯಕ್ಷತೆ ವಹಿಸುವಂತೆ ಕೋರಿ, ಉಪಸ್ಥಿತರಿದ್ದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಹಾಜರಿದ್ದ ಎಲ್ಲಾ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳನ್ನು ಸ್ವಾಗತಿಸುವುದರೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

**ಪ್ರವಾಹದಿಂದ ಹಾನಿಯಾದ ಮನೆಗಳ ಕಾಮಗಾರಿಯನ್ನು ಪ್ರಾರಂಭಿಸುವ ಕುರಿತು**:-

ಕಳೆದ ಆಗಷ್ಟ-2019ರಲ್ಲಿ ಗದಗ ಜಿಲ್ಲೆಯಲ್ಲಿ ಮಲಪ್ರಭಾ ನದಿ ಹಾಗೂ ಬೆಣ್ಣಿಹಳ್ಳದ ಪ್ರವಾಹದಿಂದ ನರಗುಂದ ತಾಲೂಕಿನ 16 ಗ್ರಾಮಗಳು ಹಾಗೂ ರೋಣ ತಾಲೂಕಿನ 16 ಗ್ರಾಮಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಾನಿಸಂಭವಿಸಿರುತ್ತದೆ. ಪ್ರವಾಹದಿಂದ ಹಾನಿಯಾದ ಮನೆಗಳನ್ನು ಅಧಿಕಾರಿಗಳಿಂದ ಸರ್ವೆನಡೆಸಿ 3 ವರ್ಗಗಳಲ್ಲಿ ವಿಂಗಡಿಸಲಾಗಿದೆ. ಪೂರ್ತಿಬಿದ್ದ ಹಾಗೂ ಶೇಕಡಾ 75ರಮೇಲ್ಪಟ್ಟು ಹಾನಿಯಾದ ಎ ವಿಭಾಗದಲ್ಲಿಒಟ್ಟು 365 ಮನೆಗಳಿದ್ದು, ಶೇಕಡಾ 25ರಿಂದ 75ರವರೆಗೆ ಹಾನಿಯಾದ ಬಿವಿ ಭಾಗದಲ್ಲಿ ಒಟ್ಟು 735 ಮನೆಗಳು ಹಾಗೂ ಶೇಕಡಾ 15ರಿಂದ 25ರವರೆಗೆ ಹಾನಿಯಾದ ಸಿವಿ ಭಾಗದಲ್ಲಿ ಒಟ್ಟು 1429 ಮನೆಗಳು ಸೇರಿದಂತೆ ಒಟ್ಟು 2529 ಮನೆಗಳ ಹಾನಿ ಆಗಿವೆ. ಇದರಲ್ಲಿ ಎ ಹಾಗೂ ಬಿ ವಿಭಾಗದ ಮನೆ ಹಾನಿ ಪರಿಹಾರ ರಾಜೀವ ಗಾಂಧಿ ವಸತಿ ನಿಗಮ ವಿತರಿಸಲಿದ್ದು, ಸಿವಿ ಭಾಗದ ಮನೆ ಹಾನಿಯನ್ನು ತಹಶೀಲ್ದಾರರುಗಳ ಮೂಲಕ ಸರ್ಕಾರದ ನಿರ್ದೇಶನದಂತೆ ವಿತರಣೆಗೆ ಕ್ರಮ ಜರುಗಿಸಲಾಗಿದೆ. ಎ ಮತ್ತು ಬಿ ವರ್ಗದಲ್ಲಿ ಬರುವ ಮನೆಗಳನ್ನು ಫಲಾನುಭವಿಗಳು ಕಟ್ಟಿಕೊಳ್ಳಲು ಪ್ರಾರಂಭಮಾಡುವಂತೆ ಮಾನ್ಯ ವಸತಿಸಚಿವರು ಈ ಹಿಂದೆ ಜರುಗಿದ ಸಭೆಯಲ್ಲಿ ನಿರ್ದೇಶನ ನೀಡಿದ್ದರ ಮೇರೆಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಮೂಲಕ ಮನೆಗಳ ಕಾಮಗಾರಿ ಪ್ರಾರಂಭಿಸಲು ಸೂಚಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

**2) ನಗರ ಹಾಗೂ ಗ್ರಾಮೀಣ ಪ್ರದೇಶದ ವಸತಿ ಯೋಜನೆ**:-

ಗದಗ ಜಿಲ್ಲೆಯಲ್ಲಿ 1 ನಗರಸಭೆ, 5 ಪುರಸಭೆ ಹಾಗೂ 3 ಪಟ್ಟಣ ಪಂಚಾಯತಿಗಳಿದ್ದು, ಮುಖ್ಯಮಂತ್ರಿಗಳ ಬಹುಮಹಡಿ ಕಟ್ಟಡಗಳ ನಿರ್ಮಾಣ ಯೋಜನೆ ಅಡಿ ಗದಗ-ಬೆಟಗೇರಿ ನಗರಸಭೆ ವ್ಯಾಪ್ತಿಯಲ್ಲಿ 21.13 ಎಕರೆ ಹಾಗೂ 51.27 ಎಕರೆ ಪ್ರದೇಶದಲ್ಲಿ ಒಟ್ಟು 3630 ಮನೆಗಳ ಕಾಮಗಾರಿ ಪ್ರಗತಿಯಲ್ಲಿದ್ದು ಫೌಂಡೇಷನ್ಹಂತದಲ್ಲಿ 694 ಪ್ಲಿಂತ್ಹಂತದಲ್ಲಿ 2024 ರೂಫ್ಹಂತ-908 ಪೂರ್ಣ-4 ಮನೆಗಳಿದ್ದು 3630 ಫಲಾನುಭವಿಗಳನ್ನು ಆಯ್ಕೆ ಮಾಡಿರುವುದಾಗಿ ಹಾಗೂ ಲಿಡಕಯೋಜನೆಯಡಿ 229 ಮನೆಗಳು ಪ್ರಗತಿಯಲ್ಲಿದೆ. ಪೌರಕಾರ್ಮಿಕರ ಗೃಹಭಾಗ್ಯ ಯೋಜನೆಯಡಿ 135 ಫಲಾನುಭವಿಗಳನ್ನು ಆಯ್ಕೆಮಾಡಿ

ಆಡಳಿತಾತ್ಮಕ ಅನುಮೋದನೆಗಾಗಿ ನಗರಾಭಿವೃದ್ಧಿ ಇಲಾಖೆಗೆ ಕಳುಹಿಸಲಾಗಿದೆ. ಇನ್ನುಳಿದ ಪುರಸಭೆ ಹಾಗೂ ಪಟ್ಟಣ ಪಂಚಾಯತಗಳಲ್ಲಿ ಜಿ+1, ಜಿ+2 ಮನೆಗಳ ಕಾಮಗಾರಿಗೆ ಸಿ.ಎಸ್.ಎಂ.ಸಿ.ಯಿಂದ ಅನುಮೋದನೆಯಾಗಿವೆ. ಗುಂಪುಮನೆಗಳ ಯೋಜನೆಯಡಿ ಜಿಲ್ಲೆಯಲ್ಲಿ ಒಟ್ಟು 471ಎ.16 ಗುಂ. ಜಮೀನಿನಲ್ಲಿ 11060 ಫಲಾನುಭವಿಗಳನ್ನು ಆಯ್ಕೆ ಮಾಡಿರುವುದಾಗಿ ಕಾಮಗಾರಿ ಪ್ರಗತಿಯಲ್ಲಿರುವುದಾಗಿ ಯೋಜನಾ ನಿರ್ದೇಶಕರು. ಜಿಲ್ಲಾನಗರಾಭಿವೃದ್ಧಿ ಕೋಶ ಗದಗರವರು ಸಭೆಗೆ ಮಾಹಿತಿ ನೀಡಿದರು.

ಗ್ರಾಮೀಣ ಪ್ರದೇಶಕ್ಕೆ ಸಂಬಂಧಿಸಿ 1-4-2018ರಿಂದ 31-10-2019 ವರೆಗೆ ಎಲ್ಲಾ ಯೋಜನೆಗಳಡಿ 8484 ವಾರ್ಷಿಕ ಗುರಿಗೆ 2803 ಮನೆಗಳಿಗೆ ಅನುಮೋದನೆಯಾಗಿ 5602 ಪೂರ್ಣಗೊಂಡ ಮನೆಗಳಿದ್ದು 13368 ಪ್ರಗತಿಯಲ್ಲಿರುವ ಮನೆಗಳು 6861 ಇನ್ನು ಪ್ರಾರಂಭಿಸಬೇಕಾಗಿರುವ ಮನೆಗಳಿದ್ದು ಪ್ರತಿಶತ 66 ರಷ್ಟು ಪ್ರಗತಿಯಾಗಿರುವುದಾಗಿ ಯೋಜನಾ ನಿರ್ದೇಶಕರು. ಜಿಲ್ಲಾಪಂಚಾಯತ. ಗದಗರವರು ಸಭೆಗೆ ಮಾಹಿತಿ ನೀಡಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ. ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವಸತಿ ಹಾಗೂ ನಿವೇಶನಗಳಿಗಾಗಿ ಜನರ ಬೇಡಿಕೆ ಇದ್ದು, ಅರ್ಹ ಫಲಾನುಭವಿಗಳನ್ನು ಗುರುತಿಸಿ ತ್ವರಿತ ಗತಿಯಲ್ಲಿ ವಸತಿ ಹಾಗೂ ನಿವೇಶನಗಳನ್ನು ಒದಗಿಸುವುದು ಅಧಿಕಾರಿಗಳ ಜವಾಬ್ದಾರಿಯಾಗಿದ್ದು ನಿಗದಿಪಡಿಸಿದ ಅವಧಿಯೊಳಗೆ ಗುಣಮಟ್ಟದ ಮನೆಗಳನ್ನು ಪೂರ್ಣಗೊಳಿಸಿ ಆಯ್ಕೆಯಾದ ಫಲಾನುಭವಿಗಳಿಗೆ ಹಕ್ಕುಪತ್ರಗಳೊಂದಿಗೆ ಮನೆಗಳನ್ನು ಒದಗಿಸುವುದರೊಂದಿಗೆ ಸರ್ಕಾರದ ಯೋಜನೆಗಳ ಸಂಪೂರ್ಣ ಪ್ರಯೋಜನವನ್ನು ಹೊಂದಲು ಸಂಬಂಧಪಟ್ಟ ಅಧಿಕಾರಿಗಳು ಬದ್ಧತೆಯೊಂದಿಗೆ ಕೆಲಸನಿರ್ವಹಿಸಲು ಸೂಚಿಸಿದರು
(**ಕ್ರಮ: ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಗದಗ/ಯೋಜನಾ ನಿರ್ದೇಶಕರು, ಜಿಲ್ಲಾಪಂಚಾಯತ, ಗದಗ**)

**3) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ:-**

ಮಕ್ಕಳು ಜನನದ ಅವಧಿಯಿಂದ ನಿರ್ಧಿಷ್ಟ ಅವಧಿಯವರೆಗೆ ಭವಿಷ್ಯದಲ್ಲಿ ಮಾರಕ ರೋಗಗಳು ಬರದಂತೆ ತಡೆಯಲು ಹಲವಾರು ಲಸಿಕಾ ಕಾರ್ಯಕ್ರಮಗಳಿದ್ದು ಜಿಲ್ಲೆಯಲ್ಲಿ ಪೂರ್ಣ ಪ್ರಗತಿ ಸಾಧಿಸಲಾಗಿದೆ ಯಾವುದೇ ಸಮಸ್ಯೆ ಇರುವುದಿಲ್ಲವೆಂದು ಜಿಲ್ಲಾ ಆರೋಗ್ಯಾಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ. ನಗರ ಪ್ರದೇಶಗಳಿಗೆ ಸಂಬಂಧಿಸಿದ ಪೋಷಕರು ಮಕ್ಕಳಿಗೆ ನಿಗದಿಪಡಿಸಿದ ಅವಧಿಯಂತೆ ಲಸಿಕೆಗಳನ್ನು ಕೊಡಿಸುತ್ತಿದ್ದು, ಗ್ರಾಮೀಣಪ್ರದೇಶದಲ್ಲಿ ಮಕ್ಕಳಿಗೆ ಲಸಿಕೆಗಳನ್ನು ಕೊಡುವ ಬಗ್ಗೆ ತಿಳುವಳಿಕೆ ಇಲ್ಲದ ಕಾರಣ ಆರೋಗ್ಯ ಇಲಾಖೆಯೊಂದಿಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ಯಾವುದೇ ಮಕ್ಕಳು ಲಸಿಕೆಗಳಿಂದ ವಂಚಿತರಾಗದಂತೆ ನಿರ್ಧಿಷ್ಟ ಅವಧಿಯಲ್ಲಿ ಎಲ್ಲ ಮಕ್ಕಳಿಗೆ ಲಸಿಕೆಗಳನ್ನು ಹಾಕಲು ಜಿಲ್ಲಾ ಆರೋಗ್ಯಾಧಿಕಾರಿಗಳು ಮೇಲ್ಕಂಡ ಇಲಾಖೆಯೊಂದಿಗೆ ನಿಯಮಿತವಾಗಿ ಸಭೆಗಳನ್ನು ನಡೆಸಿ ನಿಗದಿಪಡಿಸಿದ ಗುರಿಯನ್ನು ಸಾಧಿಸಲು ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು.

ಜಿಲ್ಲೆಯಲ್ಲಿ ಶಿಶುಮರಣ ಪ್ರಮಾಣವನ್ನು ಇನ್ನಷ್ಟು ಕಡಿಮೆಗೊಳಿಸುವ ನಿಟ್ಟಿನಲ್ಲಿ ಆರೋಗ್ಯ ಇಲಾಖೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಶಿಕ್ಷಣ ಇಲಾಖೆ ಸಹಯೋಗದೊಂದಿಗೆ ವಲಸೆ ಹೋಗುವ ಉದ್ಯೋಗ ಸ್ಥತಾಯಂದಿರ ಚಲನವಲನ ಮೇಲೆ ನಿಗಾವಹಿಸಿ ಅಗತ್ಯದ ಸೌಲಭ್ಯಗಳು ತಾಯಿ ಮಗುವಿಗೆ ದೊರಕುವಂತೆ ಕ್ರಮವಹಿಸುವಂತೆ ಸೂಚಿಸಿದರು.

(ಕ್ರಮ: **ಜಿಲ್ಲಾ ಆರೋಗ್ಯಾಧಿಕಾರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಗದಗ/ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗದದ/ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಗದಗ**)

4) **ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಆಧಾರ ಸಂಖ್ಯೆ ಜೋಡಣೆ:-**

ವಿವಿಧ ಸಾಮಾಜಿಕ ಮಾಸಿಕ ಪಿಂಚಣಿ ಯೋಜನೆಯಡಿ ಒಟ್ಟು 1,41,968. ಫಲಾನು-ಭವಿಗಳು ಮಾಸಿಕ ಪಿಂಚಣಿ ಪಡೆಯುತ್ತಿದ್ದು, ಇದರಲ್ಲಿ 1,24,505 ಫಲಾನುಭವಿಗಳ ಆಧಾರ ಸಂಖ್ಯೆ ಜೋಡಣೆಯಾಗಿದ್ದು, ಇನ್ನು 17,463 ಫಲಾನುಭವಿಗಳ ಆಧಾರ ಜೋಡಣೆ ಬಾಕಿ ಇದ್ದು ಶೇಕಡಾ 87.70ರಷ್ಟು ಪ್ರಗತಿಯಾಗಿರುವುದಾಗಿ ಜಿಲ್ಲಾಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ, ಸಾಮಾಜಿಕ ಭದ್ರತಾ ಯೋಜನೆಯ ಆಧಾರ ಜೋಡಣೆಯ ಪ್ರಗತಿ ಪರಿಶೀಲಿಸಲಾಗಿ ನರಗುಂದ ತಾಲೂಕು ಶೇಕಡಾ 99.99ರಷ್ಟು ಸಾಧನೆಯಾಗಿದ್ದು ಪ್ರಶಂಸನೀಯ. ಗದಗ ತಾಲೂಕಿನಲ್ಲಿ ಶೇಕಡಾ 79.06ರಷ್ಟು ಮಾತ್ರ ಪ್ರಗತಿಯಾಗಿದ್ದು ಆಧಾರ ಜೋಡಣೆ ಪ್ರಮುಖ ಕಾರ್ಯವಾಗಿರುವುದರಿಂದ ಬಾಕಿ ಇರುವ ತಾಲೂಕುಗಳಲ್ಲಿ ಪೂರ್ಣಪ್ರಗತಿ ಸಾಧಿಸಿ ಬ್ಯಾಂಕುಗಳಿಂದ ಮಾತ್ರ ಮಾಸಿಕ ಪಿಂಚಣಿ ಪಡೆಯಲು ತಹಶೀಲ್ದಾರರು ಸೂಕ್ತಕ್ರಮ ಕೈಗೊಳ್ಳುವುದು. ಮರಣ ಹೊಂದಿದ ಹಾಗೂ ಒಂದಕ್ಕಿಂತ ಹೆಚ್ಚು ಯೋಜನೆಗಳಡಿ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳನ್ನು ಗುರುತಿಸಿ ಪಟ್ಟಿಯಿಂದ ಕೈಬಿಡುವುದು ಪ್ರಮುಖ ಕೆಲಸವಾಗಿದ್ದು, ತಹಶೀಲ್ದಾರರು ಸಂಬಂಧಪಟ್ಟ ಗ್ರಾಮಲೆಕ್ಕಾಧಿಕಾರಿಗಳಿಂದ ಹಾಗೂ ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳಿಂದ ಮರಣಹೊಂದಿದ ಫಲಾನುಭವಿಗಳ ದಾಖಲೆಗಳನ್ನು ವಿಳಂಬ ಮಾಡದೇ ತಹಶೀಲ್ದಾರರಿಗೆ ಒದಗಿಸಬೇಕು. ಮಾಶಾಸನ ಫಲಾನುಭವಿಗಳು ಜೀವಂತವಾಗಿರುವ ಗ್ರಾಮ ಲೆಕ್ಕಾಧಿಕಾರಿಗಳಿಂದ ಹಾಗೂ ಮುಖ್ಯಾಧಿಕಾರಿಗಳಿಂದ ವಾರ್ಷಿಕವಾಗಿ ವರದಿ ಪಡೆದುಕೊಳ್ಳುವಂತೆ ಸೂಚಿಸಿದರು.

(ಕ್ರಮ: **ಎಲ್ಲ ತಹಶೀಲ್ದಾರರು, ಗದಗಜಿಲ್ಲೆ/ಪೌರಾಯುಕ್ತರು, ಗದಗ ಬೆಟಗೇರಿ ನಗರಸಭೆ/ಎಲ್ಲ ಮುಖ್ಯಾಧಿಕಾರಿಗಳು, ಪುರಸಭೆ, ಪಟ್ಟಣ ಪಂಚಾಯತ, ಗದಗ ಜಿಲ್ಲೆ**)

5) **ಪ್ರವಾಹ ಪೀಡಿತ ತಾಲೂಕುಗಳಲ್ಲಿ ಮೂಲಭೂತ ಸೌಕರ್ಯಗಳ ಕಾಮಗಾರಿ ವಿವರ:-**

ಪ್ರವಾಹ ಪೀಡಿತ ಗ್ರಾಮಗಳಲ್ಲಿ 281 ಶಾಲೆಗಳ 770 ಕೊಠಡಿಗಳ ದುರಸ್ತಿಗಾಗಿ ರೂ.1656.50 ಲಕ್ಷ ಕ್ರಿಯಾಯೋಜನೆ ಅನುಮೋದಿಸಿ ಸಂಬಂಧಪಟ್ಟ ಎಸ್.ಡಿ.ಎಂ.ಸಿ.ಯವರಿಗೆ ಕಾಮಗಾರಿಯನ್ನು ವಹಿಸಲಾಗಿದೆ.. 67 ಅಂಗನವಾಡಿ ಕಟ್ಟಡಗಳ ದುರಸ್ತಿಗಾಗಿ ರೂ.91.66 ಲಕ್ಷದಲ್ಲಿ 73.33 ಲಕ್ಷ ಅನುದಾನ ಬಿಡುಗಡೆಯಾಗಿ ನಿರ್ಮಿತಿ ಕೇಂದ್ರ, ಗದಗರವರಿಗೆ ಕಾಮಗಾರಿ ವಹಿಸಲಾಗಿದೆ. ಕುಡಿಯುವ ನೀರಿನ 31 ಕಾಮಗಾರಿಗಳಿಗೆ ರೂ.28.70 ಲಕ್ಷಗಳ ಕ್ರಿಯಾಯೋಜನೆಗೆ ಗ್ರಾಮೀಣ ಕುಡಿಯುವ ನೀರು ಸರಬರಾಜು ಹಾಗೂ 449.08 ಲಕ್ಷ ಮೊತ್ತದ

281 ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದಿಸಿ ,ಪಂಚಾಯತರಾಜ್ ಇಂಜನೀಯರಿಂಗ ಇಲಾಖೆಗೆ ವಹಿಸಲಾಗಿದೆಯೆಂದು ಜಿಲ್ಲಾಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಮಾನ್ಯ ಅಧ್ಯಕ್ಷರು ಪ್ರವಾಹ ಪೀಡಿತ ಗ್ರಾಮಗಳಲ್ಲಿ ಕೈಗೊಂಡಿರುವ ಮೂಲಭೂತ ಸೌಕರ್ಯಗಳ ಕಾಮಗಾರಿಗಳನ್ನು ಗುಣಮಟ್ಟದ ಕಾಮಗಾರಿಗಳನ್ನು ನಿರ್ವಹಿಸುವುದರೊಂದಿಗೆ ನಿಯಮಿತ ಅವಧಿಯಲ್ಲಿ ಪೂರ್ಣಗೊಳಿಸಲು ಅನುಷ್ಠಾನಾಧಿಕಾರಿಗಳು ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು. ನೆರೆ ಸಂದರ್ಭಿತ ಅಂಗನವಾಡಿ ಕಟ್ಟಡ, ಶಾಲಾ ಕೊಠಡಿಗಳ ದುರಸ್ತಿ ಕಟ್ಟಡ ನಿರ್ಮಾಣ ವಿವಿಧ ಹಂತಗಳ ಛಾಯಾಚಿತ್ರಗಳನ್ನು ಕ್ರಮಬದ್ಧವಾಗಿ ದಾಖಲಾತಿ ರೂಪದಲ್ಲಿ ಇಡುವಂತೆ ಸೂಚಿಸಲಾಯಿತು.

(**ಕ್ರಮ: ಕಾರ್ಯನಿರ್ವಾಹಕ ಇಂಜನೀಯರ, ಪಂ. ರಾ. ಇಂ. ವಿಭಾಗ ಗದಗ/ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗದಗ/ಯೋಜನಾ ನಿರ್ದೇಶಕರು, ನಿರ್ಮಿತಿ ಕೇಂದ್ರ ಗದಗ**)

6) **<u>ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಕೇಶಿಫ್ಲಾಗೂರೇಲ್ವೆ ಯೋಜನೆಗಳ ಅಧಿಕಾರಿಗಳನ್ನು ಸಭೆಗೆ ಅಹ್ವಾನಿಸುವ ಕುರಿತು:-</u>**

ಗದಗ ಜಿಲ್ಲೆಯಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಹೆದ್ದಾರಿ ಹಾಗೂ ರೇಲ್ವೆ ಯೋಜನೆಗಳ ಕಾಮಗಾರಿಗಳ ಪ್ರಗತಿ ಪರಿಶೀಲನೆಗಾಗಿ ಸಂಬಂಧಪಟ್ಟ ಅಧಿಕಾರಿಗಳನ್ನು ಮುಂದಿನ ಸಭೆಗೆ ಹಾಜರಾಗುವ ಕುರಿತು ಜಿಲ್ಲಾಧಿಕಾರಿಗಳು ಸೂಕ್ತ ಕ್ರಮವಹಿಸುವಂತೆ ಸೂಚಿಸಲಾಯಿತು.

(**ಕ್ರಮ: ಜಿಲ್ಲಾಧಿಕಾರಿಗಳು,ಗದಗ**)

6) **<u>ಪೋಡಿ ಮುಕ್ತ ಗ್ರಾಮ ಯೋಜನೆ:-</u>**

ಪೋಡಿ ಮುಕ್ತ ಗ್ರಾಮಯೋಜನೆಯಡಿ ಜಿಲ್ಲೆಯಲ್ಲಿ ಒಟ್ಟು 327 ಗ್ರಾಮಗಳಪೈಕಿ 238 ಗ್ರಾಮಗಳನ್ನು ಅಳತೆಗೆ ಆಯ್ಕೆಮಾಡಿಕೊಂಡಿದ್ದು ಇವುಗಳಲ್ಲಿ 235 ಗ್ರಾಮಗಳಲ್ಲಿ ಅಳತೆ ಕೆಲಸ ಮುಕ್ತಾಯಗೊಂಡು ದುರಸ್ತಿ ಕಾರ್ಯವು ಪೂರ್ಣಗೊಂಡಿರುತ್ತದೆ. 229 ಗ್ರಾಮಗಳಲ್ಲಿ ಇಂಡೀಕರಣ ಕೆಲಸವು ಪೂರ್ಣಗೊಂಡು ಗದಗ ಜಿಲ್ಲೆಯನ್ನು ಪೋಡಿ ಮುಕ್ತ ಗ್ರಾಮವೆಂದು ಘೋಷಣೆ ಮಾಡಲು ಬಾಕಿ ಇರುವುದಾಗಿ ಉಪನಿರ್ದೇಶಕರು, ಭೂಮಾಪನ ಇಲಾಖೆ, ಗದಗರವರು ಸಭೆಗೆ ಮಾಹಿತಿ ನೀಡಿದರು.

ಪೋಡಿ ಮುಕ್ತ ಗ್ರಾಮಯೋಜನೆಯಡಿ ಗದಗ ಜಿಲ್ಲೆಯಲ್ಲಿ ಒಳ್ಳೆಯ ಪ್ರಗತಿಯಾಗಿದ್ದು ಪ್ರಶಂಸನೀಯ ಕಾರ್ಯವಾಗಿದೆ. ಪೋಡಿ ಮುಕ್ತ ಜಿಲ್ಲೆಯೆಂದು ಘೋಷಿಸುವ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಜಿಲ್ಲಾಧಿಕಾರಿಗಳು ಕ್ರಮವಹಿಸುವಂತೆ ಸೂಚಿಸಲಾಯಿತು.

(**ಕ್ರಮ: ಜಿಲ್ಲಾಧಿಕಾರಿಗಳು, ಗದಗ/ಉಪನಿರ್ದೇಶಕರು, ಭೂಮಾಪನ ಇಲಾಖೆ, ಗದಗ**)

**7) ಸಮಾಜಕ ಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಸತಿನಿಲಯಗಳಲ್ಲಿ ಮೂಲಭೂತಸೌಕರ್ಯಗಳನ್ನು ಹಾಗೂ ಸುರಕ್ಷತೆ ಕ್ರಮಗಳನ್ನು ಕೈಗೊಳ್ಳುವ ಕುರಿತು:-**

ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಗಳಿಗೆ ಅವಶ್ಯವಿರುವ ಜಾಗವನ್ನು ಜಿಲ್ಲಾಧಿಕಾರಿಗಳು ನೀಡಿದ್ದು, ಹಾಸ್ಟೇಲಗಳಿಗೆ ಜಾಗದ ಅವಶ್ಯಕತೆ ಇರುವುದಿಲ್ಲವೆಂದು ಸಂಬಂಧಪಟ್ಟ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಮಾನ್ಯ ಅಧ್ಯಕ್ಷರು ವಸತಿ ನಿಲಯಗಳಲ್ಲಿ ವಾಸಿಸುವ ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಸರಿಯಾಗಿರುವ ಬಗ್ಗೆ ಸಂಬಂಧಪಟ್ಟ ಇಲಾಖಾಧಿಕಾರಿಗಳು ಅನಿರೀಕ್ಷಿತ ಭೇಟಿ ನೀಡಿ ಪರಿಶೀಲಿಸುವುದು. ಒಳ್ಳೆಯ ಗುಣಮಟ್ಟದ ಊಟ, ಉಪಹಾರ ನೀಡುವುದು ವಾರ್ಡನ್‌ಗಳನ್ನು ನೇಮಿಸಿ ವಿದ್ಯಾರ್ಥಿನಿಯರ ಸುರಕ್ಷತೆಗೆ ಆದ್ಯತೆ ನೀಡುವಂತೆ ಇಲಾಖಾಧಿಕಾರಿಗಳಿಗೆ ಸೂಚಿಸಿದರು.

(**ಕ್ರಮ: ಉಪನಿರ್ದೇಶಕರು, ಸಮಾಜಕಲ್ಯಾಣಇಲಾಖೆ/ಉಪನಿರ್ದೇಶಕರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ/ಜಿಲ್ಲಾಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣಇಲಾಖೆ, ಗದಗ**)

**8) ಮುಖ್ಯಮಂತ್ರಿಯವರ ಗ್ರಾಮ ವಿಕಾಸ ಯೋಜನೆ:-**

ಮುಖ್ಯಮಂತ್ರಿಯವರ ಗ್ರಾಮವಿಕಾಸ ಯೋಜನೆ ಅಡಿ ಗದಗ ತಾಲೂಕಿಗೆ 12 ಗ್ರಾಮಗಳು ಮುಂಡರಗಿ ತಾಲೂಕಿಗೆ 1 ಹಾಗೂ ಶಿರಹಟ್ಟಿ ತಾಲೂಕಿಗೆ 4 ಗ್ರಾಮಗಳು ಒಟ್ಟು 17 ಗ್ರಾಮಗಳನ್ನುಆಯ್ಕೆಮಾಡಿ ಸರ್ಕಾರದಿಂದ ಅನುಮೋದನೆಯಾಗಿ ರೂ.17.00 ಕೋಟಿ ನಿಗದಿಪಡಿಸಿ ಇಲ್ಲಿಯವರೆಗೆ ಅಂದಾಜು ರೂ.3.00ಕೋಟಿ ಅನುದಾನ ಬಿಡುಗಡೆಯಾಗಿ ರೂ.1.27ಕೋಟಿ ವೆಚ್ಚವಾಗಿರುವುದಾಗಿ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾಪಂಚಾಯತ, ಗದಗರವರು ಸಭೆಗೆ ಮಾಹಿತಿ ನೀಡಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ, ಮುಖ್ಯಮಂತ್ರಿಯವರ ಗ್ರಾಮವಿಕಾಸ ಯೋಜನೆಯಡಿ ಗ್ರಾಮಗಳನ್ನು ಆಯ್ಕೆ ಮಾಡುವ ವಿಧಾನ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದಲ್ಲಿ ಕೈಗೊಳ್ಳಲಾಗುವ ಕಾಮಗಾರಿಗಳು, ಈಗಾಗಲೇ ಹೆಚ್ಚಿನ ಕಾಮಗಾರಿ ಆಗಿರುವ ಗ್ರಾಮಗಳ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಮುಂದಿನ ತಿಂಗಳು ಜಿಲ್ಲಾಪರಿಶೀಲನಾ ಸಭೆಯಲ್ಲಿ ಹಾಜರಿದ್ದು ಯಾವ ಯಾವ ಕಾಮಗಾರಿಗಳಾಗಿವೆ ಇದರಿಂದ ಗ್ರಾಮ ಅಭಿವೃದ್ಧಿ ಜನರಿಗೆ ಅನುಕೂಲ ಆಗಿದೆಯೇ ಎನ್ನುವ ಗುಣಾತ್ಮಕ ವರದಿ ನೀಡಲು ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾಪಂಚಾಯತ, ಗದಗರವರಿಗೆ ಸೂಚಿಸಲಾಯಿತು.

(**ಕ್ರಮ: ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾಪಂಚಾಯತ, ಗದಗ**)

**9) ಲೋಕೋಪಯೋಗಿ ಇಲಾಖೆ:-**

ಜಿಲ್ಲೆಯ ನೆರೆ ಸಂದರ್ಭದಲ್ಲಿ ಹಾನಿಗೊಳಗಾದ ಲೋಕೋಪಯೋಗಿ ಇಲಾಖೆ ನಿರ್ಮಿಸಿರುವ ರಸ್ತೆ ಹಾಗೂ ಕಟ್ಟಡ ದುರಸ್ತಿಗಳಿಗಾಗಿ ರೂ.6.85 ಕೋಟಿ ಬಿಡುಗಡೆಯಾಗಿ 74 ರಸ್ತೆ ದುರಸ್ತಿ ಕಾಮಗಾರಿ ಪ್ರಗತಿಯಲ್ಲಿದ್ದು ಇನ್ನು ಒಂದು ತಿಂಗಳಲ್ಲಿ ಕಾಮಗಾರಿ ಮುಗಿಯುವುದಾಗಿ ಕಾರ್ಯನಿರ್ವಾಹಕ ಇಂಜನೀಯರ ಸಭೆಗೆ ಮಾಹಿತಿ ನೀಡಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ ಪ್ರವಾಹ ಸಂದರ್ಭದಲ್ಲಿ ಹಾನಿಗೊಳಗಾದ ರಸ್ತೆಗಳ ದುರಸ್ತಿ ಕಾಮಗಾರಿಯಲ್ಲಿ ಗುಣಮಟ್ಟ ದುರಸ್ತೆಗಳನ್ನು ನಿರ್ಮಿಸಬೇಕು. ರಸ್ತೆ ದುರಸ್ತಿ ಕೈಗೊಂಡ 74 ಕಾಮಗಾರಿಗಳ ವಿವರವಾದ ಮಾಹಿತಿ ನೀಡುವಂತೆ ಕಾರ್ಯನಿರ್ವಾಹಕ ಇಂಜನೀಯರ, ಲೋಕೋಪಯೋಗಿ ಇಲಾಖೆ ಇವರಿಗೆ ಸೂಚಿಸಿದರು.

**(ಕ್ರಮ: ಕಾರ್ಯನಿರ್ವಾಹಕ ಇಂಜನೀಯರ, ಲೋಕೋಪಯೋಗಿ ಇಲಾಖೆ, ಗದಗ)**

**10) ಸಂವಿಧಾನದಿನ ಆಚರಣೆ:-**

ಮಾನ್ಯ ಅಧ್ಯಕ್ಷರು ಮಾತನಾಡಿ, ಕೇಂದ್ರ ಸರ್ಕಾರದ ನಿರ್ದೇಶನದಂತೆ ರಾಜ್ಯದ ಎಲ್ಲ ಶಾಲಾ ಕಾಲೇಜುಗಳಲ್ಲಿ ನವೆಂಬರ 26ರಂದು ಸಂವಿಧಾನ ದಿನವನ್ನಾಗಿ ಆಚರಿಸಲು ಕ್ರಮಕೈಗೊಳ್ಳುವುದು ಜಿಲ್ಲೆಯ ಎಲ್ಲ ಶಾಲಾ ಕಾಲೇಜುಗಳಲ್ಲಿ ಸಮಾರಂಭ ಏರ್ಪಡಿಸಿ ವಿದ್ಯಾರ್ಥಿಗಳಿಗೆ ದೇಶದ ಸಂವಿಧಾನ ಕುರಿತು ಜಾಗೃತಿಗೆ ಮುಂದಾಗಬೇಕು. ಅಲ್ಲದೇ ಪ್ರತಿ ಮಾಹೆವಾರು ವಿದ್ಯಾರ್ಥಿಗಳಿಗೆ ಸಂವಿಧಾನದ ವಿವಿಧ ವಿಷಯಗಳ ಕುರಿತು ಮಾಹಿತಿ ನೀಡುವ ಕಾರ್ಯಕ್ರಮ ಏರ್ಪಡಿಸಲು ತಿಳಿಸಿದರು. ಸಂವಿಧಾನ ದಿವಸ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಿಂದ ಸಂವಿಧಾನಾತ್ಮಕ ಕರ್ತವ್ಯ ಮತ್ತು ಹಕ್ಕು ಹಾಗೂ ಸಂವಿಧಾನ ಕುರಿತು ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ತಿಳಿಸುವ ಜಾಗೃತಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು.

ಸಂವಿಧಾನ ದಿನಆಚರಣೆ ಮಾಡಿದ ಬಗ್ಗೆ ಜಿಲ್ಲೆಯ ಎಲ್ಲ ಕಾಲೇಜುಗಳ ಪ್ರಾಂಶುಪಾಲರಿಂದ ವರದಿ ಪಡೆದು ಕಾರ್ಯಕ್ರಮದ ಛಾಯಾ ಚಿತ್ರದೊಂದಿಗೆ ಸರ್ಕಾರಕ್ಕೆ ವರದಿ ನೀಡುವಂತೆ ಜಂಟಿ ನಿರ್ದೇಶಕರು, ಉನ್ನತ ಶಿಕ್ಷಣ ಇಲಾಖೆ, ಧಾರವಾಡರವರಿಗೆ ಸೂಚಿಸಿದರು.

**(ಕ್ರಮ: ಜಂಟಿ ನಿರ್ದೇಶಕರು, ಉನ್ನತ ಶಿಕ್ಷಣ ಇಲಾಖೆ, ಧಾರವಾಡ)**

**11) ಸಂಸದರ / ಶಾಸಕರ ಪ್ರದೇಶಾಭಿವೃದ್ಧಿ ಅನುದಾನ:-**

ಸಂಸದರ / ಶಾಸಕರ ಪ್ರದೇಶಾಭಿವೃದ್ಧಿ ಅನುದಾನದಡಿ 2016ಕ್ಕಿಂತ ಪೂರ್ವದಲ್ಲಿ ಬಾಕಿ ಇರುವ ಕಾಮಗಾರಿಗಳಲ್ಲಿ ಅನುದಾನ ಬಿಡುಗಡೆಯಾಗಿ ಕಾಮಗಾರಿ ಪ್ರಾರಂಭ ವಾಗದೇ ಇರುವ ಪ್ರಕರಣಗಳಲ್ಲಿ ಅನುದಾನ ಹಾಗೂ ಆಕರಣೆಯಾದ ಬಡ್ಡಿಹಣವನ್ನು ವಾಪಸ್ಸು ಪಡೆದು ಕೊಳ್ಳಲಾಗಿದೆ. 2016 ರ ನಂತರ ಚಾಲ್ತಿಯಲ್ಲಿರುವ ಕಾಮಗಾರಿಗಳನ್ನು ಕೂಡಲೇ ಪೂರ್ಣ ಗೊಳಿಸಲು ಅನುಷ್ಠಾನಾಧಿಕಾರಿಗಳಿಗೆ ಪ್ರತಿ ತಿಂಗಳು ಸಭೆ ನಡೆಸಿ ಸೂಚನೆಗಳನ್ನು ನೀಡಿರುವುದಾಗಿ ಜಿಲ್ಲಾಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ, ಸಂಸದರು/ಶಾಸಕರು ಪ್ರದೇಶಾಭಿವೃದ್ಧಿ ಅನುದಾನ ಬಳಕೆಯಲ್ಲಿ ಜಿಲ್ಲೆ ಕೆಳಗಿನಿಂದ 5ನೇ ಸ್ಥಾನದಲ್ಲಿದ್ದು ಅನುದಾನ ಬಿಡುಗಡೆ, ಕಾಮಗಾರಿ

ಆರಂಭಕ್ಕೆ ಹೆಚ್ಚಿನ ಆದ್ಯತೆ ನೀಡಿ ಈ ಯೋಜನೆಗಳಡಿ ಉತ್ತಮ ಪ್ರಗತಿ ಸಾಧಿಸಲು ಜಿಲ್ಲಾಧಿಕಾರಿಗಳು ಕ್ರಮವಹಿಸುವಂತೆ ಸೂಚಿಸಿದರು.

(**ಕ್ರಮ: ಜಿಲ್ಲಾಧಿಕಾರಿಗಳು, ಗದಗ/ಕಾರ್ಯನಿರ್ವಾಹಕ ಇಂಜನೀಯರ, ಪಂ .ರಾ. ಇಂ. ವಿಭಾಗ, ಗದಗ/ಕಾರ್ಯನಿರ್ವಾಹಕ ಇಂಜನೀಯರ, ಲೋಕೋಪಯೋಗಿ ಇಲಾಖೆ, ಗದಗ/ಉಪನಿರ್ದೇಶಕರು, ಕೆ.ಆರ್.ಐ.ಡಿ.ಎಲ್. ಗದಗ/ಯೋಜನಾ ನಿರ್ದೇಶಕರು, ನಿರ್ಮಿತಿ ಕೇಂದ್ರ, ಗದಗ**)

12) **ಗಂಗಾ ಕಲ್ಯಾಣ ಯೋಜನೆ:-**

ಯೋಜನೆಯಡಿ 2016-17ನೇ ಸಾಲಿನಲ್ಲಿ 263 ನಿಗದಿ ಪಡಿಸಿದ ಗುರಿಗೆ 261 ಸಾಧನೆಯಾಗಿ ವಿದ್ಯುದೀಕರಣಕ್ಕೆ 11 ಬಾಕಿ ಇರುತ್ತವೆ. 2017-18ನೇ ಸಾಲಿನಲ್ಲಿ 236 ನಿಗದಿಪಡಿಸಿದ ಗುರಿಗೆ 237 ಸಾಧನೆಯಾಗಿ ವಿದ್ಯುದೀಕರಣಕ್ಕೆ 5 ಬಾಕಿ ಇರುವುದಾಗಿ 2018-19ನೇ ಸಾಲಿಗೆ 274 ಗುರಿ ನಿಗದಿಪಡಿಸಲಾಗಿರುವುದಾಗಿ ಜಿಲ್ಲಾವ್ಯವಸ್ಥಾಪಕರು, ಡಾ: ಬಿ. ಆರ್. ಅಂಬೇಡ್ಕರ ಅಭಿವೃದ್ಧಿ ನಿಗಮರವರು ಸಭೆಗೆ ಮಾಹಿತಿ ನೀಡಿದರು.

ಗಂಗಾ ಕಲ್ಯಾಣ ಯೋಜನೆಯಡಿ ವಿವಿದ ನಿಗಮಗಳಿಂದ ಬಾಕಿ ಉಳಿದ ವಿದ್ಯುತ್ತೀಕರಣ ಕಾರ್ಯ ಕುರಿತಂತೆ ಹೆಸ್ಕಾಂ ಅಧಿಕಾರಿಗಳು ವಾಸ್ತವ ವರದಿ ನೀಡುವಂತೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

(**ಕ್ರಮ: ಕಾರ್ಯನಿರ್ವಾಹಕ ಇಂಜನೀಯರ, ಹೆಸ್ಕಾಂ, ಗದಗ/ ಜಿಲ್ಲಾ ಅಧಿಕಾರಿಗಳು, ಡಾ: ಅಂಬೇಡ್ಕರ ಅಭಿವೃದ್ಧಿ ನಿಗಮ/ಜಿಲ್ಲಾ ಅಧಿಕಾರಿಗಳು, ದೇವರಾಜ ಅರಸ ಅಭಿವೃದ್ಧಿ ನಿಗಮ/ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಗದಗ**)

ಉಳಿದಂತೆ ಇನ್ನುಳಿದ ಇಲಾಖೆಗಳ ಕುಂದು ಕೊರತೆಗಳ ಬಗ್ಗೆ ಆಲಿಸಿದರು.

ಜಿಲ್ಲಾಧಿಕಾರಿಗಳ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-

(**ಡಾ: ರಾಜಕುಮಾರ ಖತ್ರಿ**)
ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಹಾಗೂ ಅಪರ ಮುಖ್ಯ ಕಾರ್ಯದರ್ಶಿಗಳು,
ಉನ್ನತ ಶಿಕ್ಷಣ ಇಲಾಖೆ.

**ಡಾ: ಜಿ. ಕಲ್ಪನ,** ಭಾ.ಆ.ಸೇ.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಕರ್ನಾಟಕ ಸರ್ಕಾರದ ಸಚಿವಾಲಯ
ದೂರವಾಣಿ : ಕಛೇರಿ: 22255827
22032589
ಫ್ಯಾಕ್ಸ್ : 080–22252499
ಇಮೇಲ್: prs-yesd@karnataka.gov.in
ysdsec@gmail.com
2ನೇ ಮಹಡಿ, 2ನೇ ಹಂತ
ಬಹುಮಹಡಿಗಳ ಕಟ್ಟಡ, ಬೆಂಗಳೂರು–560001

e-office : 953562/2019

ಸಂಖ್ಯೆ: ಯುಸಕ್ರೀ 60 ಅಮುಕಾ 2019 ದಿನಾಂಕ:11–12–2019

**ಟಿಪ್ಪಣಿ**

ವಿಷಯ: ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ನವೆಂಬರ್ ಮಾಹೆಯಲ್ಲಿ ಮೈಸೂರು ಜಿಲ್ಲೆಗೆ ಪ್ರವಾಸ ಕೈಗೊಂಡಿರುವ ಬಗ್ಗೆ ವಿವರ.

*****

| ಕ್ರ.ಸಂ. | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1 | ಜಿಲ್ಲೆಯ ಹೆಸರು | ಮೈಸೂರು |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಡಾ: ಜಿ.ಕಲ್ಪನ |
| 3 | ಭೇಟಿಯಾದ/ ಪ್ರವಾಸದ ದಿನಾಂಕ: | 04–11–2019 ಮತ್ತು 05–11–2019 |
| 4 | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | ಮುಂದಿನ ಕಂಡಿಕೆಗಳಲ್ಲಿ ವಿವರಿಸಲಾಗಿದೆ. |

ದಿನಾಂಕ:04–11–2019ರಂದು ಚಾಮುಂಡೇಶ್ವರಿ ಬೆಟ್ಟದ ವ್ಯೂ ಪಾಯಿಂಟ್ ಬಳಿ ನಂದಿ ವಿಗ್ರಹಕ್ಕೆ ತೆರಳುವ ಮಾರ್ಗದಲ್ಲಿ ಭೂ ಕುಸಿತ ಉಂಟಾಗಿರುವ ಸ್ಥಳದ ಪರಿವೀಕ್ಷಣೆ ನಡೆಸಲಾಯಿತು ಹಾಗು ಸಂಬಂಧಪಟ್ಟ ಗ್ರಾಮ ಲೆಕ್ಕಾಧಿಕಾರಿ ಮತ್ತು ಸಹಾಯಕ ಅಭಿಯಂತರರಿಂದ ಕೈಗೊಂಡ ಕ್ರಮದ ಬಗ್ಗೆ ಮಾಹಿತಿ ಪಡೆದು, ಕೈಗೊಳ್ಳಬೇಕಾದ ಕ್ರಮಗಳ ಕುರಿತು ಸೂಚಿಸಲಾಯಿತು.

ದಿನಾಂಕ:05–11–2019ರಂದು ಮೈಸೂರು ಜಿಲ್ಲೆಯಲ್ಲಿ ಮಳೆಯಿಂದ ಹಾನಿಯಾಗಿರುವ ಬಗ್ಗೆ ಕೈಗೊಂಡಿರುವ ಪರಿಹಾರ ಕ್ರಮಗಳ ಕುರಿತು ಜಿಲ್ಲಾಧಿಕಾರಿಗಳನ್ನೊಳಗೊಂಡಂತೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆಯನ್ನು ನಡೆಸಿ ಸೂಕ್ತ ಸಲಹೆ ಸೂಚನೆಗಳನ್ನು ನೀಡಲಾಯಿತು.

ಅವಗಾಹನೆಗಾಗಿ ಸಲ್ಲಿಸಿದೆ.

Kalpana G

(ಡಾ. ಜಿ. ಕಲ್ಪನ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಸರ್ಕಾರದ ಮುಖ್ಯ ಕಾರ್ಯದರ್ಶಿ,
ವಿಧಾನಸೌಧ,
ಬೆಂಗಳೂರು.

ಪ್ರತಿ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ(ಆಡಳಿತ ಸುಧಾರಣೆ), ಸಿ.ಆ.ಸು.ಇಲಾಖೆ, ಬೆಂಗಳೂರು.

**ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಪ್ರತಿ ತಿಂಗಳು ಸರ್ಕಾರದ ಮುಖ್ಯಕಾರ್ಯದರ್ಶಿಯವರಿಗೆ ಸಲ್ಲಿಸಬೇಕಾದ ವರದಿಯ ನಮೂನೆ**

| ಕ್ರ ಸಂ | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1 | ಜಿಲ್ಲೆಯ ಹೆಸರು | ಧಾರವಾಡ |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಹೆಸರು | ಗೌರವ ಗುಪ್ತ, ಭಾ.ಆ.ಸೇ |
| 3 | ಭೇಟಿಯಾದ / ಪ್ರವಾಸದ ದಿನಾಂಕ | 29.11.2019 |
| 4 | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | ಇದರೊಂದಿಗೆ ಲಗತ್ತಿಸಿದೆ. |

(ಗೌರವ ಗುಪ್ತ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
ಹಾಗೂ
ಧಾರವಾಡ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಸಿಆಸು ಇಲಾಖೆ – (ಆಸು),
ಬಹುಮಹಡಿ ಕಟ್ಟಡ,

## -: ಜಿಲ್ಲಾ ಮಟ್ಟದ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು :-

**ಸಭೆಯ ದಿನಾಂಕ: 29-11-2019 ಸಭೆಯ ವೇಳೆ: ಬೆಳಿಗ್ಗೆ 11-00 ಗಂಟೆಗೆ**
**ಸಭೆಯ ಸ್ಥಳ: ಸರ್ಕಿಟ್ ಹೌಸ್. ಹುಬ್ಬಳ್ಳಿ ಸಭೆಯ ಅಧ್ಯಕ್ಷರು: ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು**

ಜಿಲ್ಲಾಧಿಕಾರಿ, ಧಾರವಾಡ, ಇವರು ಸಭೆಯ ಅಧ್ಯಕ್ಷತೆ ವಹಿಸಿರುವ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರಿಗೆ, ಆಯುಕ್ತರು. ಹು.ಧಾ.ಮ.ಪಾ. ಹಾಗೂ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಉಪ ವಿಭಾಗಾಧಿಕಾರಿ ಮತ್ತು ವಿವಿಧ ಇಲಾಖಾ ಮುಖ್ಯಸ್ಥರಿಗೆ ಹಾಗೂ ಸಭೆಗೆ ಉಪಸ್ಥಿತರಿದ್ದ ಎಲ್ಲ ಅಧಿಕಾರಿ ವರ್ಗದವರಿಗೆ ಸ್ವಾಗತ ಕೋರಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಮಾತನಾಡುತ್ತಾ, ಜಿಲ್ಲೆಯಲ್ಲಿ ಅತಿವೃಷ್ಟಿಯಾಗಿ 2 ತಿಂಗಳು ಗತಿಸಿತ್ತಾ ಬಂದಿದ್ದು, ಹಾನಿಯಾದ ಕಟ್ಟಡಗಳ ದುರಸ್ತಿ ಕಾಮಗಾರಿ ಇದುವರೆಗೂ ಆಗಿರುವುದಿಲ್ಲ, ಕಾಮಗಾರಿಯನ್ನು ನಿಗದಿತ ಸಮಯದೊಳಗೆ ಪೂರ್ಣಗೊಳಿಸಬೇಕು ಕೇವಲ ಕಾಮಗಾರಿಗಳನ್ನು ಗುತ್ತಿಗೆ ನೀಡುವುದಕ್ಕೆ ಸೀಮಿತವಾಗಿರದೇ, ಕಾಮಗಾರಿಗಳು ಯಾವ ಹಂತದಲ್ಲಿ ನಡೆಯುತ್ತಿವೆ ಎಂದು ಪರಿಶೀಲಿಸಬೇಕು. ಇಲಾಖೆಯ ಆಸ್ತಿ ದುರಸ್ತಿ ಕಾರ್ಯ ನಡೆಯುತ್ತಿರುವಾಗ ಅದನ್ನು ಪರಿಶೀಲಿಸುವುದು ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ. ನಿಗದಿತ ವೇಳೆಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ಸೂಕ್ತ ಗಮನಹರಿಸಬೇಕು. ನೆರೆ ಹಾವಳಿಯಿಂದ ಬಿದ್ದಿರುವ ಕಟ್ಟಡ ದುರಸ್ತಿ ಪರಿಹಾರ ಕಾರ್ಯ ಕುರಿತು ಸೂಕ್ತ ನಿಗಾವಹಿಸಬೇಕು ಎಂದು ಪಂಚಾಯತ ರಾಜ್ ಇಂಜನೀಯರಿಂಗ್ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಸಂಬಂಧಿಸಿದ ಇಲಾಖೆಯ ಹಿರಿಯ ಅಧಿಕಾರಿಗಳು ಸದರಿ ಎಲ್ಲ ದುರಸ್ತಿ ಕಾರ್ಯಗಳನ್ನು ಶೀಘ್ರವಾಗಿ ಪೂರ್ಣಗೊಳಿಸಬೇಕೆಂದು ತಿಳಿಸಿದರು.

**(ಕ್ರಮ: ಪಂಚಾಯತ ರಾಜ್ ಇಂಜನೀಯರಿಂಗ್ ಇಲಾಖೆ)**

ಶಿಕ್ಷಣ ಇಲಾಖೆ ಅಧಿಕಾರಿಗಳು ಮಾತನಾಡುತ್ತಾ, ನೆರೆ ಹಾವಳಿಯಿಂದ 265 ಶಾಲೆಗಳ 912 ಕೊಠಡಿಗಳು ಹಾನಿಗಿಡಾಗಿವೆ. ರೂ.10 ಕೋಟಿ ಬಿಡುಗಡೆಯಾಗಿದ್ದು, ಸದ್ಯ 26 ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ 265 ಕಾಮಗಾರಿಗಳ ಪ್ರಗತಿ ಕುರಿತು ಇನ್ನೂ ಸಾಕಷ್ಟು ಕಾಮಗಾರಿಗಳು ಬಾಕಿ ಉಳಿದಿವೆ. ಇದು ಶಿಕ್ಷಣ ಇಲಾಖೆಯ ನಿರ್ಲಕ್ಷ್ಯತನವನ್ನು ತೋರಿಸುತ್ತದೆ ಎಂದು ಅಸಮಾದಾನ ವ್ಯಕ್ತಪಡಿಸಿ ಅಧಿಕಾರಿಗಳು ಕಾಮಗಾರಿಗಳ ಬಗ್ಗೆ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮೇಲುಸ್ತುವಾರಿ ನಡೆಸಿ 45 ದಿನಗಳ ಒಳಗಾಗಿ ಶಾಲಾ ಕೊಠಡಿಗಳ ದುರಸ್ತಿ ಕಾರ್ಯವನ್ನು ಪೂರ್ಣಗೊಳಿಸಬೇಕು ಎಂದು ಸೂಚಿಸಿದರು.

**(ಕ್ರಮ. ಶಿಕ್ಷಣ ಇಲಾಖೆ)**

ಜಿಲ್ಲಾಧಿಕಾರಿಗಳು ಮಾತನಾಡುತ್ತಾ ಜಿಲ್ಲೆಯಲ್ಲಿ ಒಟ್ಟು 3,40,370 ಪಡಿತರ ಚೀಟಿ ಹೊಂದಿರುವ ಕುಟುಂಬಗಳಿದ್ದು, 122 ಕೇಂದ್ರಗಳ ಮೂಲಕ ಆಯುಷ್ಮಾನ ಭಾರತ ಆರೋಗ್ಯ ಕಾರ್ಡಗಳ ಕುರಿತು ವಿಷಯವನ್ನು ಪ್ರಸ್ತಾಪಿಸಿ ಪಡಿತರ ಚೀಟಿ ಹೊಂದಿರುವ ಕುಟುಂಬಗಳಿಗೆ ಆಯುಷ್ಮಾನ ಭಾರತ ಆರೋಗ್ಯ ಕಾರ್ಡಗಳನ್ನು ನೀಡಲಾಗುತ್ತಿದೆ. ಮತ್ತು ಸಂಚಾರಿ ಕೇಂದ್ರಗಳ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಡಗಳನ್ನು ವಿತರಿಸಲಾಗುತ್ತಿದೆ ಎಂದು ತಿಳಸಿದರು.

**(ಕ್ರಮ: ಜಿಲ್ಲಾ ಆರೋಗ್ಯ ಇಲಾಖೆ)**

ಗಾಮನಗಟ್ಟಿ ಕೈಗಾರಿಕಾ ಪ್ರದೇಶದಲ್ಲಿ ವಿದ್ಯುತ್ ಪ್ರಸರಣ ಕೇಂದ್ರದ ಬಗ್ಗೆ ಮಾಹಿತಿ ನೀಡಿ ಎಂದು ಕೆಪಿಟಿಸಿಎಲ್ ಹಾಗೂ ಕೆಐಎಡಿಬಿ ಅಧಿಕಾರಿಗಳಿಗೆ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು ಹಾಗೂ ವಿವಿಧ ಕಾಮಗಾರಿಗಳ ಕುರಿತು 35 ಕೋಟಿ ಬಾಕಿ ಇರುವ ಅನುದಾನದ ಕುರಿತು ವಿಚಾರಿಸಿದರು. ಸಂಬಂಧಪಟ್ಟ ಅಧಿಕಾರಿಗಳು ಗಾಮನಗಟ್ಟಿ ಕೈಗಾರಿಕಾ ಪ್ರದೇಶದಲ್ಲಿ ನಿರ್ಮಾಣ ಹಂತದಲ್ಲಿರುವ 110 ಕೆ.ವಿ. ವಿದ್ಯುತ್ ಪ್ರಸರಣ ಕೇಂದ್ರದ ಬಗ್ಗೆ ಮಾಹಿತಿ ನೀಡುವಲ್ಲಿ ಎರಡೂ ಇಲಾಖೆಯ ಅಧಿಕಾರಿಗಳು ವಿಫಲರಾಗಿದ್ದಕ್ಕೆ ಮುಂದಿನ ಸಭೆಯಲ್ಲಿ ಸಮರ್ಪಕ ಮಾಹಿತಿ ಒದಗಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

**(ಕ್ರಮ: ಹೆಸ್ಕಾಂ)**

ಗ್ರಾಮೀಣ ಕುಡಿಯುವ ನೀರಿನ ಯೋಜನೆಗೆ ಬಗ್ಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಮಾತನಾಡುತ್ತಾ 103 ಕಾಮಗಾರಿಗಳ ಪೈಕಿ, ಕೇವಲ 12 ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸುತ್ತಾ, ನೀರಿನ ವಿಚಾರದಲ್ಲಿ ಈಗಾಗಲೇ ಸಾಕಷ್ಟು ವಿಳಂಬವಾಗಿದ್ದು, ಮುಂದಿನ **20 ದಿನಗಳಲ್ಲಿ** ಉಳಿದ 91 ಕಾಮಗಾರಿಗಳು ಪೂರ್ಣಗೊಳ್ಳಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

**(ಕ್ರಮ: ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ)**

ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನಡೆಸುತ್ತಿರುವ 51 ವಿದ್ಯಾರ್ಥಿ ನಿಲಯಗಳ ಪೈಕಿ 6 ಕಟ್ಟಡಗಳು ಹಾನಿಯಾಗಿವೆ. ಈ ಕುರಿತು ಬಿಡುಗಡೆಯಾದ 78 ಲಕ್ಷ ಅನುದಾನದಲ್ಲಿ ದುರಸ್ತಿ ಕಾರ್ಯ ಪ್ರಗತಿಯಲ್ಲಿದೆ ಎಂದು ತಿಳಿಸಿದರು. ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಸದರಿ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ಸೂಚಿಸಿದರು.

**(ಕ್ರಮ: ಜಿಲ್ಲಾ ಹಿಂದುಳಿದ ವರ್ಗಗಳ ಇಲಾಖೆ)**

ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಮಾತನಾಡಿ ಮಳೆಯಿಂದ ಹಾನಿಗಿಡಾದ ಮುಂಗಾರು ಹಂಗಾಮಿನ ಬೆಳೆಗಳಿಗೆ ರೂ. 214 ಕೋಟಿ ಹಾಗೂ ಹಿಂಗಾರು ಹಂಗಾಮಿನ ಬೆಳೆಗೆ ರೂ. 60 ಕೋಟಿ ಹಣವನ್ನು ಬೆಳೆ ನಷ್ಟ ಪರಿಹಾರದಡಿ ರೈತರ ಖಾತೆಗೆ ಜಮಾ ಮಾಡಲಾಗಿದೆ ಎಂದು ತಿಳಿಸಿದರು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಬೆಳೆಹಾನಿಗಿಡಾದ ಎಲ್ಲ ರೈತರಿಗೆ ಬೆಳೆ ಪರಿಹಾರ ಬಟವಡೆಯಾಗುವಂತೆ ಶೀಘ್ರವೇ ಕ್ರಮ ವಹಿಸಲು ಸೂಚಿಸಿದರು.

**(ಕ್ರಮ: ಜಿಲ್ಲಾ ಕೃಷಿ ಇಲಾಖೆ ಮತ್ತು ತೋಟಗಾರಿಕಾ ಇಲಾಖೆ)**

ಮುಂದುವರೆದು ಡಿ. ದೇವರಾಜ ಅರಸ್, ತಾಂಡ ಅಭಿವೃದ್ದಿ ನಿಗಮ, ವಾಲ್ಮಿಕಿ ಅಭಿವೃದ್ದಿ ನಿಗಮ ಸೇರಿದಂತೆ ವಿವಿಧ ನಿಗಮದ ಯೋಜನೆಗಳಿಗೆ ಸೇರಿದಂತೆ ಅರ್ಹ ಅಭ್ಯರ್ಥಿಗಳನ್ನು ಗುರುತಿಸುವುದು ವಿಫಲವಾಗಿದ್ದು, ಇದರಿಂದ ಅರ್ಹ ಫಲಾನುಭವಿಗಳು ಸೂಕ್ತ ಕಾರ್ಯಕ್ಕೆ ಸರಕಾರದ ಯೋಜನೆ ದೊರೆಯದೇ ಪರದಾಡುವಂತಾಗಿದೆ. ಫಲಾನುಭವಿಗಳ ಆಯ್ಕೆಯೊಂದಿಗೆ ಆ ಯೋಜನೆಯನ್ನು ಯಾವ ರೀತಿ ಸದ್ಬಳಕೆ ಮಾಡಿಕೊಳ್ಳುತ್ತಾರೆ ಎಂಬುದರ ಬಗ್ಗೆ ಪರಿಶೀಲಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ತಿಳಿಸಿದರು.

**(ಕ್ರಮ: ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ)**

ರಾಷ್ಟ್ರೀಯ ಹೆದ್ದಾರಿ ಇಲಾಖೆ ಅಧಿಕಾರಿಗಳು ಮಾತನಾಡುತ್ತಾ, ನಗರದ ರಸ್ತೆ ಅಭಿವೃದ್ಧಿ ಕಾರ್ಯ ರಾಷ್ಟ್ರೀಯ ಹೆದ್ದಾರಿ ಇಲಾಖೆಯಿಂದ ನಡೆಯುತ್ತಿದ್ದು, ಕೆಲವೆಡೆಗೆ ಭೂಸ್ವಾಧೀನತೆ ಅಗತ್ಯವಿದೆ. ಇದರಿಂದ ಯೋಜನೆಗೆ ಕ್ರಮ ಕೈಗೊಳ್ಳಲು ಹಿನ್ನೆಡೆಯಾಗುತ್ತಿದೆ. ಭೂ ಸ್ವಾದೀನ ಮಾಡಿಕೊಟ್ಟರೆ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು ಎಂದು ಹೇಳಿದರು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಮಾತನಾಡುತ್ತಾ, ಆದಷ್ಟು ಬೇಗನೇ ಭೂ ಸ್ವಾಧೀನಕ್ಕೆ ಸಂಬಂಧಿಸಿದಂತೆ ಕಾರ್ಯ ಪೂರ್ಣಗೊಳಿಸಲು ಜಿಲ್ಲಾಧಿಕಾರಿಯವರಿಗೆ ಸೂಚಿಸಿದರು.

**(ಕ್ರಮ: ಕಾರ್ಯ ನಿರ್ವಾಹಕ ಅಭಿಯಂತರರು, ರಾ.ಹೆ ಹುಬ್ಬಳ್ಳಿ)**

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಲೋಕೋಪಯೋಗಿ ಇಲಾಖೆಯಿಂದ ರೂ. 31.5 ಕೋಟಿ ವೆಚ್ಚದಲ್ಲಿ 159 ನೆರೆ ಪರಿಹಾರ ಕಾಮಗಾರಿಗಳು ನಡೆಯುತ್ತಿದ್ದು ಡಿಸೆಂಬರ್ 15ರ ಒಳಗಾಗಿ ಪೂರ್ಣಗೊಳಸಬೇಕೆಂದು ಸೂಚಿಸಿದರು.

**(ಕ್ರಮ: ಲೋಕೋಪಯೋಗಿ ಇಲಾಖೆ)**

**ಬಿ.ಆರ್.ಟಿ.ಎಸ್** ಅಧಿಕಾರಿಗಳು ಮಾತನಾಡುತ್ತಾ ಬಿ.ಆರ್.ಟಿ.ಎಸ್ ಚಿಗರಿ ಬಸ್ಸುಗಳು 2018 ರ ಅಕ್ಟೋಬರ್‌ನಲ್ಲಿ ಪ್ರಾರಂಭವಾಗಿವೆ. ಒಟ್ಟು 100 ಬಸ್‌ಗಳು ಸಂಚರಿಸುತ್ತಿದ್ದು, ಎಲ್ಲಾ ಬಸ್‌ಗಳಲ್ಲಿ ಎ.ಸಿ. ಸೌಲಭ್ಯವಿದೆ. ಹುಬ್ಬಳ್ಳಿ-ಧಾರವಾಡ ಮಧ್ಯೆ 32 ನಿಲ್ದಾಣಗಳು ಬರುತ್ತವೆ. 100 ಎಂದು ನಮೂದಿಸಿರುವ ಬಸ್ಸುಗಳು ಲಿಮಿಟೆಡ್ ನಿಲ್ದಾಣ ಇದ್ದು, ಹುಬ್ಬಳ್ಳಿಯಿಂದ ಧಾರವಾಡ ಮುಟ್ಟಲು 35 ನಿಮಿಷ ತೆಗೆದುಕೊಳ್ಳುತ್ತಾರೆ. ಉಳಿದ 200 ಎಂದು ನಮೂದಿಸಿದ ಬಸ್ಸುಗಳು 32 ನಿಲ್ದಾಣಗಳಲ್ಲಿಯೂ ನಿಲ್ಲುತ್ತಾ ಹೋಗಿ 15 ನಿಮಿಷ ತಡವಾಗಿ ಧಾರವಾಡ ಮುಟ್ಟುತ್ತಾರೆ. ಬಿ.ಆರ್.ಟಿ.ಎಸ್ ಕಂಟ್ರೋಲ್ ರೂಂ ಹೊಸೂರನಲ್ಲಿದೆ. ಸಾರ್ವಜನಿಕರಿಗೆ ಸ್ಮಾರ್ಟ ಕಾರ್ಡಗಳನ್ನೂ ಸಹ ಕೊಡುತ್ತಿದ್ದಾರೆ. ಬಿಆರ್‌ಟಿಎಸ್ ಬಸ್‌ನಲ್ಲಿ ಸಂಚರಿಸಲು ಪ್ರತಿ ವ್ಯಕ್ತಿಗೆ ರೂ.61 ಖರ್ಚಾಗುತ್ತದೆ. ಆದರೆ ಕೇವಲ ರೂ.22 ಮಾತ್ರ ಟಿಕೇಟ ಶುಲ್ಕವನ್ನು ಪಡೆಯಲಾಗುತ್ತಿದೆ. ಪ್ರತಿದಿನ 10 ಲಕ್ಷಗಳವರೆಗೆ ಹಣ ಸಂಗ್ರಹಣವಾಗುತ್ತದೆ ಎಂದು ಹೇಳಿದರು.

ಸಂಬಂಧಿಸಿದ ಅಧಿಕಾರಿಗಳು ಮಾತನಾಡುತ್ತಾ ಬೇಂದ್ರೆ ಬಸ್‌ನವರು 52 ನಿಲ್ದಾಣಗಳನ್ನು ತೆಗೆದುಕೊಳ್ಳುತ್ತಾರೆ. ಬೆಂದ್ರೆ ಬಸ್ ಹಾಗೂ ಬಿ.ಆರ್.ಟಿ.ಎಸ್ ಬಸ್‌ನವರಿಗೆ 700 ರಿಂದ 800 ಮೀಟರ್ ಅಂತರವಾಗುತ್ತದೆ. ಧಾರವಾಡ ಮುಟ್ಟಲು ಬಿ.ಆರ್.ಟಿ.ಎಸ್ ಬಸ್ಸಿಗಿಂತ 20 ನಿಮಿಷ ತಡವಾಗಿ ಮುಟ್ಟುತ್ತಾರೆ. ಆದರೆ ಬಹಳಷ್ಟು ಜನರು ಕೊನೆಯ ನಿಲ್ದಾಣ ಧಾರವಾಡಕ್ಕೆ ಹೋಗುವವರಿರುವುದಿಲ್ಲ. ಗಾಮನಗಟ್ಟಿ, ನವನಗರದಲ್ಲಿ ಇಳಿದುಕೊಳ್ಳುತ್ತಾರೆ. ಹೀಗಾಗಿ ಹಣ ಸಂಗ್ರಹಣೆ ಕುಂಟಿತವಾಗುತ್ತದೆ. ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಅವಶ್ಯಕತೆ ಇದ್ದಲ್ಲಿ ಫೀಡರ್ ಬಸ್‌ಗಳ ವ್ಯವಸ್ಥೆ ಮಾಡಿ ಎಂದು ಹೇಳಿದರು.

ಜಿಲ್ಲಾಧಿಕಾರಿಗಳು ಹುಬ್ಬಳ್ಳಿ-ಧಾರವಾಡದಲ್ಲಿ ತರಬೇತಿ ಕೇಂದ್ರಗಳ ವಿಷಯ ಕುರಿತು ಮಾತನಾಡುತ್ತಾ 53 ತರಬೇತಿ ಕೇಂದ್ರಗಳನ್ನು ಸ್ಥಾಪಿಸಿದ್ದು, ಸರಿ ಸುಮಾರು 600 ವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡುವ ಗುರಿಯನ್ನು ಹೊಂದಲಾಗಿದೆ ಎಂದು ತಿಳಿಸಿದರು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಸ್ಥಾಪಿಸಲಾಗಿರುವ ತರಬೇತಿ ಕೇಂದ್ರಗಳಲ್ಲಿ ಇನ್ನೂ ಹೆಚ್ಚಿನ ವಿದ್ಯಾರ್ಥಿಗಳು ಸದುಪಯೋಗ ಪಡೆದುಕೊಳ್ಳುವಂತಹ ಕ್ರಮಗಳನ್ನು ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿ ಸೂಚಿಸಿದರು.

**(ಕ್ರಮ: ಕೌಶಲ್ಯಾಭಿವೃದ್ಧಿ ಇಲಾಖೆ)**

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಹೊಸದಾಗಿ ಎಷ್ಟು ವಸತಿ ವಿನ್ಯಾಸಗಳನ್ನು ನಿರ್ಮಾಣ ಮಾಡಿದ್ದೀರಿ ಎಂದು ಕೇಳಿದರು. ಸಂಬಂಧಿಸಿದ ಅಧಿಕಾರಿಗಳು (ನಗರಾಭಿವೃದ್ಧಿ ಪ್ರಾಧಿಕಾರ) ಈಗಾಗಲೇ ಬಡಾವಣೆಗಳನ್ನು ಮಾಡಲಾಗಿದ್ದು, ಸಬ್ ಕಮೀಟಿ ಮಾಡಿ ಹಂಚಿಕೆ ಮಾಡುತ್ತೇವೆ ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ನಗರಾಭಿವೃದ್ಧಿ ಪ್ರಾಧಿಕಾರ ಕ್ರಿಯಾಶೀಲವಾಗಿಲ್ಲ. ಹುಬ್ಬಳ್ಳಿ-ಧಾರವಾಡ ಎರಡೂ ನಗರಗಳ ಮಧ್ಯ ಸಾಕಷ್ಟು ಭೂಮಿ ಇದ್ದು, ವಸತಿ ವಿನ್ಯಾಸಗಳನ್ನು ಮಾಡಲು ಆಸಕ್ತಿ ತೋರಿಸುತ್ತಿಲ್ಲ. ಅನಗತ್ಯ ಕಾರಣಗಳನ್ನು ನೀಡಿ ಯೋಜನೆಗಳನ್ನು ವಿಳಂಬ ಮಾಡಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

**(ಕ್ರಮ: ನಗರಾಭಿವೃದ್ಧಿ ಪ್ರಾಧಿಕಾರ)**

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ದಿ:17-1-2020 ರಂದು ಹೊಸ ಹೂಡಿಕೆದಾರರ ಸಮಾವೇಶ ಮಾಡಲು ನಿರ್ಧರಿಸಲಾಗಿದೆ. ಈ ಭಾಗದಲ್ಲಿ ಹೂಡಿಕೆ ಮಾಡಲು ಆಸಕ್ತಿ ಇರುವವರನ್ನು ಅಹ್ವಾನಿಸಲಾಗುವುದು. ಈ ಭಾಗದಲ್ಲಿ ಉದ್ಯಮ ಆರಂಭಿಸಲು ಪೂರಕ ವಾತಾವರಣ ಇರುವ ಬಗ್ಗೆ ಉದ್ಯಮಿದಾರರಿಗೆ ತಿಳುವಳಿಕೆ ನೀಡಬೇಕಾಗಿದೆ. ಕೆಲವು ಹೂಡಿಕೆದಾರರು ಉದ್ಯಮಕ್ಕಾಗಿ ಭೂಮಿ ಖರೀದಿಸಿ ಅಲ್ಲಿ ಉದ್ಯಮ ಆರಂಭಿಸದೇ ಹಾಗೆ ಭೂಮಿಯನ್ನು ಇಟ್ಟುಕೊಂಡು ಬಿಡುತ್ತಾರೆ. ಅಗತ್ಯ ಸೌಲಭ್ಯ ನೀಡಿದ ನಂತರವೂ ಹಿಂದೇಟು ಹಾಕಿದರೆ ಉದ್ಯಮ ಆರಂಭಿಸುವಂತೆ ಉದ್ಯಮಿದಾರರಿಗೆ ಕಟ್ಟುನಿಟ್ಟಾಗಿ ಹೇಳಬೇಕು ಎಂದರು. ಬೇಲೂರು ಕೈಗಾರಿಕಾ ಪ್ರದೇಶದಿಂದ ಮುಂದ 600 ಹಾಗೂ ಮಮಿಗಟ್ಟಿಯ 500 ಎಕರೆ ಭೂಮಿಯನ್ನು ಅಭಿವೃದ್ದಿಪಡಿಸಲು ಕ್ರಮ ಕೈಗೊಳ್ಳಬೇಕು. ದೊಡ್ಡ ದೊಡ್ಡ ಪ್ರಾಜೆಕ್ಟಗಳು ಇಲ್ಲಿ ಬರುವಂತಾಗಬೇಕು ಎಂದು ಹೇಳಿದರು.

**(ಕ್ರಮ: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ)**

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸ್ಮಾರ್ಟ ಸಿಟಿ ಯೋಜನೆಯ ಅನುಷ್ಠಾನವನ್ನು ಮಾಡಲು ಅಧಿಕಾರಿಗಳು ಬೇಗನೆ ಕ್ರಮ ಕೈಗೊಳ್ಳಬೇಕು. 56 ಯೋಜನೆಗಳಲ್ಲಿ ಕೇವಲ 6 ಯೋಜನೆಗಳು ಪೂರ್ಣಗೊಂಡಿದ್ದು, 26 ಯೋಜನೆಗಳ ಕಾಮಗಾರಿ ನಡೆಯುತ್ತಿದೆ. ಇನ್ನೂ ಕೆಲವು ಯೋಜನೆಗಳು ಆರಂಭಗೊಂಡಿಲ್ಲ. ಕಾಮಗಾರಿ ತ್ವರಿತಗೊಳಿಸಲು ಏನಾದರೂ ಸಮಸ್ಯೆಗಳಿದ್ದರೆ ಅದನ್ನು ಜಿಲ್ಲಾಧಿಕಾರಿಯವರ ಗಮನಕ್ಕೆ ತರಬೇಕು. ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ತಯಾರಾಗುವ ಯೋಜನೆಗಳಲ್ಲಿ ಜನ ಪ್ರತಿನಿಧಿಗಳು ತಿಳಿಸುವ ಅಭಿಪ್ರಾಯ ಮತ್ತು ಸಲಹೆಗಳನ್ನು ಪರಿಗಣಿಸಿ ಯೋಜನೆ ರೂಪಿಸಬೇಕು. ಸ್ಮಾರ್ಟ ಸಿಟಿ ಯೋಜನೆಯಲ್ಲಿ ಇನ್ನೂ 200 ಕೋಟಿ ರೂ. ಬಾಕಿ ಉಳಿದಿದ್ದು ಪರ್ಯಾಯ ಯೋಜನೆ ರೂಪಿಸಬೇಕೆಂದು ತಿಳಿಸಿದರು.

ಸಂಬಂಧಿಸಿದ ಅಧಿಕಾರಿಗಳು ಮಾತನಾಡುತ್ತಾ, ಜನಪ್ರತಿನಿಧಿಗಳ ಸಲಹೆ ಪಡೆದು ಪೂರಕ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಈಗಾಗಲೇ ಬಹುತೇಕ ಕಾಮಗಾರಿಗಳ ಟೆಂಡರ ಪ್ರಕ್ರಿಯೆ ಮುಕ್ತಾಯವಾಗಿದ್ದು, ಭೂಸ್ವಾಧೀನ ಪ್ರಕ್ರಿಯೆಯಿಂದಾಗಿ ಕಾಮಗಾರಿ ವಿಳಂಬವಾಗಿದೆ. ಉಳಿದಂತೆ ಯೋಜನೆ ಅನುಷ್ಠಾನಕ್ಕೆ ಅಗತ್ಯವಾಗಿರುವ ಸಹಕಾರವನ್ನು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ನೀಡುತ್ತಿದೆ ಎಂದು ತಿಳಿಸಿದರು.

**(ಕ್ರಮ: ವ್ಯವಸ್ಥಾಪಕ ನಿರ್ದೇಶಕರು, ಸ್ಮಾರ್ಟ್ ಸಿಟಿ)**

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಹುಬ್ಬಳ್ಳಿ-ಧಾರವಾಡ ಅವಳಿ ನಗರದಲ್ಲಿ ಸಮರ್ಪಕ ನೀರು ಪೂರೈಕೆಗೆ ಯಾವ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಯಬಯಸಿದರು. ಸಂಬಂಧಿಸಿದ ಅಧಿಕಾರಿಗಳು (ಜಲಮಂಡಳಿ) ಮಾತನಾಡುತ್ತಾ, ಹುಬ್ಬಳ್ಳಿ-ಧಾರವಾಡದಲ್ಲಿ ಎರಡು ಡಿವಿಜನ್‌ಗಳಿದ್ದು, ಈಗಾಗಲೇ ಮಲಪ್ರಭಾ ನದಿಯಿಂದ 26 ಕೋಟಿ ವೆಚ್ಚದಲ್ಲಿ ಪ್ರೊಜೆಕ್ಟನ್ನು ಕೈಗೆತ್ತಿಗೊಳ್ಳಲಾಗುತ್ತಿದ್ದು, ಸದರಿ ಪ್ರೊಜೆಕ್ಟನ್ನು ಜನವರಿ ತಿಂಗಳಲ್ಲಿ ಪೂರ್ಣಗೊಳಿಸಲಾಗುತ್ತದೆ ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಹುಬ್ಬಳ್ಳಿ-ಧಾರವಾಡ ಅವಳಿ ನಗರದಲ್ಲಿ 26 ಕೋಟಿ ವೆಚ್ಚದ ಪೊಜೆಕ್ಟಿಗೆ ಕ್ರಮ ಕೈಗೊಳ್ಳಬೇಕು. 40 ಎಮ್ ಎಲ್ ಡಿ ಪ್ರತಿದಿನ ಹೆಚ್ಚುವರಿಯಾಗಿ ನೀರನ್ನು ಮಲಪ್ರಭಾ ನದಿಯಿಂದ ಸರಬರಾಜು ಮಾಡುವ ಕಾಮಗಾರಿಯನ್ನು ಶೀಘ್ರವೇ ಪೂರ್ಣಗೊಳಿಸಿ ಅವಳಿ ನಗರದಲ್ಲಿ ಸಾರ್ವಜನಿಕರಿಗೆ ನೀರಿನ ವ್ಯತ್ಯಯ ಉಂಟಾಗದಂತೆ ನೋಡಿಕೊಳ್ಳಿರಿ ಎಂದು ಸೂಚಿಸಿದರು.

(**ಕ್ರಮ: ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ**)

ಸಭೆಯು ವಂದನಾರ್ಪಣೆಗಳೊಂದಿಗೆ ಮುಕ್ತಾಯಗೊಂಡಿತು.

( **ಗೌರವ ಗುಪ್ತ**)
ಸರಕಾರದ ಪ್ರಧಾನ ಕಾರ್ಯದರ್ಶಿಗಳು,
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ
ಧಾರವಾಡ
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

**ದಿನಾಂಕ: 13.11.2019 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಹಾಗೂ ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಶ್ರೀ ಅಂಜುಮ್ ಪರ್ವೇಜ್ ರವರ ಅಧ್ಯಕ್ಷತೆಯಲ್ಲಿ ಜರುಗಿದ ಬೆಂಗಳೂರು ನಗರ ಜಿಲ್ಲೆಯ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭಾ ನಡವಳಿ.**

**ಹಾಜರಿದ್ದವರು: ಅನುಬಂಧ 1 ರಲ್ಲಿ ಲಗತ್ತಿಸಲಾಗಿದೆ.**

ಪ್ರಥಮವಾಗಿ- ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಹಾಗೂ ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು ಸಭೆಯಲ್ಲಿ ಉಪಸ್ಥಿತರಿದ್ದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಹಾಗೂ ಸಭೆಗೆ ಹಾಜರಿದ್ದ ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ಬೆಂಗಳೂರು ನಗರ ಜಿಲ್ಲೆಯ ಅಪರ ಜಿಲ್ಲಾಧಿಕಾರಿಗಳು ಸಭೆಗೆ ಸ್ವಾಗತಿಸಿ, ಸಭೆಯನ್ನು ನಡೆಸಿಕೊಡುವಂತೆ ಅಧ್ಯಕ್ಷರನ್ನು ಕೋರಿದರು. ನಂತರ ಅಧ್ಯಕ್ಷರು ಈ ಕೆಳಕಂಡ ಇಲಾಖೆಯ ಕಾರ್ಯಕ್ರಮಗಳ ಪ್ರಗತಿಯನ್ನು ಪರಿಶೀಲಿಸಿದರು.

**1.ಕೃಷಿ ಇಲಾಖೆ:**

ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನ ಕೃಷಿಗೆ ಸಂಬಂಧಿಸಿದಂತೆ ಹಮ್ಮಿಕೊಳ್ಳಲಾದ ಚಟುವಟಿಕೆಗಳ ಬಗ್ಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಪರಿಶೀಲಿಸಿದಾಗ, ಜಿಲ್ಲೆಯಲ್ಲಿ 2019 ಜನವರಿ ಮಾಹೆಯಿಂದ ನವೆಂಬರ್ 6ನೇ ತಾರೀಖಿನವರೆಗೆ 798 ಮಿಲಿ ಮೀಟರ್ ವಾಸ್ತವ ಮಳೆಯಾಗಿದೆ. ಒಟ್ಟು 20154 ಹೆಕ್ಟೇರ್ ವಿಸ್ತೀರ್ಣದ ಗುರಿಗೆ 16690 ಹೆಕ್ಟೇರ್ ವಿಸ್ತೀರ್ಣದಲ್ಲಿ ಬಿತ್ತನೆಯಾಗಿದ್ದು, ಶೇ.83 ರಷ್ಟು ಪ್ರಗತಿಯಾಗಿದೆ. ಕಳೆದ ವರ್ಷಕ್ಕಿಂತ ಉತ್ತಮ ಇಳುವರಿ ಬರುವ ನಿರೀಕ್ಷೆಯಲ್ಲಿದೆ. ರಸಗೊಬ್ಬರ ಹಾಗೂ ಬಿತ್ತನೆ ಬೀಜಗಳ ಪೂರೈಕೆಗೆ ಸಂಬಂಧಿಸಿದಂತೆ ರೈತರಿಗೆ ಹಂಚಿಕೆ ಮಾಡಲಾಗಿದ್ದು, ಯಾವುದೇ ಸಮಸ್ಯೆ ಇರುವುದಿಲ್ಲ. ರಸಗೊಬ್ಬರ ಹಾಗೂ ಬಿತ್ತನೆ ಬೀಜಗಳ ದಾಸ್ತಾನು ಇರುತ್ತದೆಯೆಂದು ಇಲಾಖಾ ಅಧಿಕಾರಿಗಳು ತಿಳಿಸಿದರು.

ಬೆಳೆ ಸಮೀಕ್ಷೆ ಪ್ರಗತಿ ಪರಿಶೀಲಿಸಿ, ಬೆಂಗಳೂರು ಉತ್ತರ ಹಾಗೂ ಆನೇಕಲ್ ತಾಲ್ಲೂಕುಗಳಲ್ಲಿ ಪ್ರಗತಿ ಕಡಿಮೆ ಇರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ, ಸಮೀಕ್ಷೆಯನ್ನು ಚುರುಕುಗೊಳಿಸುವಂತೆ ಸಂಬಂಧಪಟ್ಟ ತಹಶೀಲ್ದಾರ್ ಹಾಗೂ ಜಂಟಿ ಕೃಷಿ ನಿರ್ದೇಶಕರು ನಿರ್ದೇಶನ ನೀಡಿದರು.

(ಕ್ರಮ: ಜಂಟಿ ಕೃಷಿ ನಿರ್ದೇಶಕರು, ಬೆಂಗಳೂರು ನಗರ ಜಿಲ್ಲೆ ಹಾಗೂ ತಹಶೀಲ್ದಾರ್, ಬೆಂಗಳೂರು ಉತ್ತರ ಮತ್ತು ಆನೇಕಲ್ ತಾಲ್ಲೂಕು)

**2. ಪಶು ಸಂಗೋಪನೆ ಇಲಾಖೆ:**

ಜಾನುವಾರುಗಳಿಗೆ ಮೇವಿನ ಲಭ್ಯತೆ ಬಗ್ಗೆ ಸಭೆಯಲ್ಲಿ ಪರಿಶೀಲಿಸಿದಾಗ, ಜಿಲ್ಲೆಯಲ್ಲಿ ಒಟ್ಟು 1.45ಲಕ್ಷ ಜಾನುವಾರುಗಳಿದ್ದು, ದಿನಾಂಕ: 08.11.2019 ಕ್ಕೆ ಒಟ್ಟು 73053.82 ಮೆ.ಟನ್ ಮೇವು ಲಭ್ಯವಿದ್ದು, ಇದು ಇನ್ನು 15 ವಾರಗಳಿಗೆ ಸಾಕಾಗುತ್ತಿದ್ದು, ಸದ್ಯಕ್ಕೆ ಯಾವುದೇ ಮೇವಿನ ಕೊರತೆ ಇರುವುದಿಲ್ಲವೆಂದು ಹಾಗೂ ಕ್ಯಾಂಪ್‌ಗಳನ್ನು ಬೆಂಗಳೂರು ನಗರ ಜಿಲ್ಲೆಯ 3 ತಾಲ್ಲೂಕುಗಳಲ್ಲಿ 4 ಕಡೆ ಆಗಸ್ಟ್ ಮಾಹೆಯಲ್ಲಿ ನಡೆಸಲಾಗಿರುವುದಾಗಿ ಅಧಿಕಾರಿಗಳು ಸಭೆಗೆ ತಿಳಿಸಿದರು. ಮುಂದುವರೆದು ಮೇವು

ದಾಸ್ತಾನಿಗೆ ಸಂಬಂಧಿಸಿದಂತೆ ಆನೇಕಲ್ ತಾಲ್ಲೂಕು, ರಾಮಕೃಷ್ಣಾಪುರದಲ್ಲಿರುವ ಕೃಷಿ ತರಬೇತಿ ಕೇಂದ್ರದಲ್ಲಿ ದಿನಾಂಕ: 08.08.2019 ರಲ್ಲಿ 4.72 ಮೆ.ಟನ್ ಮೇವು ಖರೀದಿಸಿದ್ದು, ಈ ಪೈಕಿ ದಿನಾಂಕ: 08.11.2019 ರವರೆವಿಗೆ 1.89 ಮೆ.ಟನ್ ಮೇವು ಖರ್ಚಾಗಿ ಬಾಕಿ 2.38 ಮೆ.ಟನ್ ಇದ್ದು ಮೇವಿನ ಸಮಸ್ಯೆ ಇಲ್ಲವೆಂದು ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಗೆ ತಿಳಿಸಿದರು.

ಜಾನುವಾರುಗಳಿಗೆ ಮೇವಿನ ಕೊರತೆಯಾಗದಂತೆ ಹಾಗೂ ರಾಸುಗಳಿಗೆ ಲಸಿಕೆಗಳನ್ನು ಕ್ರಮಬದ್ಧ ಅವಧಿಯಲ್ಲಿ ಪೂರೈಸುವಂತೆ ಕ್ರಮವಹಿಸಲು ಸೂಚನೆ ನೀಡಲಾಯಿತು.

(ಕ್ರಮ: ಉಪ ನಿರ್ದೇಶಕರು, ಪಶು ಸಂಗೋಪನಾ ಇಲಾಖೆ, ಬೆಂಗಳೂರು ನಗರ ಜಿಲ್ಲೆ)

**3. ಗ್ರಾಮೀಣ ಕುಡಿಯುವ ನೀರು :**

2019-20ನೇ ಸಾಲಿನಲ್ಲಿ ಪ್ರಕೃತಿ ವಿಕೋಪ ಅನುದಾನದಡಿ ಕುಡಿಯುವ ನೀರಿನ ಪುನಶ್ಚೇತನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಒಟ್ಟು 7 ವಿಧಾನಸಭಾ ಕ್ಷೇತ್ರಗಳಲ್ಲಿ 66 ಕಾಮಗಾರಿಗಳಿಗೆ ಅನುದಾನೆಯಾಗಿದ್ದು, ಪ್ರಗತಿ ಶೂನ್ಯವಾಗಿರುವುದನ್ನು ಮಾನ್ಯ ಅಧ್ಯಕ್ಷರು ಪರಿಶೀಲಿಸಿದಾಗ ಮುಂದುವರೆದು ಅಪರ ಜಿಲ್ಲಾಧಿಕಾರಿಗಳು ಮಾತನಾಡುತ್ತಾ, ಅಕ್ಟೋಬರ್ 2019ರ ಮಾಹೆಯಲ್ಲಿ ಆದೇಶ ಬಿಡುಗಡೆಯಾಗಿರುವುದಾಗಿ ಸಭೆಗೆ ತಿಳಿಸಿದಾಗ, ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರಿಗೆ ಸರಿಯಾದ ಸಮಯದಲ್ಲಿ ಮಂಜೂರಾದ ಅನುದಾನವನ್ನು ವೆಚ್ಚ ಮಾಡಿ ಪ್ರಗತಿ ಸಾಧಿಸುವಂತೆ ತಿಳಿಸುತ್ತಾ, ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು 66 ಕಾಮಗಾರಿಗಳ ಪ್ರಗತಿ ಬಗ್ಗೆ ಮರು ಚರ್ಚೆ ಮಾಡುವಂತೆ ಮಾನ್ಯ ಅಧ್ಯಕ್ಷರು ಸೂಚನೆ ನೀಡಿದರು.

ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ಹಾಗೂ ಬೆಂಗಳೂರು ಉತ್ತರ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಒಟ್ಟು 13 ಗ್ರಾಮಗಳಲ್ಲಿ ಪ್ರತಿ ದಿನ 37 ಬಾರಿ (ಟ್ರಿಪ್) ಕುಡಿಯುವ ನೀರನ್ನು ಟ್ಯಾಂಕರ್ ಮೂಲಕ ಸರಬರಾಜು ಮಾಡಲಾಗುತ್ತಿದೆ. ಈ ಪೈಕಿ 9 ಗ್ರಾಮಗಳಿಗೆ ಪ್ರತಿ ದಿನ ಟ್ಯಾಂಕರ್ ಮೂಲಕ ನೀರನ್ನು ಸರಬರಾಜು ಮಾಡಲಾಗುತ್ತಿದೆಯೆಂದು ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದವರು ತಿಳಿಸಿದರು

ಕಾರ್ಯಪಾಲಕ ಅಭಿಯಂತರರು ಮಾತನಾಡುತ್ತಾ, ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯ ಒಂದು ನಗರ ಸಭೆ ಹಾಗೂ 5 ಪುರಸಭೆಗಳಿಗೆ ಕುಡಿಯುವ ನೀರು ಸರಬರಾಜಿಗೆ ಸಂಬಂಧಿಸಿದಂತೆ ನವೆಂಬರ್ ಮಾಹೆಯಲ್ಲಿ ಒಟ್ಟು ಲಭ್ಯವಿರುವ ಅನುದಾನ ರೂ.389.21 ಲಕ್ಷ ಈ ಪೈಕಿ ಇಲ್ಲಿಯವರೆವಿಗೆ ರೂ.187.34 ಲಕ್ಷ ಅನುದಾನ ವೆಚ್ಚವಾಗಿ ಬಾಕಿ ರೂ.201.87 ಲಕ್ಷ ಬಾಕಿ ಇರುವುದಾಗಿ ಸಭೆಗೆ ತಿಳಿಸಿದರು. ಮುಂದುವರೆದು, ಮಾನ್ಯ ಅಧ್ಯಕ್ಷರು ಸೂರ್ಯಸಿಟಿವರೆಗೆ ಕಾವೇರಿ ಪೈಪ್ ಲೈನ್ ಆಗಿರುವ ಬಗ್ಗೆ ಪ್ರಶ್ನಿಸಿದಾಗ, ಕೆಲವೊಂದು ಪ್ರದೇಶ ಬಾಕಿ ಇರುವುದಾಗಿ ಕಾರ್ಯಪಾಲಕ ಅಭಿಯಂತರರು ಉತ್ತರಿಸಿದರು.

ಟಾಸ್ಕ್ ಪೋರ್ಸ್ ಇತರೆ ಯೋಜನೆ ಹೊರತುಪಡಿಸಿ ಬೆಂಗಳೂರು ನಗರ ಜಿಲ್ಲೆಯಲ್ಲಿ ರೂ.5.00 ಲಕ್ಷಕ್ಕಿಂತ ಕಡಿಮೆ ಮೊತ್ತದ ಹಾಗೂ ರೂ.5.00 ಕ್ಕಿಂತ ಹೆಚ್ಚಿನ ಮೊತ್ತದ ಕಾಮಗಾರಿಗಳ ವಿವರವನ್ನು ಪರಿಶೀಲಿಸಿ, ಮುಂದುವರೆದ ಕಾಮಗಾರಿಗಳು ಹಾಗೂ ಹೊಸ ಕಾಮಗಾರಿಗಳು ಸೇರಿ ಒಟ್ಟು 282 ಕಾಮಗಾರಿಗಳಾಗಿದ್ದು, ಈ ಪೈಕಿ ಮುಂದುವರೆದ 80 ಕಾಮಗಾರಿಗಳು ಮಾತ್ರ ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಗಳು ಬಾಕಿ ಇದೆ. ಅಲ್ಲದೆ ಆರ್ಥಿಕ ವರ್ಷ ಅಂತ್ಯಗೊಳ್ಳಲು ಕೆಲವೇ ತಿಂಗಳು ಮಾತ್ರ ಬಾಕಿ ಇರುವ ಬಗ್ಗೆ ಪ್ರಸ್ತಾಪ ಮಾಡುತ್ತಾ, ಟೆಂಡರ್ ಮೂಲಕ ಆಯ್ಕೆಯಾಗುವ ಕಾಮಗಾರಿಗಳು

ನಿಧಾನವಾಗುತ್ತದೆ. ಆದರೆ ಟೆಂಡರ್ ರಹಿತ ಕಾಮಗಾರಿಗಳನ್ನು ಬೇಗ ಮುಗಿಸಲು ಪ್ರಯತ್ನ ಪಡುವಂತೆ ಹಾಗೂ ಮಾರ್ಚ್ ಅಂತ್ಯದೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮವಹಿಸುವಂತೆ ಮಾನ್ಯ ಅಧ್ಯಕ್ಷರು ಸೂಚನೆ ನೀಡಿದರು.

ಶುದ್ಧ ಕುಡಿಯುವ ನೀರಿನ ಘಟಕಗಳಿಗೆ ಸಂಬಂಧಿಸಿದಂತೆ ವಿವಿಧ ಏಜೆನ್ಸಿ ಮುಖಾಂತರ ತಹಲ್‌ವರೆವಿಗೆ ಒಟ್ಟು 683 ಭೌತಿಕ ಗುರಿ ನಿಗಧಿಪಡಿಸಿದ್ದು, ಈ ಪೈಕಿ 51 ಕಾಮಗಾರಿಗಳು ವಿವಿಧ ಕಾರಣಗಳಿಂದ ಬಾಕಿ ಉಳಿದಿದ್ದು, ಉಳಿದ 624 ಘಟಕಗಳು ಸ್ಥಾಪನೆಯಾಗಿದೆ. ಇದರಲ್ಲಿ 614 ಘಟಕಗಳು ಸುಸ್ಥಿತಿಯಲ್ಲಿದ್ದು, 10 ಘಟಕಗಳು ಕಾರ್ಯನಿರ್ವಹಿಸುತ್ತಿಲ್ಲ. 9 ನಿರ್ವಹಣೆ ಹಾಗೂ ದುರಸ್ತಿ ತೊಂದರೆ, ಉಳಿದ ಒಂದು ಘಟಕ ಇತರೆ ತೊಂದರೆ ಇರುವುದಾಗಿ ಕಾರ್ಯಪಾಲಕ ಅಭಿಯಂತರರು ಸಭೆಗೆ ತಿಳಿಸಿದರು. ಮುಂದುವರೆದು, ಟೆಂಡರ್ ಪ್ರಕ್ರಿಯೆಗೆ ಅನುಮೋದನೆ ನೀಡುವ ಬಗ್ಗೆ ವಿಚಾರಿಸಿ, ಕುಡಿಯುವ ನೀರಿನ ಗುಣಮಟ್ಟದ ಬಗ್ಗೆ ಪ್ರಯೋಗಾಲಯದಲ್ಲಿ ಪರೀಕ್ಷೆ ಮಾಡುವ ಬಗ್ಗೆ ಪ್ರಶ್ನಿಸಿದಾಗ, ವರ್ಷಕ್ಕೆ 2 ಸಾರಿ ಕುಡಿಯುವ ನೀರಿನ ಗುಣಮಟ್ಟವನ್ನು ಪರೀಕ್ಷೆ ಮಾಡಲಾಗುವುದೆಂದು ತಿಳಿಸಿದಾಗ, ಶುದ್ಧ ಕುಡಿಯುವ ನೀರಿನ ಬೆಲೆಯ ಬಗ್ಗೆ ಚರ್ಚಿಸಿದಾಗ, 5 ರೂಪಾಯಿಗೆ 20 ಲೀಟರ್ ಕುಡಿಯುವ ನೀರನ್ನು ಪಡೆಯಬಹುದಾಗಿದೆಯೆಂದು ಇಲಾಖಾ ಅಧಿಕಾರಿಗಳು ಸಭೆಗೆ ತಿಳಿಸಿದರು.

2019-20ನೇ ಸಾಲಿಗೆ ಬೆಂಗಳೂರು ನಗರ ಜಿಲ್ಲೆಯ ಪ್ರಕೃತಿ ವಿಕೋಪ ಪರಿಹಾರ ನಿಧಿಯ ಅನುದಾನದಡಿ ಒಟ್ಟು 66 ಕಾಮಗಾರಿಗಳು ಆಯ್ಕೆಯಾಗಿದ್ದು, ಅಂದಾಜು ಮೊತ್ತ ರೂ.99.00 ಲಕ್ಷಗಳಾಗಿದ್ದು, ಈ ಪೈಕಿ 66 ಕಾಮಗಾರಿಗಳು ಪೂರ್ಣಗೊಂಡು ರೂ.94.61 ಲಕ್ಷ ಅನುದಾನ ವೆಚ್ಚವಾಗಿದೆ. ಬಿಲ್ಲುಗಳನ್ನು 3ನೇ ಪಾರ್ಟಿ ತಪಾಸಣೆ ಮಾಡಿಸಿ ಜಿಲ್ಲಾಧಿಕಾರಿಗಳಿಗೆ ಉಳಿಕೆ ಹಣ ಬಿಡುಗಡೆಗಾಗಿ ಕೋರಿಕೆ ಸಲ್ಲಿಸಲಾಗುವುದೆಂದು ಇಲಾಖಾ ಅಧಿಕಾರಿಗಳು ಸಭೆಗೆ ತಿಳಿಸಿದರು. ಅಕ್ಟೋಬರ್ 2019 ರಲ್ಲಿ ಆದೇಶವಾಗಿರುವುದಾಗಿ ಅಪರ ಜಿಲ್ಲಾಧಿಕಾರಿಗಳು ಸಭೆಗೆ ತಿಳಿಸಿದರು. ಮುಂದುವರೆದು, 66 ಕಾಮಗಾರಿಗಳ ಮರು ಪರಿಶೀಲನೆ ಮಾಡುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು.

ತುರ್ತು ಪರಿಹಾರ ಹಾಗೂ ಶಾಶ್ವತ ಪರಿಹಾರ ಯೋಜನೆಯಡಿ ಅನುಕ್ರಮವಾಗಿ ತುರ್ತು ಪರಿಹಾರ ಯೋಜನೆಯಡಿ ಹೊಸದಾಗಿ ಕೊಳವೆ ಬಾವಿ ಕೊರೆದು, ಪಂಪು, ಮೋಟಾರ್ ಅಳವಡಿಸಿ, ಪೈಪ್ ಲೈನ್ ಮಾಡಲು ರೂ.130.00 ಲಕ್ಷಗಳ ಅನುದಾನ ಅಗತ್ಯವಿದೆ. ಶಾಶ್ವತ ಪರಿಹಾರ ಯೋಜನೆಯಡಿ ಮೇಕೆದಾಟು ಬಳಿ ಸಂಗಮದಿಂದ ಪೈಪ್ ಲೈನ್ ಮೂಲಕ ಜಲಸಂಗ್ರಹಣೆ ಮಾಡಿ ಶುದ್ಧೀಕರಣ ಮಾಡಿ ನೀರು ಸರಬರಾಜು ಮಾಡಲು ಸುಮಾರು ರೂ.100.00 ಕೋಟಿ ಹಾಗೂ ಹೆಸರಘಟ್ಟ ಕೆರೆ ಹಾಗೂ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ನೀರನ್ನು ಪಡೆದು ಸಂಗ್ರಹ ಮಾಡಿ ಶುದ್ಧೀಕರಿಸಿದ ನೀರು ಸರಬರಾಜು ಮಾಡಲು ಹೊಸ ಯೋಜನೆ ಕಾರ್ಯಗತಗೊಳಿಸಲು ಸುಮಾರು 70.00 ಕೋಟಿ ಅನುದಾನ ಅಗತ್ಯವಿದೆಯೆಂದು ಕಾರ್ಯಪಾಲಕ ಅಭಿಯಂತರರು ಸಭೆಯ ಗಮನಕ್ಕೆ ತಂದರು. ಒಂದು ಪ್ರಸ್ತಾವನೆ ಸಿದ್ಧಪಡಿಸಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಕಚೇರಿಗೆ ಕಳುಹಿಸಿಕೊಡುವಂತೆ ಸೂಚನೆ ನೀಡಿದರು.

ಅಂತಿಮವಾಗಿ ಸರ್ಕಾರದಿಂದ ಮಂಜೂರಾಗಿರುವ ಅನುದಾನ ವ್ಯಪಗತವಾಗದಂತೆ ಕ್ರಮವಹಿಸುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚನೆ ನೀಡಿದರು.

(ಕ್ರಮ:ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿ.ಪಂ. ಬೆಂಗಳೂರು ನಗರ ಜಿಲ್ಲೆ ಹಾಗೂ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ)

## 4. ಶಿಕ್ಷಣ ಇಲಾಖೆ:

### ಉಚಿತ ಷೂ ಸಾಕ್ಸ್ ವಿತರಣೆ:

2019-20ನೇ ಸಾಲಿಗೆ 31.10.2019ರ ಅಂತ್ಯಕ್ಕೆ ಶೇ.100 ರಷ್ಟು ಪ್ರಗತಿ ಸಾಧಿಸಿರುವುದನ್ನು ಪರಿಶೀಲಿಸಿ, ಎಲ್ಲಾ ಮಕ್ಕಳಿಗೂ ಷೂ, ಸಾಕ್ಸ್ ತಲುಪಿರುವ ಬಗ್ಗೆ ಪರಿಶೀಲನೆ ಮಾಡಲಾಗಿದೆಯೇ? ಎಂಬ ಬಗ್ಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಪ್ರಶ್ನಿಸಿದಾಗ, ಶಾಲೆಯ ಎಸ್.ಡಿ.ಎಂ.ಸಿ.ಯವರು ಷೂ, ಸಾಕ್ಸ್ ಖರೀದಿ ಮಾಡಿ ಹಂಚಿಕೆ ಮಾಡುತ್ತಿದ್ದಾರೆ. ಅವರಿಗೆ ಮಕ್ಕಳ ಸಂಖ್ಯೆಗನುಗುಣವಾಗಿ ಅನುದಾನವನ್ನು ಹಂಚಿಕೆ ಮಾಡಲಾಗುವುದೆಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರ ಪರವಾಗಿ ಸಭೆಯಲ್ಲಿ ಹಾಜರಿದ್ದ ಶಿಕ್ಷಣ ಅಧಿಕಾರಿಗಳು ಉತ್ತರಿಸಿದರು. ಇಲಾಖೆಯ ಅಧಿಕಾರಿಗಳು ಸಹ ರ್‍ಯಾಡಂ ಆಗಿ ಶಾಲೆಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡುವಂತೆ ಸೂಚನೆ ನೀಡಿದರು.

ಶಿಕ್ಷಕರ ವೇತನಕ್ಕೆ ಸಂಬಂಧಿಸಿದಂತೆ ಭೌತಿಕ ಗುರಿ 1074 ಇದ್ದು, ಒಟ್ಟು ರೂ.3844.512 ಲಕ್ಷ ನಿಗಧಿಯಾಗಿ ಇಲ್ಲಿಯವರೆವಿಗೆ ಬಿಡುಗಡೆಯಾದ ಅನುದಾನ ರೂ.1635.10 ಲಕ್ಷ ಸಾಧನ ರೂ.1099.76 ಲಕ್ಷವಿದ್ದು, ಶೇ.67.26 ರಷ್ಟು ಪ್ರಗತಿಯಾಗಿದೆ. ಈ ಬಗ್ಗೆ ಪರಿಶೀಲನೆ ಮಾಡುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಿಳಿಸಲಾಯಿತು.

(ಕ್ರಮ: ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ ಜಿಲ್ಲೆ ಹಾಗೂ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂ.ಉತ್ತರ ಹಾಗೂ ದಕ್ಷಿಣ ಜಿಲ್ಲೆ)

## 5. ಆರ್.ಟಿ.ಇ:

ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆಯ ಉಪ ನಿರ್ದೇಶಕರು ಸಭೆಗೆ ಗೈರು ಹಾಜರಾಗಿದ್ದು, ಅವರ ಪ್ರತಿನಿಧಿಗಳು ಸರಿಯಾದ ಮಾಹಿತಿಯನ್ನು ಪ್ರಸ್ತುತಪಡಿಸದ ಕಾರಣ 2019ನೇ ಶೈಕ್ಷಣಿಕ ವರ್ಷದಲ್ಲಿ ಆರ್.ಟಿ.ಇ. ಯೋಜನೆಯಡಿ ನಿಗಧಿಪಡಿಸಿದ ಗುರಿ, ಶಾಲೆಗೆ ದಾಖಲಾದ ಮಕ್ಕಳ ಸಂಖ್ಯೆ ವಿವರವನ್ನೊಳಗೊಂಡಂತೆ ಮಾಹಿತಿಯನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಕಛೇರಿಗೆ ಸಲ್ಲಿಸುವಂತೆ ಸೂಚನೆ ನೀಡಲಾಯಿತು.

(ಕ್ರಮ: ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆ)

## 6. ಆರೋಗ್ಯ ಮತ್ತು ಕುಟುಂಬ ಕಲ್ಯಾಣ:

ಬೆಂಗಳೂರು ನಗರ ಜಿಲ್ಲೆಯಲ್ಲಿ ಹೆಚ್1 ಎನ್1, ಚಿಕನ್ ಗೂನ್ಯ ಮತ್ತು ಡೆಂಗ್ಯೂ ಕಾಯಿಲೆಗಳ ನಿಯಂತ್ರಣ ಹಾಗೂ ಮರಣದ ಸಂಖ್ಯೆ ಬಗ್ಗೆ ಚರ್ಚಿಸಿ, ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಹೆಚ್ಚಿನ ಸಾವುಗಳ ಪ್ರಕರಣಗಳನ್ನು ದಿನಪತ್ರಿಕೆಯಲ್ಲಿ ಗಮನಿಸಲಾಗಿದೆ. ರಾಷ್ಟ್ರೀಯ ನಗರ ಆರೋಗ್ಯ ಮಿಷನ್ (NUHM) ಯೋಜನೆ ಬಗ್ಗೆ ಈ ಹಿಂದಿನ ಸಭೆಯಲ್ಲಿ ಚರ್ಚಿಸಿದಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಬರುವ ಆರೋಗ್ಯ ಅಧಿಕಾರಿಗಳನ್ನು ಸಭೆಗೆ ಆಹ್ವಾನಿಸುವಂತೆ ಸೂಚಿಸಲಾಗಿತ್ತು. ಆದುದರಿಂದ ಮುಂದಿನ ಸಭೆಗೆ ಕಡ್ಡಾಯವಾಗಿ ಬಿ.ಬಿ.ಎಂ.ಪಿ. ಆರೋಗ್ಯಾಧಿಕಾರಿಗಳು ತಪ್ಪದೆ ಹಾಜರಾಗುವಂತೆ

ಬಿ.ಬಿ.ಎಂ.ಪಿ. ಆಯುಕ್ತರಿಗೆ  ಪತ್ರ ಬರೆಯಲು ಅಪರ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಯಿತು. ಮುಂದುವರೆದು, ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಡೆಂಗ್ಯೂ, ಹೆಚ್1 ಎನ್1, ಚಿಕೂನ್ ಗುನ್ಯಾ, ಮಲೇರಿಯಾ ಇಂತಹ ಸಾಂಕ್ರಾಮಿಕ ಖಾಯಿಲೆಗಳನ್ನು ನಿಯಂತ್ರಿಸಲು ಹೆಚ್ಚಿನ ಕ್ರಮವಹಿಸುವಂತೆ ಸೂಚನೆ ನೀಡಲಾಯಿತು.

ಜನನಿ ಸುರಕ್ಷ ಯೋಜನೆಯ ಪ್ರಗತಿಯನ್ನು ಪರಿಶೀಲಿಸಿ, ಇದರ ಪ್ರಯೋಜನ ಗ್ರಾಮೀಣ ಪ್ರದೇಶದ  ಜನರಿಗೆ ತಲುಪುತ್ತಿರುವ ಬಗ್ಗೆ ಪರಿಶೀಲನೆ ಮಾಡುವಂತೆ ಸೂಚನೆ ನೀಡಿದರು.

(ಕ್ರಮ: ಅಪರ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ)

**7. ಸಮಾಜ ಕಲ್ಯಾಣ ಇಲಾಖೆ:**

ಸಮಾಜ ಕಲ್ಯಾಣ ಇಲಾಖೆಯಲ್ಲಿನ ವಿವಿಧ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಅಕ್ಟೋಬರ್ ಮಾಹೆಯ ಅಂತ್ಯಕ್ಕೆ ಶೇ.90.69 ರಷ್ಟು ಪ್ರಗತಿ ಸಾಧಿಸಿರುವುದನ್ನು ಸಭೆಯು ಪರಿಶೀಲಿಸಿ, ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ಮಕ್ಕಳ ದಾಖಲಾತಿ ಕಡಿಮೆ ಇರುವ ಬಗ್ಗೆ ಚರ್ಚಿಸಿದಾಗ,  ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ಮಕ್ಕಳ ದಾಖಲಾತಿ ಕಡಿಮೆ ಇದ್ದು,  ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಬೇಡಿಕೆ ಹೆಚ್ಚಾಗಿರುವುದರಿಂದ  ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳನ್ನು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನಾಗಿ ಪರಿವರ್ತಿಸಲು ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಿರುವುದಾಗಿ ಇಲಾಖಾ ಅಧಿಕಾರಿಗಳು ಸಭೆಯ ಗಮನಕ್ಕೆ ತಂದರು.  ಸದರಿ ಪ್ರಸ್ತಾವನೆಯನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಕಚೇರಿಗೆ ಸಲ್ಲಿಸುವಂತೆ ಸೂಚಿಸಲಾಯಿತು.  ಮುಂದುವರೆದು, ವಿದ್ಯಾರ್ಥಿನಿಲಯಗಳಿಗೆ ನಿವೇಶನದ ಲಭ್ಯತೆ ಬಗ್ಗೆ ಪ್ರಸ್ತಾಪಿಸಿದಾಗ, ಎಲ್ಲಾ ವಿದ್ಯಾರ್ಥಿನಿಲಯಗಳಿಗೆ ನಿವೇಶನ ದೊರೆತಂತಾಗಿದೆ. ಆನೇಕಲ್ ತಾಲ್ಲೂಕಿನ ಒಂದು ವಿದ್ಯಾರ್ಥಿನಿಲಯ ಬಾಕಿ ಇರುವುದಾಗಿ ಇಲಾಖಾ ಅಧಿಕಾರಿಗಳು ಉತ್ತರಿಸಿದರು.

ವಿದ್ಯಾರ್ಥಿ  ವೇತನಕ್ಕೆ ಸಂಬಂಧಿಸಿದಂತೆ ಇ-ಗೌರ್ನರ್ ಮುಖಾಂತರ ವಿದ್ಯಾರ್ಥಿವೇತನ ದಾಖಲಾತಿ ಪ್ರಕ್ರಿಯೆ ನಡೆದಿದ್ದು, ಶೇ.100 ರಷ್ಟು  ಪ್ರಗತಿಯಲ್ಲಿದೆ. ಆದರೆ 2018-19ನೇ ಸಾಲಿನ ವಿದ್ಯಾರ್ಥಿವೇತನ ಶಿಕ್ಷಣ ಇಲಾಖೆಯಲ್ಲಿ ಬಾಕಿ ಉಳಿದಿರುವುದಾಗಿ ಜಂಟಿ ನಿರ್ದೇಶಕರು ಸಭೆಗೆ ತಿಳಿಸಿದರು. ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಎರಡೂ ಜಿಲ್ಲೆಯ ಉಪ ನಿರ್ದೇಶಕರು ಕ್ರಮವಹಿಸುವಂತೆ ತಿಳಿಸಲಾಯಿತು.

(ಕ್ರಮ: ಜಂಟಿ ನಿರ್ದೇಶಕರು,ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ ಹಾಗೂ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆ)

**8.ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ:**

ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಶೇ.40 ರಷ್ಟು ನ್ಯಾಷನಲ್ ಸ್ಕಾಲರ್ ಪೋರ್ಟಲ್ ಸಂಬಂಧಿಸಿದಂತೆ ಕೆಲವು ಶಾಲೆಗಳು ನೋಂದಣಿ ಮಾಡಿಕೊಂಡಿರುವುದಿಲ್ಲ.  ಇದರಿಂದ ಅರ್ಜಿಗಳು ವೀವ್ ಆಗುತ್ತಿಲ್ಲ.  ಆದುದರಿಂದ 3 ದಿನದೊಳಗಾಗಿ ನೋಂದಣಿ ಪ್ರಕ್ರಿಯೆ ಮುಗಿಸಲು ಸಂಬಂಧಪಟ್ಟ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕೆಂದು ಜಿಲ್ಲಾ ಅಧಿಕಾರಿಗಳು ಮಾನ್ಯ ಅಧ್ಯಕ್ಷರಲ್ಲಿ ಮನವಿ ಮಾಡಿಕೊಂಡರು.  ಈ

ಬಗ್ಗೆ ಪರಿಶೀಲಿಸಿ, ಎರಡೂ ಜಿಲ್ಲೆಯ ಉಪ ನಿರ್ದೇಶಕರು, ಬಿ.ಇ.ಓ.ಗಳು, ಸಿ.ಆರ್.ಪಿ, ಇ.ಸಿ.ಓ.ಮುಖಾಂತರ್ ಜರೂರಾಗಿ ನೋಂದಣಿ ಕಾರ್ಯಕ್ರಮವನ್ನು 3 ದಿನದೊಳಗಾಗಿ ಪೂರ್ಣಗೊಳಿಸಲು ಸೂಕ್ತ ಕ್ರಮವಹಿಸುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚನೆ ನೀಡಿದರು ಹಾಗೂ ಎರಡೂ ಜಿಲ್ಲೆಯ ಉಪ ನಿರ್ದೇಶಕರು ಯಾವುದೇ ಕಾರಣವನ್ನು ಹೇಳದಂತೆ ದಿನಾಂಕ: 14.11.2019 ರಂದು ಬೆಳಿಗ್ಗೆ 10.00 ಗಂಟೆಗೆ ಅಪರ ಜಿಲ್ಲಾಧಿಕಾರಿಯವರನ್ನು ಸಂಪರ್ಕಿಸಲು ತಿಳಿಸುವಂತೆ ಸಭೆಗೆ ಹಾಜರಿದ್ದ ಶಿಕ್ಷಣ ಅಧಿಕಾರಿಯವರಿಗೆ ತಿಳಿಸಲಾಯಿತು.

(ಕ್ರಮ: ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆ)

## 9. ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ:

2019-20ನೇ ಸಾಲಿನ ವಿವಿಧ ಯೋಜನೆಗಳ ಪ್ರಗತಿ ಪರಿಶೀಲಿಸಿ, ಅರ್ಜಿಗಳು ಮಾನ್ಯ ಶಾಸಕರುಗಳಿಗೆ ಕಳುಹಿಸಲಾಗಿರುವುದಾಗಿ ಷರಾದಲ್ಲಿ ನಮೂದಿಸಿರುತ್ತಾರೆ. ಅಧಿಕಾರಿಗಳು ಫಲಾನುಭವಿಗಳ ಪಟ್ಟಿಯನ್ನು ಪಡೆದು, ನಿಗಧಿಪಡಿಸಿರುವ ಭೌತಿಕ ಹಾಗೂ ಆರ್ಥಿಕ ಗುರಿಯಂತೆ ಪ್ರಗತಿ ಸಾಧಿಸುವಲ್ಲಿ ವಿಫಲರಾಗಿರುತ್ತಾರೆ. ಇದಕ್ಕೆ ಸಮಜಾಯಿಷಿ ನೀಡುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಿಳಿಸಿದಾಗ, ಜಿಲ್ಲಾ ವ್ಯವಸ್ಥಾಪಕರು ಗೈರು ಹಾಜರಾಗಿದ್ದು, ಪ್ರತಿನಿಧಿಸಿದ್ದ ಅಧಿಕಾರಿಯವರು ಸಮರ್ಪಕ ಮಾಹಿತಿಯನ್ನು ಸಭೆಗೆ ಮಂಡಿಸದ ಕಾರಣ ಗೈರು ಹಾಜರಾಗಿರುವ ಜಿಲ್ಲಾ ವ್ಯವಸ್ಥಾಪಕರಿಗೆ ಕಾರಣ ಕೇಳಿ ನೋಟೀಸು ಜಾರಿ ಮಾಡುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚನೆ ನೀಡಿದರು. ಹಾಗೂ ನಿಗಮದ ಪ್ರಗತಿ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಅಪರ ಜಿಲ್ಲಾಧಿಕಾರಿಗಳು ಪರಿಶೀಲನೆ ಮಾಡುವಂತೆ ಸಹ ತಿಳಿಸಿದರು. ದಿನಾಂಕ: 14.11.2019 ರಂದು ಬೆಳಿಗ್ಗೆ 10.30 ಗಂಟೆಗೆ ಜಿಲ್ಲಾ ವ್ಯವಸ್ಥಾಪಕರು, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಕಛೇರಿಗೆ ಭೇಟಿ ನೀಡುವಂತೆ ತಿಳಿಸಲಾಯಿತು.

(ಕ್ರಮ: ಜಿಲ್ಲಾ ವ್ಯವಸ್ಥಾಪಕರು, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು ನಗರ ಜಿಲ್ಲೆ)

## 10. ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ:

2019-20ನೇ ಸ್ಥಾಲಿಗೆ ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ ಒಟ್ಟು ಭೌತಿಕ ಗುರಿ 1945 ಆರ್ಥಿಕ ಗುರಿ ರೂ.867.05 ನಿಗಧಿಯಾಗಿದ್ದು, ಇಲ್ಲಿಯವರೆಗೆ ರೂ.808.90 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ತಹಲ್‌ವರೆವಿಗೆ ರೂ.515.83 ಲಕ್ಷ ವೆಚ್ಚವಾಗಿ 1231 ಫಲಾನುಭವಿಗಳು ಸವಲತ್ತುಗಳ ಪ್ರಯೋಜನ ಪಡೆದಿರುವುದನ್ನು ಸಭೆಯು ಪರಿಶೀಲಿಸಿತು. ಇಲ್ಲಿಯವರೆವಿಗೆ ಮಾನ್ಯ ಶಾಸಕರ ಬಳಿ ಬಾಕಿ ಉಳಿದಿರುವ ಅರ್ಜಿಗಳ ಬಗ್ಗೆ ಮಾನ್ಯ ಅಧ್ಯಕ್ಷರು ವಿಚಾರಿಸಲಾಗಿ, ಕೇವಲ 5 ಅರ್ಜಿಗಳು ಮಾತ್ರ ಬಾಕಿ ಇರುವುದಾಗಿ ಇಲಾಖಾ ಅಧಿಕಾರಿಗಳು ಸಭೆಗೆ ತಿಳಿಸಿದರು.

## 11. ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ:

2019-20ನೇ ಸಾಲಿನ ವಿವಿಧ ಯೋಜನೆಗಳ ಭೌತಿಕ ಹಾಗೂ ಆರ್ಥಿಕ ಗುರಿ ಪ್ರಗತಿ ಶೂನ್ಯವಾಗಿರುವುದನ್ನು ಪರಿಶೀಲಿಸಿ, ಸಭೆಗೆ ಜಿಲ್ಲಾ ವ್ಯವಸ್ಥಾಪಕರು ಗೈರು ಹಾಜರಾಗಿದ್ದು, ಇವರಿಗೆ ನೋಟೀಸು ಜಾರಿ ಮಾಡುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚನೆ ನೀಡಿದರು.

(ಕ್ರಮ: ಅಪರ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ)

**12. ರೇಷ್ಮೆ ಇಲಾಖೆ:**

2019-20ನೇ ಸಾಲಿಗೆ ನಿಗಧಿಯಾಗಿರುವ ಭೌತಿಕ ಗುರಿಗೆದುರಾಗಿ ಇಲ್ಲಿಯವರೆವಿಗೆ ಕೇವಲ ಒಂದು ಭೌತಿಕ ಗುರಿ ಸಾಧಿಸಿರುವ ಪ್ರಗತಿ ಪರಿಶೀಲಿಸಿದಾಗ, ಸರ್ಕಾರದಿಂದ ಅನುದಾನ ಬಿಡುಗಡೆಯಾಗಬೇಕಾಗಿದೆ. ಅನುದಾನ ಬಿಡುಗಡೆಯಾದ ನಂತರ ಮಾರ್ಚ್ 2020 ರೊಳಗೆ ಸಂಪೂರ್ಣವಾಗಿ ಪ್ರಗತಿ ಸಾಧಿಸುವುದಾಗಿ ಇಲಾಖಾ ಅಧಿಕಾರಿಗಳು ಸಭೆಗೆ ತಿಳಿಸಿದರು.

**13. ಮೀನುಗಾರಿಕೆ ಇಲಾಖೆ:**

2019-20ನೇ ಸಾಲಿಗೆ ವಿವಿಧ ಕಾರ್ಯಕ್ರಮಗಳಿಗೆ ನಿಗಧಿಯಾಗಿರುವ ಭೌತಿಕ ಹಾಗೂ ಆರ್ಥಿಕ ಗುರಿಗೆದುರಾಗಿ ಪ್ರಗತಿ ಕಡಿಮೆ ಇರುವ ಬಗ್ಗೆ ಪರಿಶೀಲಿಸಿ, ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ ಹಾಗೂ ಮೀನು ಮಾರುಕಟ್ಟೆ ಮತ್ತು ಮತ್ಸ್ಯವಾಹಿನಿಗೆ ಸಹಾಯಧನ ಪ್ರಗತಿ ಶೂನ್ಯವಾಗಿರುವ ಬಗ್ಗೆ ಪ್ರಶ್ನಿಸಿದಾಗ, ಫಲಾನುಭವಿಗಳ ಆಯ್ಕೆಯಾಗಿದ್ದು, ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ ಪ್ರಸ್ತಾವನೆಗೆ ಅನುಮೋದನೆ ದೊರೆತ ನಂತರ 15 ದಿನದೊಳಗಾಗಿ ಆರ್ಥಿಕ ಪ್ರಗತಿ ಸಾಧಿಸಲಾಗುವುದೆಂದು ಇಲಾಖಾ ಅಧಿಕಾರಿಗಳು ಸಭೆಗೆ ತಿಳಿಸಿದರು.

**14. ಗ್ರಾಮ ವಿಕಾಸ ಯೋಜನೆ:**

ಅಕ್ಟೋಬರ್ 2019ರ ಅಂತ್ಯಕ್ಕೆ ಒಟ್ಟು 19 ಕಾಮಗಾರಿಗಳಿಗೆ ಅನುಮೋದಿತ ಮೊತ್ತ ರೂ.1,875.00 ಲಕ್ಷಗಳಾಗಿದ್ದು, ಈ ಪೈಕಿ ಇಲ್ಲಿಯವರೆವಿಗೆ ಬಿಡುಗಡೆಯಾಗಿರುವ ಮೊತ್ತ ರೂ.1,270.05 ಲಕ್ಷಗಳಾಗಿದ್ದು, ರೂ.1,251.87 ಲಕ್ಷ ವೆಚ್ಚವಾಗಿರುವುದನ್ನು ಸಭೆಯು ಪರಿಶೀಲಿಸಲಾಯಿತು. 2ನೇ ಕಂತಿನ ಅನುದಾನ ಬಿಡುಗಡೆಯಾಗಬೇಕಾಗಿರುವುದಾಗಿ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಬೆಂಗಳೂರು ಜಿಲ್ಲೆಯವರು ಸಭೆಗೆ ತಿಳಿಸಿದರು.

**15. ಮುಖ್ಯ ಮಂತ್ರಿ ಗ್ರಾಮ ವಿಕಾಸ ಯೋಜನೆ:**

ಮುಖ್ಯ ಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ ಸಾಧಿಸಿರುವ ಪ್ರಗತಿಯನ್ನು ಸಭೆಯು ಪರಿಶೀಲಿಸಿ, ಈ ಯೋಜನೆಯಡಿ ಯಾವ ಯಾವ ಕಾರ್ಯಕ್ರಮಗಳನ್ನು ರೂಪಿಸಲಾಗುವುದೆಂದು ಮಾನ್ಯ ಅಧ್ಯಕ್ಷರು ಪ್ರಶ್ನಿಸಿದರು. ಇದಕ್ಕೆ ಕಾರ್ಯಪಾಲಕ ಅಭಿಯಂತರರು ಉತ್ತರಿಸುತ್ತಾ, ಚರಂಡಿ, ರಸ್ತೆ, ದೇವಸ್ಥಾನಗಳ ದುರಸ್ಥಿ, ಗ್ರಂಥಾಲಯ, ಆಟದ ಮೈದಾನ, ವ್ಯಾಯಾಮ ಶಾಲೆ, ಸಮುದಾಯಭವನ ನಿರ್ಮಾಣ ಮಾಡಬಹುದಾಗಿದೆಯೆಂದು ಹಾಗೂ 2ನೇ ಕಂತಿನ ಅನುದಾನ ಬಾಕಿ ಇರುವುದಾಗಿ ತಿಳಿಸಿದರು.

**16. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ:**

2017-18ನೇ ಸಾಲಿನಲ್ಲಿ 1.66 ಲಕ್ಷ ಮಾನವ ದಿನಗಳ ಸೃಜನೆಯಾಗಿದ್ದು, ಇಲ್ಲಿಯವರೆವಿಗೆ 4.45 ಕೋಟಿ ರೂ.ಗಳನ್ನು ವೆಚ್ಚ ಮಾಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿರುವುದನ್ನು ಪರಿಶೀಲಿಸಿ, ಹೆಚ್ಚಿನ ಮಾನವ ದಿನಗಳನ್ನು ಸೃಜನೆ ಮಾಡಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಕಾಮಗಾರಿಗಳನ್ನು ಕೈಗೊಳ್ಳುವಂತೆ ಸೂಚನೆ ನೀಡಿದರು.

(ಕ್ರಮ: ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ ಜಿಲ್ಲೆ ಹಾಗೂ ಬೆಂಗಳೂರು ನಗರ ಜಿಲ್ಲೆಯ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು)

**17. ವಸತಿ ಯೋಜನೆ:**

ವಸತಿ ನಿರ್ಮಾಣ ಮನೆಗಳಿಗೆ ಸಂಬಂಧಿಸಿದಂತೆ 4 ತಾಲ್ಲೂಕುಗಳ ಒಟ್ಟು 2538 ಭೌತಿಕ ಗುರಿಗೆದುರಾಗಿ ಇಲ್ಲಿಯವರೆವಿಗೆ 635 ಮನೆಗಳೂ ಪೂರ್ಣಗೊಂಡಿದ್ದು, 1903 ಮನೆಗಳು ಬಾಕಿ ಇದೆ. ವಿವಿಧ ಹಂತದಲ್ಲಿರುವ ಒಟ್ಟು ಮನೆಗಳು 3211 ಆಗಿದ್ದು, 408 ಮನೆಗಳು ಇನ್ನೂ ಪ್ರಾರಂಭವಾಗಬೇಕಾಗಿದೆ ಜಿ.ಪಿ.ಎಸ್. ಆಗಿದ್ದು, ಅನುದಾನ ಬಿಡುಗಡೆಯಾಗಿವುದಿಲ್ಲವೆಂದು ಯೋಜನಾ ನಿರ್ದೇಶಕರು ಸಭೆಗೆ ತಿಳಿಸಿದರು. ಅನುದಾನ ಬಿಡುಗಡೆಗೆ ಸೂಕ್ತ ಕ್ರಮಕೈಗೊಳ್ಳುವಂತೆ ಮಾನ್ಯ ಅಧ್ಯಕ್ಷರು ಸೂಚನೆ ನೀಡಿದರು.

(ಕ್ರಮ: ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ ಜಿಲ್ಲೆ)

ಉದ್ಯೋಗ ಮತ್ತು ಕೌಶಲ್ಯಾಭಿವೃದ್ಧಿ ಇಲಾಖೆಯವರು ಸಭೆಗೆ ಗೈರು ಹಾಜರಾಗಿದ್ದು, ಪ್ರಗತಿ ಪರಿಶೀಲನೆ ಮಾಡುವಂತೆ ಅಪರ ಜಿಲ್ಲಾಧಿಕಾರಿಗಳಿಗೆ ತಿಳಿಸಿದರು.

**18. ವಿಕಲಚೇತನಾ ಇಲಾಖೆ:**

ಬೆಂಗಳೂರು ನಗರ ಜಿಲ್ಲೆಯಲ್ಲಿರುವ ವೈದ್ಯಕೀಯ ಮಂಡಳಿಗಳು ವಿಕಲಚೇತನರಿಗೆ ಯು.ಡಿ.ಐ.ಡಿ. (ವಿಕಲಚೇತನರ ವಿಶಿಷ್ಠ ಗುರುತಿನ ಚೀಟಿ) ನೀಡುವಲ್ಲಿ ವಿಳಂಬವಾಗುತ್ತಿದ್ದು, ಈ ಬಗ್ಗೆ ಇಲಾಖೆಯವರಿಗೆ ಸೂಕ್ತ ನಿರ್ದೇಶನ ನೀಡಬೇಕಾಗಿ ಇಲಾಖಾ ಅಧಿಕಾರಿಗಳು ಮಾನ್ಯ ಅಧ್ಯಕ್ಷರಲ್ಲಿ ಮನವಿ ಮಾಡಿಕೊಂಡರು. ಇದಕ್ಕೆ ಮಾನ್ಯ ಅಧ್ಯಕ್ಷರು ಅಪರ ಜಿಲ್ಲಾಧಿಕಾರಿಗಳಿಗೆ ಎಲ್ಲಾ ವೈದ್ಯಕೀಯ ಮಂಡಳಿಗಳ ಅಧ್ಯಕ್ಷರ ಸಭೆಯನ್ನು ಕರೆದು ಈ ಸಮಸ್ಯೆಯನ್ನು ಬಗೆಹರಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಿದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಈ ಪ್ರಕ್ರಿಯೆಯಲ್ಲಿ ಸಹಕರಿಸುವಂತೆ ತಿಳಿಸಲಾಯಿತು.

(ಕ್ರಮ: ಅಪರ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ

**19. ಕಂದಾಯ ಇಲಾಖೆ:**

**ಅ) ಪಿಂಚಣಿ ಅದಾಲತ್ತು:**

ಬೆಂಗಳೂರು ನಗರ ಜಿಲ್ಲೆಯಲ್ಲಿ 2019-20ನೇ ಸಾಲಿನಲ್ಲಿ 31.10.2019ರ ಮಾಹೆಯ ಅಂತ್ಯಕ್ಕೆ ಒಟ್ಟು 25 ಪಿಂಚಣಿ ಅದಾಲತ್ತನ್ನು ನಡೆದಿದ್ದು, ಒಟ್ಟು 1875 ಅರ್ಜಿಗಳು ಸ್ವೀಕೃತಿಯಾಗಿ ಪೂರ್ಣವಾಗಿ ಅರ್ಜಿಗಳೂ ವಿಲೇವಾರಿಯಾಗಿರುವುದನ್ನು ಸಭೆಯು ಪರಿಶೀಲಿಸಿತು.

**ಆ)ಸಾಮಾಜಿಕ ಭದ್ರತಾ ಯೋಜನೆಗಳು:**

ಬೆಂಗಳೂರು ನಗರ ಜಿಲ್ಲೆಯಲ್ಲಿ ಅಕ್ಟೋಬರ್ 2019ರ ಅಂತ್ಯಕ್ಕೆ ವೃದ್ಯಾಪ್ಯ ವೇತನ, ವಿಧವಾ ವೇತನ, ಅಂಗವಿಕಲ ವೇತನ, ಸಂಧ್ಯಾ ಸುರಕ್ಷ, ಮನಸ್ವಿನಿ ಹಾಗೂ ಮೈತ್ರಿ ಯೋಜನೆಯಡಿ ಸಾಧಿಸಲಾದ ಪ್ರಗತಿಯನ್ನು ಈ ಕೆಳಕಂಡಂತೆ ಪರಿಶೀಲಿಸಲಾಯಿತು.

| ಕಾರ್ಯಕ್ರಮ | ಸ್ವೀಕೃತಿ | ಮಂಜೂರಾತಿ | ತಿರಸ್ಕೃತ | ಬಾಕಿ |
|---|---|---|---|---|
| ವೃದ್ಯಾಪ್ಯ ವೇತನ | 2205 | 1027 | 364 | 814 |
| ವಿಧವಾ ವೇತನ | 1755 | 722 | 252 | 781 |
| ಅಂಗವಿಕಲ ವೇತನ | 844 | 201 | 61 | 582 |
| ಸಂಧ್ಯಾ ಸುರಕ್ಷಾ | 3342 | 944 | 460 | 1938 |
| ಮನಸ್ವಿನಿ | 2655 | 1580 | 270 | 805 |
| ಮೈತ್ರಿ | 114 | 33 | 15 | 66 |
| ಒಟ್ಟು | 10915 | 4507 | 1422 | 4986 |

ವಿವಿಧ ಯೋಜನೆಗಳಡಿ ಜಿಲ್ಲೆಯಲ್ಲಿ ಬಾಕಿ ಇರುವ 4986 ಅರ್ಜಿಗಳ ಬಗ್ಗೆ ಪರಿಶೀಲಿಸಿ, ಸಂಧ್ಯ ಸುರಕ್ಷಾ ಯೋಜನೆಯಡಿ ಹೆಚ್ಚಿನ ಅರ್ಜಿಗಳು ಬಾಕಿ ಇರುವ ಬಗ್ಗೆ ಪ್ರಶ್ನಿಸಿದಾಗ, ಗ್ರಾಮ ಸೇವಕ, ಗ್ರಾಮ ಲೆಕ್ಕಾಧಿಕಾರಿ, ರಾಜಸ್ವ ನಿರೀಕ್ಷಕರ ಹುದ್ದೆಗಳು ಮಂಜೂರಾತಿ ಹುದ್ದೆಗಿಂತ ಕಡಿಮೆ ಇದ್ದು, ಬೆಂಗಳೂರು ನಗರ ಜಿಲ್ಲೆಯಲ್ಲಿ ಹೆಚ್ಚಿನ ಜನಸಂಖ್ಯೆ ಹಾಗೂ ವಲಸೆ ಬಂದ ಜನರ ಸಂಖ್ಯೆ ಜಾಸ್ತಿ ಇರುವುದರಿಂದ ಕಷ್ಟವಾಗುತ್ತಿದೆಯೆಂದು ಕಂದಾಯ ಇಲಾಖಾ ಅಧಿಕಾರಿಗಳು ಸಭೆಗೆ ತಿಳಿಸಿದರು. ಈ ಬಗ್ಗೆ ಒಂದು ಪ್ರಸ್ತಾವನೆಯನ್ನು ಕಂದಾಯ ಇಲಾಖೆಯ ಪ್ರಧಾನ ಕಾಯದರ್ಶಿಯವರಿಗೆ ಸಲ್ಲಿಸುವಂತೆ ಅಪರ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಯಿತು. ಬೆಂಗಳೂರು ಉತ್ತರ ಮತ್ತು ಯಲಹಂಕ ತಾಲ್ಲೂಕು ಕಛೇರಿಯ ಪ್ರಗತಿ ವರದಿ ಕುಂಠಿತವಾಗಿದ್ದು, ಹೆಚ್ಚಿನ ಪ್ರಗತಿ ಸಾಧಿಸುವಂತೆ ಕ್ರಮವಹಿಸಲು

ರಾಷ್ಟ್ರೀಯ ಕುಟುಂಬ ನೆರವು ಯೋಜನೆಯಡಿ ಅಕ್ಟೋಬರ್ 2019ರ ಅಂತ್ಯಕ್ಕೆ 1134 ಅರ್ಜಿಗಳು ಬಾಕಿ ಇದ್ದು, ಇವುಗಳ ವಿಲೇವಾರಿಗೆ ಕಾನೂನು ರೀತ್ಯಾ ಅಗತ್ಯ ಕ್ರಮವಹಿಸುವಂತೆ ತಿಳಿಸಲಾಯಿತು. ಮುಂದುವರೆದು, ಅಂತ್ಯ ಸಂಸ್ಕಾರ ಯೋಜನೆಯಡಿ ರೂ.2.55 ಲಕ್ಷ ಉಳಿಕೆಯಾಗಿರುವುದನ್ನು ಅರ್ಹ ಫಲಾನುಭವಿಗಳಿಗೆ ಆದ್ಯತೆ ಮೇಲೆ ವಿತರಣೆ ಮಾಡಲು ಸೂಚನೆ ನೀಡಲಾಯಿತು.

(ಕ್ರಮ: ಉಪ ವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ/ದಕ್ಷಿಣ ಉಪ ವಿಭಾಗ, ಬೆಂಗಳೂರು ಜಿಲ್ಲೆ)

**20.ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ:**

ಅನ್ನಭಾಗ್ಯ ಯೋಜನೆಯಡಿ ಒಟ್ಟು 523101 ಪಡಿತರ ಚೀಟಿಗಳಿದ್ದು, ಒಟ್ಟು 550 ನ್ಯಾಯಬೆಲೆ ಅಂಗಡಿಗಳು ಕಾರ್ಯನಿರ್ವಹಿಸುತ್ತಿವೆ. ಹೊಸ ಪಡಿತರ ಚೀಟಿ ಅರ್ಜಿಗಳ ಪೈಕಿ 2018-19ನೇ ಸಾಲಿಗೆ ಆನ್‌ಲೈನ್ ಮುಖಾಂತರ 13681 ಅರ್ಜಿಗಳು ಸ್ವೀಕೃತಿಯಾಗಿದ್ದು, ಇಲ್ಲಿಯವರೆವಿಗೆ 7864 ಅರ್ಜಿಗಳು ವಿಲೇವಾರಿಯಾಗಿ ಬಾಕಿ 5817 ಅರ್ಜಿಗಳು ಬಾಕಿ ಇರುವುದನ್ನು ಸಭೆಯು ಪರಿಶೀಲಿಸಿ ಬಾಕಿ ಇರುವ ಅರ್ಜಿಗಳಿಗೆ ತೆಗೆದುಕೊಂಡ ಕ್ರಮದ ಬಗ್ಗೆ ವಿಚಾರಿಸಲಾಗಿ ಕಾರ್ಯನಿರ್ವಾಹಕ ಸಿಬ್ಬಂದಿಗೆ ಅರ್ಜಿಗಳನ್ನು ಆದ್ಯತೆಯ ಮೇರೆಗೆ ಶೀಘ್ರವಾಗಿ ವಿಲೇವಾರಿ ಮಾಡಲು ತಿಳಿಸಲಾಗಿದೆಯೆಂದು ಇಲಾಖಾ ಅಧಿಕಾರಿಗಳು ಸಭೆಗೆ ತಿಳಿಸಿದರು. ಆಹಾರ ನಿರೀಕ್ಷಕರು ಬಂದಂತಹ 5839 ಅರ್ಜಿಗಳನ್ನು ಹಾಗೂ 11188 ಪಡಿತರ ಚೀಟಿಗಳನ್ನು ಅನರ್ಹ ಅರ್ಜಿ ಹಾಗೂ ಪಡಿತರ ಚೀಟಿಗಳೆಂದು ಪರಿಶೀಲನೆ ಮಾಡಿ ವಜಾ ಮಾಡಲಾಗಿರುವುದಾಗಿ ವಿವರಿಸಿದರು. ಮುಂದುವರೆದು, ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಹೊಸದಾಗಿ ಪಡಿತರ ಅಂಗಡಿಗಳಿಗೆ ಅನುಮೋದನೆ ಕೊಡುತ್ತಿರುವ ಬಗ್ಗೆ ವಿಚಾರಿಸಲಾಗಿ, ಮಂಜೂರು ಮಾಡುತ್ತಿರುವುದಾಗಿ ಅಧಿಕಾರಿಗಳು ತಿಳಿಸಿದರು.

2019 ರ ಏಪ್ರಿಲ್ ಮಾಹೆಯಿಂದ ತಹಲ್‌ವರೆವಿಗೆ  ಸಕಾಲ ಅಡಿ ಬೆಂಗಳೂರು ನಗರ ಜಿಲ್ಲೆಯ ಒಟ್ಟು 5 ತಾಲ್ಲೂಕುಗಳಿಗೆ ಸಂಬಂಧಿಸಿದಂತೆ 31056 ಅರ್ಜಿಗಳು ಸ್ವೀಕೃತಿಯಾಗಿ ಎಲ್ಲಾ ಅರ್ಜಿಗಳು ವಿಲೇಯಾಗಿರುವುದನ್ನು ಸಭೆಯು ಪರಿಶೀಲಿಸಿತು.

**ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.**

(ಅಂಜುಮ್ ಪರ್ವೇಜ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ ಹಾಗೂ ಬೆಂಗಳೂರು ನಗರ
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಬೆಂಗಳೂರು ಜಿಲ್ಲೆ.

**ದಿನಾಂಕ:11.11.2019ರಂದು ಬೆಳಿಗ್ಗೆ 11.00 ಗಂಟೆಗೆ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜರುಗಿದ ಸಭೆಯ ನಡೆವಳಿಗಳು:-**

ಪ್ರಾರಂಭದಲ್ಲಿ ಅಪರ ಜಿಲ್ಲಾಧಿಕಾರಿ ಮಾತನಾಡಿ, ಸಭೆಗೆ ಆಗಮಿಸಿದ ಬೀದರ್ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು, ಜಿಲ್ಲಾಧಿಕಾರಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸ್ವಾಗತಿಸಿ, ಉಸ್ತುವಾರಿ ಕಾರ್ಯದರ್ಶಿಯವರನ್ನು ಸಭೆಯ ಅಧ್ಯಕ್ಷತೆ ವಹಿಸಿಕೊಂಡು ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಡಲು ಕೋರಿದರು.

ಅದರಂತೆ ಬೀದರ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಈ ಕೆಳಗಿನಂತೆ ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಟ್ಟರು.

**ವಿಷಯ:-1 ಕೃಷಿ ಇಲಾಖೆ:-**

ಇಲಾಖಾಧಿಕಾರಿಗಳು ಮಾತನಾಡಿ, ಹಿಂಗಾರಿನಲ್ಲಿ ಮಳೆಯ ಕೊರತೆ ಇರಲ್ಲಿಲ್ಲ. ಆದರೆ ಹೆಚ್ಚಿನ ಮಳೆಯಿಂದಾಗಿ ಸೋಯಾ ಹಾಗೂ ತೊಗರಿ ರಾಶಿಗೆ ಸ್ವಲ್ಪ ಮಟ್ಟಿನ ತೊಂದರೆಯಾಗಿರುತ್ತದೆ. ಇನ್ನು ಮುಂಗಾರಿನಲ್ಲಿ 25% ಮಳೆಯ ಕೊರತೆ ಇತ್ತು. ಇನ್ನು ಮುಂಗಾರಿನಲ್ಲಿ 97% ಹಾಗೂ ಹಿಂಗಾರಿನಲ್ಲಿ 61% ಬಿತ್ತನೆ ಆಗಿರುತ್ತದೆ. ಹಿಂಗಾರಿನಲ್ಲಿ ಮುಖ್ಯವಾಗಿ ಕಡಲೆ ಮತ್ತು ಜೋಳದ ಬಿತ್ತನೆಯಾಗಿರುತ್ತದೆ. ಕಡಲೆ 45 ಸಾವಿರ ಹೆಕ್ಟರ್ ಬಿತ್ತನೆ ಮಾಡಲಾಗಿದೆ ಮತ್ತು ಜೋಳ 15 ಸಾವಿರ ಹೆಕ್ಟರ ಬಿತ್ತನೆಯಾಗಿರುತ್ತದೆ. ಹಿಂಗಾರಿನಲ್ಲಿ ಆದ ಬೆಳೆ ಹಾನಿ ಪರಿಹಾರಕ್ಕಾಗಿ ರೂ.51.53 ಕೋಟಿ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಈಗಾಗಲೇ ರೂ.31.00 ಕೋಟಿ ಬೆಳೆ ಹಾನಿಗೆ ಅನುದಾನ ಬಂದಿದ್ದು, 73 ಸಾವಿರ ರೈತರ ಖಾತೆಗೆ ಜಮೆ ಆಗಿರುತ್ತದೆ. ಇನ್ನು ಹಿಂಗಾರಿಗಾಗಿ ಕಡಲೆ ಮತ್ತು ಜೋಳದ ಬೀಜಗಳನ್ನು ರೈತರ ಸಂಪರ್ಕ ಕೇಂದ್ರಗಳಲ್ಲಿ ಸಂಗ್ರಹಿಸಿ ಇಡಲಾಗಿದೆ. ಹೆಚ್ಚಿನ ಮಳೆಯಿಂದಾಗಿ ರಾಶಿಯ ಸಮಯದಲ್ಲಿ ಬೆಳೆ ಹಾನಿಯಾದ ರೈತರಿಗೆ ಮತ್ತೆ 2ನೇ ಸಲ ಪ್ರಸ್ತಾವನೆಯನ್ನು ಕೊಡಲು ಅನುಕೂಲ ಮಾಡಿಕೊಡಬೇಕೆಂದು ಮಾನ್ಯ ಸಚಿವರಿಗೆ ಕೋರಿಕೆ ಸಲ್ಲಿಸಲಾಗಿದೆ ಎಂದು ತಿಳಿಸಿ, ಇನ್ನು 2019-20ನೇ ಸಾಲಿನಲ್ಲಿ ಒಟ್ಟು 15 ರೈತರ ಆತ್ಮಹತ್ಯೆ ಪ್ರಕರಣಗಳು ಆಗಿರುತ್ತದೆ. ಹುಮನಾಬಾದ ತಾಲ್ಲೂಕಿನ ಒಂದು ಪ್ರಕರಣವನ್ನು ಬಿಟ್ಟು, ಉಳಿದ ಎಲ್ಲಾ 14 ಪ್ರಕರಣಗಳಿಗೆ ಈಗಾಗಲೇ ಪರಿಹಾರ ಧನ ನೀಡುವ ಕೆಲಸ ಮುಗಿದಿದೆ ಎಂದು ತಿಳಿಸಿ, ಇನ್ನು ಪರಿಹಾರಧನವನ್ನು K2 ಮುಖಾಂತರ ರೈತರ ಕುಟುಂಬದವರ ಖಾತೆಗೆ ಜಮೆ ಆಗುತ್ತದೆ. ಮುಂಚೆ ಮಾನ್ಯ ಜಿಲ್ಲಾಧಿಕಾರಿಗಳ ಖಾತೆಗೆ ಅಥವಾ ರೈತ ಸಂಪರ್ಕ ಕೇಂದ್ರದ ಖಾತೆಗೆ ಪರಿಹಾರ ಧನದ ಮೊತ್ತ ನೀಡಲಾಗುತ್ತಿತ್ತು. ಇದರಿಂದಾಗಿ ರೈತರ ಕುಂಟುಂಬಕ್ಕೆ ತಕ್ಷಣ ಪರಿಹಾರ ಧನ ಒದಗಿಸಬಹುದಾಗಿತ್ತು. ಆದರೆ ಇವಾಗ K2 ಮುಖಾಂತರ ನೀಡುತ್ತಿರುವುದರಿಂದ, ಅನುದಾನ ಬಿಡುಗಡೆಯಾಗುವವರೆಗೆ ಕಾಯುವ ಪರಿಸ್ಥಿತಿ ಇದೆ ಎಂದು ತಿಳಿಸಿದರು. ಜಿಲ್ಲಾಧಿಕಾರಿ ಮಾತನಾಡಿ, ರೈತರ ಆತ್ಮಹತ್ಯೆ ಪ್ರಕರಣಗಳಲ್ಲಿ ರೈತರ ಕುಟುಂಬದವರಿಗೆ ಪರಿಹಾರಧನವನ್ನು ಚೆಕ್ ಮುಖಾಂತರ ಕೊಡುವುದು ಒಳ್ಳೆಯದೆಂದು ಸಲಹೆ ನೀಡಿ, 3ನೇ ಹಂತದ ಅನುದಾನಕ್ಕಾಗಿ ಜ್ಞಾಪನಾ ಪತ್ರ ಕಳುಹಿಸಿ ಎಂದು ಇಲಾಖಾಧಿಕಾರಿಯವರಿಗೆ ತಿಳಿಸಿದರು.

ಜಿಲ್ಲಾಧಿಕಾರಿ ಮಾತನಾಡಿ, ಹೆಲ್ತ್ ಕಾರ್ಡ್ ಹಾಗೂ ಪಿಂಚಣಿಗಾಗಿ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾತನಾಡಿ, ಪಿಂಚಣಿಯ 4 ಅರ್ಜಿಗಳು ಮಂಜೂರಾಗಿದ್ದು, ಇನ್ನು ಹೊಸ 5 ಪಿಂಚಣಿ ಅರ್ಜಿಗಳನ್ನು ಹಣ ಪಾವತಿಗಾಗಿ ಕಳುಹಿಸಲಾಗಿದೆ ಹಾಗೂ ಒಟ್ಟಾಗಿ ಮೂರು ಅಂದರೆ ಹಾಸ್ಟಲ್ ಸೌಲಭ್ಯ, ಆರೋಗ್ಯ ಮತ್ತು ಪಿಂಚಣಿ ಸೌಲಭ್ಯವಿದೆ ಎಂದು ತಿಳಿಸಿ, 2018-19ನೇ ಸಾಲಿನಲ್ಲಿ 55 ಪ್ರಕರಣಗಳಲ್ಲಿ 41 ರೈತರ ಮಕ್ಕಳಿಗೆ ಉಚಿತ ಶಿಕ್ಷಣ ಹಾಗೂ ವಿಶೇಷ ಆರೋಗ್ಯ ಯೋಜನೆ ಪಡೆದಿರುವುದು, 34 ಕುಟುಂಬಗಳು ಹಾಗೂ 30 ಕುಟುಂಬಗಳಿಗೆ ಪಿಂಚಣಿ ಸೌಲಭ್ಯ ಒದಗಿಸಲಾಗಿದೆ.

ಜಿಲ್ಲಾಧಿಕಾರಿ ಮಾತನಾಡಿ, ಹೆಚ್ಚಿನ ಮಳೆಯಿಂದಾಗಿ ಏನಾದರೂ ಹಾನಿಯಾಗಿದೆಯಾ? ಎಂದು ಇಲಾಖಾಧಿಕಾರಿಯವರಿಗೆ ಕೇಳಿದಾಗ, ಜಿಲ್ಲೆಯ ಔರಾದ ತಾಲ್ಲೂಕಿನಲ್ಲಿ 150% ಮಳೆಯಾಗಿ 3250 ಹೆಕ್ಟರ್ ಪ್ರದೇಶ ಸೋಯಾ ಹಾಗೂ 1000 ಹೆಕ್ಟರ್ ಜೋಳ ಹಾನಿಯಾಗಿರುತ್ತದೆ. ಸದರಿ ವಿಷಯದ ಕುರಿತು ವಿಮೆ ಕಂಪನಿಗೆ ಮಾಹಿತಿ ಕೊಡಲಾಗಿದೆ ಹಾಗೂ ಸದರಿ ಪ್ರದೇಶದಲ್ಲಿ ಜಂಟಿ ಸಮೀಕ್ಷೆ ಮಾಡಲು ಕೂಡ ಹೇಳಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಬೀದರ್ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಬೆಳೆ ಹಾನಿಯ ಕುರಿತು ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರು ವಿ.ಸಿ. ಯಲ್ಲಿ ವಿಮರ್ಶೆ ಮಾಡುತ್ತಿದ್ದು, ಸದರಿ ವಿಷಯದ ಕುರಿತು ಮಾಹಿತಿ ಕೇಳಿದರು. ಸಾವಿರ ಹೆಕ್ಟರ್ ಮಾತ್ರ ಹಾನಿಯಾಗಿರುತ್ತದೆ. ಕಳೆದ ವರ್ಷದ ರಬ್ಬಿಯ ಬೆಳೆ ವಿಮೆ ರೂ.40.00 ಕೋಟಿ ಈಗಾಗಲೇ ಜಮೆ ಆಗಿರುತ್ತದೆ. ಕಳೆದ ವರ್ಷದ ಖರೀಫನ ಬೆಳೆ ವಿಮೆಯು ಈಗಾಗಲೇ ರೂ.158.00 ಕೋಟಿ ಅನುದಾನ ಜಮೆ ಆಗಿದ್ದು, ಇನ್ನು ರೂ.10.00 ಕೋಟಿ ಅನುದಾನ ಬಾಕಿ ಇದೆ. ಬೆಳೆ ಸರ್ವೆಯಲ್ಲಿ ಮಿಸ್ ಮ್ಯಾಚ್ ಆಗಿರುವುದರಿಂದ ಬಾಕಿ ಇರುತ್ತದೆಂದು ತಿಳಿಸಿದರು. ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಇಲಾಖೆಗೆ ಸಂಬಂಧಪಟ್ಟಂತೆ ಏನಾದರೂ ಸಮಸ್ಯೆಗಳು ಇದೆಯಾ ಎಂದು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾತನಾಡಿ, ಬೆಳೆ ವಿಮೆಗಾಗಿ ಬೆಳೆ ಸರ್ವೆ ಮಾಡಿದವರಲ್ಲಿ ಬೆಳೆ ವಿಮೆ ಸೊಯಾ ಮತ್ತು ತೊಗರಿಗೆ ಮಾಡಿರುತ್ತಾರೆ. ಆದರೆ ಕಬ್ಬು ಬೆಳೆಯ ಫೋಟೋ ಹಾಕಿರುತ್ತಾರೆ, ಇದರಿಂದಾಗಿ 9900 ರೈತರಿಗೆ ಇನ್ನು ರೂ.10.00 ಕೋಟಿ ಬೆಳೆ ವಿಮೆ ಬರುವುದು ಬಾಕಿ ಇದೆ ಎಂದು ತಿಳಿಸಿದರು.

ಜಂಟಿ ಕೃಷಿ ನಿರ್ದೇಶಕರು ಮಾತನಾಡಿ, ಪ್ರಸ್ತುತ ವರ್ಷದಲ್ಲಿ ಖರೀಫ್‌ನಲ್ಲಿ 2.62 ಲಕ್ಷ ರೈತರು ಬೆಳೆ ವಿಮೆಗಾಗಿ ದಾಖಲಾಗಿರುತ್ತಾರೆ. ಇನ್ನು ಮತ್ತೊಂದು ಸಮಸ್ಯೆ ಎಂದರೆ 2016 ರಲ್ಲಿ ಖರೀಫ್‌ನಲ್ಲಿ ಹೊಸದಾಗಿ 10 ಗ್ರಾಮ ಪಂಚಾಯತಿಗಳು ದಾಖಲಾದ ಹಿನ್ನಲೆಯಲ್ಲಿ ಬೆಳೆ ವಿಮೆ ರೂ.5.93 ಕೋಟಿ ಅನುದಾನ ಬರುವುದು ಬಾಕಿ ಇದೆ. ಅದು ಅನುಮೋದನೆಯಾಗಿ ಬಂದರೆ ಅನುಕೂಲವಾಗುತ್ತದೆ ಎಂದು ಸಭೆಯ ಗಮನಕ್ಕೆ ತಂದರು. ಬೀದರ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಇಲಾಖೆಯಲ್ಲಿರುವ ಯೋಜನೆಗಳಿಗೆ ಹಂಚಿಕೆಯಾಗಿರುವ ಅನುದಾನ ಎಷ್ಟು? ಇಲ್ಲಿಯವರೆಗೆ ಎಷ್ಟು ಅನುದಾನ ಖರ್ಚಾಗಿರುತ್ತದೆ? ಆ ಕುರಿತು ಮಾಹಿತಿ ಹೇಳಿ ಎಂದು ಜಂಟಿ ಕೃಷಿ ನಿರ್ದೇಶಕರಿಗೆ ಕೇಳಿದರು. ಜಂಟಿ ಕೃಷಿ ನಿರ್ದೇಶಕರು ಮಾತನಾಡಿ, ಜಿಲ್ಲಾ ಪಂಚಾಯತನಿಂದ ರೂ.83.00 ಲಕ್ಷ ಅನುದಾನ ಹಂಚಿಕೆಯಾಗಿದ್ದು, ಅದರಲ್ಲಿ ರೂ.48.55 ಲಕ್ಷ ಅನುದಾನ ಬಿಡುಗಡೆಯಾಗಿ, ಇಲ್ಲಿಯವರೆಗೆ

ರೂ.12.00 ಲಕ್ಷ ಖರ್ಚಾಗಿ 25% ಸಾಧನೆಯಾಗಿರುತ್ತದೆ. ಇನ್ನು ಕೃಷಿ ಮ್ಯಾಕೇನಿಸಮ್ ಯೋಜನೆಗಾಗಿ ರೂ.45.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಈ ತಿಂಗಳಲ್ಲಿ ಖರ್ಚಾದರೆ, 75% ಆರ್ಥಿಕ ಸಾಧನೆಯಾಗುತ್ತದೆಂದು ತಿಳಿಸಿ, ಇನ್ನು ರಾಜ್ಯವಲಯದಲ್ಲಿ ರೂ.31.00 ಕೋಟಿ ಅನುದಾನ ಬಿಡುಗಡೆಯಾಗಿರುತ್ತದೆ. ಮುಖ್ಯವಾದ ಯೋಜನೆ ಎಂದರೆ ಬಿತ್ತನೆ ಬೀಜಗಳನ್ನು ಕೊಡುವುದು, ಇದಕ್ಕಾಗಿ ರೂ.23.00 ಕೋಟಿ ಅನುದಾನ ಮಂಜೂರಾಗಿದ್ದು, ಅದರಲ್ಲಿ ರೂ.10.00 ಕೋಟಿ ಅನುದಾನ ಬಿಡುಗಡೆಯಾಗಿ, 99% ಅನುದಾನ ಖರ್ಚಾಗಿರುತ್ತದೆ. ಇನ್ನು ಕೃಷಿ ಭಾಗ್ಯ ಯೋಜನೆ ಅಡಿಯಲ್ಲಿ ಜಿಲ್ಲೆಗೆ ರೂ.12.39 ಕೋಟಿ ಅನುದಾನ ಮಂಜೂರಾಗಿದ್ದು, ಅದರಲ್ಲಿ ರೂ.3.77 ಕೋಟಿ ಅನುದಾನ ಬಿಡುಗಡೆಯಾಗಿ, ಇಲ್ಲಿಯವರೆಗೆ ರೂ.3.28 ಕೋಟಿ ಅನುದಾನ ಖರ್ಚಾಗಿರುತ್ತದೆ. ಇನ್ನು Form Machanisum ಯೋಜನೆಯಡಿ ರೂ.6.32 ಕೋಟಿ ಅನುದಾನ ಹಂಚಿಕೆಯಾಗಿದ್ದು, ಅದರಲ್ಲಿ ರೂ.3.08 ಕೋಟಿ ಅನುದಾನ ಬಿಡುಗಡೆಯಾಗಿ, ರೂ.2.37 ಕೋಟಿ ಅನುದಾನ ಖರ್ಚಾಗಿರುತ್ತದೆ. ಇನ್ನು ಸಂಸ್ಕರಣೆ ಕಾರ್ಯಕ್ರಮಕ್ಕೆ ರೂ.2.00 ಕೋಟಿ ಅನುದಾನ ಬಿಡುಗಡೆಯಾಗಿರುತ್ತದೆಂದು ತಿಳಿಸಿದರು. ಬೀದರ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ರೈತಸಿರಿ ಯೋಜನೆಯ ಕುರಿತು ಮಾಹಿತಿಯನ್ನು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾನತಾಡಿ, ಸೀರಿ ಧಾನ್ಯ ಬೆಳೆಯುವಂತಹ ರೈತರಿಗೆ ರೂ.10,000/- ಸಹಾಯಧನ ಕೊಡುವ ಯೋಜನೆಯಾಗಿದ್ದು, ಜಿಲ್ಲೆಯಲ್ಲಿ 140 ಹೆಕ್ಟರ್ ಪ್ರದೇಶಕ್ಕೆ ರೈತರು ದಾಖಲಾಗಿರುತ್ತಾರೆ. ರೈತರು ಬೆಳೆದ ಬೆಳೆಯ ಫೋಟೊ ತೆಗೆದುಕೊಂಡು ಅಪ್‌ಲೋಡ್ ಮಾಡಿದರೆ, ಸಹಾಯಧನದ ಹಣ ನೇರವಾಗಿ DBT ಮುಖಾಂತರ ರೈತರ ಖಾತೆಗೆ ಜಮೆ ಆಗುತ್ತದೆಂದು ತಿಳಿಸಿದರು.

<u>**(ಕ್ರಮ:- ಕೃಷಿ ಇಲಾಖೆ ಬೀದರ)**</u>

**<u>ವಿಷಯ:2:- ತೋಟಗಾರಿಕೆ ಇಲಾಖೆ:-</u>**

ಬೀದರ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ತೋಟಗಾರಿಕೆ ಇಲಾಖೆಯ ಕುರಿತು ಪ್ರಗತಿಯ ಮಾಹಿತಿಯನ್ನು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾತನಾಡಿ, ಜಿಲ್ಲಾ ವಲಯದ ಕಾರ್ಯಕ್ರಮಗಳಿಗಾಗಿ ರೂ.56.00 ಲಕ್ಷ ಅನುದಾನದ ಗುರಿ ಇದೆ. ರಾಜ್ಯ ವಲಯದಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಕಾರ್ಯಕ್ರಮಕ್ಕೆ ರೂ.187.00 ಲಕ್ಷ ಅನುದಾನ ಮಂಜೂರಾಗಿದ್ದು, ಅದರಲ್ಲಿ ರೂ.52.00 ಲಕ್ಷ ಅನುದಾನ ಬಿಡುಗಡೆಯಾಗಿ, ಇಲ್ಲಿಯವರಗೆ ರೂ.42.00 ಲಕ್ಷ ಅನುದಾನ ಖರ್ಚಾಗಿರುತ್ತದೆ. ಇನ್ನು ಕೃಷಿ ಭಾಗ್ಯ ಯೋಜನೆ ಅಡಿಯಲ್ಲಿ ರೂ.32.99 ಲಕ್ಷ ಅನುದಾನ ಹಂಚಿಕೆಯಾಗಿದ್ದು, ಅದರಲ್ಲಿ ರೂ.32.00 ಲಕ್ಷ ಬಿಡುಗಡೆಯಾಗಿ, ರೂ.15.10 ಲಕ್ಷ ಖರ್ಚಾಗಿರುತ್ತದೆ. ಇನ್ನು ಕೇಂದ್ರವಲಯದ ಯೋಜನೆಯಾದ PMGSY ಯೋಜನೆಗೆ ರೂ.491.86 ಲಕ್ಷ ಅನುದಾನ ಮಂಜೂರಾಗಿದ್ದು, ಅದರಲ್ಲಿ ರೂ.209.00 ಲಕ್ಷ ಅನುದಾನ ಬಿಡುಗಡೆಯಾಗಿ ರೂ.194.75 ಲಕ್ಷ ಅನುದಾನ ಖರ್ಚಾಗಿರುತ್ತದೆ. ಇನ್ನು NHM ಯೋಜನೆಗಾಗಿ ರೂ.285.85 ಲಕ್ಷ ಅನುದಾನ ಹಂಚಿಕೆಯಾಗಿದ್ದು, ಅದರಲ್ಲಿ ರೂ.127.5 ಲಕ್ಷ ಅನುದಾನ ಬಿಡುಗಡೆಯಾಗಿ ರೂ.76.28 ಲಕ್ಷ ಅನುದಾನ ಖರ್ಚಾಗಿರುತ್ತದೆಂದು ತಿಳಿಸಿ, ಸದರಿ ಯೋಜನೆಯಡಿ ಫಲಾನುಭವಿಗಳ ಆಯ್ಕೆ ಕೂಡ ಆಗಿರುತ್ತದೆಂದು ತಿಳಿಸಿದರು. ಮಾನ್ಯ ಬೀದರ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಇಲಾಖೆಯ ಯೋಜನೆಗಳಿಗೆ ಸಂಬಂಧಪಟ್ಟಂತೆ ಏನಾದರೂ

ಸಮಸ್ಯೆಗಳು ಇವೆಯಾ ಎಂದು ಇಲಾಖಾಧಿಕಾರಿಯವರಿಗೆ ಕೇಳಿದಾಗ, ಇಲಾಖಾಧಿಕಾರಿಯವರು ಮಾನತಾಡಿ, ಏನು ಸಮಸ್ಯೆ ಇಲ್ಲವೆಂದು ತಿಳಿಸಿದರು.

**(ಕ್ರಮ: ತೋಟಗಾರಿಕೆ ಇಲಾಖೆ)**

**ವಿಷಯ: 3: ಅರಣ್ಯ ಇಲಾಖೆ:-**

ಬೀದರ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಅರಣ್ಯ ಇಲಾಖೆಯ ಪ್ರಗತಿ ಕುರಿತು ಮಾಹಿತಿಯನ್ನು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾನತಾಡಿ, ಪ್ರಸ್ತುತ ಸಾಲಿನ ಗುರಿ ಈಗಾಗಲೇ ಮುಗಿದಿರುತ್ತದೆ. ಜಿಲ್ಲಾ ವಲಯದ ಯೋಜನೆಯಲ್ಲಿ 2019-20ನೇ ಸಾಲಿಗಾಗಿ 399 ಕಿ.ಮೀ ನೆಡುತೋಪ ನಿರ್ವಹಣೆ ಕೆಲಸವು ಮುಗಿದಿದೆ. ಇನ್ನು ರಾಜ್ಯವಲಯದಲ್ಲಿ 52.00 ಕಿ.ಮೀ. ಸಸಿ ನೇಡುವ ಕಾರ್ಯಕ್ರಮ ಹಾಗೂ ಕೇಂದ್ರ ಪುರಸ್ಕೃತ ಯೋಜನೆ ಅಡಿಯಲ್ಲಿ 30 ಕಿ.ಮೀ ಗಿಡ ನೆಡುವ ಕಾರ್ಯಕ್ರಮ ಕೂಡ ಮುಗಿದಿರುತ್ತದೆಂದು ಸಭೆಯಲ್ಲಿ ತಿಳಿಸಿದರು.

**(ಕ್ರಮ: ಅರಣ್ಯ ಇಲಾಖೆ ಬೀದರ)**

**ವಿಷಯ:4:- ಪಶು ಸಂಗೋಪನೆ:-**

ಬೀದರ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಪಶು ಸಂಗೋಪನೆ ಇಲಾಖೆಯ ಪ್ರಗತಿ ಮಾಹಿತಿಯನ್ನು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾನತಾಡಿ, ರಾಜ್ಯ ವಲಯದ ಯೋಜನೆಗಳಿಗಾಗಿ ರೂ.2483.70 ಲಕ್ಷ ಅನುದಾನ ಹಂಚಿಕೆಯಾಗಿರುತ್ತದೆ. ಇದರಲ್ಲಿ ಯೋಜನೆಗಳಿಗಾಗಿ ರೂ.193.00 ಲಕ್ಷ ಅನುದಾನ ಮಾತ್ರ ಇರುತ್ತದೆ. ಇನ್ನು ರಾಜ್ಯ ವಲಯದ ಪಶು ಭಾಗ್ಯ ಯೋಜನೆಗಾಗಿ ರೂ.73.00 ಲಕ್ಷ ಅನುದಾನ ಮಂಜೂರಾಗಿರುತ್ತದೆ. ಕಳೆದ ಸಾಲಿನಲ್ಲಿ ಸದರಿ ಯೋಜನೆಗಾಗಿ ರೂ.11.00 ಕೋಟಿ ಅನುದಾನ ಮಂಜೂರಾಗಿತ್ತು. ಪಶುಭಾಗ್ಯ ಯೋಜನೆಯಡಿ ಈಗಾಗಲೇ ಫಲಾನುಭವಿಗಳಿಂದ ಅರ್ಜಿಗಳನ್ನು ಕರೆಯಲಾಗಿದೆ. ಫಲಾನುಭವಿಗಳನ್ನು ಮಾನ್ಯ ಶಾಸಕರು ಆಯ್ಕೆ ಮಾಡಿಕೊಡುತ್ತಾರೆ. ಆದರೆ ಇದುವರೆಗೆ ಫಲಾನುಭವಿಗಳ ಆಯ್ಕೆ ಆಗಿರುವುದಿಲ್ಲ. ಇನ್ನು ಕೇಂದ್ರ ವಲಯದ ಯೋಜನೆಗಳಲ್ಲಿ NAI ಕಾರ್ಯಕ್ರಮಕ್ಕೆ ರೂ.2.70 ಕೋಟಿ ಅನುದಾನ ಮಂಜೂರಾಗಿರುತ್ತದೆ. ಆದರೆ ಇದುವರೆಗೆ ಅನುದಾನ ಖರ್ಚಾಗಿರುವುದಿಲ್ಲ. ಇನ್ನು ಇಲಾಖೆಯ ಅಧಿಕಾರಿಯವರು 100 Cluster village ಗಳನ್ನು ಆಯ್ಕೆ ಮಾಡುತ್ತಾರೆಂದು ತಿಳಿಸಿದರು. ಬೀದರ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಇಲಾಖೆಗೆ ಸಂಬಂಧಪಟ್ಟ ಏನಾದರೂ ಸಮಸ್ಯೆಗಳು ಇದೆಯಾ ಎಂದು ಇಲಾಖಾಧಿಕಾರಿಯವರಿಗೆ ಕೇಳಿದಾಗ, ಇಲಾಖಾಧಿಕಾರಿಯವರು ಮಾತನಾಡಿ, ಸದ್ಯದಲ್ಲಿ ಯಾವುದೇ ಸಮಸ್ಯೆ ಇಲ್ಲವೆಂದು ತಿಳಿಸಿದರು.

**(ಕ್ರಮ:- ಪಶು ಸಂಗೋಪನಾ ಇಲಾಖೆ ಬೀದರ)**

**ವಿಷಯ: 5 ರೇಷ್ಮೆ ಇಲಾಖೆ:-**

ಬೀದರ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ರೇಷ್ಮೆ ಇಲಾಖೆಯ ಯೋಜನೆಗಳ ಮಾಹಿತಿಯನ್ನು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾತನಾಡಿ, ಜಿಲ್ಲಾ ವಲಯದ ಯೋಜನೆಗಳಿಗಾಗಿ ರೂ.10.00 ಲಕ್ಷ ಅನುದಾನ ಮಂಜೂರಾಗಿರುತ್ತದೆ. ಅದರಲ್ಲಿ SCP ಯೋಜನೆಗೆ ರೂ.4.00 ಲಕ್ಷ ಹಾಗೂ TSP ಯೋಜನೆಗೆ ರೂ.4.00 ಲಕ್ಷ ಅನುದಾನ ಇರುತ್ತದೆ. ಇನ್ನು ರೂ.10.00 ಲಕ್ಷ ಅನುದಾನದಲ್ಲಿ ಇಲ್ಲಿಯವರೆಗೆ ರೂ.19,000/- ಮಾತ್ರ ಖರ್ಚಾಗಿರುತ್ತದೆ. ರಾಜ್ಯವಲಯದ ಯೋಜನೆಗಾಗಿ ರೂ.73.00 ಲಕ್ಷ ಅನುದಾನ ಬಿಡುಗಡೆಯಾಗಿ, ಅದರಲ್ಲಿ ರೂ.54.00 ಲಕ್ಷ ಖರ್ಚಾಗಿರುತ್ತದೆ. ರಾಜ್ಯವಲಯದ ಯೋಜನೆಗಳಲ್ಲಿ ಮುಖ್ಯವಾಗಿ ಸಹಾಯಧನ ಕೊಡುವುದಾಗಿರುತ್ತದೆ ಎಂದು ತಿಳಿಸಿದರು. ಜಿಲ್ಲಾಧಿಕಾರಿ ಮಾನತಾಡಿ, ಭೌತಿಕ ಸಾಧನೆ 97% ಆಗಿದ್ದು, ಆರ್ಥಿಕ ಸಾಧನೆ 54% ಆಗಿದೆ ಏಕೆ? ಎಂದು ಇಲಾಖಾಧಿಕಾರಿಯವರಿಗೆ ಕೇಳಿದಾಗ, ಇಲಾಖಾಧಿಕಾರಿಯವರು ಮಾತನಾಡಿ, ಸದರಿ ಮಾಹಿತಿಯು ಸೆಪ್ಟಂಬರ್ 2019 ರ ಅಂತ್ಯದ್ದಾಗಿರುತ್ತದೆಂದು ಹೇಳಿದರು. ಜಿಲ್ಲಾಧಿಕಾರಿ ಮಾನತಾಡಿ, ಅಕ್ಟೋಬರ್ ಅಂತ್ಯದ ಪ್ರಗತಿ ಮಾಹಿತಿಯನ್ನು ಏಕೆ ಇಲಾಖಾವಾರು ಪಡೆದಿಲ್ಲ ಎಂದು ಮುಖ್ಯ ಯೋಜನಾಧಿಕಾರಿಯವರಿಗೆ ಕೇಳಿದಾಗ, ಮುಖ್ಯ ಯೋಜನಾಧಿಕಾರಿಯವರು ಮಾತನಾಡಿ, ಅಧಿಕಾರಿಯವರಿಗೆ ಸಾಕಷ್ಟು ಸಲ ಹೇಳಿದರೂ, ಸಮಯಕ್ಕೆ ಸರಿಯಾಗಿ ಮಾಹಿತಿ ಸಲ್ಲಿಸುವುದಿಲ್ಲವೆಂದು ತಿಳಿಸಿದರು. ಜಿಲ್ಲಾಧಿಕಾರಿ ಮಾತನಾಡಿ, ಸದರಿ ವಿಷಯವು ಗಂಭೀರವಾಗಿದ್ದು, ಯಾವ ಇಲಾಖೆಯ ಅಧಿಕಾರಿಗಳು ಮಾಹಿತಿ ಸಲ್ಲಿಸಿರುವುದಿಲ್ಲವೋ ಅಂತಹವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಿ ಹಾಗೂ ನೋಟಿಸ್ ನೀಡಿ ಎಂದು ಮುಖ್ಯ ಯೋಜನಾಧಿಕಾರಿಯವರಿಗೆ ಸೂಚಿಸಿದರು. ರೇಷ್ಮೆ ಇಲಾಖೆಯ ಅಧಿಕಾರಿಯವರು ಮಾತನಾಡಿ, ಇಲಾಖೆಯಲ್ಲಿ Plantation ಶೇಕಡಾ 97% ಭೌತಿಕವಾಗಿ ಹಾಗೂ 83% ಆರ್ಥಿಕವಾಗಿ ಸಾಧನೆ ಆಗಿರುತ್ತದೆಂದು ತಿಳಿಸಿದರು.

**(ಕ್ರಮ:- ರೇಷ್ಮೆ ಇಲಾಖೆ)**

**ವಿಷಯ:6:- ಆರೋಗ್ಯ ಇಲಾಖೆ –**

ಬೀದರ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಹಿಂದಿನ ಸಾಲಿನ ಎರಡು ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡ ನಿರ್ಮಾಣಕ್ಕೆ ಹಣ ಬಿಡಗುಡೆ ಆಗುವುದು ಬಾಕಿ ಇತ್ತು, ಅದು ಆಗಿದೆಯಾ ಎಂದು ಆರೋಗ್ಯ ಇಲಾಖೆಯ ಅಧಿಕಾರಿಯವರಿಗೆ ಕೇಳಿದರು. ಆರೋಗ್ಯ ಇಲಾಖೆಯ ಅಧಿಕಾರಿಯವರು ಮಾನತಾಡಿ, ಸದರಿ ಕಟ್ಟಡಗಳಿಗಾಗಿ ಹಣ ಬಿಡಗುಡೆಯಾಗಿರುತ್ತದೆ. ಇನ್ನು NHM ಯೋಜನೆಗಾಗಿ ರೂ.45.00 ಕೋಟಿ ಅನುದಾನ ಬಿಡುಗಡೆಯಾಗಿ, ತಾಲ್ಲೂಕುವಾರು 38% ಆರ್ಥಿಕ ಸಾಧನೆಯಾಗಿರುತ್ತದೆ. ಮತ್ತೆ ರಾಜ್ಯವಲಯದ ಯೋಜನೆಗಳಿಗಾಗಿ ರೂ.1561.9 ಲಕ್ಷ ಅನುದಾನ ಮಂಜೂರಾಗಿದ್ದು, ಅದರಲ್ಲಿ ರೂ.766.46 ಲಕ್ಷ ಅನುದಾನ ಬಿಡುಗಡೆಯಾಗಿ, ಇಲ್ಲಿಯವರೆಗೆ ರೂ.77.71 ಲಕ್ಷ ಖರ್ಚಾಗಿರುತ್ತದೆ. ಇನ್ನು ಜಿಲ್ಲಾವಲಯದ ಯೋಜನೆಗಳಿಗೆ ರೂ.170.00 ಲಕ್ಷದ ಆರ್ಥಿಕ ಗುರಿ ಹೊಂದಲಾಗಿದ್ದು, ಅದರಲ್ಲಿ ರೂ.56.98 ಲಕ್ಷ ಬಿಡುಗಡೆಯಾಗಿರುತ್ತದೆ. ಆದರೆ ಇನ್ನು ಆರ್ಥಿಕ ಸಾಧನೆ ಆಗಿರುವುದಿಲ್ಲ ಎಂದು ತಿಳಿಸಿದರು.

ಮಾನ್ಯ ಜಿಲ್ಲಾಧಿಕಾರಿಯವರು ಮಾತನಾಡಿ, ಸೆಪ್ಟಂಬರ ಅಂತ್ಯಕ್ಕೆ ಆರ್ಥಿಕ ಗುರಿ 349% ಹಾಗೂ ಭೌತಿಕ ಸಾಧನೆ 176% ಆಗಿರುತ್ತದೆ. ಅದು ಹೇಗೆ ಸಾಧ್ಯ ಎಂದು ಕೇಳಿ, ಅದನ್ನು ಸರಿಪಡಿಸಿಕೊಳ್ಳಿ ಎಂದು ಇಲಾಖಾಧಿಕಾರಿಯವರಿಗೆ ತಿಳಿಸಿದರು. ಮಾನ್ಯ ಬೀದರ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಪ್ರಸ್ತುತ ಸಾಲಿನ ಯೋಜನೆಗಳಿಗೆ ಅನುಮೋದನೆ ಆಗಿದೆಯಾ ಎಂದು ಇಲಾಖಾಧಿಕಾರಿಯವರಿಗೆ ಕೇಳಿದಾಗ, ಪ್ರಸ್ತುತ ವರ್ಷದ ಎಲ್ಲಾ ಯೋಜನೆಗಳು ಅನುಮೋದನೆಯಾಗಿದ್ದು, 50% ಅನುದಾನ ಬಿಡಗುಡೆಯಾಗಿರುತ್ತದೆಂದು ತಿಳಿಸಿದರು. ಬೀದರ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಇಲಾಖೆಗೆ ಸಂಬಂಧಪಟ್ಟಂತೆ ಏನಾದರೂ ಸಮಸ್ಯೆ ಇದೆಯಾ ಎಂದು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರಿಗೆ ಮಾತನಾಡಿ, ಹೊಸದಾಗಿ ನಿರ್ಮಾಣವಾದ 100 ಹಾಸಿಗೆಗಳ ಆಸ್ಪತ್ರೆಗಾಗಿ HR ಸಮಸ್ಯೆ ಇದೆ ಎಂದು ತಿಳಿಸಿದರು.

ಬೀದರ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, NHM ಯೋಜನೆಯಡಿ ಇರುವ ಕಾರ್ಯಕ್ರಮಗಳಿಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ ಎಂದು ಇಲಾಖಾಧಿಕಾರಿಯವರಿಗೆ ಕೇಳಿದಾಗ, ಇಲಾಖಾಧಿಕಾರಿಯವರು ಮಾತನಾಡಿ, NHM ಯೋಜನೆಯಡಿ, RCH ಕಾರ್ಯಕ್ರಮಕ್ಕೆ ರೂ.6.00 ಕೋಟಿ, NRHM ಕಾರ್ಯಕ್ರಮಕ್ಕೆ ರೂ.3.20 ಕೋಟಿ, Immunisation ಕಾರ್ಯಕ್ರಮಕ್ಕೆ ರೂ.60.00 ಲಕ್ಷ, IDSP ಕಾರ್ಯಕ್ರಮಕ್ಕೆ ರೂ.2.00 ಕೋಟಿ, IPCDS ಕಾರ್ಯಕ್ರಮಕ್ಕೆ ರೂ.2.8 ಕೋಟಿ ಅನುದಾನ ಮಂಜೂರಾಗಿರುತ್ತದೆ. ಇನ್ನು ಸಾಧನೆ ಬಗ್ಗೆ ಮಾಹಿತಿ ನೀಡುತ್ತ, RCH ಕಾರ್ಯಕ್ರಮದಲ್ಲಿ 39%, NRHM ಕಾರ್ಯಕ್ರಮದಲ್ಲಿ 39%, Immunisation ಕಾರ್ಯಕ್ರಮದಲ್ಲಿ 29% ಹಾಗೂ National Programm for health care ಕಾರ್ಯಕ್ರಮದಲ್ಲಿ 6% ಸಾಧನೆಯಾಗಿರುತ್ತದೆಂದು ತಿಳಿಸಿದರು.

ಬೀದರ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಇಲಾಖೆಯ ಯೋಜನೆಗಳಿಗೆ ಸಂಬಂಧಪಟ್ಟಂತೆ ಏನಾದರೂ ಸಮಸ್ಯೆ ಇದೆಯಾ ಎಂದು ಇಲಾಖಾಧಿಕಾರಿಯವರಿಗೆ ಕೇಳಿದಾಗ, ಇಲಾಖಾಧಿಕಾರಿಯವರು ಮಾತನಾಡಿ, ಜಿಲ್ಲೆಯಲ್ಲಿ ಡೆಂಗ್ಯೂ ಜ್ವರದ ಸಮಸ್ಯೆ ಉಂಟಾಗಿತ್ತು. ಆದರೆ ಅದು ಪ್ರಸ್ತುತ ನಿಯಂತ್ರಕ್ಕೆ ಬಂದು, ಸಮಸ್ಯೆ ಬಗೆಹರಿದಿದೆ ಎಂದು ತಿಳಿಸಿದರು. ಮಾನ್ಯ ಬೀದರ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಜಿಲ್ಲಾ ವಲಯದಿಂದ ವೇತನವನ್ನು ಹೊರತುಪಡಿಸಿ, ಯೋಜನೆಗಳಿಗಾಗಿ ಎಷ್ಟು ಅನುದಾನ ಹಂಚಿಕೆಯಾಗಿತ್ತದೆಂದು ಇಲಾಖಾಧಿಕಾರಿಯವರಿಗೆ ಕೇಳಿದರು. ಮುಖ್ಯ ಯೋಜನಾಧಿಕಾರಿಯವರು ಮಾತನಾಡಿ, ಸದರಿ ಇಲಾಖೆಯ ಎರಡು ಹೆಡ್‌ಗಳು ಇವೆ. ವೈದ್ಯಕೀಯ ಮತ್ತು ಜನಾರೋಗ್ಯಕ್ಕೆ ಜಿಲ್ಲಾ ಪಂಚಾಯತ್‌ನಿಂದ ವೇತನ ಸೇರಿದಂತೆ ರೂ.51.54 ಕೋಟಿ ಅನುದಾನ ಹಂಚಿಕೆಯಾಗಿದೆ ಎಂದು ತಿಳಿಸಿದರು. ಬೀದರ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಕಳೆದ ಸಾಲಿನಲ್ಲಿ ಜಿಲ್ಲಾ ವಲಯದ ಅನುದಾನ ಸಂಪೂರ್ಣವಾಗಿ ಖರ್ಚಾಗಿರುತ್ತದೆಯಾ? ಎಂದು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿವಯರು ಮಾತನಾಡಿ, ಕಳೆದ ಸಾಲಿನಲ್ಲಿ ಶೇಕಡಾ 85% ಅನುದಾನ ಖರ್ಚಾಗಿರುತ್ತದೆಂದು ತಿಳಿಸಿದರು.

ಜಿಲ್ಲಾಧಿಕಾರಿ ಮಾನತಾಡಿ, ಆಯುಷ್ಮಾನ್ ಹೆಲ್ತ್ ಕಾರ್ಡ ಕುರಿತು ಮಾಹಿತಿಯನ್ನು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರಿಗೆ ಮಾತನಾಡಿ, ಇಲ್ಲಿಯವರೆಗೆ ಒಟ್ಟು 8899 ರೋಗಿಗಳಿಗೆ ಸದರಿ ಕಾರ್ಡ

ಮುಖಾಂತರ ಚಿಕಿತ್ಸೆ ನೀಡಲಾಗಿದೆ ಹಾಗೂ 2.46 ಲಕ್ಷ ಆಯುಷ್ಮಾನ ಹೆಲ್ತ್ ಕಾರ್ಡ ವಿತರಣೆ ಮಾಡಲಾಗಿದೆ. ಪ್ರತಿಯೊಬ್ಬರಿಗೆ ಒಂದೊಂದು ಕಾರ್ಡ ನೀಡಲಾಗುತ್ತಿದೆ ಎಂದು ತಿಳಿಸಿದರು. ಮಾನ್ಯ ಜಿಲ್ಲಾಧಿಕಾರಿಗಳು ಮಾತನಾಡಿ, ಒಟ್ಟು 19.00 ಲಕ್ಷ ಆಯುಷ್ಮಾನ ಹೆಲ್ತ್ ಕಾರ್ಡ ವಿತರಣೆ ಮಾಡಬೇಕಾಗಿದ್ದು, ಇಲ್ಲಿಯವರೆಗೆ ಕೇವಲ 2.46 ಲಕ್ಷ ವಿತರಣೆ ಬಹಳ ಕಡಿಮೆಯಾಗಿದೆ. ಆದಷ್ಟು ಬೇಗೆ ಸದರಿ ಕಾರ್ಡಗಳನ್ನು ವಿತರಣೆ ಮಾಡುವ ಕ್ರಮ ತೆಗೆದುಕೊಳ್ಳಿ ಎಂದು ಇಲಾಖಾಧಿಕಾರಿಯವರಿಗೆ ಸೂಚಿಸಿದರು.

**(ಕ್ರಮ:- ಆರೋಗ್ಯ ಇಲಾಖೆ ಬೀದರ)**

**ವಿಷಯ:7:- ಆಯುಷ ಇಲಾಖೆ:-**

ಬೀದರ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ರಾಜ್ಯ ವಲಯದ ಮುಖ್ಯವಾದ ಯೋಜನೆಗಳ ಕುರಿತು ಮಾಹಿತಿಯನ್ನು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾತನಾಡಿ, ರಾಜ್ಯವಲಯದಲ್ಲಿ IEC ಚಟುವಟಿಕೆಗಳು ಹಾಗೂ ತರಬೇತಿ ಕಾರ್ಯಕ್ರಗಳು ಇದ್ದು, ಇದರಲ್ಲಿ 20 ಕಾರ್ಯಕ್ರಮಗಳ ಗುರಿ ಹೊಂದಲಾಗಿದೆ. ಇನ್ನು ಜಿಲ್ಲಾ ವಲಯದಲ್ಲಿ ಚಿಕಿತ್ಸಾಲಯಗಳ ಕಟ್ಟಡ ಹಾಗೂ ದುರಸ್ಥಿ ಗಾಗಿ 7 ಕಾಮಗಾರಿಗಳ ಗುರಿ ಹೊಂದಲಾಗಿದೆ. ಅದಕ್ಕಾಗಿ ರೂ.22.50 ಲಕ್ಷ ಅನುದಾನ ಮಂಜೂರಾಗಿರುತ್ತದೆಂದು ತಿಳಿಸಿದರು. ಮಾನ್ಯ ಜಿಲ್ಲಾಧಿಕಾರಿಯವರು ಮಾತನಾಡಿ, ಸೆಪ್ಟೆಂಬರ ಅಂತ್ಯಕ್ಕೆ ತೋರಿಸಿದ ಮಾಹಿತಿಯು ತಪ್ಪಾಗಿದೆ ಅದನ್ನು ಸದರಿಪಡಿಸಿಕೊಳ್ಳುವಂತೆ ಇಲಾಖಾಧಿಕಾರಿಯವರಿಗೆ ತಿಳಿಸಿದರು.

**(ಕ್ರಮ: ಆಯುಷ ಇಲಾಖೆ ಬೀದರ)**

**ವಿಷಯ:8:- ಸಮಾಜ ಕಲ್ಯಾಣ ಇಲಾಖೆ:-**

ಬೀದರ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ರಾಜ್ಯವಲಯದ SCP TSP ಯೋಜನೆಯಡಿ ಎಷ್ಟು ಅನುದಾನ ಬಿಡುಗಡೆಯಾಗಿದೆ ಎಂದು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾತನಾಡಿ, ರಾಜ್ಯವಲಯದ SCP ಯೋಜನೆಯಡಿ, ಕಳೆದ ವರ್ಷದಲ್ಲಿ ಹಾಗೂ ಪ್ರಸ್ತುತ ವರ್ಷದಲ್ಲಿ ಅನುದಾನ ಬಿಡುಗಡೆಯಾಗಿರುವುದಿಲ್ಲ. ಇನ್ನು ಕಳೆದ ವರ್ಷದಲ್ಲಿ ಜಿಲ್ಲಾ ವಲಯದ TSP ಯೋಜನೆಯಡಿ ರೂ.40 ಲಕ್ಷ ಅನುದಾನ ಮಂಜೂರಾಗಿದ್ದು, ಅದರಲ್ಲಿ ರೂ.13.35 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ತಾಲ್ಲೂಕು ಪಂಚಾಯತನಲ್ಲಿ ಸದರಿ ಯೋಜನೆಯು ಕಾರ್ಯಗತ ಮಾಡಲಾಗುತ್ತಿದೆ. ರಾಜ್ಯವಲಯದಲ್ಲಿ ಯಾವುದೇ ಕಾರ್ಯಕ್ರಮಗಳು ಇಲ್ಲ. ಕೇವಲ ಜಿಲ್ಲಾವಲಯ ಹಾಗೂ ತಾಲ್ಲೂಕು ಪಂಚಾಯತ ಕಾರ್ಯಕ್ರಮಗಳು ಮಾತ್ರ ಇವೆ ಎಂದು ತಿಳಿಸಿದರು. ಮಾನ್ಯ ಜಿಲ್ಲಾಧಿಕಾರಿಯವರು ಮಾತನಾಡಿ, SC ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯ ಒದಗಿಸುವ ರಾಜ್ಯವಲಯದ ಕಾರ್ಯಕ್ರಮವಾಗಿದೆ ಎಂದು ಇಲಾಖಾಧಿಕಾರಿಯವರಿಗೆ ಕೇಳಿದಾಗ, ಇಲಾಖಾಧಿಕಾರಿಯವರು ಮಾತನಾಡಿ, ಸದರಿ ಕಾರ್ಯಕ್ರಮವು ರಾಜ್ಯವಲಯದಾಗಿದ್ದು, ಸದರಿ ಯೋಜನೆಗಾಗಿ ರೂ.154.00 ಲಕ್ಷ ಅನುದಾನ ಹಂಚಿಕೆಯಾಗಿದೆ. ಆದರೆ ಅನುದಾನ ಬಿಡುಗಡೆ ಆಗಿರುವುದಿಲ್ಲ ಎಂದು ತಿಳಿಸಿದರು.

ಮುಂದುವರೆದು ಇಲಾಖಾಧಿಕಾರಿಯವರು ಮಾತನಾಡಿ, ಇನ್ನು ಪ್ರಸ್ತುತ ರಾಜ್ಯ ವಲಯದ Post metric ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು 4 ಇಲಾಖೆಯಗಳು ಅಂದರೆ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ST ನಿಗಮದ ವಿದ್ಯಾರ್ಥಿಗಳು ರಾಜ್ಯ ವಿದ್ಯಾರ್ಥಿ ವೇತನದ ಕೋಟಾದಲ್ಲಿ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿಗಳಲ್ಲಿ ಹಾಕಬೇಕು. Pri metric ವಿದ್ಯಾರ್ಥಿಗಳಿಗೆ ಕಳೆದ ವರ್ಷದಿಂದ ಈ ರೀತಿಯ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ಬೀದರ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಇಲಾಖೆಯಲ್ಲಿ ಇರುವಂತಹ ಮುಖ್ಯವಾದ ಕಾರ್ಯಕ್ರಮಗಳು ಯಾವುವು ಎಂದು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾತನಾಡಿ, ಇಲಾಖೆಯ ವತಿಯಿಂದ ವಿದ್ಯಾರ್ಥಿವೇತನ ಕೊಡುವುದು, ಹಾಸ್ಟಲ್‌ಗಳ ನಿರ್ವಹಣೆ ಹಾಗೂ ಪ್ರಥಮ ದರ್ಜೆಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ Prize Money ಕೊಡುವುದು, ಇವು ಮುಖ್ಯವಾದ ಕಾರ್ಯಕ್ರಮಗಳಾಗಿವೆ ಎಂದು ತಿಳಿಸಿದರು. ಇನ್ನು colony development ಕಾರ್ಯಕ್ರಮವನ್ನು ಶಾಸಕರ ಕ್ಷೇತ್ರಗಳಲ್ಲಿ ಮಾಡಲಾಗುತ್ತದೆಂದು ತಿಳಿಸಿದರು.

ಬೀದರ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಹಾಸ್ಟಲ್‌ಗಳಿಗೆ ಸಂಬಂಧಪಟ್ಟಂತೆ ಏನಾದರೂ ಸಮಸ್ಯೆಗಳು ಇದೆಯಾ ಎಂದು ಕೇಳಿದಾಗ, ಇಲಾಖಾಧಿಕಾರಿಯವರು ಮಾತನಾಡಿ, ಹಾಸ್ಟಲ್‌ಗಳಿಗೆ ಸಂಬಂಧಪಟ್ಟಂತೆ ಏನು ಸಮಸ್ಯೆಗಳು ಇರುವುದಿಲ್ಲ. ಇನ್ನು 11 ಹೊಸ ಹಾಸ್ಟಲ್ ಕಟ್ಟಡಗಳ ನಿರ್ಮಾಣಕ್ಕಾಗಿ ನಿವೇಶನ ಲಭ್ಯವಿದೆ. ಈಗಾಗಲೇ 4 ಕಟ್ಟಡ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಇನ್ನು 7 ಕಟ್ಟಡ ಕಾಮಗಾರಿಗಳಿಗೆ ನಿವೇಶನ ಲಭ್ಯವಿದೆ. ಸದರಿ ಕಟ್ಟಡಗಳಿಗೆ ಇಲಾಖೆಯಿಂದ ಮಂಜೂರಾತಿ ಆಗಬೇಕಾಗಿರುತ್ತದೆಂದು ತಿಳಿಸಿದರು.

<u>(ಕ್ರಮ:- ಸಮಾಜ ಕಲ್ಯಾಣ ಇಲಾಖೆ ಬೀದರ)</u>

<u>ವಿಷಯ:9:- ಅಂಬೇಡ್ಕರ ನಿಗಮ:-</u>

ಬೀದರ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಗಂಗಾಕಲ್ಯಾಣ ಯೋಜನೆಯಡಿ 2017-18ನೇ ಸಾಲಿನದ್ದು ಮುಗಿದಿದೆಯಾ? ಎಂದು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾತನಾಡಿ, 2017-18ನೇ ಸಾಲಿನ ಗಂಗಾ ಕಲ್ಯಾಣ ಯೋಜನೆಯು ಸಂಪೂರ್ಣವಾಗಿ ಮುಗಿದಿದ್ದು, 2018-19ನೇ ಸಾಲಿನ ಫಲಾನುಭವಿಗಳ ಪಟ್ಟಿ ಬರಬೇಕಾಗಿದೆ. ಸದರಿ ಯೋಜನೆಯ ಸಲವತ್ತುಗಳಿಗೆ ರಾಜ್ಯ ಮಟ್ಟದಲ್ಲಿಯೇ ಟೆಂಡರ್ ಆಗುತ್ತದೆ. ಕೇವಲ ಫಲಾನುಭವಿಗಳನ್ನು ಮಾತ್ರ ನಾವು ಆಯ್ಕೆ ಮಾಡಿ ಕೊಡುತ್ತೇವೆ. ಇನ್ನು ಫಲಾನುಭವಿಗಳನ್ನು ಮಾನ್ಯ ಶಾಸಕರು ಆಯ್ಕೆ ಮಾಡುತ್ತಾರೆ. ಒಟ್ಟು 6 ಮತ ಕ್ಷೇತ್ರಗಳಲ್ಲಿ 4 ಮತ ಕ್ಷೇತ್ರದ ಫಲಾನುಭವಿಗಳ ಪಟ್ಟಿ ಬಂದಿದ್ದು, ಇನ್ನು 2 ಮತಕ್ಷೇತ್ರಗಳಿಂದ ಬರುವುದ ಬಾಕಿ ಇದೆ. ಅದನ್ನು follow up ಮಾಡಲಾಗುತ್ತಿದೆ ಎಂದು ತಿಳಿಸಿದರು. ಮಾನ್ಯ ಬೀದರ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಸದರಿ ವಿಷಯದ ಕುರಿತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಂದ ಮಾತನಾಡಿಸಿ ಎಂದು ಇಲಾಖಾಧಿಕಾರಿಯವರಿಗೆ ಹೇಳಿದರು. ಮಾನ್ಯ ಬೀದರ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ನರೇಗಾ ಯೋಜನೆಯಡಿ ಆದ

ಕಾಮಗಾರಿಗಳ ಕುರಿತು ಇಲಾಖಾಧಿಕಾರಿಯವರಿಗೆ ಕೇಳಿದಾಗ, ಇಲಾಖಾಧಿಕಾರಿಯವರು ಮಾತನಾಡಿ, ನರೇಗಾದಲ್ಲಿ 132 ಕಾಮಗಾರಿಗಳು ಹುಮನಾಬಾದ ಮತ್ತು ಬೀದರನಲ್ಲಿ ಬಾಕಿ ಇದೆ ಎಂದು ತಿಳಿಸಿದರು.

(ಕ್ರಮ:- ಅಂಬೇಡ್ಕರ ನಿಗಮ ಬೀದರ)

**ವಿಷಯ:10:- ST ನಿಗಮ (Backward class):-**

ಇಲಾಖಾಧಿಕಾರಿಯವರು ಮಾತನಾಡಿ, ವಿದ್ಯಾರ್ಥಿವೇತನಕ್ಕಾಗಿ ಅರ್ಜಿಗಳನ್ನು ಕರೆಯುವ ಕೆಲಸ ಪ್ರಾರಂಭವಾಗಿದೆ. ಕಳೆದ ವರ್ಷದ ವಿದ್ಯಾರ್ಥವೇತನವನ್ನು DBT ಮುಖಾಂತರ ಕೊಡಲಾಗುತ್ತಿದೆ. ವಿದ್ಯಾರ್ಥಿವೇತನ ಹಣವನ್ನು K2 ಗೆ ಕಳುಹಿಸುವ ಕೆಲಸ ನಡೆಯುತ್ತಿದೆ. Post Metric ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನದ ಅರ್ಜಿಗಳನ್ನು ಕರೆಯುವುದು 1ನೇ ನವೆಂಬರದಿಂದ ಪ್ರಾರಂಭವಾಗಿದೆ. ಅದನ್ನು ಸಹ DBT ಮುಖಾಂತರ ಮಾಡಲಾಗುತ್ತದೆ. ಇನ್ನು ಪ್ರಥಮ ದರ್ಜೆಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ Prize Money ಯನ್ನು ಅದು ಕೂಡ DBT ಮುಖಾಂತರ ವಿದ್ಯಾರ್ಥಿಗಳ ಖಾತೆಗೆ ಜಮೆ ಮಾಡಲಾಗುತ್ತದೆ ಎಂದು ತಿಳಿಸಿದರು. ಮಾನ್ಯ ಬೀದರ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಹಾಸ್ಟಲ್‌ಗಳಿಗೆ ಸಂಬಂಧಪಟ್ಟಂತೆ ಏನಾದರೂ ಸಮಸ್ಯೆ ಇದೆಯಾ ಎಂದು ಇಲಾಖಾಧಿಕಾರಿಯವರಿಗೆ ಕೇಳಿದಾಗ, ಸದರಿ ವಿಷಯದಲ್ಲಿ ಏನು ಸಮಸ್ಯೆ ಇರುವುದಿಲ್ಲ ಎಂದು ಇಲಾಖಾಧಿಕಾರಿಯವರು ತಿಳಿಸಿದರು.

(ಕ್ರಮ:- ST ನಿಗಮ ಬೀದರ)

**ವಿಷಯ: 11: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:**

ಇಲಾಖಾಧಿಕಾರಿಯವರು ಮಾತನಾಡಿ, ರಾಜ್ಯವಲಯದಲ್ಲಿ 19.7% ಆರ್ಥಿಕ ಪ್ರಗತಿಯಾಗಿರುತ್ತದೆ. ಯೋಜನೆಗಳು ಆನ್‌ಲೈನ್ ಇರುವುದರಿಂದ ಶುಲ್ಕ ವಿನಾಯತಿ ಕಾರ್ಯಕ್ರಮದ ಫೆಬ್ರುವರಿ ತಿಂಗಳಲ್ಲಿ ಅನುದಾನ ಖರ್ಚಾಗುತ್ತದೆ ಹಾಗೂ ವಿದ್ಯಾರ್ಥಿ ವೇತನದ ಅನುದಾನ ಡಿಸೆಂಬರ ತಿಂಗಳಲ್ಲಿ ಖರ್ಚಾಗುತ್ತದೆ. ನಮ್ಮಲ್ಲಿ ಕೂಡ ವಿದ್ಯಾರ್ಥಿಗಳಿಗೆ DBT ಮುಖಾಂತರ ಹಣ ಜಮೆ ಮಾಡಲಾಗುತ್ತದೆ. ಇನ್ನು ಹೊಸ ಕಟ್ಟಡಗಳಿಗಾಗಿ ಇನ್ನು ಭಾಲ್ಕಿ ತಾಲ್ಲೂಕಿನಲ್ಲಿ 2 ಹಾಗೂ ಹುಮನಾಬಾದ ತಾಲ್ಲೂಕಿನಲ್ಲಿ 2 ನಿವೇಶನದ ಅವಶ್ಯಕತೆ ಇದೆ ಎಂದು ತಿಳಿಸಿದರು. ನಿವೇಶನಕ್ಕೆ ಸಂಬಂಧಪಟ್ಟ ಅಧಿಕಾರಿಯವರು ಮಾತನಾಡಿ, ಈಗಾಗಲೇ ಎರಡು ನಿವೇಶನ ನೀಡಿರುವುದಾಗಿ ತಿಳಿಸಿದಾಗ, ಸದರಿ ನಿವೇಶನ ಸಮಾಜ ಕಲ್ಯಾಣ ಇಲಾಖೆಗೆ ಒಳಪಟ್ಟಿರುತ್ತದೆಂದು ಇಲಾಖಾಧಿಕಾರಿಯವರು ತಿಳಿಸಿದರು. ಮಾನ್ಯ ಜಿಲ್ಲಾಧಿಕಾರಿಯವರು ಮಾತನಾಡಿ, ಸಮಾಜ ಕಲ್ಯಾಣ ಇಲಾಖೆಗೆ ಒಳಪಟ್ಟಿರುವ ನಿವೇಶನವನ್ನು ತೆಗೆದುಕೊಂಡು ಕಾಮಗಾರಿ ಪ್ರಾರಂಭ ಮಾಡಿ ಎಂದು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಯವರಿಗೆ ತಿಳಿಸಿ, ಇನ್ನು ಎರಡು ನಿವೇಶನವನ್ನು ತಕ್ಷಣವೆ ಮಂಜೂರು ಮಾಡಿ ಕೊಡಿ ಎಂದು ಸಂಬಂಧಪಟ್ಟ ಅಧಿಕಾರಿಯವರಿಗೆ ಹೇಳಿ, ಈಗಾಗಲೇ 15 ಕಟ್ಟಡ ಕಾಮಗಾರಿಗಳಿಗೆ ನಿವೇಶನ ಲಭ್ಯವಿದ್ದು, ಅಲ್ಲಿ ಇಲ್ಲಿಯವರೆಗೆ ಕಟ್ಟಡ ಕಾಮಗಾರಿ ಪ್ರಾರಂಭವಾಗಿಲ್ಲ. ಅದನ್ನು ಬೇಗ ಪ್ರಾರಂಭಿಸಿ ಎಂದು ಇಲಾಖಾಧಿಕಾರಿಯವರಿಗೆ ತಿಳಿಸಿದರು.

(ಕ್ರಮ:- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬೀದರ)

**ವಿಷಯ: 12: ST Corporation:**

ಬೀದರ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಇಲಾಖೆಯಲ್ಲಿರುವ ಮುಖ್ಯವಾದ ಯೋಜನೆಗಳ ಕುರಿತು ಮಾಹಿತಿಯನ್ನು ಇಲಾಖಾಧಿಕಾರಿಯವರಿಗೆ ಕೇಳಿದರು, ಇಲಾಖಾಧಿಕಾರಿಯವರು ಮಾತನಾಡಿ, 2018-19 ಸಾಲಿನ ಫಲಾನುಭವಿಗಳ ಆಯ್ಕೆ ಮುಗಿದಿದೆ. ಹಾಗೂ ಸದರಿ ಸಾಲಿನ ಟೆಂಡರ್ ಕೂಡ ಮುಗಿದಿರುತ್ತದೆ. ಇನ್ನು 2019-20ನೇ ಸಾಲಿನ ಟೆಂಡರ್ ಆಗಿದ್ದು, ಎರಡು ಕ್ಷೇತ್ರದ ಫಲಾನುಭವಿಗಳ ಆಯ್ಕೆ ಆಗಿರುತ್ತದೆ. ಈ ವಾರದಲ್ಲಿ ಎರಡು ಸಭೆ ಇದೆ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಕಮೀಟಿ ಕೂಡ ರಚನೆಯಾಗಿರುತ್ತದೆಂದು ತಿಳಿಸಿದರು.

<u>ಕ್ರಮ:- (ST Corporation)</u>

**ವಿಷಯ ಸಂಖ್ಯೆ: 13 ವಾಲ್ಮಿಕಿ ಅಭಿವೃದ್ಧಿ ನಿಗಮ:-**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ವಾಲ್ಮೀಕಿ ಅಭಿವೃದ್ಧಿ ನಿಗಮದ ಕುರಿತು ಮಾಹಿತಿ ನೀಡುವಂತೆ ಕೇಳಿದರು. ಆದಕ್ಕೆ ಸಂಬಂಧಪಟ್ಟ ಅಧಿಕಾರಿಯವರು ಮಾತನಾಡಿ, ಸದರಿ ವಾಲ್ಮೀಕಿ ಅಭಿವೃದ್ಧಿ ನಿಗಮ ಬೀದರನಲ್ಲಿ ಗುಲ್ಬರ್ಗಾದ ಅಧಿಕಾರಿಗಳು ಪ್ರಭಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಸದರಿ ನಿಗಮದಲ್ಲಿ ಎಲ್ಲಾ Outsource ಸಿಬ್ಬಂದಿಗಳಿದ್ದು, ಸದರಿ ಸಭೆಗೆ ಅಧಿಕಾರಿಗಳು ಬಂದಿಲ್ಲ ಎಂದು ತಿಳಿಸಿದ್ದಕ್ಕೆ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮತ್ತು ಮಾನ್ಯ ಜಿಲ್ಲಾಧಿಕಾರಿಯವರು ಮಾತನಾಡಿ, ಸದರಿ ನಿಗಮದಲ್ಲಿ ಆಧಿಕಾರಿಗಳು ಇಲ್ಲದ ಪ್ರಯುಕ್ತ ಸ್ಥಳಿಯ ಪ್ರದೇಶದ Senior Officer ಅವರಿಗೆ Incharge ಕೊಡಿಸಲು ತಿಳಿಸಿದರು.

<u>(ಕ್ರಮ: ವಾಲ್ಮಿಕಿ ಅಭಿವೃದ್ಧಿ ನಿಗಮ)</u>

**ವಿಷಯ ಸಂಖ್ಯೆ: 14. ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ:-**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಪ್ರಗತಿ ಕುರಿತು ಮಾಹಿತಿ ನೀಡುವಂತೆ ಕೇಳಿದರು. ಅದಕ್ಕೆ ಜಿಲ್ಲಾ ಅಲ್ಪ ಸಂಖ್ಯಾತರ ಕಲ್ಯಾಣಾಧಿಕಾರಿಯವರು ಮಾತನಾಡಿ, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ಯೋಜನೆಗಳ ಕುರಿತು ಈ ಕೆಳಗಿನಂತೆ ಮಾಹಿತಿ ನೀಡಿದರು.

- ರಾಜ್ಯ ವಲಯದ ಕಾರ್ಯಕ್ರಮವಾದ ಬಿದಾಯಿ ಯೋಜನೆಗೆ ಪ್ರಸ್ತುತ ಸಾಲಿನಲ್ಲಿ ರೂ.232.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ.232.00 ಲಕ್ಷ ಅನುದಾನ ಖರ್ಚು ಮಾಡಿ, ಶೇಕಡಾ 100% ಕ್ಕೆ 100% ರಷ್ಟು ಸಾಧನೆ ಮಾಡಲಾಗಿದೆ. ಏಪ್ರೀಲ್ 15, 2018ರಲ್ಲಿ (ಕಳೆದ ಒಂದು ವರ್ಷದಿಂದ) ಬಂದಿರುವ ಎಲ್ಲಾ ಅರ್ಜಿಗಳನ್ನು Clear ಮಾಡಲಾಗಿದ್ದು, ಇನ್ನು 3534 ಅರ್ಜಿಗಳು ಬಾಕಿ ಇವೆ.

- ಮದರಸಾ ಯೋಜನೆಯಡಿಯಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ಸಹಾಯಾನುದಾನಕ್ಕಾಗಿ ರೂ.45.00 ಲಕ್ಷ ಅನುದಾನ ಬಿಡುಗಡೆಯಾಗಿದೆ.
- ಎಮ್.ಎಸ್.ಡಿ.ಪಿ. ಯೋಜನೆಯಡಿ ಕಳೆದ ಎರಡು ವರ್ಷಗಳಿಂದ ಅನುದಾನದ ಕೊರತೆಯಿಂದ 65 Un-started Workಗಳಿದ್ದು, ಜಿಲ್ಲೆಯಲ್ಲಿರುವ ಕಟ್ಟಡಗಳ ಅನುದಾನ ಮತ್ತು Interest ಹಣವನ್ನು ಬಳಸಿಕೊಳ್ಳುವಂತೆ, Government Level ನಲ್ಲಿ Minister ಅವರ ಅನುಮತಿ ತೆಗೆದುಕೊಂಡು ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದ್ದು, ಇನ್ನು Work Order ಕೊಟ್ಟಿಲ್ಲ ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಗಮನಕ್ಕೆ ತಂದಾಗ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಪ್ರಸ್ತಾವನೆ ಕಳುಹಿಸಿದ ಒಂದು ಪ್ರತಿಯನ್ನು ನನಗೆ (ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಗೆ) ಸಲ್ಲಿಸುವಂತೆ ತಿಳಿಸಿದರು.

**(ಕ್ರಮ: ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿಗಳು)**

**ವಿಷಯ ಸಂಖ್ಯೆ: 15. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ:-**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಪ್ರಗತಿ ಕುರಿತು ಮಾಹಿತಿ ನೀಡುವಂತೆ ಕೇಳಿದರು. ಅದಕ್ಕೆ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿಯವರು ಮಾತನಾಡಿ, ಜಿಲ್ಲಾ ವಲಯ ಕಾರ್ಯಕ್ರಮವಾದ ರಾಷ್ಟ್ರೀಯ ಕಾರ್ಯಕ್ರಮದಡಿ ಪ್ರಾಥಮಿಕ ಶಿಕ್ಷಣಕ್ಕೆ ಪೌಷ್ಠಿಕ ಆಹಾರ ಬೆಂಬಲ ಯೋಜನೆಯಡಿ ರೂ.77.66 ಕೋಟಿ ಅನುದಾನ ಮಂಜೂರಾಗಿದ್ದು, ಅದರಲ್ಲಿ ರೂ.66.00 ಕೋಟಿ ಅನುದಾನ ಬಿಡುಗಡೆಯಾಗಿದ್ದು, ರೂ.32.83 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಪ್ರಸ್ತುತ ಅಕ್ಟೋಬರ್ ಮಾಹೆಯಲ್ಲಿ ರೂ.5.56 ಕೋಟಿ ಅನುದಾನ ಖರ್ಚಾಗಿದ್ದು, ಪ್ರಸ್ತುತ 2019-20ನೇ ಸಾಲಿನ ಏಪ್ರೀಲ್ ಮಾಹೆಯಿಂದ ಇಲ್ಲಿಯವರೆಗೆ (ಅಕ್ಟೋಬರ್ ವರೆಗೆ) ರೂ.20.84 ಕೋಟಿ ಅನುದಾನ ಖರ್ಚಾಗಿದೆ. ಜಿಲ್ಲೆಯಲ್ಲಿ 1893 ಅಂಗನವಾಡಿ ಕೇಂದ್ರಗಳಿದ್ದು, ಅದರಲ್ಲಿ 1,56,345 ಮಕ್ಕಳ ಸಂಖ್ಯೆ ಇದ್ದು, ಅದರಲ್ಲಿ 1,25,000 ಮಕ್ಕಳ ತೂಕವನ್ನು ಮಾಡಲಾಗಿದೆ. ಅಂಗನವಾಡಿ ಕೇಂದ್ರಗಳಲ್ಲಿ 6 ತಿಂಗಳಿನ ಮಗುವಿನಿಂದ 3 ವರ್ಷದ ಮಗುವಿಗೆ ಆಹಾರವನ್ನು ಮನೆಗೆ ಕೊಡಲಾಗುತ್ತದೆ. 3 ವರ್ಷದ ಮಗುವಿನಿಂದ 6 ವರ್ಷದ ಮಕ್ಕಳಿಗೆ ಅಂಗನವಾಡಿ ಕೇಂದ್ರಗಳಲ್ಲಿ ಆಹಾರವನ್ನು ಕೊಡಲಾಗುತ್ತದೆ. ಹಾಗೂ ಗರ್ಭಿಣಿಯರಿಗೆ ಮತ್ತು ಬಾಣಂತಿಯರಿಗೆ ಆಹಾರವನ್ನು ಕೊಡಲಾಗುತ್ತದೆ ಎಂದು ತಿಳಿಸಿದರು.

ಮುಂದುವರೆದು, ಜಿಲ್ಲಾ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಾತನಾಡಿ, ಪ್ರಸ್ತುತ ಅಂಗನವಾಡಿ ಕೇಂದ್ರಗಳಿಗೆ ಮಕ್ಕಳು ಬರಲಾರದ ಕಾರಣ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆ ಆಗುತ್ತಿರುವುದರ ಕುರಿತು ಯಾವ ಕ್ರಮ ಕೈಗೊಳ್ಳಲಾಗಿದೆ? ಎಂದು ಕೇಳಿದರು. ಅದಕ್ಕೆ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣಾದಿಕಾರಿಯವರು ಮಾತನಾಡಿ, ಜಿಲ್ಲೆಯ ಪ್ರತಿ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕೇಂದ್ರದಲ್ಲಿನ ಕಾರ್ಯಕರ್ತೆಯರು ಮನೆ ಮನೆಗೆ ಭೇಟಿ ನೀಡಿ, ಮಕ್ಕಳನ್ನು ಕರೆದುಕೊಂಡು ಬರುವುದು ಮತ್ತು

ಸಭೆಗಳನ್ನು ಮಾಡುವುದರ ಮೂಲಕ ಮತ್ತು ಪ್ರಚಾರ ಮಾಡಿ ಮಕ್ಕಳನ್ನು ಅಂಗನವಾಡಿ ಕೇಂದ್ರಗಳಿಗೆ ಕರೆದುಕೊಂಡು ಬರಲಾಗುತ್ತಿದೆ ಎಂದು ತಿಳಿಸಿದರು.

ಮುಂದುವರೆದು ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖಾಧಿಕಾರಿವರು ಮಾತನಾಡಿ, ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ಪೌಷ್ಠಿಕ ಆಹಾರ ಒದಗಿಸಲು 6 ತಿಂಗಳುಗಳಿಂದ 1 ವರ್ಷದ ವರೆಗಿನ ಮಕ್ಕಳ ಸಂಖ್ಯೆ 22671 ರಷ್ಟು ಭೌತಿಕ ಗುರಿ ಇದ್ದು, ಅದರಲ್ಲಿ 18869 ಮಕ್ಕಳಿಗೆ ಪೌಷ್ಠಿಕ ಆಹಾರವನ್ನು ಕೋಡಲಾಗುತ್ತಿದೆ. 1 ವರ್ಷದಿಂದ ಎರಡು ವರ್ಷದವರೆಗಿನ ಮಕ್ಕಳ ಸಂಖ್ಯೆ 38125 ರಷ್ಟು ಭೌತಿಕ ಗುರಿ ಇದ್ದು, ಅದರಲ್ಲಿ 34,150 ಮಕ್ಕಳಿಗೆ, 2 ವರ್ಷದಿಂದ 3 ವರ್ಷದ ಮಕ್ಕಳ ಸಂಖ್ಯೆ 37793 ರಷ್ಟು ಭೌತಿಕ ಗುರಿ ಇದ್ದು, ಅದರಲ್ಲಿ 34116 ಮಕ್ಕಳಿಗೆ, 3ರಿಂದ 5 ವರ್ಷದ ಮಕ್ಕಳಿಗೆ 42448 ರಷ್ಟು ಭೌತಿಕ ಗುರಿ ಇದ್ದು, ಅರದಲ್ಲಿ 33981 ಮಕ್ಕಳಿಗೆ ಮತ್ತು 5ರಿಂದ 6 ವರ್ಷದ ಮಕ್ಕಳು 932 ರಷ್ಟು ಭೌತಿಕ ಗುರಿ ಇದ್ದು, ಅದರಲ್ಲಿ 795 ಮಕ್ಕಳಿಗೆ ಹಾಗೂ 19257 ಗರ್ಭಿಣಿಯರಲ್ಲಿ 15487 ಗರ್ಭಿಣಿಯರಿಗೆ ಮತ್ತು 19257 ಜನ ಬಾಣಂತಿಯರಲ್ಲಿ 14872 ಜನ ಬಾಣಂತಿಯರಿಗೆ ಪೌಷ್ಠಿಕ ಆಹಾರವನ್ನು ಕೊಡಲಾಗುತ್ತಿದೆ ಎಂದು ತಿಳಿಸಿದರು.

<u>(ಕ್ರಮ: ಉಪನಿರ್ದೇಶಕರು, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು)</u>

**<u>ವಿಷಯ ಸಂಖ್ಯೆ: 16. ಶಿಕ್ಷಣ ಇಲಾಖೆ:-</u>**

ಮುಂದುವರೆದು, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಶಿಕ್ಷಣ ಇಲಾಖೆಯ ಪ್ರಗತಿ ಕುರಿತು ಮಾಹಿತಿ ನೀಡುವಂತೆ ಕೇಳಿದರು. ಅದಕ್ಕೆ ಶಿಕ್ಷಣಾಧಿಕಾರಿಗಳು ಮಾತನಾಡಿ, ರಾಷ್ಟ್ರೀಯ ಕಾರ್ಯಕ್ರಮದಡಿಯಲ್ಲಿ ಅಕ್ಷರ ದಾಸೋಹ ಕಾರ್ಯಕ್ರಮದಲ್ಲಿ ಅಕ್ಟೋಬರ್ ಮಾಹೆಯ ಅಂತ್ಯದ ವರೆಗೆ ಶೇಕಡಾ 46% ಪ್ರತಿಶತದಷ್ಟು ಸಾಧನೆ ಮಾಡಲಾಗಿದೆ. ಜಿಲ್ಲೆಯ ಎಸ್.ಎಸ್.ಎಲ್.ಸಿ. ಫಲಿತಾಂಶವು 2015ನೇ ಸಾಲಿನಲ್ಲಿ 28ನೇ ಸ್ಥಾನದಲ್ಲಿ ಮತ್ತು 2016ನೇ ಸಾಲಿನಲ್ಲಿ 24ನೇ ರ್‍ಯಾಂಕಿಂಗ್ ನಲ್ಲಿದ್ದು, ಪ್ರಸ್ತುತ 2018-19ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಫಲಿತಾಂಶವು ರ್‍ಯಾಂಕಿಂಗ್‌ನಲ್ಲಿ 29ನೇ ಸ್ಥಾದಲ್ಲಿ ಮತ್ತು ಕ್ವಾಂಟಿಟಿಯಲ್ಲಿ 27ನೇ ಸ್ಥಾನದಲ್ಲಿದೆ ಎಂದು ತಿಳಿಸಿ, ಮಳೆ ಬಿದ್ದು 13 ಶಾಲಾ ಕೊಠಡಿಗಳು ಬಿದ್ದು ಹೋಗಿದ್ದು, ಅವುಗಳ ನಿರ್ಮಾಣಕ್ಕಾಗಿ ಸಂಬಂಧಪಟ್ಟ ಎಮ್.ಎಲ್.ಎ. ರವರಿಗೆ ಪ್ರಸ್ತಾವನೆ ಕಳುಹಿಸಲಾಗಿದೆ. ಮತ್ತು 100 ಶಾಲಾ ಕೊಠಡಿಗಳನ್ನು ನೆಲಸಮಗೊಳಿಸಲಾಗಿದ್ದು, 2019-20ನೇ ಸಾಲಿನಲ್ಲಿ ಕೆ.ಕೆ.ಆರ್.ಡಿ.ಬಿ. ಯೋಜನೆಯಡಿ ಶಾಲಾ ಕೋಣೆಗಳ ನಿರ್ಮಾಣ ಮಾಡಲು ಮಂಜೂರು ಮಾಡಲಾಗಿದ್ದು, ಕೆ.ಕೆ.ಆರ್.ಡಿ.ಬಿ. ಯೋಜನೆಯ ಷರತ್ತುಗಳ ಪ್ರಕಾರ ಪಾಲನೆ ಮಾಡುತ್ತೇವೆ ಎಂದು ತಿಳಿಸಿದರು.

<u>(ಕ್ರಮ: ಉಪನಿರ್ದೇಶಕರು, ಶಿಕ್ಷಣ ಇಲಾಖೆ)</u>

**<u>ವಿಷಯ ಸಂಖ್ಯೆ: 17. ಭೂ-ಸೇನಾ ನಿಗಮ (ಲ್ಯಾಂಡ ಆರಮಿ):-</u>**

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಸದರಿ ಇಲಾಖೆಯಿಂದ ಯಾವ-ಯಾವ ಕಟ್ಟಡ ಕಾಮಗಾರಿಗಳು ನಿರ್ಮಾಣ ಮಾಡುವುದು ಬಾಕಿ ಉಳಿದಿವೆ ಎಂದು ಕೇಳಿದರು. ಅದಕ್ಕೆ ಉಪನಿರ್ದೇಶಕರು ಪಶು ಸಂಗೋಪನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖಾಧಿಕಾರಿಯವರು ಮಾತನಾಡಿ, ಕಳೆದ ನಾಲ್ಕು ವರ್ಷಗಳಿಂದ ಸದರಿ ಇಲಾಖೆಯ ಕಟ್ಟಡ ನಿರ್ಮಾಣ ಕಾಮಗಾರಿ ಬಾಕಿ ಇದೆ ಮತ್ತು ಹುಮನಾಬಾ ತಾಲೂಕಿನಲ್ಲಿಯೂ ಕೂಡ

ಕಟ್ಟಡ ಕಾಮಗಾರಿಯ ಸಮಸ್ಯೆ ಇದೆ ಎಂದು ತಿಳಿಸಿದರು. ಮುಂದುವರೆದು ಜಂಟಿ ಕೃಷಿ ನಿರ್ದೇಶಕರು ಮಾತನಾಡಿ, ಲ್ಯಾಂಡ್ ಆರ್ಮಿ ಇಂದ ಔರಾದ (ಬಿ) ತಾಲೂಕಿನ ದಾಬಕಾ ಆರ್.ಎಸ್.ಕೆ. ಕೇಂದ್ರ ಕಟ್ಟಡ ನಿರ್ಮಾಣ ಮಾಡಲು ಆರ್.ಐ.ಡಿ.ಎಫ್. ಯೋಜನೆಯಡಿ ಅನುದಾನ ಬಿಡುಗಡೆಯಾಗಿದ್ದು, ಸದರಿ ಕಟ್ಟಡ ನಿರ್ಮಾಣ ಪೂರ್ಣಗೊಳಿಸಲಾಗಿದ್ದು, ಇನ್ನು ಹಸ್ತಾಂತರವಾಗದೆ ಗುತ್ತೆದಾರರಿಗೆ ಹಣ ಪಾವತಿ ಮಾಡಲಾಗಿದ್ದು, ಪ್ರಸ್ತುತ ಸದರಿ ಕಟ್ಟಡದ ಕಿಟಕಿ ಮತ್ತು ಬಾಗಿಲು ಎಲ್ಲಾ ಕಿತ್ತುಕೊಂಡು ಹೋಗಿದ್ದಾರೆ ಎಂದು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಗಮನಕ್ಕೆ ತಂದು, ಪ್ರಸ್ತುತ 2019-20ನೇ ಸಾಲಿನಲ್ಲಿ ರಾಜ್ಯ ವಲಯ ಮಟ್ಟದಿಂದ 6 ಕಟ್ಟಡ ಕಾಮಗಾರಿಗಳ ನಿರ್ಮಾಣ ಮಾಡಲು ಕೆ.ಆರ್.ಐ.ಡಿ.ಎಲ್ ಇಲಾಖೆಗೆ ಕೊಡಲಾಗಿದೆ ಎಂದು ತಿಳಿಸಿದರು.

ಮುಂದುವರೆದು, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಬೀದರ ಜಿಲ್ಲೆಯಲ್ಲಿ ಲ್ಯಾಂಡ್ ಆರ್ಮಿ ಇಲಾಖೆಯಿಂದ ಯಾವುದೇ ಕಾಮಗಾರಿ ಕೆಲಸಗಳು ಸರಿಯಾಗಿ ಆಗುತ್ತಿಲ್ಲ, ಕಾರಣ ವಿವಿಧ ಇಲಾಖೆಗಳ ಹಾಗೂ ಹೆಚ್.ಕೆ.ಆರ್.ಡಿ.ಬಿ. ಯೋಜನೆಯಡಿ ಕಾಮಗಾರಿ ಕೆಲಸಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಮುಖ್ಯ ವ್ಯವಸ್ಥಾಪಕ ನಿರ್ದೇಶಕರು, ಲ್ಯಾಂಡ್ ಆರ್ಮಿರವರಿಗೆ ಪ್ರಗತಿ ಪರಿಶೀಲನೆ ಮಾಡಲು ಸೂಚಿಸಲಾಗುವುದು ಎಂದು ಹೇಳಿದರು.

**(ಕ್ರಮ: ಭೂ-ಸೇನಾ ನಿಗಮ ಅಧಿಕಾರಿಗಳು)**

**ವಿಷಯ ಸಂಖ್ಯೆ: 18. ನರೇಗಾ:-**

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮಾತನಾಡಿ, ನರೇಗಾ ಯೋಜನೆಯ ಪ್ರಗತಿ ಕುರಿತು ಮಾಹಿತಿ ನೀಡುವಂತೆ ಕೇಳಿದರು. ಅದಕ್ಕೆ ಉಪಕಾರ್ಯದರ್ಶಿಗಳು ಜಿಲ್ಲಾ ಪಂಚಾಯತ ಬೀದರ ರವರು ಮಾತನಾಡಿ, ನರೇಗಾ ಯೋಜನೆಯು 6ನೇ ರಾಜ್ಯ ರ್‍ಯಾಂಕ್‌ನಲ್ಲಿದ್ದು, ಪ್ರಸ್ತುತ 2019-20ನೇ ಸಾಲಿನಲ್ಲಿ ನರೇಗಾ ಯೋಜನೆಯಡಿ ಒಟ್ಟು 35 ಲಕ್ಷ ಮಾನವ ದಿನಗಳನ್ನು ಜನರೇಟ್ ಮಾಡುವ ಗುರಿ ಹೊಂದಿದ್ದು, ಅಕ್ಟೋಬರ್ ಮಾಹೆಯಲ್ಲಿ 21 ಲಕ್ಷ ಮಾನವ ದಿನಗಳನ್ನು ಜನರೇಟ್ ಮಾಡಲಾಗಿದ್ದು, ನವೆಂಬರ್ 11ರ ವರೆಗೆ (ಇಂದಿನ ವರೆಗೆ) 23 ಲಕ್ಷ ಮಾನವ ದಿನಗಳನ್ನು ಜನರೇಟ್ ಮಾಡಲಾಗಿದ್ದು, ಔರಾದ (ಬಿ) ತಾಲೂಕಿನಲ್ಲಿ ಶೇಕಡಾ 72.90% ಪ್ರತಿಶತದಷ್ಟು, ಬೀದರ ತಾಲೂಕಿನಲ್ಲಿ ಶೇಕಡಾ 64% ಪ್ರತಿಶತದಷ್ಟು, ಹುಮನಾಬಾದ ತಾಲೂಕಿನಲ್ಲಿ ಶೇಕಡಾ 66% ಪ್ರತಿಶತದಷ್ಟು, ಭಾಲ್ಕಿ ತಾಲೂಕಿನಲ್ಲಿ ಶೇಕಡಾ 73.29% ಪ್ರತಿಶತದಷ್ಟು, ಬಸವಕಲ್ಯಾಣ ತಾಲೂಕಿನಲ್ಲಿ ಶೇಕಡಾ 72.02% ಪ್ರತಿಶತದಷ್ಟು, ಹೀಗೆ ಒಟ್ಟು ಶೇಕಡಾ 71.49% ಪ್ರತಿಶತದಷ್ಟು ಸಮಯೋಚಿತ ಪಾವತಿ ಆಗಿದೆ ಎಂದು ತಿಳಿಸಿದಾಗ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮಾತನಾಡಿ, ಕೆಲವು ತಾಲೂಕಾಗಳಲ್ಲಿ ಕಡಿಮೆ ಪಾವತಿ ಮಾಡಲಾಗಿದ್ದು, ಸಮಯೋಚಿತ ಪಾವತಿ ಮಾಡುವುದರಲ್ಲಿ ಸುಧಾರಣೆ ಮಾಡುವಂತೆ ತಿಳಿಸಿದರು.

(ಕ್ರಮ: ನರೇಗಾ)

**ವಿಷಯ ಸಂಖ್ಯೆ: 19. ವಸತಿ ಯೋಜನೆ:-**

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ವಸತಿ ಯೋಜನೆಯ ಪ್ರಗತಿ ಕುರಿತು ಮಾಹಿತಿ ನೀಡುವಂತೆ ಕೇಳಿದರು. ಅದಕ್ಕೆ ಯೋಜನಾ ನಿರ್ದೇಶಕರು (ಡಿ.ಆರ್.ಡಿ.ಎ. ಕೋಶ) ಮಾತನಾಡಿ, ಪ್ರಸ್ತುತ 2019-

20ನೇ ಸಾಲಿನಲ್ಲಿ ವಸತಿ ಯೋಜನೆಯಡಿ ಯಾವುದೇ ಗುರಿ ಬಂದಿರುವುದಿಲ್ಲ ಎಂದು ತಿಳಿಸಿ, ಮಾನ್ಯ ಸಚಿವರು ಜಿಲ್ಲೆಯ ಎಲ್ಲಾ ತಾಲೂಕಿನ ಗ್ರಾಮ ಪಂಚಾಯತಿಗಳಲ್ಲಿ ಯಾವ ಯಾವ ಮನೆಗಳು ಯಾವ ಹಂತದಲ್ಲಿವೆ ಎಂದು ತಾಲೂಕಾವಾರು ಮಾಹಿತಿಯನ್ನು ಸಲ್ಲಿಸುವಂತೆ ತಿಳಿಸಲಾಗಿದ್ದು, ವಿವಿಧ ಹಂತದಲ್ಲಿರುವ ವಸತಿಗಳ ಮಾಹಿತಿಯನ್ನು ಕ್ರೂಢಿಕರಿಸಲಾಗುತ್ತಿದೆ. ಮತ್ತು ಪಿ.ಎಮ್.ಎ.ವೈ. (ಪ್ರಧಾನ ಮಂತ್ರಿ ಆವಾಸ ಯೋಜನಾ) ಯೋಜನೆಯಡಿಯಲ್ಲಿ 10976 ಅರ್ಜಿಗಳ ಗುರಿ ಇದ್ದು, ಇಲ್ಲಿಯವರೆಗೆ 9285 ಅರ್ಜಿಗಳನ್ನು ಅನ್-ಲೈನ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ಹಾಗೂ 2017ನೇ ಸಾಲಿನ ಎಮ್.ಎಲ್.ಎ. ಲ್ಯಾಡ್‌ನ ಕಾಮಗಾರಿಗಳು ಬಾಕಿ ಇವೆ ಎಂದು ತಿಳಿಸಿದರು.

**(ಕ್ರಮ: ಯೋಜನಾ ನಿರ್ದೇಶಕರು, ವಸತಿ ಯೋಜನೆ)**

**ವಿಷಯ ಸಂಖ್ಯೆ: 20. ಸ್ವಚ್ಛ ಭಾರತ ಮೀಷನ್:-**

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಸ್ವಚ್ಛ ಭಾರತ ಮೀಷನ್ ಯೋಜನೆಯ ಕುರಿತು ಮಾಹಿತಿ ನೀಡುವಂತೆ ಕೇಳಿದರು. ಅದಕ್ಕೆ ಉಪಕಾರ್ಯದರ್ಶಿಗಳು ಜಿಲ್ಲಾ ಪಂಚಾಯತ ಬೀದರ ರವರು ಮಾತನಾಡಿ, 2019-20ನೇ ಸಾಲಿನಲ್ಲಿ ಒಟ್ಟು 5200 ಬಿಟ್ಟು ಹೋದ ಕುಟುಂಬಗಳ ವೈಯಕ್ತಿಕ ಶೌಚಾಲಯ ನಿರ್ಮಾಣ ಮಾಡುವ ಗುರಿ ಇದ್ದು, ಅದರಲ್ಲಿ 1818 ಶೌಚಾಲಯಗಳನ್ನು ಪೂರ್ಣಗೊಳಿಸಲು ರೂ.206.07 ಲಕ್ಷ ಖರ್ಚು ಮಾಡಲಾಗಿದ್ದು, ಇನ್ನು 3382 ಶೌಚಾಲಯಗಳು ಬಾಕಿ ಇದ್ದು, 3382 ಶೌಚಾಲಯಗಳಲ್ಲಿ 3006 ಶೌಚಾಲಯಗಳು ಪುನಃ ನಿರ್ಮಾಣಕ್ಕಾಗಿ ಅರ್ಜಿಗಳು ಬಂದಿದ್ದು ಸದರಿ ಅರ್ಜಿಗಳನ್ನು ತಿರಸ್ಕೃತಗೊಳಿಸಲಾಗುವುದು ಎಂದು ತಿಳಿಸಿದರು.

ಮುಂದುವರೆದು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಮಾನ್ಯ ಜಿಲ್ಲಾಧಿಕಾರಿಗಳು ಮಾತನಾಡಿ, ನಿರ್ಮಾಣ ಮಾಡಿದ ಎಲ್ಲಾ ಶೌಚಾಲಯಗಳನ್ನು ಬಳಕೆ ಮಾಡುವಂತೆ ಜನರಿಗೆ Awareness programme ಮಾಡಲು ತಿಳಿಸಿದರು. ಅದಕ್ಕೆ ಮಾನ್ಯ ಉಪಕಾರ್ಯದರ್ಶಿಗಳು ಮಾತನಾಡಿ, ಎಲ್ಲಾ ಗ್ರಾಮಗಳಲ್ಲಿ IEC Material (Information, Education & Communication) & Pamplet ಗಳನ್ನು ಹಂಚುವುದರ ಜೊತೆಗೆ ಬೀದಿ ನಾಟಕಗಳನ್ನು ಮಾಡುವುದರ ಮೂಲಕ ತಿಳುವಳಿಕೆ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಗಮನಕ್ಕೆ ತಂದರು.

**(ಕ್ರಮ: ಸ್ವಚ್ಛ ಭಾರತ ಮೀಷನ್, ಜಿಲ್ಲಾ ಪಂಚಾಯತ ಬೀದರ)**

**ವಿಷಯ ಸಂಖ್ಯೆ: 21. ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ:-**

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಯೋಜನೆಗಳ ಪ್ರಗತಿ ವರದಿ ಕುರಿತು ಮಾಹಿತಿ ನೀಡುವಂತೆ ಕೇಳಿದರು. ಅದಕ್ಕೆ ಜಿಲ್ಲಾಧಿಕಾರಿ ಮಾತನಾಡಿ, ಪ್ರಸ್ತುತ 2019-20ನೇ ಸಾಲಿನಲ್ಲಿ ಜಿಲ್ಲೆಯ ಶಾಸಕರು ಸದರಿ ಯೋಜನೆಯಡಿಯ ಕಾಮಗಾರಿಗಳ ಪ್ರಸ್ತಾವನೆಗಳಿಗೆ ತಡವಾಗಿ ಅನುಮೋದನೆ ನೀಡಲಾಗಿದ್ದು, ಕಳೆದ ಎರಡು ತಿಂಗಳುಗಳ ಹಿಂದೆ ಟೆಂಡರ್ ಕರೆಯಲಾಗಿದ್ದು, ಜಿಲ್ಲೆಯು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಯೋಜನೆಗಳ ಆರ್ಥಿಕ ಮತ್ತು ಭೌತಿಕ ಪ್ರಗತಿಯಲ್ಲಿ 3ನೇ ಸ್ಥಾನದಲ್ಲಿದೆ ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಗಮನಕ್ಕೆ ತಂದರು.

ಮುಂದುವರೆದು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಕೆ.ಕೆ.ಆರ್.ಡಿ.ಬಿ. ಯೋಜನೆಯಡಿ 2014-15 ಸಾಲಿನ ಬಾಕಿ ಇರುವ ಕಾಮಗಾರಿಗಳು ಮುಂಬರುವ ತಿಂಗಳಿನಲ್ಲಿ (ಮುಂಬರುವ ನೋಡೆಲ್ ಸೆಕ್ರೆಟರಿ ಸಭೆಯವರೆಗೆ) ಪೂರ್ಣಗೊಳಿಸಿ, ಎಲ್ಲಾ ಬಿಲ್ಲುಗಳನ್ನು ಪಾವತಿ ಮಾಡಲು ತಿಳಿಸಿದರು. ಮತ್ತು 2015-16ನೇ ಸಾಲಿನಲ್ಲಿ 23 R/O Plantನ ಕಾಮಗಾರಿಗಳು ಬಾಕಿ ಇದ್ದು, ಸದರಿ ಬಾಕಿ ಇರುವ ಕಾಮಗಾರಿಗಳು ಆರ್.ಡಬ್ಲ್ಯೂ.ಎಸ್. ಮತ್ತು ಕೆ.ಆರ್.ಐ.ಡಿ.ಎಲ್. ಇಲಾಖೆ ಯವರು ಅನುಷ್ಠಾನ ಮಾಡುತ್ತಿದ್ದು, ಇನ್ನು ಕಾಮಗಾರಿ ಕೆಲಸಗಳು ಪೂರ್ಣಗೊಳಿಸದ ಕಾರಣ 2016-16ನೇ ಸಾಲಿನ 23 R/O Plantನ ಕಾಮಗಾರಿಗಳನ್ನು Close ಮಾಡಿ. 2019-20ನೇ ಸಾಲಿಗೆ ತೆಗೆದುಕೊಂಡು ಅನುಷ್ಠಾನ ಮಾಡುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮತ್ತು ಜಿಲ್ಲಾಧಿಕಾರಿಗಳು ಸಂಬಂಧಪಟ್ಟ ಇಲಾಖಾಧಿಕಾರಿಗಳಿಗೆ ತಿಳಿಸಿದರು.

ಮುಂದುವರೆದು ಹೆಚ್.ಕೆ.ಆರ್.ಡಿ.ಬಿ. ಇಲಾಖಾಧಿಕಾರಿಯವರು ಮಾತನಾಡಿ, 2016-17ನೇ ಸಾಲಿನ 10 ಕಾಮಗಾರಿ ಕೆಲಸಗಳು ಬಾಕಿ ಇದ್ದು, ಅದರಲ್ಲಿ 4 ವಸತಿ ನಿಲಯಗಳ ಕಟ್ಟಡ ನಿರ್ಮಾಣ ಕಾಮಗಾರಿ ಕೆಲಸಗಳು ಕೆ.ಆರ್.ಐ.ಡಿ.ಎಲ್. ನವರು ಅನುಷ್ಠಾನ ಮಾಡುತ್ತಿದ್ದಾರೆ ಎಂದು ತಿಳಿಸಿದ್ದಕ್ಕೆ, ಕೆ.ಆರ.ಐ.ಡಿ.ಎಲ್. ಇಲಾಖಾಧಿಕಾರಿಯವರು ಮಾತನಾಡಿ, 3 ಕಾಮಗಾರಿ ಕೆಲಸಗಳು (ನೌಬಾದ, ಪ್ರತಾಪ ನಗರ ಮತ್ತು ಗುರುದ್ವಾರ) ವಿವಿಧ ಹಂತದಲ್ಲಿ ಪ್ರಗತಿಯಲ್ಲಿದ್ದು, 1 ಕಾಮಗಾರಿ ಕೆಲಸ ಮಾತ್ರ ಬಾಕಿ ಇದ್ದು, 6 ತಿಂಗಳುಗಳ ಒಳಗಾಗಿ ಪೂರ್ಣಗೊಳಿಸಲಾಗುತ್ತದೆ. ಮುಂದುವರೆದು ಮಾನ್ಯ ಜಿಲ್ಲಾಧಿಕಾರಿಗಳು ಮಾತನಾಡಿ, 2018-19ನೇ ಸಾಲಿನಲ್ಲಿ ರೂ 943.00 ಲಕ್ಷ ಗಳ ಕಾಮಗಾರಿ ಕೆಲಸಕ್ಕೆ ಆಡಳಿತಾತ್ಮಕ ಅನುಮೋದನೆಗಾಗಿ ಸಲ್ಲಿಸಿದ್ದು, ಕಾಮಗಾರಿ ಪೂರ್ಣಗೊಳಿಸಿದ ನಂತರ ಬಿಲ್ಲು ಪಾವತಿ ಮಾಡಲಾಗುವುದು ಎಂದು ತಿಳಿಸಿ, ಇಲ್ಲಿಯವರೆಗೆ ನಮ್ಮ ಕಚೇರಿಯಲ್ಲಿ ಆಡಳಿತಾತ್ಮಕ ಅನುಮೋದನೆಗಾಗಿ ಸಲ್ಲಿಸಿದ್ದು, ಎಲ್ಲಾ ಕ್ಲಿಯರ್ ಮಾಡಲಾಗಿದೆ ಎಂದು ತಿಳಿಸಿದರು.

**(ಕ್ರಮ: ಜಿಲ್ಲಾಧಿಕಾರಿಗಳ ಕಚೇರಿ, ಹೆಚ್.ಕೆ.ಆರ್.ಡಿ.ಬಿ., (ಕೋಶ) ಬೀದರ)**

**ವಿಷಯ ಸಂಖ್ಯೆ: 22. ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ:-**

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮತ್ತು ಜಿಲ್ಲಾಧಿಕಾರಿ ಮಾತನಾಡಿ, ಪಿ.ಆರ್.ಇ.ಡಿ., ಯೋಜನೆಯಡಿಯಲ್ಲಿ 2013-14ನೇ ಮತ್ತು 2017-18ನೇ ಸಾಲಿನಿಂದ 113 ಕಾಮಗಾರಿಗಳ ಹಳೆಯ ಅಂದಾಜು ಪತ್ರಿಕೆಗಳು ಸಲ್ಲಿಸುವುದು ಬಾಕಿ ಇದ್ದು, 2018-19 ಮತ್ತು 2019-20ನೇ ಸಾಲಿನ 122 ಕಾಮಗಾರಿಗಳ ಅಂದಾಜು ಪತ್ರಿಕೆಗಳನ್ನು, ಎಮ್.ಎಲ್.ಎ. ರವರ ಗಮನಕ್ಕೆ ತಂದು Drop (ಬಿಟ್ಟುಬಿಡಲು) ಮಾಡಬೇಕು ಅಥವಾ ಎಲ್ಲಾ ಅಂದಾಜು ಪತ್ರಿಕೆಗಳನ್ನು ತಯ್ಯಾರಿಸಿ, ಸಲ್ಲಿಸಬೇಕೆಂದು ಕಾರ್ಯನಿರ್ವಾಹಕ ಅಭಿಯಂತರರು ಪಂಚಾಯತ ರಾಜ್ ಇಂಜಿನಿಯರಿಂಗ್ ಇಲಾಖಾಧಿಕಾರಿಯವರಿಗೆ ತಿಳಿಸಿ, ಸದರಿ ವಿಷಯದ ಕುರಿತು ನಡುವಳಿ ಮಾಡುವಂತೆ ತಿಳಿಸಿದರು.

ಮುಂದುವರೆದು ಮುಖ್ಯ ಯೋಜನಾಧಿಕಾರಿಗಳು ಮಾತನಾಡಿ, ಪಂಚಾಯತ ರಾಜ್ ಇಂಜಿನಿಯರಿಂಗ್ ವಿಭಾಗದಿಂದ ಎಮ್.ಎಲ್.ಎ. ಲ್ಯಾಡ್‌ನಲ್ಲಿ 504 ಕಾಮಗಾರಿ ಕೆಲಸಗಳು ಪೂರ್ಣಗೊಳಿಸಲಾಗಿದ್ದು, ಸದರಿ ಎಮ್.ಎಲ್.ಎ. ಲ್ಯಾಡ್‌ನಲ್ಲಿ ಪೂರ್ಣಗೊಳಿಸಿದ ಕಾಮಗಾರಿಗಳ ಮಾಹಿತಿಯನ್ನು ತಂತ್ರಾಂಶದಲ್ಲಿ ಅಪ್-ಡೇಟ್

ಮಾಡುವಂತೆ ಇಲಾಖಾಧಿಕಾರಿಯವರಿಗೆ ಸೂಚಿಸುವಂತೆ ಪ್ರಸ್ತಾಪಿಸಿದರು. ಅದಕ್ಕೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಪಿ.ಆರ್.ಇ.ಡಿ. ಇಲಾಖೆಯ ತಾಂತ್ರಿಕ ಸಹಾಕಯರಿಂದ ಎಮ್.ಎಲ್.ಎ. ಲ್ಯಾಡ್‌ನಲ್ಲಿ ಪೂರ್ಣಗೊಳಿಸಿದ ಎಲ್ಲಾ ಕಾಮಗಾರಿಗಳನ್ನು ತಂತ್ರಾಂಶದಲ್ಲಿ ಮುಂಬರುವ ಸಭೆಯವರೆಗೆ ಅಳವಡಿಸಬೇಕೆಂದು (ಅಪ್-ಡೇಟ್) ಕಾರ್ಯನಿರ್ವಾಹಕ ಅಭಿಯಂತರರು ಪಂಚಾಯತ ರಾಜ್ ಇಂಜಿನಿಯರಿಂಗ್ ಇಲಾಖಾಧಿಕಾರಿಯವರಿಗೆ ತಿಳಿಸಿದರು.

ಮುಂದುವರೆದು ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ ರಾಜ್ ಇಂಜಿನಿಯರಿಂಗ್ ವಿಭಾಗಾಧಿಕಾರಿಯವರು ಮಾತನಾಡಿ, ಟಾಸ್ಕ್ ಫೋರ್ಸ್ (TFC) ಮತ್ತು 3054 ಯೋಜನೆಗಳ Lump-sum Grantನಲ್ಲಿ, ರಸ್ತೆ ನಿರ್ಮಾಣ ಕಾಮಗಾರಿ ಕೆಲಸ ಮಾಡಲಾಗಿದ್ದು, ಬಿಲ್ಲು ಪಾವತಿ ಮಾಡಲು ಪತ್ರ ಬರೆಯಲಾಗದ್ದು, ಇನ್ನು ಹಣ ಪಾವತಿ ಆಗಿಲ್ಲ ಎಂದು ತಿಳಿಸಿದ್ದಕ್ಕೆ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಬಿಲ್ಲು ಪಾವತಿ ಮಾಡಲು ಬರೆಯಲಾದ ಪತ್ರವನ್ನು ನನಗೆ (ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಗೆ ವಾಟ್ಸ್-ಅಪ್ ನಲ್ಲಿ) ಕಳುಹಿಸಲು ತಿಳಿಸಿದರು.

**(ಕ್ರಮ: ಪಂಚಾಯತ ರಾಜ್ ಇಂಜಿನಿಯರಿಂಗ್ ವಿಭಾಗ, ಬೀದರ)**

**ವಿಷಯ ಸಂಖ್ಯೆ: 23. ಲೋಕೋಪಯೋಗಿ ಇಲಾಖೆ:-**

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಲೋಕೋಪಯೋಗಿ ಇಲಾಖೆಯ 11 ಕಾಮಗಾರಿಗಳ ಹಳೆಯ ಅಂದಾಜು ಪತ್ರಿಕೆಗಳು ಸಲ್ಲಿಸುವುದು ಬಾಕಿ ಇದ್ದು, ಪ್ರಸ್ತುತ 33 ಕಾಮಗಾರಿಗಳ ಹೊಸ ಕಾಮಗಾರಿಗಳ ಅಂದಾಜು ಪತ್ರಿಕೆಗಳು ಸಲ್ಲಿಸುವಾಗ, ಹಳೆಯ ಮತ್ತು ಹೊಸ ಕಾಮಗಾರಿಗಳು ಸೇರಿ ಒಟ್ಟು 44 ಅಂದಾಜು ಪತ್ರಿಕೆಗಳನ್ನು ಮುಂಬರುವ ನೋಡೆಲ್ ಸೆಕ್ರೆಟರಿ ಸಭೆಯ ಒಳಗಾಗಿ ಸಲ್ಲಿಸಬೇಕೆಂದು ತಿಳಿಸಿದರು.

**(ಕ್ರಮ: ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೀದರ)**

**ವಿಷಯ ಸಂಖ್ಯೆ:24 ಕಂದಾಯ ಇಲಾಖೆ:-**

ಮಾನ್ಯ ಮುಖ್ಯಕಾರ್ಯದರ್ಶಿಗಳು ಕಂದಾಯ ಇಲಾಖೆಯ 9 ವಿಷಯಗಳ ಪ್ರಗತಿ ಕುರಿತು ಪ್ರತಿ ತಿಂಗಳ ಪರಿಶೀಲನಾ ಸಭೆ ನಡೆಸುವ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳು ಸಭೆಗೆ ತಿಳಿಸಿದರು.

1. Undisuted Bhoomi Mutations 2. Disputed Bhoomi Mutations 3. Affidavit based conversion. 4. AC court cases. 5.DC court cases. 6. RTC col 3&9 mismatch. 7. 79A/79B cases. 8 PYKI RTCs 9. Phodi/survey work (per surveyor per month output) ಮೇಲಿನ ಎಲ್ಲಾ ವಿಷಯಗಳ ಬಗ್ಗೆ ಸಹಾಯಕ ಆಯುಕ್ತರು ಹಾಗೂ ತಹಶೀಲ್ದಾರರು ಹೆಚ್ಚಿನ ಗಮನ ವಹಿಸಿ ಸಾರ್ವಜನಿಕರಿಗೆ ಸರಕಾರದ ಸೌಲಭ್ಯವನ್ನು ಸಕಾಲದಲ್ಲಿ ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ತಿಳಿಸಿದರು.

2. ಭೂಮಾಪನ ಇಲಾಖೆ ಪ್ರಗತಿ ತುಂಬಾ ಕಡಿಮೆಯಿದ್ದು ಇದರ ಬಗ್ಗೆ ಉಪ ನಿರ್ದೇಶಕರು, ಭೂ ದಾಖಲೆಗಳ ಹಾಗೂ ಜಿಲ್ಲಾಧಿಕಾರಿಗಳ ಪದನಿಮಿತ್ತ ತಾಂತ್ರಿಕ ಸಹಾಯಕರು, ಬೀದರ ಹಾಗೂ ತಾಲೂಕಾ ಭೂಮಾಪನ ಇಲಾಖೆ ಇವರು ಸಭೆ ಕರೆದು ತಕ್ಷಣ ಬಾಕಿ ಪ್ರಕರಣಗಳನ್ನು ಇತ್ಯರ್ಥ ಪಡಿಸಲು ಸಭೆಯ ಅಧ್ಯಕ್ಷರು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದರು.

3. ಕಂದಾಯ ಗ್ರಾಮಗಳ ರಚನೆಯ ಅಂತಿಮ ಅಧಿಸೂಚನೆ ಹೊರಡಿಸಲು ಬಾಕಿ ಇರುವ ಪ್ರಕರಣಗಳನ್ನು ತಕ್ಷಣ ಸರ್ಕಾರಕ್ಕೆ ಕಳುಹಿಸಿ ಅನುಮೋದನೆ ಪಡೆದುಕೊಳ್ಳಲು ತಿಳಿಸಿದರು.

4. ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಪ್ರತಿ ಗ್ರಾಮದಲ್ಲಿ ಸ್ಮಶಾನ ಭೂಮಿ ಮಂಜೂರು ಮಾಡಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ನೀಡಲು ತಿಳಿಸಿದರು.

5. MLA/MLC LAD ಯೋಜನೆಯಡಿಯ 2013-14 ರಿಂದ 2017-18 ಅವಧಿಯ 113 ಕಾಮಗಾರಿಗಳಿಗೆ ಹಾಗೂ 2018-19 ರಿಂದ 2019-20 ರ ಅವಧಿಯ 122 ಕಾಮಗಾರಿಗಳಿಗೆ ಪಂಚಾಯತ ರಾಜ್ ಇಲಾಖೆಯಿಂದ ಅಂದಾಜು ಪತ್ರಿಕೆ ಸಲ್ಲಿಕೆ ಯಾಗಿರುವುದಿಲ್ಲಾ ಅದೇ ರೀತಿ PWD ಇಲಾಖೆಯ ಒಟ್ಟು 44 ಕಾಮಗಾರಿಗಳಿಗೆ ತುರ್ತಾಗಿ ಅಂದಾಜು ಪತ್ರಿಕೆಯನ್ನು ಆಡಳಿತಾತ್ಮಕ ಅನುಮೂದನೆಗಾಗಿ ಸಲ್ಲಿಸಲು ಮಾನ್ಯ ಅಧ್ಯಕ್ಷರು EE PRED. ಹಾಗೂ PWD ಇವರಿಗೆ ಸೂಚನೆ ನೀಡಿದರು.

**ಇತರೆ ವಿಷಯಗಳು:**

- 100 ಹಾಸಿಗೆಗಳ ಆಸ್ಪತ್ರೆಯು ಪ್ರಾರಂಭ ಮಾಡುವುದಕ್ಕಿಮತ ಮುಂಚೆ ಎಲ್ಲಾ ಪ್ರಕ್ರಿಯೆ ಮಾಡಿ ಮುಗಿಸುವಂತೆ, ಜಿಲ್ಲಾ ಆರೋಗ್ಯ ಇಲಾಖಾಧಿಕಾರಿಗಳಿಗೆ ತಿಳಿಸಿದರು.
- ಎಮ್.ಎಸ್.ಡಿ.ಪಿ. ಯೊಜನೆಯಡಿ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖಾಧಿಕಾಯರಿಯವರು ಪ್ರಸ್ತಾವನೆ ಕಳುಹಿಸಲಾಗಿದ್ದು, ಸದರಿ ಯೋಜನೆಯ ಕಾಮಗಾರಿ ಕುರಿತು ಸಂಬಂಧಪಟ್ಟ ಕಾರ್ಯದರ್ಶಿಯವರಿಗೆ ಮಾತನಾಡುತ್ತೇನೆ ಎಂದು ತಿಳಿಸಿದರು.

ಮುಂದುವರೆದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಮುಂಬರುವ ಪ್ರಗತಿ ಪರಿಶೀಲನಾ ಸಭೆಗೆ ಜಿಲ್ಲೆಯ ಎಲ್ಲಾ ಇಲಾಖೆಗಳ ಕೇಂದ್ರ ವಲಯ, ರಾಜ್ಯ ವಲಯ ಮತ್ತು ಜಿಲ್ಲಾ ವಲಯದ ಎಲ್ಲಾ ಕಾರ್ಯಕ್ರಮಗಳ (ಪ್ರಗತಿ ವರದಿಯನ್ನು) ಮಾಹಿತಿಯನ್ನು ಆನ್-ಲೈನ್ ನಲ್ಲಿಯೇ ಭರ್ತಿ ಮಾಡಿ ಸಲ್ಲಿಸುವಂತಹ Format ಅನ್ನು ತಯಾರಿಸಿಕೊಂಡು, ಅದರಲ್ಲಿ ಎಲ್ಲಾ ಇಲಾಖೆಗಳ ಮುಖ್ಯವಾದ (Major Points) ಯೋಜನೆಗಳ 2 ರಿಂದ 3 ಅಂಶಗಳನ್ನು ತೆಗೆದುಕೊಂಡು ಬುಕ್ ಲೆಟ್ ತಯಾರಿಸಲು ತಿಳಿಸಿದರು.

**(ಕ್ರಮ: ತಹಶೀಲ್ದಾರರು, ಜಿಲ್ಲಾ ಆರೊಗ್ಯ ಇಲಾಖಾಧಿಕಾರಿಗಳು ಮತ್ತು ಮುಖ್ಯ ಯೋಜನಾಧಿಕಾರಿಗಳು, ಯೋಜನಾ ಶಾಖೆ ಜಿಲ್ಲಾ ಪಂಚಾಯತ ಬೀದರ)**

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಡಾ॥ ಇ.ವಿ. ರಮಣ ರೆಡ್ಡಿ, ಭಾ.ಆ.ಸೇ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಿಂದ ಪ್ರತಿ ತಿಂಗಳು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಬೇಕಾದ ನಮೂನೆ

## ವಿಜಯಪುರ ಜಿಲ್ಲೆ

| ಕ್ರ. ಸಂ. | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1 | ಜಿಲ್ಲೆಯ ಹೆಸರು | ವಿಜಯಪುರ |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಡಾ॥ ಜೆ. ರವಿಶಂಕರ್, ಭಾ.ಆ.ಸೇ., |
| 3 | ಭೇಟಿಯಾದ / ಪ್ರವಾಸದ ದಿನಾಂಕ | 13.11.2019 |
| 4 | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | **1)ಕೃಷಿ ಇಲಾಖೆ:** ಜಂಟಿ ಕೃಷಿ ನಿರ್ದೇಶಕರು ಮಾತನಾಡುತ್ತಾ, ಕಳೆದ ಸಭೆಯಲ್ಲಿ ಚರ್ಚಿಸಿದಂತೆ ಮಾನ್ಯ ದೇವರ ಹಿಪ್ಪರಗಿ ಮತಕ್ಷೇತ್ರದ ಶಾಸಕರು ಸೂಚಿಸಿದಂತೆ, ಸ್ಪ್ರಿಂಕ್ಲರ್ ಪೈಪ್‌ಗಳಿಗಾಗಿ ರೈತ ಸಂಪರ್ಕ ಕೇಂದ್ರಗಳಲ್ಲಿ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದ್ದು, ಆದ್ಯತೆಯ ಮೇರೆಗೆ ಸ್ಪ್ರಿಂಕ್ಲರ್ ಪೈಪ್‌ಗಳನ್ನು ನೀಡಲಾಗುತ್ತಿದೆ ಎಂದು ಹೇಳಿದರು. ಸಭಾಧ್ಯಕ್ಷರು ಮಾತನಾಡುತ್ತಾ, ಕಳೆದ ಕೆ.ಡಿ.ಪಿ. ಸಭೆಯ ದಿ: 29-06-2019ರ ನಂತರ ಎಷ್ಟು ಸ್ಪ್ರಿಂಕ್ಲರ್‌ಗಳನ್ನು ನೀಡಿದ್ದೀರಿ ಎಂದು ಕೇಳಿದರು. ಅಧಿಕಾರಿಗಳು ಮಾತನಾಡುತ್ತಾ, ಮಾನ್ಯ ದೇವರ ಹಿಪ್ಪರಗಿ ಶಾಸಕರು ಸದರಿ ಪ್ರಶ್ನೆಯನ್ನು ಕೇಳಿದಾಗ 3000 ಅರ್ಜಿಗಳು ಬಂದಿದ್ದವು ಅದರಲ್ಲಿ 2900 ಜನರಿಗೆ ಸ್ಪ್ರಿಂಕ್ಲರ್‌ಗಳನ್ನು ನೀಡಲಾಗಿರುತ್ತದೆ. ಈ ವರ್ಷದಲ್ಲಿ ಸ್ಪ್ರಿಂಕ್ಲರ್ ಸಲುವಾಗಿ ಹೆಚ್ಚಿಗೆ ಅರ್ಜಿಗಳು ಬಂದಿರುವುದಿಲ್ಲ ಎಂದು ವಿವರಿಸಿದರು.<br><br>ಅರಕೇರಿ ಸುತ್ತಮುತ್ತಲಿನ ಗ್ರಾಮಗಳ ರೈತರಿಗೆ ರೈತ ಸಂಪರ್ಕ ಕೇಂದ್ರ ವಿಜಯಪುರ ದಿಂದ ಬಿತ್ತನೆ ಬೀಜಗಳನ್ನು ವಿತರಿಸಲಾಗಿದೆ. ಬಿತ್ತನೆ ಬೀಜಕ್ಕಾಗಿ ರೈತರಿಗೆ ಯಾವುದೇ ತೊಂದರೆಯಾಗದಂತೆ ಸಮರ್ಪಕವಾಗಿ ವಿತರಿಸಲಾಗಿದೆ. ಹಾಗೂ ಮಾನ್ಯ ದೇವರ ಹಿಪ್ಪರಗಿ ಶಾಸಕರಿಗೆ ಕೃಷಿ ಇಲಾಖೆಯ ಯೋಜನೆವಾರು ಸಂಪೂರ್ಣ ವಿವರವಾದ ಮಾಹಿತಿಯನ್ನು ನೀಡಲಾಗಿದೆ ಎಂದು ವಿವರಿಸಿದರು. ಮಾನ್ಯ ಶಾಸಕರು ಮಾತನಾಡುತ್ತಾ, ನನಗೆ ಮಾಹಿತಿಯನ್ನು ಕೊಟ್ಟಿರುವುದಿಲ್ಲ ಎಂದು ಹೇಳಿದರು. ಜಂಟಿ ಕೃಷಿ ನಿರ್ದೇಶಕರು ಮಾತನಾಡುತ್ತಾ, ಸಿಂದಗಿ ಸಹಾಯಕ ನಿರ್ದೇಶಕರು ಮಾನ್ಯ ಶಾಸಕರಿಗೆ ಮಾಹಿತಿಯನ್ನು ಸಲ್ಲಿಸಿರುವುದಾಗಿ ತಿಳಿಸಿರುವ ಕಾರಣ ಬರೆಯಲಾಗಿದೆ ಎಂದು ಹೇಳಿದರು. **ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು** ಮಾತನಾಡುತ್ತಾ, ದೇವರ ಹಿಪ್ಪರಗಿ ಶಾಸಕರಿಗೆ ಮಾಹಿತಿ ಕೊಟ್ಟಿರುವುದಾಗಿ ಸುಳ್ಳು ಹೇಳಿರುವ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರು ಸಿಂದಗಿ ಇವರ ಮೇಲೆ ಸೂಕ್ತ ಕ್ರಮ ಜರುಗಿಸಬೇಕೆಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದರು.<br><br>**2)ತೋಟಗಾರಿಕೆ ಇಲಾಖೆ:** ಜಿಲ್ಲಾಧಿಕಾರಿಗಳು ಮಾತನಾಡುತ್ತಾ, ಮಾನ್ಯ ಇಂಡಿ ಮತಕ್ಷೇತ್ರದ ಶಾಸಕರು ನಿಂಬೆ ಬೆಳೆಗಾರರಿಗೆ ಪರಿಹಾರಕ್ಕಾಗಿ ವಿಶೇಷ ಪ್ಯಾಕೇಜ್ ಕೊಡಿಸುವ ಬಗ್ಗೆ ಸರ್ಕಾರದ ಗಮನ ಸೆಳೆಯಲು ಹಿಂದಿನ ಸಭೆಯಲ್ಲಿ |

| | | |
|---|---|---|
| | | ಸೂಚಿಸಿದಂತೆ. ದಿನಾಂಕ: 04-07-2019 ರಂದು ಮಾನ್ಯ ತೋಟಗಾರಿಕೆ ಸಚಿವರು ಹಾಗೂ ತೋಟಗಾರಿಕೆ ನಿರ್ದೇಶಕರು ಲಾಲ್‌ಬಾಗ್ ಬೆಂಗಳೂರು ರವರಿಗೆ ಸದರಿ ನಿಂಬೆ ಬೆಳೆಗಾರರ ಸಮಸ್ಯೆಯ ಬಗ್ಗೆ ವಿಸ್ತಾರವಾಗಿ ಚರ್ಚಿಸಿ ಸದರಿ ವಿಷಯ ಕುರಿತು ಟಿಪ್ಪಣಿಯನ್ನು ಮಂಡಿಸಲಾಯಿತು. ಕೃಷಿ ಆಯುಕ್ತರೊಂದಿಗೆ ದೂರವಾಣಿಯಲ್ಲಿಯೂ ಸಹ ಚರ್ಚಿಸಲಾಯಿತು. ಸದರಿ ಸಮಸ್ಯೆಯನ್ನು "ಕ್ಯಾಬಿನೇಟ್ ಸಬ್ ಕಮೀಟಿಯಲ್ಲಿ" ರಾಷ್ಟ್ರೀಯ ಮಟ್ಟದಲ್ಲಿ ಚರ್ಚಿಸುವ ಅವಶ್ಯಕತೆ ಕುರಿತು ಮಾನ್ಯ ಸಚಿವರಿಗೆ ಮನವರಿಕೆ ಮಾಡಲಾಯಿತು. ಹಾಗೂ ಮಹಾರಾಷ್ಟ್ರದ ಮಾದರಿಯಲ್ಲಿ ಬೆಳೆಗಳಿಗೆ ಟ್ಯಾಂಕರ್ ಮೂಲಕ ನೀರು ಹಾಕುವ ಬಗ್ಗೆ ದಿನಾಂಕ:10-06-2019 ರಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಈ ವಿಷಯದ ಕುರಿತು ಈಗಾಗಲೇ ದಿನಾಂಕ:08-01-2019 ರಂದು ಸಚಿವ ಸಂಪುಟದ ಉಪಸಮಿತಿಯಲ್ಲಿ ಹಾಗೂ ದಿನಾಂಕ: 19-05-2019 ರಂದು ಮಾನ್ಯ ಕಂದಾಯ ಸಚಿವರ ಬರ ನಿರ್ವಹಣೆ ಪರಿವೀಕ್ಷಣೆ ಸಭೆಯಲ್ಲಿ ಚರ್ಚಿಸಲಾಗಿದೆ. ಸದರಿ ಪ್ರಸ್ತಾವನೆಯು "ಕ್ಯಾಬಿನೇಟ್ ಸಬ್ ಕಮೀಟಿಯಲ್ಲಿ" ಅನುಮೋದನೆಯಾಗಿರುವುದಿಲ್ಲ ಎಂದು ಸಭೆಗೆ ತಿಳಿಸಿದರು. ಸದರಿ ಪ್ರಸ್ತಾವನೆಯ ವಿವರವನ್ನು ತಮಗೆ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.<br><br>**<u>3)ಪಶು ಇಲಾಖೆ:</u>** ಜಿಲ್ಲಾಧಿಕಾರಿಗಳು ಮಾತನಾಡುತ್ತಾ, ಗೃಹ ಸಚಿವರ ಸೂಚನೆಯಂತೆ ತನಿಖೆ ಮಾಡಿದಾಗ ಮೇವು ಬ್ಯಾಂಕಿಗೆ ಮೇವನ್ನು ಪೂರೈಸಲು ತಹಶೀಲ್ದಾರರು ನಿಯಮಾನುಸಾರ ಟೆಂಡರ್ ಕರೆದಿರುತ್ತಾರೆ. ಮೇವು ಪೂರೈಕೆಯಲ್ಲಿ ಪಶು ಸಂಗೋಪನೆ ಇಲಾಖೆಯವರ ನೇರ ಪಾತ್ರವಿರುವುದಿಲ್ಲವೆಂದು ಕಂಡುಬಂದಿರುತ್ತದೆ ಹಾಗೂ ಬಸವನ ಬಾಗೇವಾಡಿ ತಾಲ್ಲೂಕಿಗೆ ಮೇವಿನ ಕೊರತೆಯಾಗಿರುವುದಿಲ್ಲ ಎಂದು ಸಭೆಗೆ ವಿವರಿಸಿದರು.<br><br>**<u>4)ಕೆ.ಬಿ.ಜೆ.ಎನ್.ಎಲ್. ಝಳಕಿ:</u>** ಸೋಲಾಪೂರ ರಾಷ್ಟ್ರೀಯ ಹೆದ್ದಾರಿಯ ವಿಸ್ತರಣೆಯ ವ್ಯಾಪ್ತಿಯಲ್ಲಿ ಅತಿಕ್ರಮಣವಾದ ಮಸೀದಿ, ಮಂದಿರಗಳನ್ನು ಕೆಲವೊಂದು ತೆಗೆದಿದ್ದೀರಿ, ಕೆಲವೊಂದನ್ನು ತೆಗೆದಿರುವುದಿಲ್ಲ. ಎನ್.ಹೆಚ್. ರಸ್ತೆಯ ಮೇಲೆ ಇರುವಂಥಹ ಮಸೀದಿ, ಮಂದಿರಗಳನ್ನು ಸಂಪೂರ್ಣವಾಗಿ ತೆಗೆದುಹಾಕಬೇಕೆಂದು ಸೂಚಿಸಿದರು. ಜಿಲ್ಲಾಧಿಕಾರಿಗಳು ಮಾತನಾಡುತ್ತಾ, ಸದರಿ ವಿಷಯದ ಬಗ್ಗೆ ಪರಿಶೀಲಿಸಿ ನೋಡಿದಾಗ ಕೆಲವೊಂದು ಉಚ್ಛ ನ್ಯಾಯಾಲಯದಲ್ಲಿ ಕೇಸ್ ಪೆಂಡಿಂಗ್ ಇರುತ್ತವೆ. ಅವುಗಳ ಕಾನೂನು ಅಭಿಪ್ರಾಯ ಬಂದ ನಂತರ ತೆಗೆದುಹಾಕಲು ಕ್ರಮಕೈಕೊಳ್ಳಲಾಗುವುದು ಎಂದು ಸಭೆಗೆ ವಿವರಿಸಿದರು. ಜಿಲ್ಲಾಧಿಕಾರಿಗಳು ಮುಂದುವರೆದು ಮಾತನಾಡುತ್ತಾ, ಮಾನ್ಯ ಇಂಡಿ ಶಾಸಕರು ವಿಜಯಪುರ ದಿಂದ ಸೋಲಾಪೂರ ರಾಷ್ಟ್ರೀಯ ಹೆದ್ದಾರಿಗೆ ಸಂಬಂಧಿಸಿದಂತೆ ಮಾರ್ಗವನ್ನು ಮಾಡುವಾಗ ಸದರಿ ರಸ್ತೆಯ ಪಕ್ಕದಲ್ಲಿರುವ ಶಾಲೆಗಳನ್ನು ಬೇರೆಕಡೆ ಸ್ಥಳಾಂತರಿಸುವ ವ್ಯವಸ್ಥೆ ಮಾಡಬೇಕೆಂದು ಸೂಚಿಸಿದ್ದರು. ಪ್ರಸ್ತುತ ವಿಷಯದ ಬಗ್ಗೆ ಈಗಾಗಲೇ ಕ್ರಮವನ್ನು ಶಿಕ್ಷಣ ಇಲಾಖೆ & ಯೋಜನಾ ನಿರ್ದೇಶಕರು, ಎನ್.ಎಚ್.ಎ.ಆಯ್. ಸೋಲಾಪೂರ ಇವರಿಗೆ ಸೂಚಿಸಿದ್ದು, ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಮುಖಾಂತರ ಸಹ ಸಂಬಂಧಪಟ್ಟವರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಅಥವಾ ಶಬ್ಧರೋಧಕ ಗೋಡೆಗಳನ್ನು ನಿರ್ಮಿಸಿಕೊಡಬೇಕೆಂದು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಶಬ್ಧರೋಧಕ ಗೋಡೆಗಳನ್ನು ನಿರ್ಮಿಸಿಕೊಟ್ಟರೆ ಮಕ್ಕಳಿಗೆ ಅನುಕೂಲವಾಗುತ್ತದೆ ಎಂದು |

| | | |
|---|---|---|
| | | ಸಭೆಗೆ ವಿವರಿಸಿದರು.<br><br>ಕಳೆದ ಸಭೆಯಲ್ಲಿ ಮಾನ್ಯ ಇಂಡಿ ಮತಕ್ಷೇತ್ರದ ಶಾಸಕರು ಸೂಚಿಸಿದಂತೆ, ನೀರಾವರಿ ಸಲಹಾ ಸಮಿತಿಯಲ್ಲಿ ನಿರ್ಣಯಿಸಿದಂತೆ ಇಂಡಿ ಶಾಖಾ ಕಾಲುವೆಗೆ ವಾರಾಬಂದಿ ಪದ್ಧತಿಯನ್ವಯ ಕಾಲುವೆಗಳಿಗೆ ನೀರನ್ನು ಹರಿಸಲಾಗುತ್ತಿದೆ. ಮತ್ತು ಇಂಡಿ ಶಾಖಾ ಕಾಲುವೆಯ ಅಡಿಯಲ್ಲಿ ಬರುವ ಬಳಗಾನೂರ, ಗೂಗಿಹಾಳ, ಮತ್ತು ಲೋಣಿ ಬಿ.ಕೆ ಕೆರೆಗಳನ್ನು ಐಬಿಸಿ ಮುಖಾಂತರ ನೀರನ್ನು ತುಂಬಿಸಿ ಗ್ರಾಮೀಣ ಪ್ರದೇಶದ ಗ್ರಾಮಗಳಿಗೂ ಮತ್ತು ಇಂಡಿ ಪಟ್ಟಣದ ನಗರಕ್ಕೆ ಕುಡಿಯುವ ನೀರನ್ನು ಪೂರೈಸಲಾಗುತ್ತಿದೆ. ಈ ಹಿಂದೆ ಏನಾದರೂ ಲೋಪದೋಷವಾಗಿದ್ದಲ್ಲಿ ಅದು ಮರುಕಳಿಸದಂತೆ ನೋಡಿಕೊಂಡು ಇನ್ನು ಮುಂದೆ ಮುಂಗಾರು ಹಾಗೂ ಹಿಂಗಾರು ಹಂಗಾಮಿನಲ್ಲಿ ನೀರು ನಿರ್ವಹಣೆಯನ್ನು ಸರಿಯಾಗಿ ಮಾಡಲಾಗುವುದು. ಸಧ್ಯ ಇಂಡಿ ಶಾಖಾ ಕಾಲುವೆಯ ಅಚ್ಚುಕಟ್ಟು ಪ್ರದೇಶದಡಿ ಉತ್ತಮ ಮಳೆಯಾಗಿರುವುದರಿಂದ ಇನ್ನು ಮುಂದೆ ನೀರಿನ ತೊಂದರೆಯಾಗದಂತೆ ಕ್ರಮ ವಹಿಸಲಾಗುವುದು ಎಂದು ಇಲಾಖಾ ಅಧಿಕಾರಿಗಳು ಸಭೆಗೆ ವಿವರಿಸಿದರು.<br><br>ಜಿಲ್ಲೆಯ ಕೆಲವೆಡೆ ಎಂ.ವ್ಹಿ.ಎಸ್. ಯೋಜನೆಯಲ್ಲಿ ಒಂದು ಕೆರೆಗೆ 7–8 ಪೈಪ್ ಅಳವಡಿಸಲಾಗಿದೆ. ಇದರಿಂದ ಬೇಸಿಗೆ ಪ್ರಾರಂಭವಾಗುವ ಮುಂಚೆಯೇ ಅಲ್ಲಿನ ನೀರು ಖಾಲಿಯಾಗುತ್ತದೆ. ಅಥರ್ಗಾ ಗ್ರಾಮದ ಸುಮಾರು 18–20 ಕಿ.ಮೀ. ಪೈಪ್‌ಲೈನ್‌ನಲ್ಲಿ ಒಂಚೂರು ನೀರಿಲ್ಲ. ಈ ಯೋಜನೆಗೆ ಸುಮಾರು ರೂ. 12 ಕೋಟಿ ಖರ್ಚುಮಾಡಿ ಬೆನಕನಹಳ್ಳಿ, ಶಿರಕನಹಳ್ಳಿ, ತಾಂಬಾ ಗ್ರಾಮಗಳಿಗೆ ಕುಡಿಯುವ ನೀರಿನ ಸಂಪರ್ಕ ಒದಗಿಸಿಕೊಟ್ಟರೂ ಈಗ ಈ ಭಾಗದ ಜನರಿಗೆ ಒಂದು ಹನಿ ಕೂಡ ಕುಡಿಯಲು ನೀರಿಲ್ಲ. ಇದರಿಂದ ಅಥರ್ಗಾ ಗ್ರಾಮದ ಜನರಿಗೆ ನೀರಿನ ಸಮಸ್ಯೆಯಾಗಲಿದೆ ಆದಕಾರಣ ನೀವು ಈ ಪೈಪ್‌ಲೈನಗಳಿಗೆ ಅನುಮತಿ ಕೊಡಬೇಡಿ ಎಂದು ಕಾರ್ಯನಿರ್ವಾಹಕ ಅಭಿಯಂತರರು. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ವಿಜಯಪುರ ಇವರಿಗೆ ಸೂಚಿಸಿದರು. ಆರ್.ಡಬ್ಲ್ಯೂ.ಎಸ್. ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು ಮಾತನಾಡುತ್ತಾ, ಒಟ್ಟು 41 ಕೆರೆಗಳಿವೆ. ಸಿಂದಗಿ ಹಾಗೂ ಇಂಡಿ ತಾಲ್ಲೂಕಿನ ಕೆರೆಗಳಿಗೆ ಕೆನಾಲ್‌ನಿಂದ ನೀರು ಬಿಡುತ್ತೇವೆ. ಮೊದಲು 244 ದಿನ ಕೆನಾಲ್ ನೀರು ಬಿಡುತ್ತೇವೆ ಎಂದು ಹೇಳಿ, ಕೇವಲ 180 ದಿನ, ನಂತರ 110 ದಿನ ನೀರನ್ನು ಬಿಟ್ಟಿರುವ ಕಾರಣ ಅವರಿಗೆ ಎಷ್ಟು ನೀರು ಬೇಕು ಅಷ್ಟು ನೀರು ಸಂಗ್ರಹಣೆಯಾಗುತ್ತಿಲ್ಲ ಎಂದು ಸಭೆಗೆ ವಿವರಿಸಿದರು. **ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು** ಮಾತನಾಡುತ್ತಾ, ಜಲಧಾರೆ ಯೋಜನೆ ಅನುಷ್ಠಾನವಾಗಲು ಇನ್ನು 2 ವರ್ಷ ಕಾಲಾವಕಾಶ ಬೇಕಾಗುತ್ತದೆ. ಆ ಯೋಜನೆ ಬರುವಷ್ಟರಲ್ಲಿ ಈ ಗ್ರಾಮಗಳಿಗೆ ನೀರು ಪೂರೈಸಲು ಯಾವ ಯೋಜನೆ ರೂಪಿಸಲಾಗಿದೆ? ಎಂದು ಕೇಳಿದರು. ಅಧಿಕಾರಿಗಳು ಮಾತನಾಡುತ್ತಾ, ಎಸ್.ಡಿ.ಪಿ. ಯೋಜನೆಯಡಿಯಲ್ಲಿ ರೂ. 300.00 ಲಕ್ಷ ಅನುದಾನದಲ್ಲಿ ಬಳಗಾನೂರ ಕೆರೆಯಿಂದ ಹೊರ್ತಿಗೆ ನೀರು ತುಂಬುವ ಯೋಜನೆ ರೂಪಿಸಲಾಗಿದೆ. ಎಂ.ವ್ಹಿ.ಎಸ್.ನಲ್ಲಿ ಜನಸಂಖ್ಯೆ ಪ್ರಕಾರ ಒಳಬರುವ ನೀರಿನ ಅವಧಿ ಕಡಿಮೆ ಯಾಗಿರುವುದರಿಂದ ಜನರಿಗೆ ನೀರಿನ ತೊಂದರೆಯಾಗಿದೆ ಎಂದು ಸಭೆಗೆ ವಿವರಿಸಿದರು. |

| | | |
|---|---|---|
| | | **5)ಕೆ.ಬಿ.ಜೆ.ಎನ್.ಎಲ್** : ಜಿಲ್ಲಾಧಿಕಾರಿಗಳು ಮಾತನಾಡುತ್ತಾ, ಪ್ರತಿವರ್ಷ ಕಾಲುವೆಗೆ ನೀರು ಬಿಡುವ ಬಗ್ಗೆ ಎಲ್ಲಕಡೆಯಂತೆ ನಮ್ಮ ಜಿಲ್ಲೆಯಲ್ಲಿಯೂ ಸಮಸ್ಯೆಯಿದೆ. ಎಲ್ಲ ಜನಪ್ರತಿನಿಧಿಗಳ ಮತ್ತು ರೈತರ ಬೇಡಿಕೆ ಏನೆಂದರೆ ಕಾಲುವೆಗಳ (ಕ್ಲೋಸರ್)ರಿಪೇರಿ ಕಾಮಗಾರಿಗಳನ್ನು ಎಪ್ರೀಲ್, ಮೇ ತಿಂಗಳುಗಳಲ್ಲಿ ಮಾಡಬೇಕು ಎಂದು ಇದೆ. ಆದರೆ ಇಲಾಖೆಯವರು ಟೆಂಡರ್‌ನ್ನು ಜೂನ್‌ನಲ್ಲಿ ಅಂತಿಮಗೊಳಿಸುತ್ತಾರೆ ಎಂದು ಸಭೆಗೆ ವಿವರಿಸಿದರು.<br><br>ಕಾರ್ಯನಿರ್ವಾಹಕ ಅಭಿಯಂತರರು ಮಾತನಾಡುತ್ತಾ, ಐ.ಎಲ್.ಸಿ. ಗುತ್ತಿ ಬಸವಣ್ಣ ಏತನೀರಾವರಿ ಯೋಜನೆಯಡಿ 8 ಯಂತ್ರಗಳಿರುತ್ತವೆ. ಕಳೆದ 4 ವರ್ಷಗಳಿಂದ ಮೋಟಾರ್ & ಪಂಪ್‌ಗಳ ಕೆಲಸ ಸಾಮರ್ಥ್ಯಕಡಿಮೆಯಾಗಿ, ಇವುಗಳ ನಿರ್ವಹಣೆ ಮತ್ತು ಸಣ್ಣ–ಪುಟ್ಟ ರಿಪೇರಿಯಾಗದೇ ಇರುವ ಸಲುವಾಗಿ ಎಲ್ಲ ಯಂತ್ರಗಳು ಕಾರ್ಯನಿರ್ವಹಿಸುತ್ತಿಲ್ಲ. ಕೇವಲ 4 ಯಂತ್ರಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ. ವಿದ್ಯುತ್ ಮತ್ತು ಯಾಂತ್ರಿಕ ಎರಡು ವ್ಯವಸ್ಥೆಗಳಿವೆ. ಒಂದು ಚಾಲನೆಯಲ್ಲಿದ್ದರೆ, ಒಂದು ಸ್ಥಗಿತವಾಗುತ್ತದೆ ಎಂದು ಸಭೆಗೆ ವಿವರಿಸಿದರು.<br><br>**ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು** ಮಾತನಾಡುತ್ತಾ, ಈಗಿರುವ ಟ್ರಾನ್ಸ್‌ಫಾರ್ಮರ್ ಸಾಮರ್ಥ್ಯದಲ್ಲಿ 7 ಯಂತ್ರಗಳನ್ನು ಏಕಕಾಲಕ್ಕೆ ಚಾಲನೆಮಾಡಲು ಸಾಧ್ಯವಿಲ್ಲ. ಅಲ್ಪಾವಧಿ ಮತ್ತು ಧೀರ್ಘಾವಧಿ ಚಾಲನೆಯ ಸಲುವಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಟ್ರಾನ್ಸ್‌ಫಾರ್ಮರ್ ಸಾಮರ್ಥ್ಯ ಕಡಿಮೆಯಿರುವುದರಿಂದ ಬಳೂತಿ ಮತ್ತು ಮಸೂತಿಯಲ್ಲಿ ಯಂತ್ರಗಳು ಸುಟ್ಟುಹೋಗಿರುತ್ತವೆ ಎಂದು ತಿಳಿಸಿದರು. ಜಿಲ್ಲಾಧಿಕಾರಿಗಳು ಮಾತನಾಡುತ್ತಾ, 5 ಯಂತ್ರಗಳನ್ನು ಪ್ರಾರಂಭಮಾಡಲು 4 ತಿಂಗಳು ಬೇಕು ಎಂದು ಕಳೆದ ಸಭೆಯಲ್ಲಿ ಸದರಿ ಇಲಾಖೆಯ ಅಧಿಕಾರಿಗಳು ಹೇಳಿದ್ದರು. ಆದರೆ ಇನ್ನು ಮುಂದೆ ನೀರು ಬಿಡುವ ಸಮಯದಲ್ಲಿ ಇವರು 5 ಯಂತ್ರಗಳನ್ನು ಚಾಲನೆಯಲ್ಲಿಟ್ಟುಕೊಂಡು ಮತ್ತು ಒಂದು ಯಂತ್ರ ಸ್ಟ್ಯಾಂಡ್‌ಬಾಯ್ ಇಟ್ಟುಕೊಳ್ಳಲು ಸೂಚಿಸಿದರು. |

**(ಡಾ|| ಜೆ. ರವಿಶಂಕರ್, ಭಾ.ಆ.ಸೇ.)**
**ವ್ಯವಸ್ಥಾಪಕ ನಿರ್ದೇಶಕರು,**
**ಕ.ನ.ನೀ.ಸ ಮತ್ತು ಒ.ಚ ಮಂಡಳ, ಬೆಂಗಳೂರು**
**ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,**
**ವಿಜಯಪುರ**

ಶ್ರೀ ನವೀನ್‌ರಾಜ್ ಸಿಂಗ್ ಭಾ.ಆ.ಸೇ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಿನರಲ್ ಕಾರ್ಪೋರೇಷನ್ ಲಿಮಿಟೆಡ್ ಬೆಂಗಳೂರು ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ರವರ ಅಧ್ಯಕ್ಷತೆಯಲ್ಲಿ ದಿನಾಂಕ 30-11-2019 ರಂದು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಡೆದ ಪ್ರವಾಹ / ಅತಿವೃಷ್ಟಿ ಹಾಗೂ ಇತರೆ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು.

ಹಾಜರಾತಿ: ಹಾಜರಾತಿ ವಹಿಯಲ್ಲಿ ಇರುವಂತೆ:

ಮಾನ್ಯ ಜಿಲ್ಲಾಧಿಕಾರಿಗಳು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ಹಾಸನ ಹಾಜರಿದ್ದ ಎಲ್ಲಾ ಅಧಿಕಾರಿಗಳು / ಸಿಬ್ಬಂದಿಗಳನ್ನು ಸಭೆಗೆ ಸ್ವಾಗತಿಸಿ ಜಿಲ್ಲೆಯಲ್ಲಿ ಅತಿವೃಷ್ಟಿ ಹಾಗೂ ಬರ ಪರಿಸ್ಥಿತಿ ಹಾಗೂ ಜಿಲ್ಲಾಡಳಿತ ವತಿಯಿಂದ ಕೈಗೊಂಡಿರುವ ಪರಿಹಾರ ಮತ್ತು ಇತರೆ ಕ್ರಮಗಳ ಬಗ್ಗೆ ಮಾಹಿತಿ ನೀಡಿ ಮಾನ್ಯರಲ್ಲಿ ಸಭೆಯನ್ನು ನಡೆಸಿಕೊಡುವಂತೆ ಮನವಿ ಮಾಡಿದರು.

## 1. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ:

ಉಪ ನಿರ್ದೇಶಕರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ರವರು ಅಂಗನವಾಡಿ ಕಾರ್ಯಕರ್ತೆಯರಿಗೆ ನಿಯಮಿತವಾಗಿ ವೇತನವನ್ನು ಪಾವತಿಸಲಾಗುತ್ತಿದೆ. ಆದರೆ ಆಗಸ್ಟ್ 2019 ರಿಂದ ಹೆಚ್ಚಾಗಿರುವ ವೇತನ ರೂ. 1500/- ಗಳ ವಿತರಣೆ ಬಗ್ಗೆ ಅನುಧಾನ ಬಂದಿರುವುದಿಲ್ಲ. ಆದ್ದರಿಂದ ಪಾವತಿ ಮಾಡಿರುವುದಿಲ್ಲ ಎಂಬುದಾಗಿ ಸಭೆಯಲ್ಲಿ ಮಾಹಿತಿ ನೀಡಿದರು.

ಈ ಬಗ್ಗೆ ಮಾತನಾಡಿದ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು, ಮೇಲಾಧಿಕಾರಿಗಳಿಗೆ ಈ ಬಗ್ಗೆ ಕೂಡಲೇ ಪತ್ರ ಬರೆಯುವಂತೆ ಸೂಚನೆ ನೀಡಿದರು.

## 2. ಗ್ರಾಮೀಣ ಕುಡಿಯುವ ನೀರಿನ ಘಟಕ (ಆರ್.ಓ):

ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ರವರು ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಒಟು 454 ಕುಡಿಯುವ ನೀರಿನ ಘಟಕಗಳ ಪೈಕಿ 385 ಘಟಕಗಳನ್ನು ಸ್ಥಾಪಿಸಲಾಗಿದೆ. ಧರ್ಮಸ್ಥಳ ಸ್ವಸಹಾಯ ಸಂಘ, ಕೋಆಪರೇಟಿವ್ ಸಂಸ್ಥೆಗಳು ಹಾಗೂ ನಿರ್ಮಿತಿ ಕೇಂದ್ರಗಳು ಮೇಲುಸ್ತುವಾರಿಗಳನ್ನು ನೋಡಿಕೊಳ್ಳುತ್ತಿವೆ, ಸರ್ಕಾರದ ವತಿಯಿಂದ ಸ್ಥಳ ಹಾಗೂ ಕಟ್ಟಡ ನಿರ್ಮಾಣ ಕಾರ್ಯ ಮಾಡಲಾಗಿದ್ದು, ಘಟಕಗಳು ಕಾರ್ಯ ನಿರ್ವಹಿಸಲು ಪ್ರಾರಂಭಿಸಿದ ಸಮಯದಲ್ಲಿ ರೂ. 3000/- ರೂಗಳನ್ನು ಪಾವತಿಸಲಾಗುತ್ತಿದೆ. ಮೇಲು ಉಸ್ತುವಾರಿ ಕಾರ್ಯಕ್ಕಾಗಿ ಸರ್ಕಾರದಿಂದ ಎ.ಎಂ.ಸಿ ಗಾಗಿ ಟೆಂಡರ್ ಮೂಲಕ ಆಯ್ಕೆಯಾದ ಸಂಸ್ಥೆಗೆ ವರ್ಷಕ್ಕೆ ರೂ. 36000/- ಗಳನ್ನು ಉಸ್ತುವಾರಿಯ ವರ್ಷ ಕಳೆದ ನಂತರ ಪಾವತಿಸಲಾಗುತ್ತಿದೆ. ಇದರ ಉಸ್ತುವಾರಿ ಅವಧಿ 5 ವರ್ಷಗಳಾಗಿರುತ್ತದೆ ಈ ಅವಧಿಯಲ್ಲಿ ಘಟಕದಲ್ಲಿ ಉಂಟಾಗುವ ಲೋಪ ದೋಶಗಳ ನಿರ್ವಹಣೆಯನ್ನು ಎ.ಎಂ.ಸಿ. ಪಡೆದರವರೇ ಸಂಪೂರ್ಣ ಹೊಣೆಗಾರರಾಗಿರುತ್ತಾರೆ. ಧರ್ಮಸ್ಥಳ ಸ್ವಸಹಾಯ ಸಂಘ, ಕೋಆಪರೇಟಿವ್ ಸಂಸ್ಥೆಗಳು ಉಸ್ತುವಾರಿ ನಡೆಸುತ್ತಿರುವ ಘಟಕಗಳಲ್ಲಿ ಪ್ರತಿ ಕ್ಯಾನಿಗೆ ರೂ. 5/- ರಂತೆ ಹಾಗೂ ನಿರ್ಮಿತಿ ಕೇಂದ್ರ ಉಸ್ತುವಾರಿ ನಡೆಸುತ್ತಿರುವ ಘಟಕಗಳಲಿ ಪ್ರತಿ ಕ್ಯಾನಿಗೆ ರೂ. 2/- ರಂತೆ ಹಣ ಸಂಗ್ರಹ ಮಾಡಲಾಗುತ್ತಿದೆ ಎಂಬುದಾಗಿ ಮಾಹಿತಿ ನೀಡಿದರು.

3. **ಗಣಿ ಮತ್ತು ಭೂ ವಿಜ್ಞಾನ ಇಲಾಖೆ:**

ಹಿರಿಯ ಭೂ ವಿಜ್ಞಾನಿ, ಹಾಸನ ರವರು ಜಿಲ್ಲೆಯಲ್ಲಿ ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಟ್ಟು 195 ಮರಳು ನಿಕ್ಷೇಪಗಳ ಹರಾಜು ಪ್ರಕ್ರಿಯನ್ನು ನಡೆಸಲಾಗಿದೆ. ಮರಳು ಗಣಿಗಾರಿಕೆಗಾಗಿ ಸರ್ಕಾರದಿಂದ ದರ ನಿಗಧಿಪಡಿಸಲಾಗಿದೆ. ಜಿಲ್ಲೆಯಲ್ಲಿ ನಡೆಸಲಾಗುತ್ತಿರುವ ಎಂ.ಸ್ಯಾಂಡ್ ಘಟಕಗಳು ಕಾರ್ಯನಿರ್ವಹಿಸುತ್ತಿದ್ದು ಅದರ ಗುಣ ಮಟ್ಟ ಕಡಿಮೆ ಇರುವುದಾಗಿ ಮಾಹಿತಿ ನೀಡಿದರು. ಅಲ್ಲದೆ ಲೋಕೋಪಯೋಗಿ ಇಲಾಖೆ, ನಿರ್ಮಿತಿ ಕೇಂದ್ರ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ರವರು ಎಂ.ಸ್ಯಾಂಡ್‌ನ್ನೆ ಉಪಯೋಗಿಸುತ್ತಿದ್ದು ಉತ್ತಮ ಗುಣಮಟ್ಟ ಹಾಗೂ ರಿಯಾಯತಿ ದರದಲ್ಲಿ ಕುಣಿಗಲ್, ಕಡೂರು ಎಂ ಸ್ಯಾಂಡ್ ಘಟಕಗಳಿಂದ ಖರೀದಿಸುತ್ತಿರುವುದಾಗಿ ಮಾಹಿತಿ ನೀಡಿದರು.

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಈ ಬಗ್ಗೆ ಪ್ರತ್ಯೇಕವಾಗಿ ಸಂಬಂಧಪಟ್ಟ ಇಲಾಖೆಗ ಸಭೆಯನ್ನು ನಡೆಸುವಂತೆ ಹಾಗೂ ನೋಡಲ್ ಅಧಿಕಾರಿಗಳು ಎಂಸ್ಯಾಂಡ್ ನ ಗುಣ ಮಟ್ಟ ಪರಿಶೀಲನೆ ಜೊತೆಯಲ್ಲಿ ಜಿಲ್ಲೆಯಲ್ಲಿ ಎಂ.ಸ್ಯಾಂಡ್ ಘಟಕಗಳನ್ನು ಗುರುತಿಸುವಂತೆ ಸೂಚನೆ ನೀಡಿದರು.

4. **ಸಕಾಲ:**

ಜಿಲ್ಲೆಯು ಸಕಾಲದಡಿಯಲ್ಲಿ 4ನೇ ಸ್ಥಾನದಲ್ಲಿರುವುದಾಗಿ ಸಕಾಲ ಸಮಾಲೋಚಕರು ಸಭೆಯಲ್ಲಿ ಮಾಹಿತಿ ನೀಡಿದರು.

ಈ ಬಗ್ಗೆ ಮಾತನಾಡಿದ ಉಸ್ತುವಾರಿ ಕಾರ್ಯದರ್ಶಿಗಳು, ಸಕಾಲದಡಿಯಲ್ಲಿ ಸ್ವೀಕೃತಗೊಂಡಿರುವ ಅರ್ಜಿಗಳ ಪೈಕಿ ಬಾಕಿ ಉಳಿದಿರುವ ಅರ್ಜಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುವಂತೆ ಸೂಚನೆ ನೀಡಿದರು.

5. **ಇ-ಆಫೀಸ್**

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಕಛೇರಿಯಲ್ಲಿ ಇ-ಆಫೀಸ್ ಅನುಷ್ಠಾನಗೊಂಡಿದ್ದು ಕಾರ್ಯನಿರ್ವಹಿಸುತ್ತಿದೆ ಎಂಬುದಾಗಿ ಮಾಹಿತಿ ನೀಡಿದರು.

ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಎಲ್ಲಾ ಸಿಬ್ಬಂದಿಗಳಿ ಇ-ಆಫೀಸ್ ಬಗ್ಗೆ ತರಬೇತಿ ನೀಡಲಾಗಿದ್ದು ಸ್ಕ್ಯಾನಿಂಗ್ ಹಾಗೂ ಡಿಜಿಟಲ್ ಕಾರ್ಯ ನಡೆಯುತ್ತಿರುವುದಾಗಿ ಮಾಹಿತಿ ನೀಡಿದರು.

ಮಾತನಾಡಿದ ಉಸ್ತುವಾರಿ ಕಾರ್ಯದರ್ಶಿಗಳು, ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಶೀಘ್ರವಾಗಿ ಎ-ಆಫೀಸ್ ಅನುಷ್ಠಾನಗೊಳಿಸುವಂತೆ ಸೂಚನೆ ನೀಡಿದರು.

ವಂದನಗಳೊಂದಿಗೆ ಸಭೆಯನ್ನು ಮುಕ್ತಾಯಗಳಿಸಲಾಯಿತು.

(ನವೀನ್‌ರಾಜ್ ಸಿಂಗ್, **ಐ.ಎ.ಎಸ್.**)
ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಮಿನರಲ್
ಕಾರ್ಪೋರೇಷನ್ ಲಿಮಿಟೆಡ್, ಬೆಂಗಳೂರು
ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

**ಶ್ರೀ ನವೀನ್ ರಾಜ್ ಸಿಂಗ್, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಿನರಲ್ಸ್ ಕಾರ್ಪೋರೇಷನ್ ಲಿ. ಬೆಂಗಳೂರು ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ರವರ ಅಧ್ಯಕ್ಷತೆಯಲ್ಲಿ ದಿನಾಂಕ: 31-10-2019 ರಂದು ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ನಡೆದ ಪ್ರವಾಹ/ ಅತಿವೃಷ್ಟಿ ಹಾಗೂ ಬರ ಪರಿಸ್ಥಿತಿ ಮತ್ತು ಇತರೆ ಇಲಾಖೆಗಳ ಪ್ರಗತಿ ಪರಿಶೀಲನಾ ಸಭಾ ನಡವಳಿ.**

*****

**ಹಾಜರಾತಿ: ಹಾಜರಾತಿ ವಹಿಯಲ್ಲಿರುವಂತೆ**

ಅಪರ ಜಿಲ್ಲಾಧಿಕಾರಿಗಳು, ಹಾಸನ ರವರು ಸಭಾಧ್ಯಕ್ಷರನ್ನು ಹಾಗೂ ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ, ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ಕೋರಿದರು.

ಮಾನ್ಯ ಜಿಲ್ಲಾಧಿಕಾರಿಗಳು ಜಿಲ್ಲೆಯಲ್ಲಿ ಉಂಟಾಗಿರುವ ಪ್ರವಾಹ/ಅತಿವೃಷ್ಟಿ ಪರಿಸ್ಥಿತಿ ಹಾಗೂ ಮಳೆ ವಿವರ ಮಳೆ ಹಾನಿಗಳು ಪರಿಹಾರ ಕಾರ್ಯಾಚರಣೆಗಳ ಬಗ್ಗೆ ಅವಲೋಕಿಸಲು ಕೋರುತ್ತಾ ಪ್ರಾತ್ಯಕ್ಷತೆ ಮೂಲಕ ವಿವರಿಸಿದರು.

- **ಕೃಷಿ ಇಲಾಖೆ:**
- ಮಳೆ ವರದಿಯಂತೆ ಜಿಲ್ಲೆಯಲ್ಲಿ ಜನವರಿ-2019 ರಿಂದ ಅಕ್ಟೋಬರ್ 30ನೇ ತಾರೀಖಿನವರೆಗೂ, ಶೇ.40 ರಷ್ಟು ಹೆಚ್ಚು ಮಳೆಯಾಗಿದ್ದು, ಅಕ್ಟೋಬರ್-2019ರ ಮಾಹೆಯ ಕಳೆದ 24 ಗಂಟೆಗಳಲ್ಲಿ ಜಿಲ್ಲೆಯಲ್ಲಿ ಶೇ.74 ರಷ್ಟು ಹೆಚ್ಚು ಮಳೆಯಾಗಿರುತ್ತದೆ.
- ಕೃಷಿ ಬೆಳೆಗಳ ಬಿತ್ತನೆ ಕುರಿತಂತೆ 2019-20ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಒಟ್ಟು ಎಲ್ಲಾ ಕೃಷಿ ಬೆಳೆಗಳಿಗೆ ಸಂಬಂಧಿಸಿದಂತೆ ಒಟ್ಟು 32,300 ಹೆಕ್ಟೇರ್‌ಗಳಷ್ಟು ಬಿತ್ತನೆ ಗುರಿ ಇದ್ದು, ಈ ಪೈಕಿ ಕೇವಲ 6,115 ಹೆಕ್ಟೇರ್‌ಗಳಷ್ಟು ಪ್ರದೇಶಗಳಲ್ಲಿ ಬಿತ್ತನೆಯಾಗಿರುತ್ತದೆ. ಈ ಪೈಕಿ 1,792 ಹೆಕ್ಟೇರ್ ನೀರಾವರಿ ಪ್ರದೇಶವಾಗಿದ್ದು, 4,323 ಹೆಕ್ಟೇರ್ ಮಳೆಯಾಶ್ರಿತ ಪ್ರದೇಶವಾಗಿರುತ್ತದೆ.
- 2019ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಒಟ್ಟು 24975 ಕ್ವಿಂಟಾಲ್ ಬಿತ್ತನೆ ಬೀಜಗಳ ಬೇಡಿಕೆ ಇದ್ದು, ರಿಯಾಯಿತಿ ಯೋಜನೆಗಳಡಿ ಈವರೆಗೆ ಒಟ್ಟು 13061.9 ಕ್ವಿಂಟಾಲ್ ಬಿತ್ತನೆ ಬೀಜಗಳ ವಿತರಣೆಯನ್ನು ಕೈಗೊಳ್ಳಲಾಗಿರುತ್ತದೆ.
- ಮುಂದುವರೆದು ಜಿಲ್ಲೆಯಲ್ಲಿ ಒಟ್ಟು 1,09,428 ಕ್ವಿಂಟಾಲ್ ರಸಗೊಬ್ಬರದ ಬೇಡಿಕೆ ಇದ್ದು, ಈವರೆಗೆ 96,323 ಕ್ವಿಂಟಾಲ್‌ನಷ್ಟು ರಸಗೊಬ್ಬರ ಸರಬರಾಜಾಗಿರುತ್ತದೆ ಹಾಗೂ ರಸಗೊಬ್ಬರಗಳ ಕೊರತೆ ಇರುವುದಿಲ್ಲವೆಂದು ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಹಾಸನ ರವರು ತಿಳಿಸಿದರು. ಯಾವುದೇ ಕೊರತೆ ಉಂಟಾದಲ್ಲಿ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಸೂಕ್ತ ಕ್ರಮವಹಿಸುವುದು.
- ಬೆಳೆ ವಿಮೆ ಕುರಿತಂತೆ ಸರ್ಕಾರದಿಂದ United Indian Assurance Agency ಅನ್ನು ಜಿಲ್ಲೆಗೆ ನೇಮಿಸಿದ್ದು, ರೈತರಿಗೆ ಸದರಿಯವರಿಂದ ನಿಗದಿತ ಸಮಯದಲ್ಲಿ ಸೌಲಭ್ಯಗಳು ತಲುಪುತ್ತಿಲ್ಲದಿರುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ರೈತರು ನೋಂದಣಿ ಮಾಡಿಕೊಳ್ಳುತ್ತಿಲ್ಲವೆಂದು ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಹಾಸನ ರವರು ಸಭೆಯ ಗಮನಕ್ಕೆ ತಂದರು. ಈ ಸಂಬಂಧ ಕೃಷಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳೊಂದಿಗೆ ದೂರವಾಣಿ ಮೂಲಕ ಚರ್ಚಿಸಲಾಗಿ, ರೈತರಿಗೆ ಬೆಳೆ ವಿಮೆ ಪರಿಹಾರ ಪಾವತಿಸಲು United Indian Assurance Agency ರವರಿಗೆ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಲಾಗುವುದು ಹಾಗೂ ಸಮಸ್ಯೆಯನ್ನು ಬಗೆಹರಿಸಲಾಗುವುದು ಎಂದು ತಿಳಿಸಿದರು.
- ರೈತರ ಆತ್ಮಹತ್ಯೆ ಪ್ರಕರಣಗಳಿಗೆ ಸಂಬಂಧಿಸಿದಂತೆ 2019-20ನೇ ಸಾಲಿಗೆ ಜಿಲ್ಲೆಯಲ್ಲಿ ಒಟ್ಟು 10 ಪ್ರಕರಣಗಳು ದಾಖಲಾಗಿದ್ದು, ಈ ಪೈಕಿ 04 ಪ್ರಕರಣಗಳು ಅಂಗೀಕೃತವಾಗಿ 03 ಪ್ರಕರಣಗಳನ್ನು

ತಿರಸ್ಕರಿಸಲಾಗಿರುತ್ತದೆ. ಬಾಕಿ ಉಳಿದಿರುವ 03 ಪ್ರಕರಣಗಳನ್ನು ವಿಳಂಬಕ್ಕೆ ಅವಕಾಶ ನೀಡದೇ ತುರ್ತಾಗಿ ಇತ್ಯರ್ಥಪಡಿಸಲು ಸೂಚಿಸಲಾಯಿತು.

**ಪ್ರವಾಹ/ಅತಿವೃಷ್ಟಿ ಪರಿಹಾರ ಕಾರ್ಯಗಳು:**

- ದಿನಾಂಕ: 18/10/2019 ರಿಂದ 25/10/2019 ರವರೆಗೆ ಜಿಲ್ಲೆಯಲ್ಲಿ ಉಂಟಾದ ಮಳೆಯಿಂದ 02 ಜಾನುವಾರು ಹಾನಿಯಾಗಿದ್ದು, 150 ಮನೆಗಳು ಹಾನಿಯಾಗಿರುತ್ತವೆ.

- 2019-20ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಅತಿಯಾದ ಮಳೆಯಿಂದ ಉಂಟಾದ ಬೆಳೆಹಾನಿ ಮಾಹಿತಿಯನ್ನು ಪರಿಹಾರ ತಂತ್ರಾಂಶದಲ್ಲಿ ಅಳವಡಿಸಲಾಗುತ್ತಿದ್ದು, ಒಟ್ಟು 40,704 ನಮೂದುಗಳ ಪೈಕಿ ಈವರೆಗೆ ಒಟ್ಟು 31,096 ನಮೂದುಗಳನ್ನು ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಲಾಗಿದ್ದು, ಶೇ.62 ರಷ್ಟು ಪ್ರಗತಿ ಇರುತ್ತದೆ. ಬಾಕಿ ಉಳಿದಿರುವ ನಮೂದುಗಳನ್ನು ಒಂದು ವಾರದೊಳಗೆ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಿ ಶೇ.100 ರಷ್ಟು ಪ್ರಗತಿಯನ್ನು ಸಾಧಿಸತಕ್ಕದ್ದು ಎಂದು ನಿರ್ದೇಶನ ನೀಡಲಾಯಿತು.

- ಬೆಳೆ ಹಾನಿ ಮಾಹಿತಿಯನ್ನು ಪರಿಹಾರ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಲು ಹಾಸನ ತಾಲ್ಲೂಕಿನಲ್ಲಿ ಹೆಚ್ಚು ಬಾಕಿ ಇದ್ದು, ಹಾಸನ ತಾಲ್ಲೂಕು ಕಸಬಾ ಹಾಗೂ ಶಾಂತಿಗ್ರಾಮ ಹೋಬಳಿಗಳ ಮಾಹಿತಿಯನ್ನು ತೋಟಗಾರಿಕೆ ಇಲಾಖೆಯವರು ಮತ್ತು ಸಾಲಗಾಮೆ ಹಾಗೂ ಕಟ್ಟಾಯ ಹೋಬಳಿಗಳ ಮಾಹಿತಿಯನ್ನು ಕಂದಾಯ ಇಲಾಖೆಯವರು ನಮೂದಿಸಲು ಸೂಚಿಸಲಾಯಿತು.

- ಆಗಸ್ಟ್-2019 ರ ಮಾಹೆಯಲ್ಲಿ ಉಂಟಾದ ಪ್ರವಾಹದ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಒಟ್ಟು 182 ಮನೆಗಳು (ಶೇ.75 ಕ್ಕಿಂತ ಹೆಚ್ಚು) ಸಂಪೂರ್ಣವಾಗಿ, ಒಟ್ಟು 955 ಮನೆಗಳು ಶೇ.25 ರಿಂದ 75 ವರೆಗೆ ಹಾಗೂ ಒಟ್ಟು 998 ಮನೆಗಳು ಶೇ.15 ರಿಂದ 25 ವರೆಗೆ ಒಟ್ಟು 2135 ಮನೆಗಳು ಹಾನಿಯಾಗಿರುತ್ತವೆ. ಸಂಬಂದಪಟ್ಟ ಫಲಾನುಭವಿಗಳ ಮಾಹಿತಿಯನ್ನು ಆರ್.ಜಿ.ಹೆಚ್.ಸಿ.ಎಲ್. ನಲ್ಲಿ ದಾಖಲಿಸಲಾಗಿರುತ್ತದೆ. ಈವರೆಗೆ ಒಟ್ಟು 2108 ಫಲಾನುಭವಿಗಳಿಗೆ ಪರಿಹಾರವನ್ನು ಪಾವತಿಸಲಾಗಿರುತ್ತದೆ. ಬಾಕಿ ಇರುವ ಪ್ರಕರಣಗಳ ಫಲಾನುಭವಿಗಳಿಗೆ ಪರಿಹಾರ ಪಾವತಿಸಲು ತುರ್ತು ಕ್ರಮವಹಿಸಲು ತಿಳಿಸಲಾಯಿತು.

**ಪ್ರವಾಹ ಪರಿಹಾರ ಕಾಮಗಾರಿಗಳು:**

- ಆಗಸ್ಟ್-2019 ರ ಮಾಹೆಯಲ್ಲಿ ಉಂಟಾದ ಪ್ರವಾಹದ ಹಿನ್ನೆಲೆಯಲ್ಲಿ ಹಾನಿಯಾದ ಮೂಲಭೂತ ಸೌಕರ್ಯಗಳ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಲು ಜಿಲ್ಲೆಗೆ ಒಟ್ಟು ರೂ.15.00 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಈ ಪೈಕಿ ಸರ್ಕಾರದ ಆದೇಶದಂತೆ ಸರ್ಕಾರಿ ಶಾಲೆಗಳ ದುರಸ್ಥಿ ಕಾರ್ಯಗಳಿಗೆ ರೂ.862.25 ಲಕ್ಷಗಳನ್ನು ಕಾಯ್ದಿರಿಸಿಕೊಂಡು ಉಳಿದ ರೂ.637.75 ಲಕ್ಷಗಳ ಅನುದಾನವನ್ನು ಪ್ರವಾಹ ಪೀಡಿತ ತಾಲ್ಲೂಕುವಾರು ಹಂಚಿಕೆ ಮಾಡಿ ತುರ್ತು ಮೂಲಭೂತ ಸೌಕರ್ಯಗಳ ದುರಸ್ಥಿ ಕಾಮಗಾರಿಗಳನ್ನು ವಿಳಂಬಕ್ಕೆ ಅವಕಾಶ ನೀಡದೇ ಕೈಗೊಳ್ಳಲು ನಿರ್ದೇಶಿಸಲಾಯಿತು.
- ಆಗಸ್ಟ್-2019 ರ ಮಾಹೆಯಲ್ಲಿ ಉಂಟಾದ ಪ್ರವಾಹದಲ್ಲಿ ಜಿಲ್ಲೆಯ 02 ಸೇತುವೆಗಳನ್ನು ದುರಸ್ಥಿಗೊಳಿಸಲು ರೂ.80.00 ಲಕ್ಷಗಳು ಹಾಗೂ 19 ಕೆರೆಗಳನ್ನು ದುರಸ್ಥಿಗೊಳಿಸಲು ರೂ.320.00 ಲಕ್ಷಗಳ ಅನುದಾನದ ಅವಶ್ಯಕತೆ ಇರುತ್ತದೆ ಎಂದು ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಹಾಸನ ವಿಭಾಗ ರವರು ಸಭೆಗೆ ಗಮನಕ್ಕೆ ತರಲಾಗಿ, ಅನುದಾನದ ಅವಶ್ಯಕತೆ ಬಗ್ಗೆ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಯಿತು.

**ಕುಡಿಯುವ ನೀರು :**

- ಜಿಲ್ಲೆಯ ಅರಸೀಕೆರೆ ಹಾಗೂ ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲಿ ಕುಡಿಯುವ ನೀರು ಅಭಾವ ಉಂಟಾಗಿರುವ ಹಿನ್ನೆಲೆಯಲ್ಲಿ ಒಟ್ಟು ೦೮ ಗ್ರಾಮಗಳಲ್ಲಿ ೨೪ ಟ್ಯಾಂಕರ್‌ಗಳ ಮೂಲಕ ಹಾಗೂ ಒಟ್ಟು 41 ಗ್ರಾಮಗಳಲ್ಲಿ 41 ಖಾಸಗಿ ಕೊಳವೆ ಬಾವಿಗಳ ಮೂಲಕ ಮಾಸಿಕ ಬಾಡಿಗೆ ದರದ ಮೇಲೆ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿರುತ್ತದೆ.
- ಜಿಲ್ಲೆಯ ಅರಸೀಕೆರೆ ತಾಲ್ಲೂಕಿನಲ್ಲಿ ಕುಡಿಯುವ ನೀರು ಕೊರತೆಯನ್ನು ಸಂಪೂರ್ಣವಾಗಿ ಪರಿಹರಿಸಲು ೫೩೦ ಗ್ರಾಮಗಳಿಗೆ ಹೇಮಾವತಿ ನದಿಯಿಂದ ನೀರು ಸರಬರಾಜು ಮಾಡುವ Multi Village Scheme ಕಾರ್ಯ ಪ್ರಗತಿಯಲ್ಲಿದ್ದು, ಸದರಿ ಯೋಜನೆಯಿಂದ ತಾಲ್ಲೂಕಿನ ಎಲ್ಲಾ ೫೩೦ ಗ್ರಾಮಗಳಿಗೆ ಸಮರ್ಪಕವಾಗಿ ಕುಡಿಯುವ ನೀರನ್ನು ಸರಬರಾಜು ಮಾಡಬಹುದೆಂದು ಜಿಲ್ಲಾಧಿಕಾರಿಗಳು ತಿಳಿಸಿದರು. ಸದರಿ ಯೋಜನೆಯನ್ನು ನವಂಬರ್-೨೦೧೯ ಮಾಹೆಯೊಳಗೆ ಪೂರ್ಣಗೊಳಿಸಿ, ಅರಸೀಕೆರೆ ತಾಲ್ಲೂಕಿನ ಎಲ್ಲಾ ಗ್ರಾಮಗಳಿಗೆ ಕುಡಿಯುವ ನೀರು ಸೌಲಭ್ಯವನ್ನು ಒದಗಿಸಲಾಗುವುದು ಎಂದು ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ ಹಾಸನ ವಿಭಾಗ ರವರು ಸಭೆಗೆ ಮಾಹಿತಿ ಸಲ್ಲಿಸಿದರು.

**ಮೇವು ಪೂರೈಕೆ:**

- ಜಿಲ್ಲೆಯಲ್ಲಿ ಪ್ರಸ್ತುತ ಮುಂದಿನ 18 ವಾರಗಳನ್ನು ನಿಭಾಯಿಸುವಷ್ಟು ಒಟ್ಟು 4,76,244 ಟನ್‌ಗಳಷ್ಟು ಮೇವು ಲಭ್ಯವಿರುತ್ತದೆ.

  ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಪಿಟಿಷನ್ ಸಂಖ್ಯೆ: 18628/2019 ಮತ್ತು 19054/2019 ರ ಆದೇಶದ ಅನುಸಾರ ಜಿಲ್ಲೆಯಲ್ಲಿ ಒಟ್ಟು ೦೮ ಗೋಶಾಲೆಗಳು ಹಾಗೂ 14 ಮೇವು ಬ್ಯಾಂಕ್‌ಗಳನ್ನು ತೆರೆಯಲಾಗಿರುತ್ತದೆ ಎಂದು ಉಪ ನಿರ್ದೇಶಕರು, ಪಶುಸಂಗೋಪನಾ ಇಲಾಖೆ, ಹಾಸನ ರವರು ಸಭೆಯ ಗಮನಕ್ಕೆ ಸಲ್ಲಿಸಿದರು.

೨. **ಸಾರ್ವಜನಿಕ ಶಿಕ್ಷಣ ಇಲಾಖೆ ಇಲಾಖೆ:**

**ಅಕ್ಷರ ದಾಸೋಹ:**

- ಮಾನ್ಯ ಸಭಾಧ್ಯಕ್ಷರು ಅಕ್ಷರ ದಾಸೋಹ ಕಾರ್ಯಕ್ರಮದಡಿ ಆಹಾರ ಪದಾರ್ಥಗಳು ಪೂರೈಕೆ ಮತ್ತು ಇತರೆ ಸೌಲಭ್ಯಗಳಲ್ಲಿ ಯಾವುದಾದರೂ ಸಮಸ್ಯೆಗಳಿವೆಯೇ ಎಂದು ಪ್ರಸ್ತಾಪಿಸಿದರು. ಶಿಕ್ಷಣಾಧಿಕಾರಿಗಳು ಜಿಲ್ಲಾ ಪಂಚಾಯಿತಿ ರವರು ಅಕ್ಷರ ದಾಸೋಹ ಕಾರ್ಯಕ್ರಮವಾದ ಬಿಸಿಯೂಟ ಯೋಜನೆಯಡಿ ಹಾಸನ ಜಿಲ್ಲೆಯಲ್ಲಿ ಒಟ್ಟು 118565 ಮಕ್ಕಳು ಪ್ರಯೋಜನ ಪಡೆಯುತ್ತಿರುವುದಾಗಿಯು ಅದರಲ್ಲಿ 1 ರಿಂದ 5ನೇ ತರಗತಿಯವರೆಗಿನ ಒಟ್ಟು ಮಕ್ಕಳು 55772, 6 ರಿಂದ 8ನೇ ತರಗತಿಯವರೆಗಿನ ಒಟ್ಟು ಮಕ್ಕಳು 36130 ಮತ್ತು 9ನೇ ತರಗತಿಯಿಂದ 10ನೇ ತರಗತಿಯವರೆಗಿನ ಒಟ್ಟು ಮಕ್ಕಳು 26663 ಮಕ್ಕಳು ಪ್ರಯೋಜನ ಪಡೆಯುತ್ತಿರುವುದಾಗಿ ಹಾಗೂ ಮಕ್ಕಳಿಗೆ ವಾರದಲ್ಲಿ 5 ದಿನ 18 ಗ್ರಾಂ ಕೆನೆಭರಿತ ಹಾಲಿನ ಪುಡಿಯಿಂದ ತಯಾರಿಸಿದ 150 ಮಿ.ಲೀ. ಹಾಲನ್ನು ಪ್ರತಿ ಮಗುವಿಗೆ ನೀಡಲಾಗುತ್ತಿದೆಯೆಂದು ಪ್ರತಿ ಮಾಹೆಗೆ ಅಂದಾಜು 120.00 ಲಕ್ಷ ರೂ.ಗಳ ವೆಚ್ಚ ಭರಿಸಲಾಗುತ್ತಿದೆಯೆಂದು ವಿವರಿಸಿದರು. ಒಟ್ಟು 4250 ಅಡುಗೆಯವರು ಇದ್ದು, ಅಡುಗೆ ಸಿಬ್ಬಂದಿಗಳಿಗೆ ಇಲಾಖೆಯಿಂದ ವೈಯುಕ್ತಿಕ ಸ್ವಚ್ಚತೆ ಮತ್ತು ಅಡುಗೆ ಕೋಣೆ ಸಿದ್ದತೆ, ಆಹಾರದಾಸ್ತಾನನ್ನು ಶುದ್ದಗೊಳಿಸಿ ಆಹಾರ ತಯಾರಿಸುವ ಬಗ್ಗೆ ತರಬೇತಿ ನೀಡಲಾಗುತ್ತಿದ್ದು, ಮಕ್ಕಳಿಗೆ ಬಿಸಯೂಟ ಯೋಜನೆಯಡಿ ಯಾವುದೇ ಸಮಸ್ಯೆ ಇರುವುದಿಲ್ಲವೆಂದು ತಿಳಿಸಿದರು. ಅಕ್ಷರ ದಾಸೋಹ ಯೋಜನೆಗೆ 2019-20ನೇ ಸಾಲಿಗೆ 5103.00 ಲಕ್ಷ ರೂ.ಗಳು ಅನುದಾನ ನಿಗದಿಯಾಗಿರುವುದಾಗಿ ತಿಳಿಸಿದರು.

## ೩. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ:

- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ಜಿಲ್ಲಾ ಆರೋಗ್ಯಾಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. ಮಾನ್ಯ ಸಭಾಧ್ಯಕ್ಷರು ಆರೋಗ್ಯ ಇಲಾಖೆಗೆ ಸಂಬಂಧಿಸಿದಂತೆ ಸುದೀರ್ಘವಾಗಿ ವಿರ್ಮಶಿಸಿ ವೈದ್ಯಕೀಯ ಚಿಕಿತ್ಸೆಯಲ್ಲಿ ಗುಣಾತ್ಮಕ ಆರೋಗ್ಯ ಸೇವೆ, ಸುಧಾರಣೆ, ಆಧುನಿಕ ತಂತ್ರಜ್ಞಾನದ ಇ-ತಂತ್ರಾಂಶದ ಸದುಪಯೋಗ, ಸಾರ್ವಜನಿಕರಿಗೆ ರೋಗಿಗಳಿಗೆ ಔಷದೋಪಚಾರ, ಔಷದಿಗಳ ದಾಸ್ತಾನು, ತುರ್ತು ಚಿಕಿತ್ಸೆಗಳು, ತಾಯಿ ಶಿಶುಮರಣ ತಡೆಯುವಿಕೆ ಬಗ್ಗೆ ಮಾಹಿತಿ ನೀಡಲು ಸೂಚಿಸಿದರು. ಆರೋಗ್ಯಾಧಿಕಾರಿಗಳು, ಹಾಸನ ಜಿಲ್ಲೆಯಲ್ಲಿ ಜಿಲ್ಲಾ ವೈದ್ಯಕೀಯ ಮತ್ತು ಭೋದಕ ಆಸ್ಪತ್ರೆ-1, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ-8, ಸಮುದಾಯ ಆರೋಗ್ಯ ಕೇಂದ್ರಗಳು-15, ಪ್ರಾಥಮಿಕ ಆರೋಗ್ಯ ಕೇಂದ್ರಗಳು-134, 24*7 ಪ್ರಾಥಮಿಕ ಆರೋಗ್ಯ ಕೇಂದ್ರಗಳು-24, ವಿಸ್ತರಣಾ ಘಟಕಗಳು-6, ನಗರ ಆರೋಗ್ಯ ಕೇಂದ್ರಗಳು-4, ಆರೋಗ್ಯ ಉಪ ಕೇಂದ್ರಗಳು-489, ಗ್ರಾಮ ಆರೋಗ್ಯ ನೈರ್ಮಲ್ಯ ಸಮಿತಿ-1725 ಗಳು ಇರುವುದಾಗಿ ತಿಳಿಸಿದರು.

- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಜಾರಿಗೊಳಿಸಲಾದ ಆಯುಷ್ಮಾನ್ ಭಾರತ್- ಆರೋಗ್ಯ ಕರ್ನಾಟಕ ಯೋಜನೆಯು ಎಲ್ಲರಿಗೂ ಗುಣಾತ್ಮಕ ಆರೋಗ್ಯ ಸೇವೆ ನೀಡುವ ಉದ್ದೇಶ ಹೊಂದಿದೆ ಎಂದು ಆರೋಗ್ಯ ಕರ್ನಾಟಕ ಯೋಜನೆಯು ಸಾರ್ವತ್ರಿಕ ಆರೋಗ್ಯ ರಕ್ಷಣಾ ಯೋಜನೆಯಾಗಿರುತ್ತದೆಂದು ಹಾಗೂ ಒಟ್ಟು 494449 ಆರೋಗ್ಯ ಕಾರ್ಡುಗಳನ್ನು ಮುದ್ರಿಸಿರುವುದಾಗಿ ವಿವರಿಸಿದರು. ಪ್ರಸವ ಮತ್ತು ಪ್ರಸವದ ನಂತರ ಉತ್ತಮ ಗುಣಮಟ್ಟದ ಸೇವೆಯನ್ನು ಸಲ್ಲಿಸುವ ಯೋಜನೆಯಾದ ಲಕ್ಷ್ಯ ಕಾರ್ಯಕ್ರಮವನ್ನು ಪ್ರತಿ ವರ್ಷ ಸಾವಿರಕ್ಕೂ ಹೆಚ್ಚು ಹೆರಿಗೆಗಳನ್ನು ಮಾಡಿಸುವ ಆಸ್ಪತ್ರೆಗಳಾದ ವೈದ್ಯಕೀಯ ಮಹಾ ವಿದ್ಯಾಲಯ ಮತ್ತು ಭೋಧಕ ಆಸ್ಪತ್ರೆ ಹಾಸನ ಮತ್ತು ಸಾರ್ವಜನಿಕ ಆಸ್ಪತ್ರೆ ಹೊಳೆನರಸೀಪುರ ಆಸ್ಪತ್ರೆಗಳಲ್ಲಿ ಅನುಷ್ಠಾನಗೊಳಿಸಿರುವುದಾಗಿ ತಿಳಿಸಿದರು. ಜಿಲ್ಲೆಯಲ್ಲಿ 30-9-2019ರ ಅಂತ್ಯಕ್ಕೆ ಒಟ್ಟು 10090 ಹೆರಿಗೆಗಳು ಆಗಿದ್ದು ತಾಯಿಮರಣ-3, ಶಿಶು ಮರಣ-196 ಆಗಿರುವುದಾಗಿ ತಿಳಿಸಿದರು. ಜನನಿ ಸುರಕ್ಷಾ ಯೋಜನೆಯಡಿ ಒಟ್ಟು 3622 ಫಲಾನುಭವಿಗಳಿಗೆ ಆರ್ಥಿಕ ಸಹಾಯ ನೀಡಲಾಗಿರುತ್ತದೆ ಎಂದು ಆರೋಗ್ಯಾಧಿಕಾರಿಗಳು ವಿವರಿಸಿದರು.

- ಪ್ರಧಾನಮಂತ್ರಿ ಸುರಕ್ಷಿತ್ ಮಾತೃತ್ವ ಅಭಿಯಾನದಡಿ ಪ್ರತಿ ಮಾಹೆ 9ನೇ ದಿನಾಂಕದಂದು ಎಲ್ಲಾ ಆರೋಗ್ಯ ಸಂಸ್ಥೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿ ಪ್ರಧಾನಮಂತ್ರಿ ಸುರಕ್ಷಿತ್ ಮಾತೃತ್ವ ಅಭಿಯಾನ ಕ್ಲಿನಿಕ್ ನಡೆಸಲಾಗುವುದೆಂದು ಗರ್ಭಿಣಿಯರು, ಅನುಪಾಲನಾ ವಂಚಿತ ಗರ್ಭಿಣಿಯರು ಹಾಗೂ ಗಂಡಾಂತರ ಗರ್ಭಿಣಿಯರನ್ನು ಪತ್ತೆಹಚ್ಚಿ ಸೂಕ್ತ ಸಲಹೆ, ಚಿಕಿತ್ಸೆ, ರಕ್ತ ಹೀನತೆ ಪರೀಕ್ಷೆ ಸುರಕ್ಷಿತ ಹೆರಿಗೆಗೆ ಚಿಕಿತ್ಸೆ ನೀಡಲಾಗುವುದೆಂದು ಆರೋಗ್ಯಾಧಿಕಾರಿಗಳು ತಿಳಸಿದರು.

- ಶಿಶು ಮರಣ ಕಡಿಮೆ ಮಾಡಲು ಕೈಗೊಂಡಿರುವ ಮಕ್ಕಳ ಆರೋಗ್ಯ ಕಾರ್ಯಕ್ರಮಗಳನ್ನು ವಿವರಿಸುತ್ತಾ ಖಾಸಗಿ ಸಂಸ್ಥೆಗಳ ಶಿಶುಮರಣದ ವಿವರವನ್ನು ತಪ್ಪದೇ ಸಲ್ಲಿಸಲು ಜಿಲ್ಲಾ ವ್ಯಾಪ್ತಿಯ ಖಾಸಗಿ ಆರೋಗ್ಯ ಕೇಂದ್ರಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡುವುದು, ಶಿಶು ಮರಣದ ಪರಿಶೀಲನೆಯಲ್ಲಿ ಶಿಶುಮರಣ ಜರುಗಲು ಕಾರಣವಾದ ಅಂಶಗಳನ್ನು ಪತ್ತೆ

ಹಚ್ಚವುದು ಹಾಗೂ ಮುನ್ನೆಚ್ಚರಿಕೆ ಕ್ರಮವನ್ನು ಅನುಸರಿಸುವುದು ಜನನಿ ಶಿಶು ಸುರಕ್ಷಾ ಕಾರ್ಯಕ್ರಮ (ಜೆ.ಎಸ್.ಎಸ್.ಕೆ.) ದಡಿ ಔಷದಿಗಳು ಮತ್ತು ಹೆಚ್ಚಿನ ಚಿಕಿತ್ಸೆ ಅವಶ್ಯವಿದ್ದಲ್ಲಿ ಸಾರಿಗೆ ವ್ಯವಸ್ಥೆಯನ್ನು ಸಹ ಕಲ್ಪಿಸಲಾಗುತ್ತದೆಂದು, ಕಾಂಗರೂ ಮಾದರಿ ಆರೈಕೆ, ನವಜಾತ ಶಿಶು ಆರೈಕೆ ಕೇಂದ್ರಗಳಲ್ಲಿ ತಾಯಿ ಎದೆಹಾಲುಣುಸುವ ಕೇಂದ್ರಗಳನ್ನು ತೆರೆಯಲಾಗಿದೆಯೆಂದು ಶೇ.100 ರಷ್ಟು ಲಸಿಕಾ ಕಾರ್ಯಕ್ರಮದ ಗುರಿ ಸಾಧಿಸಲಾಗುವುದೆಂದು ಹಾಲಿ ಶೇ.96.70 ಗುರಿ ಸಾಧಿಸಲಾಗಿದೆಯೆಂದು ವಿವರಿಸಿದರು. ಹಾಗೂ ಸಾರ್ವಜನಿಕ ಆಸ್ಪತ್ರೆಯಲ್ಲಿ ಕೇಂದ್ರ ಪುರಸ್ಕೃತ ಯೋಜನೆಯ ಪಂಚಕರ್ಮ ಘಟಕ ಕಾರ್ಯ ನಿರ್ವಹಿಸುತ್ತಿದೆಯೆಂದು ಆರೋಗ್ಯಾಧಿಕಾರಿಗಳು ವಿವರಿಸಿದರು.

- ಮುಂದುವರೆದು ಸಕಲೇಶಪುರದಲ್ಲಿ **ಇ-ಆಸ್ಪತ್ರೆ ಆಡಳಿತ** ವ್ಯವಸ್ಥೆಯನ್ನು ಅನುಷ್ಠಾನಗೊಳಿಸಿ ಯಶಸ್ವಿಯಾಗಿ ಕಾರ್ಯನಿರ್ವಹಿಸಲಾಗುತ್ತಿದೆಯೆಂದು ಇದಕ್ಕೆ ಸಂಬಂಧಿಸಿದ ತಂತ್ರಾಂಶವನ್ನು ಸರ್ಕಾರವೇ ಸಿದ್ದಪಡಿಸಿ ಅಳವಡಿಸಿರುವುದಾಗಿಯು ತಂತ್ರಾಂಶದ ಮೂಲಕವೇ ರೋಗಗಳನ್ವಯ ಔಷಧಿಗಳ ಮಾಹಿತಿಯು, ಅಂತರಾಷ್ಟ್ರೀಯ ಕೋಡ್ ಮಾಹಿತಿಯು ಲಭ್ಯವಿರುತ್ತದೆಂದು, ಜಿಲ್ಲೆಯ ಎಲ್ಲಾ ಆಸ್ಪತ್ರೆಗಳಲ್ಲಿ ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆಯೆಂದು ತಿಳಿಸಿದರು. ಆದರೆ ಡಾಟಾ ಎಂಟ್ರಿ ಆಪರೇಟರ್ ಮತ್ತು ಸಿಬ್ಬಂದಿಗಳ ಕೊರತೆ ಇರುವುದಾಗಿ ಸಭೆಗೆ ಮಾಹಿತಿ ನೀಡಲಾಗಿ ಈ ಬಗ್ಗೆ ಚರ್ಚಿಸಲಾಯಿತು. ಆರೋಗ್ಯಾಧಿಕಾರಿಗಳು ಡಾಟಾ ಎಂಟ್ರಿ ಆಪರೇಟರ್ ಮತ್ತು ಸಿಬ್ಬಂದಿಗಳ ನೇಮಕಾತಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ತಡೆಹಿಡಿಯಲ್ಪಟ್ಟ ಪ್ರಕರಣವು ಅಂತ್ಯಗೊಂಡಿದ್ದು ಶೀಘ್ರದಲ್ಲೇ ನೇಮಕಾತಿ ಪ್ರಕ್ರಿಯೆ ನಡೆಯಲಿದೆಯೆಂದು ಸಭೆಗೆ ಮಾಹಿತಿ ನೀಡಿದರು. ಮಲೇರಿಯಾ ಮತ್ತು ಜ್ವರಕ್ಕೆ ಸಂಬಂಧಿಸಿದಂತೆ ರಕ್ತ ಪರೀಕ್ಷೆಯನ್ನು ಸರ್ಕಾರವು ಕಡ್ಡಾಯಗೊಳಿಸಿದ್ದು ರಕ್ತ ಪರೀಕ್ಷೆ ಮಾಡುವುದು ಅನಿವಾರ್ಯವಾಗಿರುತ್ತದೆಂದು ತಿಳಿಸಿದರು. ಮಾನ್ಯ ಜಿಲ್ಲಾಧಿಕಾರಿಗಳು ಶಾಲಾ ವಿದ್ಯಾರ್ಥಿಗಳಿಗೆ ನೀಡುವ **ಎ-ವಿಟಮಿನ್ ಗುಳಗೆಗಳನ್ನು ನೀಡಲು ಸೂಚಿಸಿದಂತೆ** ಸದರಿ ಯೋಜನೆಯು ಜಿಲ್ಲಾ ಪಂಚಾಯ್ತಿಗೆ ನೇರವಾಗಿ ಬರುವಂತಹ ಕಾರ್ಯಕ್ರಮವಾಗಿದ್ದು ಜಿಲ್ಲಾ ಪಂಚಾಯ್ತಿ ಮತ್ತು ಆರೋಗ್ಯ ಇಲಾಖೆಯಿಂದ ಶಾಲಾ ವಿದ್ಯಾರ್ಥಿಗಳಿಗೆ ನೀಡುವ ಎ-ವಿಟಮಿನ್ ಗುಳಿಗೆಗಳನ್ನು ನೀಡಲು ಕ್ರಮಕೈಗೊಳ್ಳಲಾಗುವುದೆಂದು ಮಾಹಿತಿ ನೀಡಿದರು.

## 4. ಸಮಾಜ ಕಲ್ಯಾಣ ಇಲಾಖೆ:

- ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ಉಪ ನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು. ಒಟ್ಟು ಜನಸಂಖ್ಯೆ 1776421 ಇದ್ದು ಪರಿಶಿಷ್ಟ ಜಾತಿ ಜನಸಂಖ್ಯೆ 345031 ಇದ್ದು ಹಾಸ್ಟಲ್‌ಗಳು-88, ವಸತಿ ಶಾಲೆಗಳು-3 ಸ್ವಂತ ಕಟ್ಟಡ ಇರುವ/ಇಲ್ಲದ ಹಾಸ್ಟಲ್ 75/13 ಇರುವುದಾಗಿ ಮತ್ತು ಕಳೆದ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ.86.14, ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ.73.25 ಫಲಿತಾಂಶ ಬಂದಿದೆಯೆಂದು, 2019-20ನೇ ಸಾಲಿಗೆ ಮೆಟ್ರಿಕ್‌ಪೂರ್ವ/ನಂತರ/ವಸತಿ ಶಾಲೆಗಳಲ್ಲಿ ಮಂಜೂರಾತಿ ಸಂ.7293 ಆಗಿದ್ದು 2019-20ನೇ ಸಾಲಿಗೆ ಮೆಟ್ರಿಕ್‌ಪೂರ್ವ/ನಂತರ/ವಸತಿ ಶಾಲೆಗಳಲ್ಲಿ ದಾಖಲಾತಿ ಸಂ.7921 ಆಗಿರುತ್ತದೆ ಎಂದು ವಿವರಿಸಿದರು.

- ಮೆಟ್ರಿಕ್‌ಪೂರ್ವ/ನಂತರದ/ ವಿದ್ಯಾರ್ಥಿ ನಿಲಯಗಳ ಮತ್ತು ವಸತಿ ನಿಲಯಗಳಿಗೆ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸಕಲೇಶಪುರ ತಾಲ್ಲೂಕಿನಲ್ಲಿ ಒಂದು ಕಾಮಗಾರಿ ಮಂಜೂರಾಗಿದ್ದು ನಿರ್ಮಿತಿ ಕೇಂದ್ರವತಿಯಿಂದ ಅನುಷ್ಠಾನಗೊಂಡಿದ್ದು ಕಾಮಗಾರಿಯನ್ನು

ಪ್ರಾರಂಭಿಸಲಾಗಿದ್ದು ಪಾಯವರೆಗಿನ ಹಂತದ ಕಾಮಗಾರಿ ಮಾಡಲಾಗಿದ್ದು ಪ್ರಗತಿಯಲ್ಲಿರುತ್ತದೆ ಎಂದು ತಿಳಿಸಿದರು. ಆಲೂರು ತಾ. ಹೊಸೂರು, ಹುಣಸೆ ಗ್ರಾಮಗಳಲ್ಲಿ ಮತ್ತು ಚನ್ನರಾಯಪಟ್ಟಣ ತಾ. ನಾಗಸಂದ್ರ ಗ್ರಾಮದಲ್ಲಿ ಪರಿಶಿಷ್ಟ ಜಾತಿಗೆ ಒಳಪಟ್ಟಿರುವ ಸ್ಮಶಾನಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸಲಾಗಿದ್ದು ಕಾಮಗಾರಿ ಪ್ರಗತಿಯಲ್ಲಿದ್ದು, ಪೂರ್ಣಗೊಂಡ ತಕ್ಷಣ ಅನುದಾನವನ್ನು ಪೂರ್ಣಪ್ರಮಾಣದಲ್ಲಿ ಬಳಸಿಕೊಳ್ಳಲಾಗುವುದೆಂದು ಮಾಹಿತಿ ನೀಡಿದರು. ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದ ಎಲ್ಲಾ ವಿದ್ಯಾರ್ಥಿನಿಲಯಗಳಿಗೂ ಸ್ವಂತ ನಿವೇಶನ ದೊರೆತಿರುವುದಾಗಿಯು ತಿಳಿಸಿದರು.

- ಸಮಾಜ ಕಲ್ಯಾಣ ಇಲಾಖೆವತಿಯಿಂದ ನಿರ್ಮಿಸುವ ಸಮುದಾಯ ಭವನಗಳಿಗೆ ಸಂಬಂಧಿಸಿದಂತೆ ಮಾಹಿತಿ ನೀಡಿ ಆಲೂರು ತಾಲ್ಲೂಕಿನಲ್ಲಿ ಮಂಜೂರಾದ ಕಟ್ಟಡ-12, ಪೂರ್ಣಗೊಂಡಿರುವುದು-1, ಪ್ರಾರಂಭಿಸದೇ ಇರುವ ಕಟ್ಟಡ-3, ಪ್ರಗತಿಯಲ್ಲಿರುವ ಕಟ್ಟಡ-7, ಆಲೂರು ತಾಲ್ಲೂಕಿನಲ್ಲಿ ಮಂಜೂರಾದ ಕಟ್ಟಡ-12, ಪೂರ್ಣಗೊಂಡಿರುವುದು-1, ಪ್ರಾರಂಭಿಸದೇ ಇರುವ ಕಟ್ಟಡ-3, ಪ್ರಗತಿಯಲ್ಲಿರುವ ಕಟ್ಟಡ-7, ಅರಕಲಗೂಡು ತಾಲ್ಲೂಕಿನಲ್ಲಿ ಮಂಜೂರಾದ ಕಟ್ಟಡ-8, ಪೂರ್ಣಗೊಂಡಿರುವುದು-1, ಪ್ರಗತಿಯಲ್ಲಿರುವ ಕಟ್ಟಡ-4, ಅರಸೀಕೆರೆ ತಾಲ್ಲೂಕಿನಲ್ಲಿ ಮಂಜೂರಾದ ಕಟ್ಟಡ-72, ಪೂರ್ಣಗೊಂಡಿರುವುದು-18, ಪ್ರಗತಿಯಲ್ಲಿರುವ ಕಟ್ಟಡ-54, ಬೇಲೂರು ತಾಲ್ಲೂಕಿನಲ್ಲಿ ಮಂಜೂರಾದ ಕಟ್ಟಡ-16, ಪೂರ್ಣಗೊಂಡಿರುವುದು-3, ಪ್ರಗತಿಯಲ್ಲಿರುವ ಕಟ್ಟಡ-9, ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಮಂಜೂರಾದ ಕಟ್ಟಡ-14, ಏಜೆನ್ಸಿ ನಿಗದಿ (ಕೇಂದ್ರ ಕಚೇರಿಯಿಂದ)-6, ಹಾಸನ ತಾಲ್ಲೂಕಿನಲ್ಲಿ ಮಂಜೂರಾದ ಕಟ್ಟಡ-63, ಪೂರ್ಣಗೊಂಡಿರುವುದು-15, ಪ್ರಾರಂಭಿಸದೇ ಇರುವ ಕಟ್ಟಡ-11, ಪ್ರಗತಿಯಲ್ಲಿರುವ ಕಟ್ಟಡ-37 ಆಗಿದ್ದು ನಿರ್ಮಿತಿ ಕೇಂದ್ರ, ಪಂ.ರಾ.ಇಂ.ವಿಭಾಗ, ಕೆ.ಆರ್.ಐ.ಡಿ.ಸಿ ಯಿಂದ ನಿರ್ಮಿಸಲಾಗುತ್ತಿದೆಯೆಂದು, ಹೊಳೆನರಸೀಪುರ ತಾಲ್ಲೂಕಿನಲ್ಲಿ ಮಂಜೂರಾದ ಕಟ್ಟಡ-8, ಪೂರ್ಣಗೊಂಡಿರುವುದು-1, ಪ್ರಗತಿಯಲ್ಲಿರುವ ಕಟ್ಟಡ-1, ಸಕಲೇಶಪುರ ತಾಲ್ಲೂಕಿನಲ್ಲಿ ಮಂಜೂರಾದ ಕಟ್ಟಡ-12, ಪ್ರಗತಿಯಲ್ಲಿರುವ ಕಟ್ಟಡ-12 ಆಗಿರುತ್ತದೆಯೆಂದು ಈ ಎಲ್ಲಾ ಕಾಮಗಾರಿಗಳನ್ನು ನಿರ್ಮಿತಿ ಕೇಂದ್ರ, ಕೆ.ಆರ್.ಐ.ಡಿ.ಎಲ್, ಪಂ.ರಾಜ್.ಇಂ.ಇಲಾಖೆ ವತಿಯಿಂದ ನಿರ್ವಹಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.
  ಶಾಲಾ ಮಕ್ಕಳಿಗೆ ವಿದ್ಯಾರ್ಥಿವೇತನಕ್ಕೆ ಅರ್ಜಿಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಲಾಗಿದೆಯೆಂದು ತಿಳಿಸಿದರು.

## 5. <u>ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:</u>

- ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ 3 ವಿದ್ಯಾರ್ಥಿನಿಲಯಗಳು ಮತ್ತು 1 ಆಶ್ರಮ ಶಾಲೆಗಳು ಇದ್ದು ಎಲ್ಲಾ ವಿದ್ಯಾರ್ಥಿನಿಲಯಗಳಿಗೂ ನಿವೇಶನ ಲಭ್ಯವಿದೆ ಎಂದು, ಸಮುದಾಯಭವನ ನಿರ್ಮಿಸಲು 2 ಕಟ್ಟಡಗಳಿಗೆ ಮಂಜೂರಾತಿಯಾಗಿದ್ದು ಪ್ರಗತಿಯಲ್ಲಿರುತ್ತದೆ ಎಂದು ಸಭೆಗೆ ಮಾಹಿತಿ ನೀಡಲಾಯಿತು.

## 6. <u>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:</u>

- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ಜಿಲ್ಲಾ ಅಧಿಕಾರಿಗಳು ಮಾಹಿತಿಯನ್ನು ಸಭೆಗೆ ನೀಡುತ್ತಾ ಜಿಲ್ಲೆಯಲ್ಲಿ ಹಾಸ್ಟೆಲ್‌ಗಳು-116, ವಸತಿ ಶಾಲೆಗಳು-12, ಸ್ವಂತ ಕಟ್ಟಡ ಇರುವ/ಇಲ್ಲದಿರುವ ಹಾಸ್ಟೆಲ್‌ಗಳು 73/43, ನಿವೇಶನ ಅಗತ್ಯತೆ ಇರುವ ಹಾಸ್ಟಲ್-1, ಕಳೆದ ಸಾಲಿನ ಎಸ್.ಎಲ್.ಎಲ್.ಸಿ/ಪಿ.ಯು.ಸಿ. ಫಲಿತಾಂಶ ಶೇ.91.72 & 83.22,

2019–20ನೇ ಸಾಲಿಗೆ ಅನುಮತಿಸಿದ ಪ್ರವೇಶಗಳ ಸಂಖ್ಯೆ.8375 ಮತ್ತು 2019–20ನೇ ಸಾಲಿಗೆ ಪ್ರವೇಶಾತಿ ಕೋರಿ ಬಂದ ಅರ್ಜಿಗಳು–10250 ಎಂದು ತಿಳಿಸಿದರು.

ಮೆಟ್ರಿಕ್ ಪೂರ್ವ/ನಂತರದ ವಿದ್ಯಾರ್ಥಿನಿಲಯಗಳ ಮತ್ತು ವಸತಿ ನಿಲಯಗಳ ಕಟ್ಟಡಗಳ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಅರಸೀಕೆರೆ–1, ಚನ್ನರಾಯಪಟ್ಟಣ–7, ಹಾಸನ–5, ಹೊಳೆನರಸೀಪುರ–3 ಒಟ್ಟು 16 ಕಟ್ಟಡ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆಯೆಂದು ಹಾಗೂ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ ಮೊಸಳೆಹೊಸಹಳ್ಳಿ ಕಾಮಗಾರಿಗೆ ಕಾರ್ಯಾದೇಶ ನೀಡಿದ್ದು ಕಾಮಗಾರಿ ಪ್ರಾರಂಭಿಸಬೇಕಾಗಿರುತ್ತದೆಂದು ಮಾಹಿತಿ ನೀಡಿದರು.

ಬಾಡಿಗೆ ಕಟ್ಟಡಗಳಲ್ಲಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಒಟ್ಟು 19 ನಿವೇಶನಗಳ ಅಗತ್ಯವಿದ್ದು, 18 ಮಂಜೂರಾಗಿರುತ್ತದೆಂದು, ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿಗೆ 6 ನಿವೇಶನಗಳು ಅಗತ್ಯವಾಗಿದ್ದು 6 ಮಂಜೂರಾಗಿರುತ್ತದೆಂದು, ಅರಕಲಗೂಡು ತಾ. ಬಿ.ಎಂ.ಶೆಟ್ಟಿ ಸರ್ಕಾರಿ ಪ್ರ.ದ.ಕಾಲೇಜು, ಕೊಣನೂರು ಇಲ್ಲಿನ ಆವರಣದಲ್ಲಿನ 100*100 ಅಳತೆಯ ನಿವೇಶನ ಗುರುತಿಸಲಾಗಿದ್ದು ಮಂಜೂರಾತಿಗಾಗಿ ಆಯುಕ್ತರು ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ದಿನಾಂಕ 22–6–2019 ರಂದು ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆಂದು ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು ಹಾಸನ ಜಿಲ್ಲೆ ರವರ ಮುಖಾಂತರ ದಿನಾಂಕ 23–07–2019 ರಂದು ಪತ್ರ ಬರೆಯಲಾಗಿದೆಯೆಂದು ಮಾಹಿತಿ ನೀಡಿದರು. ಹಾಗೂ ಸಮುದಾಯಭವನ ಕಟ್ಟಡಗಳಿಗೆ ಸಂಬಂಧಿಸಿದಂತೆ ಜಿಲ್ಲೆಯಾದ್ಯಂತ 135 ಕಟ್ಟಡ ಕಾಮಗಾರಿಗಳಿಗೆ ಮಂಜೂರಾತಿ ದೊರೆತಿದ್ದು, 29 ಕಾಮಗಾರಿಗಳು ಪೂರ್ಣಗೊಂಡಿರುತ್ತದೆಂದು, 79 ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆಂದು, 27 ಕಾಮಗಾರಿಗಳು ಪ್ರಾರಂಭಿಸಬೇಕಾಗಿದೆಯೆಂದು ಮಾಹಿತಿ ನೀಡಿದರು.

## 7. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:

- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಯೋಜನೆಗಳ ಪ್ರಗತಿ ವಿಮರ್ಶಿಸಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಚಿಸಲಾಯಿತು.

## 8. ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ

- ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಕೈಗೊಳ್ಳಲಾಗುವ ಗಂಗಾ ಕಲ್ಯಾಣ ಯೋಜನೆಯಡಿ ಕೆಲಸ ಪ್ರಗತಿಯಲ್ಲಿರುವ ಸಂ.255, ಕೆಲಸ ಕೈಗೆತ್ತಿಕೊಳ್ಳಬೇಕಾದ ಸಂ.110, ಅಂದಾಜುಪಟ್ಟಿ ತಯಾರಿಸಬೇಕಾದ ಸಂಖ್ಯೆ.11 ಒಟ್ಟು 376 ಕೊಳವೆಬಾವಿಗಳನ್ನು ಕೊರೆಸುವ ಗುರಿ ಇದ್ದು ಹೆಚ್ಚಿನಂಶ ಪ್ರಕರಣ ಬಾಕಿಯಾಗಿದ್ದು **ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದವತಿಯಿಂದ ವಿದ್ಯುತ್ ಸಂಪರ್ಕಕ್ಕಾಗಿ ಬಾಕಿಯಾಗಿದೆ ಎಂದು ಸಭೆಗೆ ಮಾಹಿತಿ ನೀಡಲಾಗಿ, ಮಾನ್ಯ ಸಭಾಧ್ಯಕ್ಷರು ಚೆಸ್ಕಾಂರವರಿಗೆ ಪ್ರತ್ಯೇಕ ಸಭೆ ಮಾಡಲು ಮುಖ್ಯ ಕಾರ್ಯನಿರ್ವಹಣಾಧಿಕರಿಗಳು, ಜಿಲ್ಲಾ ಪಂಚಾಯ್ತಿ** ರವರಿಗೆ ನಿರ್ದೇಶನ ನೀಡಿದರು.

## 9. ನಗರಾಭಿವೃದ್ಧಿ ಇಲಾಖೆ:

- ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ ನಗರಸಭೆ–1 (ಹಾಸನ) ಪುರಸಭೆ–5, ಅರಸೀಕೆರೆ ಚನ್ನರಾಯಪಟ್ಟಣ, ಬೇಲೂರು, ಹೊಳೆನರಸೀಪುರ, ಸಕಲೇಶಪುರ ಮತ್ತು 2 ತಾಲ್ಲೂಕು ಪಂಚಾಯ್ತಿ– ಆಲೂರು, ಅರಕಲಗೂಡು ಗಳಿದ್ದು ಯೋಜನೆಗಳ ಪ್ರಗತಿ ವಿಮರ್ಶೆ ಮಾಡಲಾಯಿತು. ಹಾಗೂ **ಮಾನ್ಯ ಸಭಾಧ್ಯಕ್ಷರು 15 ದಿನಗಳಿಗೊಮ್ಮೆ ಪರಿಶೀಲನಾ ಸಭೆ ನಡೆಸಿ ಪ್ರಗತಿ ಸಾಧಿಸಲು ಆಯುಕ್ತರಿಗೆ ನಿರ್ದೇಶಿಸಿದರು.**

## 10.ಅರಣ್ಯ ಇಲಾಖೆ:

- ಮಾನ್ಯ ಸಭಾಧ್ಯಕ್ಷರು ಅರಣ್ಯ ಇಲಾಖೆಯ ಸಾಮಾಜಿಕ ಪ್ರಾದೇಶಿಕ ಅರಣ್ಯ ವಿಭಾಗದ ಪ್ರಗತಿ ವಿಮರ್ಶಿಸಿ ಹೆಚ್ಚು ಸಸಿ, ಗಿಡಗಳನ್ನು ನೆಡಲು ಸೂಚಿಸಿದರು.

## 11. ಪ್ರವಾಸೋದ್ಯಮ ಇಲಾಖೆ

- ಮಾನ್ಯ ಸಭಾಧ್ಯಕ್ಷರು ಪ್ರವಾಸೋದ್ಯಮ ಇಲಾಖೆಯ ಯೋಜನೆಗಳ ಪ್ರಗತಿ ವಿಮರ್ಶಿಸಿ ಸಹಾಯಕ ನಿರ್ದೇಶಕರು ರವರಿಗೆ ಪ್ರವಾಸೋದ್ಯಮ ಇಲಾಖೆಯ ಯೋಜನೆಗಳ ಬಗ್ಗೆ ಹೆಚ್ಚಿನ ಪ್ರಚಾರ ಹಾಗೂ **ಸಾಲಮೇಳ ಕಾರ್ಯಕ್ರಮವನ್ನು** ಆಯೋಜಿಸಲು ಸೂಚಿಸಿದರು.

## 12. ಕಂದಾಯ ಇಲಾಖೆ

- ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಮಾನ್ಯ ಸಭಾಧ್ಯಕ್ಷರು **ಕಂದಾಯ ನ್ಯಾಯಾಲಯಗಳನ್ನು** ನಡೆಸಲಾಗುತ್ತಿದೆಯೇ ಎಂದು ಪ್ರಸ್ತಾಪಿಸಿ ತಾಲ್ಲೂಕುವಾರು ಮಾಹಿತಿ ನೀಡಲು ಸೂಚಿದರು. ಜಿಲ್ಲೆಯ ಎಲ್ಲಾ ತಹಶೀಲ್ದಾರರು ಪ್ರತಿ ವಾರ ಕಂದಾಯ ನ್ಯಾಯಾಲಯಗಳನ್ನು ನಡೆಸುತ್ತಿರುವುದಾಗಿ ಸಭೆಗೆ ಮಾಹಿತಿ ನೀಡಿದರು. ಹಾಸನ ತಹಶೀಲ್ದಾರರು ಶ್ರೀ ಹಾಸನಾಂಬದೇವಿ ದರ್ಶನ & ಶ್ರೀ ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವದ ಕಾರಣ ಅಕ್ಟೋಬರ್ ಮಾಹೆಯಲ್ಲಿ ಕಂದಾಯ ನ್ಯಾಯಾಲಯಗಳನ್ನು ನಡೆಸಲು ಸಾಧ್ಯವಾಗಿರುವುದಿಲ್ಲವೆಂದು ಉಳಿದಂತೆ ಪ್ರತಿ ವಾರ ನಡೆಸುತ್ತಿರುವುದಾಗಿ ತಿಳಿಸಿದರು. ಹಕ್ಕು ಬದಲಾವಣೆ ಪ್ರಕ್ರಿಯೆಗಳನ್ನು, ಖಾತೆ, ಪೌತಿ ಖಾತೆ ವರ್ಗಾವಣೆ, ಪೋಡಿ ಪ್ರಕರಣ, ಸಾಮಾಜಿಕ ಭದ್ರತಾ ಯೋಜನೆಗಳ ಪ್ರಗತಿ ವಿಮರ್ಶೆ ಮಾಡಲಾಯಿತು. ವಾರಸು ತಕರಾರು ಇರುವ ಪ್ರಕರಣಗಳಲ್ಲಿ ಖಾತೆ ಬದಲಾವಣೆ ವಿಳಂಬವಾಗುತ್ತಿರುವ ಬಗ್ಗೆ ಸಭೆಗೆ ಮಾಹಿತಿ ನೀಡಲಾಗಿ ಮಾನ್ಯ ಸಭಾಧ್ಯಕ್ಷರು ವಾರಸು ತಕರಾರು ಪ್ರಕರಣಗಳಲ್ಲಿ **ಜಂಟಿ ಖಾತೆ** ಮಾಡಲು ಹಾಗೂ ಜಿಲ್ಲೆಯ ಎಲ್ಲಾ ತಹಶೀಲ್ದಾರರು ಮುಂದಿನ ಸಭೆಗೆ ಗರಿಷ್ಟ ಪ್ರಮಾಣದಲ್ಲಿ ಪ್ರಗತಿ ಸಾಧಿಸಲು ಸೂಚಿಸಿದರು.

ಮಾನ್ಯ ಸಭಾಧ್ಯಕ್ಷರು ಸಭೆಯನ್ನುದ್ದೇಶಿಸಿ ಜಿಲ್ಲೆಯ ಎಲ್ಲಾ ಇಲಾಖಾಧಿಕಾರಿಗಳು ಪ್ರಗತಿ ಸಾಧನೆಗೆ ಸಮಸ್ಯೆಗಳಿದ್ದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಪರಿಹರಿಸಿಕೊಂಡು ಮುಂದಿನ ಸಭೆಗೆ ಗರಿಷ್ಟ ಪ್ರಮಾಣದಲ್ಲಿ ನಿಗದಿಪಡಿಸಿದ ಗುರಿ ಸಾಧಿಸಲು ನಿರ್ದೇಶನ ನೀಡಿದರು.

ಮಾನ್ಯ ಜಿಲ್ಲಾಧಿಕಾರಿಗಳು ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

**(ನವೀನ್ ರಾಜ್ ಸಿಂಗ್)**
**ವ್ಯವಸ್ಥಾಪಕ ನಿರ್ದೇಶಕರು,**
**ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿ.**
**ಬೆಂಗಳೂರು ಹಾಗೂ**
**ಹಾಸನ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು**

ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಜಲಸಂಪನ್ಮೂಲ ಇಲಾಖೆ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಇವರ ಅಧ್ಯಕ್ಷತೆಯಲ್ಲಿ ದಿನಾಂಕ:8.11.2019 ರಂದು 11.00 ಗಂಟೆಗೆ ಅತಿವೃಷ್ಟಿ/ಪ್ರವಾಹದ ಕುರಿತು ಪರಿಶೀಲನಾ ಸಭೆಯ ನಡುವಳಿಗಳು.

ಸಭೆಗೆ ಹಾಜರಿದ್ದ ಅಧಿಕಾರಿಗಳು:

1. ಜಿಲ್ಲಾಧಿಕಾರಿಗಳು ಬೆಳಗಾವಿ ಜಿಲ್ಲೆ
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ.
3. ಅಪರ ಜಿಲ್ಲಾಧಿಕಾರಿಗಳು, ಬೆಳಗಾವಿ
4. ಆಯುಕ್ತರು, ಮಹಾನಗರ ಪಾಲಿಕೆ, ಬೆಳಗಾವಿ
5. ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಳಗಾವಿ.
6. ಉಪವಿಭಾಗಾಧಿಕಾರಿಗಳು, ಬೆಳಗಾವಿ, ಬೈಲಹೊಂಗಲ, ಚಿಕ್ಕೋಡಿ.
7. ಅಧೀಕ್ಷಕ ಅಭಿಯಂತರರು, ಹೆಸ್ಕಾಂ ಬೆಳಗಾವಿ,ಚಿಕ್ಕೋಡಿ.
8. ಜಂಟಿ ಕೃಷಿ ನಿರ್ದೇಶಕರು, ಬೆಳಗಾವಿ.
9. ಉಪ–ನಿರ್ದೇಶಕರು, ಪಶು ಪಾಲನೆ ಇಲಾಖೆ, ಬೆಳಗಾವಿ.
10. ಉಪ–ನಿರ್ದೇಶಕರು, ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಳಗಾವಿ.
11. ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳು, ಬೆಳಗಾವಿ .
12. ಅಪರ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳು, ಚಿಕ್ಕೋಡಿ
13. ಉಪ–ನಿರ್ದೇಶಕರು ತೋಟಗಾರಿಕೆ ಇಲಾಖೆಬೆಳಗಾವಿ.
14. ಉಪ–ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ದಿ ಇಲಾಖೆ ಬೆಳಗಾವಿ.
15. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಬೆಳಗಾವಿ.
16. ಉಪ–ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಳಗಾವಿ, ಚಿಕ್ಕೋಡಿ.
17. ಉಪ–ನಿರ್ದೇಶಕರು ವಾರ್ತಾ ಮತ್ತು ಪ್ರಚಾರ ಇಲಾಖೆ ಬೆಳಗಾವಿ.
18. ಅಧೀಕ್ಷಕ ಅಭಿಯಂತರರು, ಕನೀನಿನಿ ಜಿಆರ್‌ಬಿಸಿಸಿ ವೃತ್ತ ಹಿಡಕಲ್ ಡ್ಯಾಂ.
19. ಅಧೀಕ್ಷಕ ಅಭಿಯಂತರರು, ಕನೀನಿನಿ ಜಿಆರ್‌ಬಿಸಿಸಿ ವೃತ್ತ ನವಿಲುತೀರ್ಥ .
20. ಕಾರ್ಯನಿರ್ವಾಹಕ ಅಭಿಯಂತರು, ಗ್ರಾಕುನೀ& ನೈರ್ಮಲ್ಯ ವಿಭಾಗ, ಬೆಳಗಾವಿ, ಚಿಕ್ಕೋಡಿ.
21. ತಹಶೀಲ್ದಾರರು, ಬೆಳಗಾವಿ, ಖಾನಾಪೂರ, ಹುಕ್ಕೇರಿ, ಬೈಲಹೊಂಗಲ, ಕಿತ್ತೂರು, ಸವದತ್ತಿ, ರಾಮದುರ್ಗ, ಗೋಕಾಕ, ಚಿಕ್ಕೋಡಿ, ರಾಯಬಾಗ, ಅಥಣಿ, ಮೂಡಲಗಿ, ಕಾಗವಾಡ, ನಿಪ್ಪಾಣಿ.

ಸಭೆಯ ಪ್ರಾರಂಭದಲ್ಲಿ ಹಾಜರಿದ್ದ ಎಲ್ಲ ಅಧಿಕಾರಿಗಳವರನ್ನು ಅಪರ ಜಿಲ್ಲಾಧಿಕಾರಿಗಳು ಬೆಳಗಾವಿ ಇವರು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು. ಬೆಳಗಾವಿ ಜಿಲ್ಲೆಯ ಕುರಿತು ಸಾಮಾನ್ಯ ಮಾಹಿತಿ ಹಾಗೂ ಋತುಮಾನ ಪರಿಸ್ಥಿತಿಯ ಬಗ್ಗೆ ಸಭೆಗೆ ಮಾಹಿತಿಯನ್ನು ನೀಡಿದರು.

ಜಿಲ್ಲೆಯಲ್ಲಿ ಆಗಿರುವ ಮಳೆಯ ವಿವರವನ್ನು ಜಂಟಿ ಕೃಷಿ ನಿರ್ದೇಶಕರು, ಬೆಳಗಾವಿ ಇವರು ದಿನಾಂಕ:01.11.2019 ರಿಂದ08.11.2019ವರೆಗೆ 11.00 ಮಿಮೀ ವಾಡಿಕೆ ಮಳೆಯಾಗಿದ್ದು, 24 ಮಿಮೀ ವಾಸ್ತವಿಕ ಮಳೆ ಆಗಿರುತ್ತದೆ. ಶೇ 130ರಷ್ಟು ಮಳೆ ಆಗಿದೆ. 2019ನೇ ಹಿಂಗಾರು ಹಂಗಾಮಿನಲ್ಲಿ 3,20,202 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಿದ್ದು, ಇದರಲ್ಲಿ 22175 ಹೆಕ್ಟೇರ್ ಪ್ರದೇಶದಲ್ಲಿ

ಬಿತ್ತನೆಯಾಗಿದ್ದು, 6.9% ರಷ್ಟು ಬಿತ್ತನೆ ಆಗಿದೆ ಎಂದು ಸಭೆಗೆ ತಿಳಿಸಿದರು. ಜಿಲ್ಲೆಯಲ್ಲಿ 216793.20 ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆಗಳು, 4578.11 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳು ಹಾಗೂ 56.70 ಹೆಕ್ಟೇರ್ ಪ್ರದೇಶದಲ್ಲಿ ರೇಷ್ಮೆ ಬೆಳೆಗಳು ಹೀಗೆ ಒಟ್ಟು 2,21,428.01 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಗಳು ಹಾನಿಯಾಗಿರುವುದಾಗಿ ಜಂಟಿ ಸಮೀಕ್ಷಾ ವರದಿಯು ಸ್ವೀಕೃತವಾಗಿದೆ. ಸದರಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ಸಭೆಗೆ ವಿವರಿಸಿದರು.

ಜಿಲ್ಲಾಧಿಕಾರಿಗಳು ಮಾತನಾಡಿ, 2018-19ನೇ ಸಾಲಿನ ಹಿಂಗಾರು ಹಂಗಾಮಿಗೆ ಸಂಬಂಧಿಸಿದಂತೆ ಪರಿಹಾರ ತಂತ್ರಾಂಶದಲ್ಲಿ ರೈತರ ವಿವರಗಳನ್ನು ಇಂದೀಕರಣ ಮಾಡಲಾಗುತ್ತಿದೆ. ಒಟ್ಟು 74987 ರೈತರ ಪೈಕಿ ಇದುವರೆಗೆ 69303 ರೈತರ ವಿವರಗಳನ್ನು ಇಂದೀಕರಣ ಮಾಡಲಾಗಿದೆ. 5684 ರೈತರ ವಿವರಗಳನ್ನು ದಾಖಲಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಶೇ 92.42ರಷ್ಟು ಪ್ರಗತಿ ಸಾಧಿಸಲಾಗಿದೆ. 2019ನೇ ಮುಂಗಾರು ಹಂಗಾಮಿನಲ್ಲಿ ಅತಿವೃಷ್ಟಿ/ಪ್ರವಾಹದಿಂದ ಬೆಳೆಹಾನಿಗೊಳಗಾದ ರೈತರ ವಿವರಗಳನ್ನು ಪರಿಹಾರ ತಂತ್ರಾಂಶದಲ್ಲಿ ಇಂದೀಕರಣ ಮಾಡಲಾಗುತ್ತಿದೆ. ಒಟ್ಟು 80267 ರೈತರ ಪೈಕಿ ಇದುವರೆಗೆ 10007 ರೈತರ ವಿವರಗಳನ್ನು ಇಂದೀಕರಣ ಮಾಡಲಾಗಿದೆ. 70,260 ರೈತರ ವಿವರಗಳನ್ನು ದಾಖಲಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಜಿಲ್ಲೆಯಲ್ಲಿ ಒಟ್ಟು 03 ಪರಿಹಾರ ಕೇಂದ್ರಗಳು ಚಾಲ್ತಿಯಲ್ಲಿದೆ. 10 ಜಾನುವಾರು ಶಿಬಿರಗಳನ್ನು ತೆರೆಯಲಾಗಿದೆ. ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ ಬರಪರಿಹಾರ ಕಾರ್ಯಗಳಿಗಾಗಿ ಹಾಗೂ ಅತೀವೃಷ್ಟಿ/ಪ್ರವಾಹದ ಪರಿಹಾರಗಳಿಗಾಗಿ ಒಟ್ಟು ರೂ. 89198.51 ಲಕ್ಷ ಲಭ್ಯವಿದ್ದು, ಇದರಲ್ಲಿ ಜಿಲ್ಲೆಯ ಎಲ್ಲ ತಹಶೀಲ್ದಾರರಿಗೆ ಜಿಲ್ಲೆಯಲ್ಲಿ ತೆರೆಯಲಾದ ಪರಿಹಾರ ಕೇಂದ್ರಗಳ ನಿರ್ವಹಣೆ, ಜನ-ಜಾನುವಾರುಗಳ ರಕ್ಷಣೆಗಾಗಿ ಕೈಗೊಂಡ ರಕ್ಷಣಾ ಕಾರ್ಯಗಳಿಗೆ ತಗುಲಿದ ವೆಚ್ಚಗಳನ್ನು ಭರಿಸಲು ಹಾಗೂ ಅತೀವೃಷ್ಟಿ/ಪ್ರವಾಹದಿಂದ ಉಂಟಾಗಬಹುದಾದ ಮಾನವ, ಜೀವ ಹಾನಿ, ಜಾನುವಾರು, ಮನೆಗಳ ಹಾನಿಗಳಿಗೆ ಸರ್ಕಾರದ ಮಾರ್ಗಸೂಚಿಯ ಅನ್ವಯ ಪರಿಹಾರದ ಮೊತ್ತವನ್ನು ವಿತರಿಸಲು ಒಟ್ಟು ರೂ.16573.38ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಬಂದು ಬಿದ್ದಿರುವ ಗಿಡಗಂಟಿಗಳು, ಮಣ್ಣಿನ ಕೆಸರನ್ನು, ಕಸಕಡ್ಡಿ (Debris), ಪ್ರವಾಹದ ನೀರನ್ನು (Draining off flood water in affected area) ತೆರವುಗೊಳಿಸುವುದು ಹಾಗೂ ಮೃತ ದೇಹಗಳನ್ನು/ಶವಗಳನ್ನು ವಿಲೇವಾರಿ (Disposal of dead bodies/Carcases) ಮಾಡುವ ಕ್ರಮಗಳನ್ನು ಸಂಬಂಧಿಸಿದ ಆಯಾ ಗ್ರಾಮ ಪಂಚಾಯತಗಳ ಮೂಲಕ ಕೈಗೊಳ್ಳಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ಬೆಳಗಾವಿ ಇವರಿಗೆ ರೂ.200.00ಲಕ್ಷ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳಿಗೆ ರೂ.36.00ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ನೆರೆ ಹಾವಳಿಯಿಂದ ಅಲ್ಪಸ್ವಲ್ಪ ಹಾನಿಗೊಳಗಾದ (ಶೇ 15ರಿಂದ ಶೇ25ರಷ್ಟು) ಮನೆಗಳಿಗೆ ಸಂಬಂಧಿಸಿದಂತೆ ಹಾನಿಗೊಳಗಾದ ಪ್ರತಿ ಮನೆಗೆ ರೂ.25,000/-ಗಳಂತೆ ಪರಿಹಾರ ಧನವನ್ನು ನೀಡಲು ತಹಶೀಲ್ದಾರರಿಗೆ ಒಟ್ಟು ರೂ.11871.00 ಲಕ್ಷ ಹಾಗೂ ಪ್ರಧಾನ ವ್ಯವಸ್ಥಾಪಕರು ರಾಜೀವ ಗಾಂಧಿ ವಸತಿ ನಿಗಮ ನಿಯಮಿತ ಬೆಂಗಳೂರು ಇವರಿಗೆ ರೂ.11468.46ಲಕ್ಷ ಒಟ್ಟು ರೂ..23339.46 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಅತಿವೃಷ್ಟಿ/ಪ್ರವಾಹದಿಂದ ಹಾನಿಗೊಳಗಾದ ಸಂತ್ರಸ್ತರಿಗೆ ಉಚಿತವಾಗಿ ಆಹಾರ ಕಿಟ್‌ಗಳನ್ನು ವಿತರಿಸಲು ವಿಶೇಷ ಆಹಾರ ಪ್ಯಾಕೆಟ್‌ಗಳನ್ನು ಸಿದ್ದಪಡಿಸಿದ ಬಿಲ್ಲು ರೂ.241.22ಲಕ್ಷಗಳನ್ನು ವ್ಯವಸ್ಥಾಪಕರು, ಟಿಎಪಿಸಿಎಂಎಸ್ ಸಂಕೇಶ್ವರ ಹಾಗೂ ಸೀಮೆ ಎಣ್ಣೆ ಪೂರೈಕೆದಾರರಿಗೆ ಬಿಡುಗಡೆ ಮಾಡಲಾಗಿದೆ. ನದಿಗಳು ಅಪಾಯದ ಮಟ್ಟಕ್ಕಿಂತ ಹೆಚ್ಚಿಗೆ ಹರಿದಿದ್ದರಿಂದ ನಡುಗಡ್ಡೆಯಾದ ಪ್ರದೇಶಗಳಲ್ಲಿನ ಸಂತ್ರಸ್ತರಿಗೆ ಹೆಲಿಕಾಪ್ಟರಗಳ ಮೂಲಕ ಆಹಾರದ ಪೊಟ್ಟಣ, ಟವೆಲ್, ಮೇಣದ ಬತ್ತಿ, ಬೆಂಕಿ ಪೊಟ್ಟಣಗಳನ್ನು, ನೀರನ್ನು ಪೂರೈಸಿದ ಬಗ್ಗೆ ಪೂರೈಕೆದಾರರಿಗೆ ಮೊತ್ತವನ್ನು ಸಂದಾಯ ಮಾಡಲು ಉಪನಿರ್ದೇಶಕರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಬೆಳಗಾವಿ ಇವರಿಗೆ ರೂ. 6,91,840/-ಗಳನ್ನು ಬಿಡುಗಡೆ ಮಾಡಲಾಗಿದೆ. 2019ರ ಅಗಸ್ಟ ತಿಂಗಳಿನಲ್ಲಿ ಅತಿವೃಷ್ಟಿಯಿಂದ ಹಾನಿಯಾದ ವಿದ್ಯುತ ಮಗ್ಗದ ಪ್ರತಿ ಫಲಾನುಭವಿಯಾದ ಮಗ್ಗದ ಮಾಲೀಕರಿಗೆ

ಸಿದ್ಧಪಡಿಸಲಾಗುತ್ತಿರುವ ವಸ್ತುಗಳ ಹಾನಿಗೆ ಒಟ್ಟು ರೂ. 25,000/-ಗಳ ಪರಿಹಾರ ವಿತರಿಸಲು ಜಿಲ್ಲೆಯ ತಹಶೀಲ್ದಾರರಿಗೆ ಒಟ್ಟು ರೂ. 115.25 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಮಾನ್ಯ ಸರ್ಕಾರದ ಆದೇಶ ಕ್ರ:ಆರ್‌ಡಿ 131 ಟಿಎನ್‌ಆರ್ 2019 ದಿನಾಂಕ:30.09.2019ರಡಿ ಸರ್ಕಾರದ ಆದೇಶ 2019ರ ಅಗಸ್ಟ ತಿಂಗಳಿನಲ್ಲಿ ಪ್ರವಾಹದಿಂದ ಹಾನಿಗೊಳಗಾದ ಮೂಲಭೂತ ಸೌಕರ್ಯಗಳ ಪುನರ್ ಸ್ಥಾಪನೆ ಮತ್ತು ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲು ರೂ.200.00ಕೋಟಿ ಅನುದಾನ ಬಿಡುಗಡೆಯಾಗಿದೆ. ಪಂಚಾಯತ ರಾಜ ಇಂಜಿನಿಯರಿಂಗ ಇಲಾಖೆ, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ, ಹೆಸ್ಕಾಂ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣ ಇಲಾಖೆಗಳಿಂದ ಕ್ರಿಯಾ ಯೋಜನೆಯನ್ನು ಪಡೆಯಲಾಗಿದ್ದು, ಪ್ರವಾಹದಿಂದ ಹಾನಿಗೊಳಗಾದ ಮೂಲಭೂತ ಸೌಕರ್ಯಗಳ ಪುನರ್ ಸ್ಥಾಪನೆ ಮತ್ತು ದುರಸ್ತಿ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಪ್ರಸ್ತುತ ದಿನಾಂಕ:21.10.2019ರಂದು ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಬೆಂಗಳೂರು ಇವರ ಅಧ್ಯಕತೆಯಲ್ಲಿ ಜರುಗಿದ ವಿಡಿಯೋ ಸಂವಾದದಲ್ಲಿ ನಿರ್ದೇಶಿಸಿದಂತೆ ಹಾಗೂ ಸರ್ಕಾರದ ಆದೇಶ ದಿನಾಂಕ:30.09.2019ರಡಿ ಸರ್ಕಾರದ ಆದೇಶ ದಿನಾಂಕ:19.10.2019ರಡಿ ಮೂಲಭೂತ ಸೌಕರ್ಯಗಳಾದ ರಸ್ತೆ, ಸೇತುವೆ, ಅಂಗನವಾಡಿ ಕಟ್ಟಡಗಳು, ಕುಡಿಯುವ ನೀರು ಸರಬರಾಜು ಯೋಜನೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡಗಳ ಕಾಮಗಾರಿಗಳನ್ನು ಕೈಗೊಳ್ಳಲು ಆದೇಶಿಸಲಾಗಿದೆ. ಆದ್ದರಿಂದ ಮೇಲೆ ವಿವರಿಸಿದ ಕಾಮಗಾರಿಗಳ ಅಂದಾಜು ಪತ್ರಿಕೆಗಳನ್ನು ಸಲ್ಲಿಸಲು ಸಂಬಂಧಿಸಿದ ಅನುಷ್ಠಾನಾಧಿಕಾರಿಗಳಿಗೆ ತಿಳಿಸಲಾಗಿತ್ತು. ಪ್ರವಾಹದಿಂದ ಹಾನಿಗೊಳಗಾದ ರೂ.40.00ಲಕ್ಷಗಳ ಮೊತ್ತದಲ್ಲಿ 20 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡಗಳ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆಯನ್ನು ನೀಡಿ, ಶೇ 50ರಷ್ಟು ರೂ.20.00ಲಕ್ಷಗಳನ್ನು ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜನೀಯರಿಂಗ ವಿಭಾಗ ಧಾರವಾಡ ಇವರಿಗೆ ಬಿಡುಗಡೆ ಮಾಡಲಾಗಿದೆ. ಬೆಳಗಾವಿ, ಖಾನಾಪೂರ, ಬೈಲಹೊಂಗಲ, ಸವದತ್ತಿ, ರಾಮದುರ್ಗ ತಾಲೂಕುಗಳಲ್ಲಿ ಪ್ರವಾಹದಿಂದ ಹಾನಿಗೊಳಗಾದ 95 ಕುಡಿಯುವ ನೀರಿನ ದುರಸ್ತಿ ಕಾಮಗಾರಿಗಳನ್ನು ರೂ.80.40ಲಕ್ಷಗಳ ಮೊತ್ತದ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆಯನ್ನು ನೀಡಿ, 94 ಕಾಮಗಾರಿಗಳ ಅಂದಾಜು ಪತ್ರಿಕೆಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿ, ಒಟ್ಟು ರೂ.80.40 ಲಕ್ಷಗಳ ಮೊತ್ತದ ಶೇ 50 ರಷ್ಟು ರೂ.40.20 ಲಕ್ಷಗಳನ್ನು ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಬೆಳಗಾವಿ ಇವರಿಗೆ ಬಿಡುಗಡೆ ಮಾಡಲಾಗಿದೆ. ಜಿಲ್ಲೆಯಲ್ಲಿ ಪ್ರವಾಹದಿಂದ ಹಾನಿಗೊಳಗಾದ ಸರ್ಕಾರಿ ಪ್ರೌಢ, ಪ್ರಾಥಮಿಕ ಶಾಲೆಗಳ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲು ಒಟ್ಟು ರೂ.6182.34 ಲಕ್ಷಗಳ ಮೊತದಲ್ಲಿ 1888 ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆಯನ್ನು ಹಾಗೂ ಕಾಮಗಾರಿಗಳ ಅಂದಾಜು ಪತ್ರಿಕೆಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿ, ಒಟ್ಟು ಮೊತ್ತದ ಶೇ 50ರಷ್ಟು ರೂ.3091.17 ಲಕ್ಷಗಳ ಮೊತ್ತವನ್ನು ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ಅದೇ ರೀತಿ ಜಿಲ್ಲೆಯಲ್ಲಿ ಪ್ರವಾಹದಿಂದ ಹಾನಿಗೊಳಗಾದ ಅಂಗನವಾಡಿ ಕಟ್ಟಡಗಳ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲು ಒಟ್ಟು ರೂ.668.58 ಲಕ್ಷಗಳ ಮೊತದಲ್ಲಿ 447 ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆಯನ್ನು ಹಾಗೂ ಕಾಮಗಾರಿಗಳ ಅಂದಾಜು ಪತ್ರಿಕೆಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿ, ಒಟ್ಟು ಮೊತ್ತದ ಶೇ 50ರಷ್ಟು ರೂ.334.29 ಲಕ್ಷಗಳ ಮೊತ್ತವನ್ನು ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ಪಿಡಿ ಖಾತೆಯಲ್ಲಿ ಲಭ್ಯವಿರುವ ರೂ.45166.37 ಲಕ್ಷ ಮೊತ್ತವನ್ನು ಅತೀವೃಷ್ಟಿ/ಪ್ರವಾಹದ ಪರಿಹಾರಗಳಿಗಾಗಿ ಬಳಸಿಕೊಳ್ಳಲಾಗುವುದು. ಸದರಿ ಅನುದಾನವನ್ನು ಅವಶ್ಯಕತೆಗೆ ಅನುಸಾರವಾಗಿ ಬಳಸಿಕೊಳ್ಳಲಾಗುವುದು ಎಂದು ಸಭೆಗೆ ವಿವರಿಸಿದರು.

ಮುಂದುವರೆದು, ಅತಿವೃಷ್ಟಿ/ಪ್ರವಾಹದಿಂದಾಗಿ ರಾಜೀವ ಗಾಂಧಿ ವಸತಿ ನಿಗಮ ನಿಯಮಿತ ತಂತ್ರಾಂಶದಲ್ಲಿ ಒಟು43438ಮನೆಗಳ ವಿವರಗಳನ್ನು ದಾಖಲಿಸಿ ಈ ಕಚೇರಿಯಿಂದ ಅನುಮೋದನೆಯಾಗಿದ್ದು, ಇವುಗಳಲ್ಲಿ 39654 ಮನೆಗಳಿಗೆ ಒಟ್ಟು ರೂ.173.87 ಕೋಟಿ ಪರಿಹಾರ ವಿತರಿಸಲಾಗಿದೆ. 91.28 % ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ಸಭೆಗೆ ವಿವರಿಸಿದರು.

ಈ ಕೆಳಕಂಡ ಕ್ರಮಗಳನ್ನು ಕೈಕೊಳ್ಳುವಂತೆ ಸಭೆಗೆ ಹಾಜರಿದ್ದ ಎಲ್ಲ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.

1. ಜಿಲ್ಲೆಯ ಎಲ್ಲ ತಹಶೀಲ್ದಾರರು ಅತಿವೃಷ್ಟಿ/ಪ್ರವಾಹದಿಂದ ಹಾನಿಗೊಳಗಾದ ಮನೆಗಳಿಗೆ ಸಂಬಂಧಿಸಿದಂತೆ, ರಾಜೀವ ಗಾಂಧಿ ವಸತಿ ನಿಗಮ ನಿಯಮಿತ ಇವರ ತಂತ್ರಾಂಶದಲ್ಲಿ "ಸಿ" ವರ್ಗಿಕರಣದ ಮನೆಗಳಿಗೆ ಸಂಬಂಧಿಸಿದಂತೆ ಪಟ್ಟಿಯನ್ನು ಜನರೇಟ್ ಮಾಡಿ, ಅರ್ಹ ಫಲಾನುಭವಿಗಳ ಖಾತೆಗೆ ಪರಿಹಾರವನ್ನು ವಿತರಣೆ ಮಾಡಲು ಕ್ರಮ ಕೈಗೊಳ್ಳಬೇಕು.
2. "ಬಿ" ವರ್ಗೀಕರಣದ ಮನೆಗಳಿಗೆ ಸಂಬಂಧಿಸಿದಂತೆ 2ನೇ ಹಂತದ ಪರಿಹಾರ ವಿತರಣೆ ಮಾಡಲು ಪಟ್ಟಿಯನ್ನು ತಹಶೀಲ್ದಾರರು, ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕು ಪಂಚಾಯತ ಇವರು ಜಂಟಿಯಾಗಿ ಸಹಿಯನ್ನು ಮಾಡಬೇಕು. ಸದರಿ ಪಟ್ಟಿಗೆ ಉಪವಿಭಾಗಾಧಿಕಾರಿಗಳು ಕೌಂಟರ ಸಹಿಯನ್ನು ಮಾಡಿ, ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬೇಕು. ಜಿಪಿಎಸ್ ಟ್ಯಾಗಿಂಗ ಮಾಡಲು ಬಾಕಿ ಇರುವ ಪ್ರಕರಣಗಳನ್ನು ಹಾಗೂ ತಹಶೀಲ್ದಾರ ಅಡಿಟ್ ಮಾಡಲು ಬಾಕಿಯಿರುವ ಎಲ್ಲ ಪ್ರಕರಣಗಳನ್ನು ಇತ್ಯರ್ಥಗೊಳಿಸಬೇಕು.

3. ಸಂಬಂಧಿಸಿದ ತಹಶೀಲ್ದಾರರು ಎನ್‌ಡಿಆರ್‌ಎಫ್/ಎಸ್‌ಡಿಆರ್‌ಎಫ್ ಮಾರ್ಗಸೂಚಿಯನ್ವಯ ಅರ್ಹ ಸಂತ್ರಸ್ತ ಕುಟುಂಬವನ್ನು ಆಯ್ಕೆ ಮಾಡಿ, ಪರಿಹಾರ ಧನವನ್ನು ವಿತರಿಸಲು ನಿಯಮಾನುಸಾರ ಕ್ರಮ ಜರುಗಿಸಿ, ಪರಿಹಾರವನ್ನು ವಿತರಣೆ ಮಾಡಿದ ಬಗ್ಗೆ ದೃಢೀಕೃತ ಪೋಟೋಗಳ ದಾಖಲೆಗಳನ್ನು ನಿರ್ವಹಿಸತಕ್ಕದ್ದು. ಬಿಡುಗಡೆ ಮಾಡಿದ ಅನುದಾನವನ್ನು ಸರ್ಕಾರವು ಕಾಲ-ಕಾಲಕ್ಕೆ ಹೊರಡಿಸಿದ ಮಾರ್ಗಸೂಚಿಗಳನ್ವಯ ಅರ್ಹ ಸಂತ್ರಸ್ತರಿಗೆ ಪರಿಹಾರ ಧನವನ್ನು ವಿತರಣೆ ಮಾಡತಕ್ಕದ್ದು. ಒಂದು ವೇಳೆ ಅರ್ಹ ಸಂತ್ರಸ್ತ ಕುಟುಂಬವನ್ನು ಆಯ್ಕೆ ಮಾಡುವಲ್ಲಿ ಹಾಗೂ ಪರಿಹಾರ ಧನ ವಿತರಣೆ ಮಾಡಲು ಯಾವುದೇ ಲೋಪದೋಷಗಳು ಉಂಟಾದಲ್ಲಿ ಸಂಬಂಧಿಸಿದ ತಹಶೀಲ್ದಾರರನ್ನು ನೇರವಾಗಿ ಜವಾಬ್ದಾರರನ್ನಾಗಿ ಮಾಡಲಾಗುವದು. ಜಿಲ್ಲೆಯ ಎಲ್ಲ ಉಪವಿಭಾಗಾಧಿಕಾರಿಗಳು ಅರ್ಹ ಸಂತ್ರಸ್ತ ಕುಟುಂಬಗಳಿಗೆ ಪರಿಹಾರ ಸಂದಾಯವಾಗುತ್ತಿರುವ ಬಗ್ಗೆ, ಸರ್ಕಾರದ ನಿರ್ದೇಶನಗಳು ಪಾಲನೆಯಾಗುತ್ತಿರುವ ಬಗ್ಗೆ ಮೇಲ್ವಿಚಾರಣೆಯನ್ನು ಕೈಗೊಳ್ಳತಕ್ಕದ್ದು.

4. ಅತಿವೃಷ್ಟಿ/ಪ್ರವಾಹದಿಂದಾಗಿ ಉಂಟಾದ ಹಾನಿಗಳಿಗೆ ಸಂಬಂಧಿಸಿದಂತೆ, ಪರಿಹಾರ ಧನ ವಿತರಿಸಲು ಬಾಕಿಯಿರುವ ಎಲ್ಲ ಪ್ರಕರಣಗಳನ್ನು ನಿಯಮಾನುಸಾರ ಇತ್ಯರ್ಥಪಡಿಸಿ, ಸೂಕ್ತ ಪರಿಹಾರ ಧನವನ್ನು ವಿತರಿಸಲು ಜಿಲ್ಲೆಯ ಎಲ್ಲ ಉಪವಿಭಾಗಾಧಿಕಾರಿಗಳು/ತಹಶೀಲ್ದಾರರು ಕ್ರಮ ಜರುಗಿಸತಕ್ಕದ್ದು.

5. ಪಂಚಾಯತ ರಾಜ್ ಇಂಜನೀರಿಂಗ ಇಲಾಖೆಯ ಅಧಿಕಾರಿಗಳು ಸಾರ್ವಜನಿಕ ಆಸ್ತಿಗಳ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲು ತ್ವರಿತಗತಿಯಲ್ಲಿ ಅಂದಾಜು ಪತ್ರಿಕೆಗಳನ್ನು ಜಿಲ್ಲಾಧಿಕಾರಿಗಳಿಗೆ

ಸಲ್ಲಿಸಿ, ಅನುಮೋದನೆಯನ್ನು ಪಡೆದುಕೊಂಡು ಕಾಮಗಾರಿಗಳನ್ನು ತೀವ್ರಗತಿಯಲ್ಲಿ ಪೂರ್ಣಗೊಳಿಸಬೇಕು.

6. 2018–19ನೇ ಸಾಲಿನ ಹಿಂಗಾರು ಹಂಗಾಮಿಗೆ ಸಂಬಂಧಿಸಿದಂತೆ ಹಾಗೂ 2019ನೇ ಮುಂಗಾರು ಹಂಗಾಮಿನಲ್ಲಿ ಅತಿವೃಷ್ಟಿ/ಪ್ರವಾಹದಿಂದ ಬೆಳೆ ಹಾನಿಗಳಿಗೆ ಸಂಬಂಧಿಸಿದಂತೆ ಪರಿಹಾರ ತಂತ್ರಾಂಶದಲ್ಲಿ ರೈತರ ವಿವರಗಳನ್ನು ಇಂದೀಕರಣ ಕಾರ್ಯವನ್ನು ಆದಷ್ಟು ಬೇಗನೆ ಪೂರ್ಣಗೊಳಿಸಲು ಸೂಚನೆಗಳನ್ನು ನೀಡಲಾಯಿತು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಜಲಸಂಪನ್ಮೂಲ ಇಲಾಖೆ ಹಾಗೂ ಬೆಳಗಾವಿ
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

**ದಿನಾಂಕ: 11-11-2019 ರಂದು ಶ್ರೀ ರಾಜೇಂದರ್ ಕುಮಾರ್ ಕಟಾರಿಯಾ, ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು. ಚಾಮರಾಜನಗರ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ಸಭಾ ನಡವಳಿ.**

ಹಾಜರಿದ್ದವರು:

1. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು. ಚಾಮರಾಜನಗರ
2. ಮಾನ್ಯ ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಾಮರಾಜನಗರ
4. ಉಪವಿಭಾಗಾಧಿಕಾರಿ, ಕೊಳ್ಳೇಗಾಲ ಉಪವಿಭಾಗ, ಕೊಳ್ಳೇಗಾಲ
5. ಜಿಲ್ಲಾ ಮಟ್ಟದ ಅಧಿಕಾರಿಗಳು, ಚಾಮರಾಜನಗರ ಜಿಲ್ಲೆ

ಮಾನ್ಯ ಜಿಲ್ಲಾಧಿಕಾರಿಗಳು, ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು. ಚಾಮರಾಜನಗರ ರವರಿಗೆ ಮತ್ತು ಸಭೆಗೆ ಹಾಜರಿದ್ದ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸ್ವಾಗತವನ್ನು ಕೋರಿದರು.

➢ ಮಳೆ ವರದಿ

ಚಾಮರಾಜನಗರ ಜಿಲ್ಲೆಯಲ್ಲಿ ಜಿಲ್ಲಾದ್ಯಂತ ನವೆಂಬರ್ ಮಾಹೆಯ ವರೆಗೆ 733.7 ಮಿ.ಮೀ ವಾಡಿಕೆ ಮಳೆ ಇದ್ದು, ಪ್ರಸಕ್ತ 865.9 ಮಿ.ಮೀ ಹೆಚ್ಚು ಮಳೆಯಾಗಿರುತ್ತದೆ ಎಂದು ಮಾನ್ಯ ಜಿಲ್ಲಾಧಿಕಾರಿಗಳು ತಿಳಿಸಿದರು.

➢ ನೀರಾವರಿ ಇಲಾಖೆ

ಮಾನ್ಯ ಉಸ್ತುವಾರಿ ಕಾರ್ಯದರ್ಶಿ ರವರು ಕಾರ್ಯಪಾಲಕ ಅಭಿಯಂತರರು, ಕಬಿನಿ ನಾಲಾ ವಿಭಾಗ, ಕೊಳ್ಳೇಗಾಲ ರವರಿಗೆ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಸರಗೂರು ಗ್ರಾಮದ ಬಳಿ ಕಾವೇರಿ ನದಿಯಿಂದ ನೀರನ್ನು ಎತ್ತಿ ಗುಂಡಾಲ್ ಜಲಾಶಯದ ಬಾಧಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸುವ ಹಾಗೂ ಕೊಳ್ಳೇಗಾಲ ತಾಲ್ಲೂಕಿನ ಎರಡು ಕೆರಗಳಿಗೆ ಕುಡಿಯುವ ನೀರನ್ನು ತುಂಬಿಸುವ ಕಾಮಗಾರಿಯ ಕಾರ್ಯಾದೇಶವನ್ನು ಯಾವಾಗ ನೀಡಲಾಯಿತು? ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿರುವ ಟೆಂಡರ್ ಅವಧಿ ಎಷ್ಟು? ಪ್ರಸ್ತುತ ಕಾಮಗಾರಿಯು ಯಾವ ಹಂತದಲ್ಲಿರುತ್ತದೆ ಎಂದು ಪ್ರಶ್ನಿಸಿದರು.

ಕಾರ್ಯಪಾಲಕ ಅಭಿಯಂತರರು, ಕಬಿನಿ ನಾಲಾ ವಿಭಾಗ, ಕೊಳ್ಳೇಗಾಲ ರವರು, ನಂ.2 ಕಬಿನಿ ನಾಲಾ ವಿಭಾಗ, ಕೊಳ್ಳೇಗಾಲ ವ್ಯಾಪ್ತಿಯಲ್ಲಿ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಸರಗೂರು ಗ್ರಾಮ ಬಳಿ ಕಾವೇರಿ ನದಿಯಿಂದ ನೀರನ್ನು ಎತ್ತಿ ಗುಂಡಾಲ್ ಜಲಾಶಯದ ಬಾಧಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರೊದಗಿಸುವ ಹಾಗೂ ಕೊಳ್ಳೇಗಾಲ ತಾಲ್ಲೂಕಿನ ಎರಡು ಕೆರೆಗಳಿಗೆ ಕುಡಿಯುವ ನೀರನ್ನು ತುಂಬಿಸುವ ಕಾಮಗಾರಿಯ ಅಂದಾಜು ಪಟ್ಟಿಯು ಕೇಂದ್ರ ಕಛೇರಿಯಲ್ಲಿ ರೂ. 129.00 ಕೋಟಿಗಳಿಗೆ ತಾಂತ್ರಿಕ ಮಂಜೂರಾತಿಯಾಗಿರುತ್ತದೆ ಹಾಗೂ ಸದರಿ ಕಾಮಗಾರಿಗೆ ಟೆಂಡರ್ ಪ್ರಕಟಣೆಯನ್ನು ದಿನಾಂಕ: 16-02-2018 ರಲ್ಲಿ ಆಹ್ವಾನಿಸಲಾಗಿತ್ತು. ಈ ಕಾಮಗಾರಿಗೆ ಟೆಂಡರ್ ಸಲ್ಲಿಸಿದ್ದ ಗುತ್ತಿಗೆದಾರರಾದ ಮೆಸ್ಸರ್ಸ್, ಮೇಘಾ ಇಂಜಿನಿಯರಿಂಗ್ ಅಂಡ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್, ಹೈದ್ರಾಬಾದ್ ರವರ ಟೆಂಡರ್ ಅನುಮೋದನೆಯಾಗಿ, ದಿನಾಂಕ: 07-06-2019 ರಂದು ಸದರಿ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಿದ್ದು,

ಸದರಿ ಕಾಮಗಾರಿಯ ಪೈಪ್‌ಲೈನ್ ಹಾದು ಹೋಗುವ ಮಾರ್ಗದ ಸರ್ವೆ ಕಾರ್ಯ ಪ್ರಗತಿಯಲ್ಲಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಕೊಳ್ಳೇಗಾಲ ತಾಲ್ಲೂಕಿನ ಸರಗೂರು ಗ್ರಾಮದ ಬಳಿ ಕಾವೇರಿ ನದಿಯಿಂದ ನೀರನ್ನು ಎತ್ತಿ ಗುಂಡಾಲ್ ಜಲಾಶಯದ ಬಾಧಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸುವ ಹಾಗೂ ಕೊಳ್ಳೇಗಾಲ ತಾಲ್ಲೂಕಿನ ಎರಡು ಕೆರಗಳಿಗೆ ಕುಡಿಯುವ ನೀರನ್ನು ತುಂಬಿಸುವ ಕಾಮಗಾರಿಯನ್ನು ವಿಳಂಬಕ್ಕೆ ಆಸ್ಪದ ನೀಡದೆ ಪೂರ್ಣಗೊಳಿಸಲು ಶೀಘ್ರವಾಗಿ ಅಗತ್ಯ ಕ್ರಮವಹಿಸುವಂತೆ ಸೂಚಿಸಿದರು.

(ಕ್ರಮ: ಕಾರ್ಯಪಾಲಕ ಅಭಿಯಂತರರು, ನಂ.2 ಕಬಿನಿ ನಾಲಾ ವಿಬಾಗ, ಕೊಳ್ಳೇಗಾಲ)

➢ **ಕೃಷಿ ಇಲಾಖೆ**

ಕೃಷಿ ಇಲಾಖೆಯ ಪ್ರಗತಿ ಬಗ್ಗೆ ಮಾಹಿತಿ ನೀಡುವಂತೆ ಕಾರ್ಯದರ್ಶಿಗಳು ಕೃಷಿ ಇಲಾಖೆಯ ಜಂಟಿ ನಿರ್ದೇಶಕರಿಗೆ ತಿಳಿಸಿದಾಗ, ಜಂಟಿ ನಿರ್ದೇಶಕರು, 2019-20 ನೇ ಸಾಲಿನ ಹಿಂಗಾರು ಹಂಗಾಮಿನಲ್ಲಿ 40690 ಹೆಕ್ಟೇರ್ ಗುರಿಯಿದ್ದು, ಇದುವರೆವಿಗೆ 19845 ಹೆಕ್ಟೇರ್ ಬಿತ್ತನೆಯಾಗಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕಾರ್ಯದರ್ಶಿಗಳು, ಜಂಟಿ ನಿರ್ದೇಶಕರಿಗೆ ಚಾಮರಾಜನಗರ ಜಿಲ್ಲೆಯಲ್ಲಿ ವಾಡಿಕೆ ಮಳೆಗಿಂತ ಹೆಚ್ಚಾಗಿ ಮಳೆಯಾಗಿದ್ದರೂ ಚಾಮರಾಜನಗರ ತಾಲ್ಲೂಕಿನಲ್ಲಿ 19.7% ಮಾತ್ರ ಬಿತ್ತನೆಯಾಗಿರುತ್ತದೆ ಎಂದು ವಿಷಾದ ವ್ಯಕ್ತಪಡಿಸಿದರು ಹಾಗೂ ಈ ಬಗ್ಗೆ ಹೆಚ್ಚಿನ ಗಮನಹರಿಸಿ, ಬಿತ್ತನೆ ಪ್ರಗತಿ ವರದಿಯನ್ನು ಸರಿಪಡಿಸಿ ಕೊಡುವಂತೆ ಸೂಚಿಸಿದರು.

ಮುಂದುವರೆದು, 2019ರ ಹಿಂಗಾರು ಹಂಗಾಮಿನಲ್ಲಿ ಜಿಲ್ಲೆಯಲ್ಲಿ ಅಕ್ಟೋಬರ್ ಮಾಹೆಯಲ್ಲಿ 4454 ಮೆಟ್ರಿಕ್ ಟನ್, ನವೆಂಬರ್ ಮಾಹೆಯಲ್ಲಿ 4149 ಮೆ.ಟನ್ ಹಾಗೂ ಡಿಸೆಂಬರ್ ಮಾಹೆಯಲ್ಲಿ 4444 ಮೆ.ಟನ್ ರಸಗೊಬ್ಬರದ ಬೇಡಿಕೆ ಇದ್ದು, ಪ್ರಸ್ತುತ 4,760 ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನು ಸಾಕಷ್ಟಿದ್ದು, ರಸಗೊಬ್ಬರಗಳ ಕೊರತೆ ಇರುವುದಿಲ್ಲ ಎಂದು ಜಿಲ್ಲಾಧಿಕಾರಿಗಳು, ಸಭೆಗೆ ತಿಳಿಸಿದರು.

ಮಾನ್ಯ ಕಾರ್ಯದರ್ಶಿಗಳು, ಜಂಟಿ ನಿರ್ದೇಶಕರಿಗೆ ಚಾಮರಾಜನಗರ ಜಿಲ್ಲೆಯಲ್ಲಿ ವಾಡಿಕೆ ಮಳೆಗಿಂತ ಹೆಚ್ಚಾಗಿ ಮಳೆಯಾಗಿರುವುದರಿಂದ ವ್ಯವಸಾಯ ಮಾಡಲು ಹೆಚ್ಚಿನ ಬಿತ್ತನೆ ಬೀಜ, ರಸಗೊಬ್ಬರದ ಅವಶ್ಯಕತೆ ಹೆಚ್ಚಾಗಿರುತ್ತದೆ. ಆದ್ದರಿಂದ ಬಿತ್ತನೆ ಬೀಜ, ರಸಗೊಬ್ಬರದ ದಾಸ್ತಾನಿನ ಕೊರತೆ ಉಂಟಾಗದಂತೆ ಕ್ರಮವಹಿಸಲು ಸೂಚಿಸಿದರು.

**(ಕ್ರಮ: ಜಂಟಿ ಕೃಷಿ ನಿರ್ದೇಶಕರು, ಚಾಮರಾಜನಗರ)**

➢ **ಕರ್ನಾಟಕ ರೈತ ಸುರಕ್ಷ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆ**

ಕರ್ನಾಟಕ ರೈತ ಸುರಕ್ಷ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯಡಿ 2016-17ನೇ ಸಾಲಿನ ಹಿಂಗಾರು ಹಂಗಾಮಿನಲ್ಲಿ 49132 ರೈತ ಫಲಾನುಭವಿಗಳಿಗೆ 2548.35 ಲಕ್ಷ ವಿಮಾ ಮೊತ್ತ ಜಾರಿಯಾಗಿದ್ದು, ಅದರಲ್ಲಿ 17013 ರೈತ ಫಲಾನುಭವಿಗಳಿಗೆ 1194.25 ಲಕ್ಷ ರೂಗಳ ವಿಮಾ ಮೊತ್ತ ಪಾವತಿಯಾಗಿರುತ್ತದೆ. ಉಳಿದಂತೆ 1354.10 ಲಕ್ಷ ವಿಮಾ ಮೊತ್ತ ರೈತ ಫಲಾನುಭವಿಗಳಿಗೆ ಪಾವತಿಯಾಗಬೇಕಾಗಿದ್ದು, ಕೃಷಿ ಆಯುಕ್ತರ ಹೆಸರಿನಲ್ಲಿ ESCROW account ತೆರೆಯಲಾಗಿರುತ್ತದೆ. ಈ ಸಂಬಂಧ ಕಂದಾಯ ಇಲಾಖೆ ಹಾಗೂ ಕೃಷಿ ಇಲಾಖೆಯ ಜಂಟಿ ಕಾರ್ಯಾಚರಣೆಯಿಂದಾಗಿ ರೈತ ಫಲಾನುಭವಿಗಳಿಂದ ಅಗತ್ಯ

ದಾಖಲಾತಿಗಳನ್ನು ಸಂಗ್ರಹಿಸಿ, ಒಂದು ತಿಂಗಳೊಳಗಾಗಿ ಸಲ್ಲಿಸುವಂತೆ ಈಗಾಗಲೇ ಸಂಬಂಧಿಸಿದ ತಾಲ್ಲೂಕು ಮಟ್ಟದ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಹಾಗೂ ಕೃಷಿ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ ಎಂದು ಮಾನ್ಯ ಜಿಲ್ಲಾಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

ಮಾನ್ಯ ಕಾರ್ಯದರ್ಶಿಗಳು ರೈತ ಫಲಾನುಭವಿಗಳಿಂದ ಅಗತ್ಯ ದಾಖಲಾತಿಗಳನ್ನು ಒಂದು ತಿಂಗಳೊಳಗೆ ಸಂಗ್ರಹಿಸಿ, ರೈತ ವಿಮಾ ಫಲಾನುಭವಿಗಳ ಪಟ್ಟಿಯನ್ನು ಸಲ್ಲಿಸುವಂತೆ ಹಾಗೂ 2018-19 ನೇ ಸಾಲಿನ ಹಿಂಗಾರು ಹಂಗಾಮಿನಲ್ಲಿ 10660 ರೈತ ಫಲಾನುಭವಿಗಳಿಗೆ 363.67 ಲಕ್ಷ ವಿಮಾ ಮೊತ್ತ ಜಾರಿಯಾಗಿದ್ದು, ಈ ಪೈಕಿ 10282 ರೈತ ಫಲಾನುಭವಿಗಳಿಗೆ 352.79 ಲಕ್ಷ ವಿಮಾ ಮೊತ್ತ ಸದರಿ ವಿಮಾ ಕಂಪೆನಿ ಯವರಿಂದ ಪಾವತಿಯಾಗಿದ್ದು, 10.88 ಲಕ್ಷ ವಿಮ್ಮಾ ಮೊತ್ತವು ಬಾಕಿ ಇರುತ್ತದೆ ಎಂದು ಸಭೆಯಲ್ಲಿ ತಿಳಿಸುತ್ತಾ, ಈ ಬಗ್ಗೆ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಚುರ ಪಡಿಸಲು ಸೂಚಿಸಿದರು.

**( ಕ್ರಮ: ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಚಾಮರಾಜನಗರ)**

- **<u>ಪ್ರಧಾನ ಮಂತ್ರಿ ಕೃಷಿ ಸಮ್ಮಾನ್ ನಿಧಿ ಯೋಜನೆ</u>**

ಚಾಮರಾಜನಗರ ಜಿಲ್ಲೆಯಲ್ಲಿ 2,12,196 ಜನ ರೈತರಿದ್ದು, ಅವರಲ್ಲಿ 1,10,934 ಜನ ರೈತರು ಪ್ರಧಾನ ಮಂತ್ರಿ ಕೃಷಿ ಸಮ್ಮಾನ್ ಯೋಜನೆಯಡಿ ಘೋಷಣೆಗಳನ್ನು ಸಲ್ಲಿಸಿರುತ್ತಾರೆ ಎಂದು ಮಾನ್ಯ ಜಿಲ್ಲಾಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

ಮಾನ್ಯ ಕಾರ್ಯದರ್ಶಿಗಳು, ಪ್ರಧಾನ ಮಂತ್ರಿ ಕೃಷಿ ಸಮ್ಮಾನ್ ಯೋಜನೆಯಡಿಯಲ್ಲಿ 94,292 ಜನ ರೈತರು ಅನರ್ಹ ಫಲಾನುಭವಿಗಳು ಎಂದು ನಮೂದಿಸಿರುವ ಬಗ್ಗೆ ಪುನರ್ ಪರಿಶೀಲನೆ ನಡೆಸಿ, ಹೆಚ್ಚಿನ ರೈತರಿಗೆ ಈ ಯೋಜನೆಯ ಸೌಲಭ್ಯ ದೊರಕುವಂತೆ ಕ್ರಮವಹಿಸಬೇಕೆಂದು ಸೂಚಿಸಿದರು.

**( ಕ್ರಮ: ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಚಾಮರಾಜನಗರ)**

- **<u>ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ</u>**

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಜಿ.ಎಸ್. ಬೆಟ್ಟ ವಲಯದ ವ್ಯಾಪ್ತಿಯಲ್ಲಿ ಮಾನವ – ಹುಲಿ ಸಂಘರ್ಷ ಕಂಡು ಬಂದಿದ್ದು. ದಿನಾಂಕ: 01-09-2019 ರಂದು ಕಾಡಂಚಿನ ವ್ಯಾಪ್ತಿಯ ಚೌಡಳ್ಳಿ ಗ್ರಾಮದ ಶ್ರೀ ಶಿವಮಾದಯ್ಯ ಬಿನ್ ಪುಟ್ಟಯ್ಯ ರವರು ಹಾಗೂ ದಿನಾಂಕ: 08-10-2019 ರಂದು ಚೌಡಳ್ಳಿ ಗ್ರಾಮದ ಶ್ರೀ ಶಿವಲಿಂಗಪ್ಪ ಬಿನ್ ಪುಟ್ಟಪ್ಪ ಇವರು ಹುಲಿ ಧಾಳಿಯಿಂದ ಮೃತಪಟ್ಟಿರುವುದರಿಂದ ಈ ಇಬ್ಬರು ಮೃತ ಪಟ್ಟವರ ಕುಟುಂಬಕ್ಕೆ ತಲಾ ರೂ. 5.00 ಲಕ್ಷ ದಯಾತ್ಮಕ ಧನವನ್ನು ವಿತರಿಸಲಾಗಿರುತ್ತದೆ. ಹುಲಿ ಸೆರೆ ಹಿಡಿಯುವ ಸಂಬಂಧ ನುರಿತ ಪಶುವೈದ್ಯಾಧಿಕಾರಿಗಳು ಹಾಗೂ ಅರಣ್ಯಾಧಿಕಾರಿಗಳ ನೇತೃತ್ವದಲ್ಲಿ ತಂಡಗಳನ್ನು ರಚಿಸಿ ಕಾರ್ಯಾಚರಣೆ ಕೈಗೊಂಡಿದ್ದು, ದಿನಾಂಕ: 13-10-2019 ರಂದು ಜಿ.ಎಸ್.ಬೆಟ್ಟ ವಲಯ ವ್ಯಾಪ್ತಿಯ ಮಗುವಿನಹಳ್ಳಿ ಯಲ್ಲಿರುವ ಸಿದ್ದಿಖಿ ಎಂಬುವವರ ಖಾಸಗಿ ಜಮೀನಿನಲ್ಲಿ ದಾರಿ ತಪ್ಪಿದ ಹುಲಿಯು ಕಾಣಿಸಿ ಕೊಂಡಿದ್ದು, ಸದರಿ ಹುಲಿಯನ್ನು ಅರವಳಿಕೆ ಚುಚ್ಚುಮದ್ದು ನೀಡಿ ಜೀವಂತ ಸೆರೆ ಹಿಡಿದು, ಆ ಹುಲಿಯನ್ನು ಕೂರ್ಗಳ್ಳಿ ವನ್ಯಜೀವಿ ಪುನರ್ವಸತಿ ಕೇಂದ್ರ ಮೈಸೂರು ಇಲ್ಲಿಗೆ ಹಸ್ತಾಂತರಿಸಲಾಗಿರುತ್ತದೆ.

ಮುಂದುವರೆದು ದಿನಾಂಕ: 22-10-2019 ರಮದು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಜಿ.ಎಸ್. ಬೆಟ್ಟ ವಲಯ ಹಾಗೂ ಗುಂಡ್ಲುಪೇಟೆ ಬಫರ್ ಜೋನ್ ವಲಯ ವ್ಯಾಪ್ತಿಯಲ್ಲಿನ ಗ್ರಾಮಗಳಿಗೆ ಕಾಡಾನೆಯೊಂದು ಪ್ರವೇಶಿಸಿ ದಾಂಧಲೆ ಉಂಟುಮಾಡಿ ಶಿವಪುರ ಗ್ರಾಮ ವ್ಯಾಪ್ತಿಯಲ್ಲಿ ಶ್ರೀ ಸಿದ್ದಯ್ಯ ಬಿನ್ ರಾಚಯ್ಯ, ಶಿವಪುರ ಗ್ರಾಮ ನಿವಾಸಿ ಮತ್ತು ಹಂಗಳ ಗ್ರಾಮದ ವ್ಯಾಪ್ತಿಯಲ್ಲಿ ಶ್ರೀ ಸವಾಯಿ ಬಿನ್ ಪುಟ್ಟಮಾದಯ್ಯ, ಆಲತ್ತೂರು

ಗ್ರಾಮದ ನಿವಾಸಿಗರ ಮೇಲೆ ಧಾಳಿ ನಡೆಸಿ ಗಾಯಗೊಳಿಸಿರುತ್ತದೆ ಹಾಗೂ ಶಿವಪುರ ಗ್ರಾಮದ ಜಾನುವಾರುಗಳ ಮೇಲೆ ಧಾಳಿಮಾಡಿದ್ದು, 03 ಜಾನುವಾರುಗಳು ಮೃತಪಟ್ಟಿರುತ್ತವೆ. ಸದರಿ ಪುಂಡಾನೆಯನ್ನು ಹಿಡಿಯಲು ಶ್ರೀ ಡಾ॥ ಡಿ.ಎನ್ ನಾಗರಾಜು, ಪಶುವೈದ್ಯಾಧಿಕಾರಿಗಳು ಮತ್ತು ಇಲಾಖಾ ಆನೆಗಳನ್ನು ಬಳಸಿಕೊಂಡು, ಅರಣ್ಯಾಧಿಕಾರಿಗಳ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಿ, ದಿನಾಂಕ: 24-10-2019 ರಂದು ಪುಂಡಾನೆಯನ್ನು ಸೆರೆ ಹಿಡಿದು, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ), ಬೆಂಗಳೂರು ರವರ ನಿರ್ದೇಶನದಂತೆ ಮಡಿಕೇರಿ ಪ್ರಾದೇಶಿಕ ವಿಭಾಗದ ವ್ಯಾಪ್ತಿಯಲ್ಲಿನ ದುಬಾರೆ ಆನೆ ಶಿಬಿರಕ್ಕೆ ಹಸ್ತಾಂತರಿಸಲಾಗಿರುತ್ತದೆ. 2019-20 ನೇ ಸಾಲಿನಲ್ಲಿ ಕಾಡಾನೆಗಳು ಅರಣ್ಯ ಪ್ರದೇಶದಿಂದ ರೈತರ ಜಮೀನುಗಳಿಗೆ ಪ್ರವೇಶಿಸುವುದನ್ನು ತಡೆಗಟ್ಟಲು ಸ್ಥಳೀಯ ಜನರುಗಳನ್ನು ನೇಮಕ ಮಾಡಿಕೊಂಡು, ಆನೆ ಹಿಮ್ಮೆಟ್ಟಿಸುವ ಶಿಬಿರಗಳನ್ನು ಸ್ಥಾಪಿಸಲಾಗಿರುತ್ತದೆ ಎಂದು ಅರಣ್ಯ ಸಂರಕ್ಷಣಧಿಕಾರಿಗಳು ಮತ್ತು ಕ್ಷೇತ್ರ ನಿರ್ದೇಶಕರು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಬಂಡೀಪುರ ರವರು ಸಭೆಯಲ್ಲಿ ತಿಳಿಸಿದರು.

ಮಾನ್ಯ ಸರ್ಕಾರದ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಅರಣ್ಯ ವ್ಯಾಪ್ತಿಗೆ ಸೇರಿರುವ ಗ್ರಾಮಗಳಿಗೆ ಮತ್ತು ರೈತರ ಜಮೀನುಗಳಿಗೆ ಕಾಡಾನೆಗಳು ಅರಣ್ಯ ಪ್ರದೇಶದಿಂದ ಪ್ರವೇಶಿಸುವುದನ್ನು ತಡೆಗಟ್ಟಲು ಆನೆ ಕಂದಕಗಳನ್ನು ನಿರ್ಮಿಸಿ, ಮಾನವ ಪ್ರಾಣಿ ಸಂಘರ್ಷವನ್ನು ತಡೆಗಟ್ಟಲು ಅಗತ್ಯ ಕ್ರಮವಹಿಸುವಂತೆ ಸೂಚಿಸಿದರು.

**(ಕ್ರಮ: ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ನಿರ್ದೇಶಕರು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಬಂಡೀಪುರ)**

➢ **<u>ಗಣಿ ಮತ್ತು ಭೂ ವಿಜ್ಞಾನ ಇಲಾಖೆ</u>**

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಈ ಹಿಂದೆ ಜಂಟಿ ಮೋಜಣಿ/ಡ್ರೋಣ್ ಸರ್ವೆ ನಡೆಸಿ ಸಲ್ಲಿಸಿರುವ ವರದಿಯ ಬಗ್ಗೆ ಕೈಗೊಂಡಿರುವ ಕ್ರಮದ ಬಗ್ಗೆ ಪ್ರತ್ಯೇಕವಾಗಿ ವಿಸ್ತಾರವಾದ ಚರ್ಚೆ ನಡೆಸುವುದಾಗಿ ಸೂಚಿಸಿದರು.

**(ಕ್ರಮ: ಉಪ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಚಾಮರಾಜನಗರ)**

**ಮುಂದುವರೆದು ಈ ಹಿಂದೆ ನಡೆದ ಸಭೆಗಳಲ್ಲಿ ಯಾಂತ್ರಿಕವಾಗಿ ಮಾಹಿತಿ ನೀಡಿರುವುದನ್ನು ಗಮನಿಸಿ, ಪ್ರಸ್ತುತ ಸಭೆಯಲ್ಲಿ ಸೂಚಿಸಿರುವಂತೆ, ಇಲಾಖೆಗಳಲ್ಲಿ ಅತಿ ಮುಖ್ಯವಾಗಿ ಆಗ ಬೇಕಾಗಿರುವ ಕೆಲಸಗಳು/ಸವಾಲುಗಳು ಮತ್ತು ಜನಸಾಮಾನ್ಯರಿಗೆ ತಲುಪಿಸಲು ಕೈಗೊಂಡಿರುವ ವಿಶೇಷ ಕ್ರಮಗಳನ್ನಾಧರಿಸಿ ಪ್ರಗತಿ ವರದಿಯನ್ನು ಜಿಲ್ಲಾ ಮಟ್ಟದ ಅಧಿಕಾರಿಗಳೇ ಖುದ್ದು ತಯಾರಿಸಿ ಮುಂದಿನ ಸಭೆಯಲ್ಲಿ ಕಡ್ಡಾಯವಾಗಿ ನೀಡುವಂತೆ ಸೂಚಿಸಿ, ಮಾನ್ಯ ಸರ್ಕಾರದ ಕಾರ್ಯದರ್ಶಿಗಳಿಗೆ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.**

(ರಾಜೇಂದರ್ ಕುಮಾರ್ ಕಟಾರಿಯಾ)
ಸರ್ಕಾರದ ಕಾರ್ಯದರ್ಶಿಗಳು
ಕೃಷಿ ಇಲಾಖೆ ಹಾಗೂ ಚಾಮರಾಜನಗರ ಜಿಲ್ಲಾ
ಉಸ್ತುವಾರಿ ಕಾರ್ಯದರ್ಶಿಗಳು, ಚಾಮರಾಜನಗರ

**ಡಾ: ಜಿ. ಕಲ್ಪನ,** ಭಾ.ಆ.ಸೇ.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಕರ್ನಾಟಕ ಸರ್ಕಾರದ ಸಚಿವಾಲಯ
ದೂರವಾಣಿ : ಕಛೇರಿ: 22255827
22032589
ಫ್ಯಾಕ್ಸ್ : 080-22252499
ಇಮೇಲ್: prs-yesd@karnataka.gov.in
ysdsec@gmail.com
2ನೇ ಮಹಡಿ, 2ನೇ ಹಂತ
ಬಹುಮಹಡಿಗಳ ಕಟ್ಟಡ, ಬೆಂಗಳೂರು-560001

ಸಂಖ್ಯೆ: ಯುಸಕ್ರೀ 60 ಅಮುಕಾ 2019 ದಿನಾಂಕ:11-12-2019

CS/E 76 0992/2019
13/12/09

**ಟಿಪ್ಪಣಿ**

ವಿಷಯ: ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ನವೆಂಬರ್ ಮಾಹೆಯಲ್ಲಿ ಮೈಸೂರು ಜಿಲ್ಲೆಗೆ ಪ್ರವಾಸ ಕೈಗೊಂಡಿರುವ ಬಗ್ಗೆ ವಿವರ.

*****

| ಕ್ರ.ಸಂ. | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1 | ಜಿಲ್ಲೆಯ ಹೆಸರು | ಮೈಸೂರು |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಡಾ: ಜಿ.ಕಲ್ಪನ |
| 3 | ಭೇಟಿಯಾದ/ ಪ್ರವಾಸದ ದಿನಾಂಕ: | 04-11-2019 ಮತ್ತು 05-11-2019 |
| 4 | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | ಮುಂದಿನ ಕಂಡಿಕೆಗಳಲ್ಲಿ ವಿವರಿಸಲಾಗಿದೆ. |

ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಕಚೇರಿ
ಕಡತ / ಪತ್ರ / ಕಾ.ಟಿ. ಸ್ವೀಕೃತಿ ಸಂಖ್ಯೆ
ದಿನಾಂಕ: 11/12/2019

ದಿನಾಂಕ:04-11-2019ರಂದು ಚಾಮುಂಡೇಶ್ವರಿ ಬೆಟ್ಟದ ವ್ಯೂ ಪಾಯಿಂಟ್ ಬಳಿ ನಂದಿ ವಿಗ್ರಹಕ್ಕೆ ತೆರಳುವ ಮಾರ್ಗದಲ್ಲಿ ಭೂ ಕುಸಿತ ಉಂಟಾಗಿರುವ ಸ್ಥಳದ ಪರಿವೀಕ್ಷಣೆ ನಡೆಸಲಾಯಿತು ಹಾಗು ಸಂಬಂಧಪಟ್ಟ ಗ್ರಾಮ ಲೆಕ್ಕಾಧಿಕಾರಿ ಮತ್ತು ಸಹಾಯಕ ಅಭಿಯಂತರಿಂದ ಕೈಗೊಂಡ ಕ್ರಮದ ಬಗ್ಗೆ ಮಾಹಿತಿ ಪಡೆದು, ಕೈಗೊಳ್ಳಬೇಕಾದ ಕ್ರಮಗಳ ಕುರಿತು ಸೂಚಿಸಲಾಯಿತು.

ದಿನಾಂಕ:05-11-2019ರಂದು ಮೈಸೂರು ಜಿಲ್ಲೆಯಲ್ಲಿ ಮಳೆಯಿಂದ ಹಾನಿಯಾಗಿರುವ ಬಗ್ಗೆ ಕೈಗೊಂಡಿರುವ ಪರಿಹಾರ ಕ್ರಮಗಳ ಕುರಿತು ಜಿಲ್ಲಾಧಿಕಾರಿಗಳನ್ನೊಳಗೊಂಡಂತೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆಯನ್ನು ನಡೆಸಿ ಸೂಕ್ತ ಸಲಹೆ ಸೂಚನೆಗಳನ್ನು ನೀಡಲಾಯಿತು.

ಅವಗಾಹನೆಗಾಗಿ ಸಲ್ಲಿಸಿದೆ.

Kalpana G
(ಡಾ. ಜಿ. ಕಲ್ಪನ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಸರ್ಕಾರದ ಮುಖ್ಯ ಕಾರ್ಯದರ್ಶಿ,
ವಿಧಾನಸೌಧ,
ಬೆಂಗಳೂರು.

(ಟಿ.ಎಂ. ವಿಜಯ್ ಭಾಸ್ಕರ್)
ಮುಖ್ಯ ಕಾರ್ಯದರ್ಶಿ

13/12

17/12/19

JSD 19/12

17/12

**ಶ್ರೀ ಎಂ.ಮಹೇಶ್ವರ ರಾವ್, ಭಾ.ಆ.ಸೇ. ಮಾನ್ಯ ಸರ್ಕಾರದ ಕಾರ್ಯದರ್ಶಿಯವರು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:29.11.2019 ರಂದು ಜರುಗಿದ ಉಡುಪಿ ಜಿಲ್ಲಾ ಮಟ್ಟದ ಅಧಿಕಾರಿಗಳೊಡನೆ ಜಿಲ್ಲಾಭಿವೃದ್ಧಿ, ಮರಳು ಸಮಸ್ಯೆ ಹಾಗೂ ನೆರೆ ಪರಿಹಾರ ಬಗ್ಗೆ ಪರಿಶೀಲನಾ ಸಭೆಯ ನಡವಳಿ:**

**ಸಮಯ: ಪೂರ್ವಾಹ್ನ 11.00 ಗಂಟೆ** **ಸ್ಥಳ: ಜಿಲ್ಲಾಧಿಕಾರಿ ಕಛೇರಿ ಸಭಾಂಗಣ**

ಉಪಸ್ಥಿತರು:

1) ಶ್ರೀ ಎಂ.ಮಹೇಶ್ವರ ರಾವ್, ಭಾ.ಆ.ಸೇ. ಸರ್ಕಾರದ ಕಾರ್ಯದರ್ಶಿಯವರು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು
2) ಶ್ರೀ ಜಿ.ಜಗದೀಶ, ಭಾ.ಆ.ಸೇ. ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ
3) ಶ್ರೀ ಬಿ.ಸದಾಶಿವ ಪ್ರಭು. ಕ.ಆ.ಸೇ. ಅಪರ ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ
4) ಶ್ರೀ ಕುಮಾರ್ ಚಂದ್ರ, ಹೆಚ್ಚುವರಿ ಪೊಲೀಸ್ ಅಧೀಕ್ಷಕರು, ಉಡುಪಿ ಜಿಲ್ಲೆ
5) ಶ್ರೀ ಕೆ.ರಾಜು, ಕ.ಆ.ಸೇ, ಸಹಾಯಕ ಕಮೀಷನರು, ಕುಂದಾಪುರ

ಹಾಗೂ ಹಾಜರಿಯಲ್ಲಿ ಸಹಿ ಮಾಡಿದವರು

**********

ಸಭೆಯ ಪ್ರಾರಂಭದಲ್ಲಿ ಅಪರ ಜಿಲ್ಲಾಧಿಕಾರಿಯವರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು, ಜಿಲ್ಲಾಧಿಕಾರಿಯವರನ್ನು ಹಾಗೂ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಯವರನ್ನು ಸ್ವಾಗತಿಸಿ ಪರಿಶೀಲನಾ ಸಭೆಯನ್ನು ನಡೆಸಿಕೊಡುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು ಕೋರಿದರು.

**<u>ಸಭೆಯಲ್ಲಿ ಚರ್ಚಿಸಲಾದ ಪ್ರಮುಖ ವಿಷಯಗಳು:</u>**

- ಪ್ರಾಕೃತಿಕ ವಿಕೋಪದಡಿ ವಿವಿಧ ಕಾಮಗಾರಿಗಳಿಗೆ ನೀಡಲಾಗಿರುವ ಅನುದಾನಗಳ ಸಮರ್ಪಕವಾದ ಬಳಕೆಯ ಬಗ್ಗೆ ಚರ್ಚಿಸಲಾಯಿತು. ಅದರಂತೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾಮಗಾರಿಗಳ ಬಗ್ಗೆ ಪರಿಶೀಲಿಸಲಾಗಿ, ಪ್ರಾಕೃತಿಕ ವಿಕೋಪದಡಿ ಸದ್ರಿ ಇಲಾಖೆಗೆ 532 ಕಾಮಗಾರಿಗಳು ಮಂಜೂರಾಗಿದ್ದು, ಅವುಗಳಲ್ಲಿ 252 ಕಾಮಗಾರಿಗಳಿಗೆ ಕಾರ್ಯಾದೇಶವನ್ನು ನೀಡಿರುವುದಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಅಧಿಕಾರಿ/ಸಿಬ್ಬಂದಿಯವರು ತಿಳಿಸಿದರು. ಸದ್ರಿ ಕಾಮಗಾರಿಗಳನ್ನು ಜಾರಿಗೊಳಿಸುವಲ್ಲಿ ತೀರಾ ವಿಳಂಬವಾಗಿರುವ ಬಗ್ಗೆ ಪ್ರಶ್ನಿಸಲಾಗಿ, ಉಳಿದ 280 ಕಾಮಗಾರಿಗಳ ಕಾರ್ಯಾದೇಶವನ್ನು 1 ವಾರದೊಳಗೆ ಮುಗಿಸಿ ಎಲ್ಲಾ ಕಾಮಗಾರಿಗಳನ್ನು ಶೀಘ್ರವಾಗಿ ಮುಕ್ತಾಯಗೊಳಿಸುವಂತೆ ಕಾರ್ಯನಿರ್ವಾಹಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಉಡುಪಿ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು. ಕಳೆದ ವರ್ಷ ಟ್ಯಾಂಕರ್ ಮೂಲಕ ನೀರನ್ನು ಒದಗಿಸಿದ ಸ್ಥಳಗಳಲ್ಲಿ ಶಾಶ್ವತವಾದ ನೀರಿನ ವ್ಯವಸ್ಥೆಯನ್ನು ಕಲ್ಪಿಸುವಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು .

  **(ಕ್ರಮ : ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ/ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಉಡುಪಿ )**

- ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಕಾಮಗಾರಿಗಳ ಬಗ್ಗೆ ಪರಿಶೀಲಿಸಲಾಗಿ, ಪ್ರಾಕೃತಿಕ ವಿಕೋಪದಡಿ ಲೋಕೋಪಯೋಗಿ ಇಲಾಖೆಗೆ ಒಟ್ಟು 35 ಕಾಮಗಾರಿಗಳು ಮಂಜೂರಾಗಿದ್ದು, ಅವುಗಳಲ್ಲಿ 3 ಕಾಮಗಾರಿಗಳು ಪ್ರಗತಿಯಲ್ಲಿದ್ದು, ಇ-ಪ್ರೊಕ್ಯೂರ್‌ಮೆಂಟ್‌ನ ಸಮಸ್ಯೆಯಿಂದಾಗಿ 32 ಕಾಮಗಾರಿಗಳನ್ನು ಜಾರಿಗೊಳಿಸುವಲ್ಲಿ ತೀರಾ ವಿಳಂಬವಾಗಿರುವುದಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರು ತಿಳಿಸಿದರು. ಈ ಬಗ್ಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಇ-ಪ್ರೊಕ್ಯೂರ್‌ಮೆಂಟ್ ಸಮಸ್ಯೆಯ ಬಗ್ಗೆ ಎಲ್ಲಾ ಇಲಾಖೆಯವರೊಂದಿಗೆ ಪ್ರಶ್ನಿಸಲಾಗಿ, ಕಳೆದ 3 ತಿಂಗಳಿನಿಂದ ಈ ಸಮಸ್ಯೆ ಇರುವುದಾಗಿ ವಿವಿಧ ಇಲಾಖೆಯ ಅಧಿಕಾರಿಗಳು ತಿಳಿಸಿದ್ದು, ಈ ಬಗ್ಗೆ ಸರಕಾರದ ಹಂತದಲ್ಲಿ ಸಮಸ್ಯೆಯ ಬಗ್ಗೆ ಪರಿಹಾರಕ್ಕೆ ಸೂಚಿಸುವುದಾಗಿ ಹಾಗೂ ಪ್ರಸ್ತುತ ಬಾಕಿ ಇರುವ 32 ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

  **(ಕ್ರಮ : ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಡುಪಿ )**

- ನಿರ್ಮಿತಿ ಕೇಂದ್ರ ಉಡುಪಿ ಇಲ್ಲಿನ ಕಾಮಗಾರಿಗಳ ಬಗ್ಗೆ ಪರಿಶೀಲಿಸಲಾಗಿ, ಪ್ರಾಕೃತಿಕ ವಿಕೋಪದಡಿ ಒಟ್ಟು 98 ಕಾಮಗಾರಿಗಳು ಮಂಜೂರಾಗಿದ್ದು, ಅವುಗಳಲ್ಲಿ 52 ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ಯೋಜನಾ ಅಭಿಯಂತರರು ನಿರ್ಮಿತಿ ಕೇಂದ್ರ ಇವರು ತಿಳಿಸಿದರು. ಅದರಂತೆ ಬಾಕಿ ಇರುವ ಎಲ್ಲಾ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಯೋಜನಾ ನಿರ್ದೇಶಕರು, ನಿರ್ಮಿತಿ ಕೇಂದ್ರ ಉಡುಪಿ)**

- ಮಳೆಹಾನಿಯಿಂದಾಗಿ ನಷ್ಟ ಉಂಟಾದ ಮನೆಗಳ ಪುನರ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಚರ್ಚಿಸಲಾಗಿ ರಾಜೀವ್ ಗಾಂಧಿ ವಸತಿ ಯೋಜನೆಯ ವೆಬ್‌ಸೈಟ್ ನಲ್ಲಿ ಈಗಾಗಲೇ ಎಲ್ಲಾ ಡಾಟಾ ಎಂಟ್ರಿ ಮತ್ತು ಜಿಪಿಎಸ್ ಕಾರ್ಯ ಈಗಾಗಲೇ ಮುಕ್ತಾಯವಾಗಿದ್ದು, ಸದ್ರಿ ಸಂತ್ರಸ್ತರಿಗೆ ಪರಿಹಾರ ಪಾವತಿಯಾಗಿರುವ ಬಗ್ಗೆ ಪರಿಶೀಲಿಸುವಂತೆ ಹಾಗೂ ನೆರೆ ಸಂತ್ರಸ್ಥರ ಪುನರ್ವಸತಿಗೆ ಸಂಬಂಧಿಸಿದಂತೆ ಹೆಚ್ಚುವರಿ ಅನುದಾನದ ಅವಶ್ಯಕತೆ ಇದ್ದಲ್ಲಿ ಅನುದಾನ ಕೋರಿ ಸರಕಾರಕ್ಕೆ ಪತ್ರ ಬರೆಯುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಜಿಲ್ಲಾಧಿಕಾರಿಯವರಿಗೆ ತಿಳಿಸಿದರು.

**(ಕ್ರಮ: ತಹಶೀಲ್ದಾರರು, ಉಡುಪಿ, ಕುಂದಾಪುರ, ಕಾರ್ಕಳ, ಬ್ರಹ್ಮಾವರ, ಬೈಂದೂರು, ಕಾಪು, ಹೆಬ್ರಿ)**

- ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ಅಡಿಕೆ ಕೊಳೆ ರೋಗದ ಬಗ್ಗೆ ಚರ್ಚಿಸಲಾಗಿ, ಈ ಬಾರಿ ನಿರಂತರ ಮಳೆಯಿಂದಾಗಿ ಅಡಿಕೆ ಕೃಷಿಯು ಕೊಳೆ ರೋಗದಿಂದ ಬಾಧಿತವಾಗಿದ್ದು, ಕುಂದಾಪುರ ತಾಲೂಕಿನಲ್ಲಿ ಪ್ರಸ್ತುತ 185 ರೈತರು ಅರ್ಜಿಗಳನ್ನು ಸಲ್ಲಿಸಿರುವುದಾಗಿ ಹಾಗೂ ಹಾನಿಯು ಇನ್ನೂ ಅಧಿಕವಾಗಿದ್ದು, ಹಾನಿಯನ್ನು ಅಂದಾಜಿಸಲಾಗುತ್ತಿರುವುದಾಗಿ ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ ಉಡುಪಿ ಇವರು ತಿಳಿಸಿದರು.

  ಅದರಂತೆ ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ಅಡಿಕೆ ಕೊಳೆರೋಗಗಳಿಂದಾದ ಬೆಳೆ ಹಾನಿಗೆ ಪ್ರಾಕೃತಿಕ ವಿಕೋಪದಡಿ ಯಾವುದೇ ಪರಿಹಾರ ನೀಡಲಾಗುವುದಿಲ್ಲ. ಒಂದು ವೇಳೆ ನೀಡಬಹುದಾಗಿದ್ದಲ್ಲಿ ಸರಕಾರದ ಮಾರ್ಗಸೂಚಿಯನ್ವಯ ಸೂಕ್ತ ಕ್ರಮವಹಿಸುವಂತೆ ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ ಉಡುಪಿ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ತಿಳಿಸಿದರು. ಈ ಬಗ್ಗೆ ತೋಟಗಾರಿಕಾ ಉಪನಿರ್ದೇಶಕರು ಕಳೆದ ವರ್ಷ ಸರಕಾರದಿಂದ ವಿಶೇಷ ಅನುದಾನ ಬಿಡುಗಡೆಯಾಗಿತ್ತು, ಈ ಬಾರಿ ಸರ್ವೆ ನಡೆಸಲು ಸರಕಾರದಿಂದ ನಿರ್ದೇಶನ ಬಂದಿಲ್ಲ. ಸರ್ವೆ ನಡೆಸಿದರೆ ಸಂಪೂರ್ಣ ಹಾನಿಯ ಚಿತ್ರಣ ದೊರಕುತ್ತದೆ ಎಂದರು. ಈ ಕುರಿತು ಜಿಲ್ಲಾಧಿಕಾರಿಯವರ ಮುಖಾಂತರ ಸರ್ವೆ ಮಾಡಲು ಅನುಮತಿ ಹಾಗೂ ಅನುದಾನ ಬಿಡುಗಡೆ ಮಾಡಲು ಸರಕಾರಕ್ಕೆ ಪತ್ರ ಬರೆಯಲು ತಿಳಿಸಿದರು. ಅಲ್ಲದೆ NDRF ನಿಧಿಯಿಂದ ಪರಿಹಾರ ಪಾವತಿಸಲು ಅವಕಾಶವಿದ್ದಲ್ಲಿ, ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳ ಮುಖಾಂತರ ಸರಕಾರಕ್ಕೆ ಸಲ್ಲಿಸಲು ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ ಉಡುಪಿ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ ಉಡುಪಿ)**

- ಮೆಸ್ಕಾಂಗೆ ಸಂಬಂಧಿಸಿದಂತೆ ಮಳೆ ಹಾನಿಯಿಂದಾಗಿ ಹಾನಿಗೊಳಗಾಗಿರುವ ವಿದ್ಯುತ್ ಕಂಬಗಳನ್ನು ಮರುಸ್ಥಾಪಿಸಲು, ಜೋತು ಬೀಳಿರುವ ಅಪಾಯಕಾರಿ ಅಂಚಿನಲ್ಲಿರುವ ವಿದ್ಯುತ್ ತಂತಿಗಳನ್ನು ಸರಿಪಡಿಸುವಂತೆ ಸೂಚಿಸಿದರು. ಲೋಕೋಪಯೋಗಿ ಇಲಾಖೆ, RDPR ಗೆ ಪ್ರಾಕೃತಿಕ ವಿಕೋಪದಡಿ ಪರಿಹಾರ ನಿಧಿಗಾಗಿ ಸಾಕಷ್ಟು ಅನುದಾನ ನೀಡಲಾಗಿದ್ದು, ಅನುದಾನಕ್ಕೆ ಬೇಡಿಕೆ ಸಲ್ಲಿಸುವಂತೆ ಹಾಗೂ ಸದ್ರಿ ಅನುದಾನವನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಹಾಗೂ ತೀವ್ರ ಹಾನಿಯಾಗಿರುವ ಸ್ಥಳಕ್ಕೆ ಖುದ್ದು ಭೇಟಿ ನೀಡಿ ಸಮಸ್ಯೆ ಬಗೆಹರಿಸಲು ಸೂಕ್ತ ಕ್ರಮವಹಿಸುವಂತೆ ಅಧೀಕ್ಷಕ ಇಂಜಿನಿಯರ್, ಮೆಸ್ಕಾಂ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.
- ಪ್ರಸ್ತುತ ಪಡುಬಿದ್ರೆ ಶಾಲಾ ವಠಾರದಲ್ಲಿ ಮತ್ತು ಅಕ್ಕಪಕ್ಕ ಅಪಾಯಕಾರಿ ಸ್ಥಿತಿಯಲ್ಲಿ ವಿದ್ಯುತ್ ತಂತಿಗಳು ಜೋತು ಬೀಳಿರುವ ಬಗ್ಗೆ ಹಾಗೂ ಕಾರ್ಕಳ ತಾಲೂಕಿಗೆ ಸಂಬಂಧಿಸಿದಂತೆಯೂ ಕೆಲವೊಂದು ಪ್ರದೇಶದಲ್ಲಿ ಇಂತಹ ಸಮಸ್ಯೆಗಳಿದ್ದು ಸಂಬಂಧಪಟ್ಟವರಿಂದ ಈಗಾಗಲೇ ದೂರುಗಳು ಸ್ವೀಕೃತವಾಗಿರುವ ಬಗ್ಗೆ ಅಪರ ಜಿಲ್ಲಾಧಿಕಾರಿಯವರು ಸಭೆಯ ಗಮನಕ್ಕೆ ತಂದಿದ್ದು, ಅದರಂತೆ ಸ್ಥಳೀಯ ಸಮಸ್ಯೆಗಳನ್ನು ಬಗೆಹರಿಸಲು ಶೀಘ್ರವಾಗಿ ಕ್ರಮವಹಿಸುವ ಬಗ್ಗೆ ಅಧೀಕ್ಷಕ ಇಂಜಿನಿಯರ್, ಮೆಸ್ಕಾಂ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಅಧೀಕ್ಷಕ ಇಂಜಿನಿಯರ್, ಮೆಸ್ಕಾಂ ಉಡುಪಿ / ಲೋಕೋಪಯೋಗಿ ಇಲಾಖೆ/ RDPR)**

- ಪ್ರಾಕೃತಿಕ ವಿಕೋಪದಡಿ ಮಂಜೂರಾದ ಕಾಮಗಾರಿಗಳನ್ನು ಅತೀ ತುರ್ತಾಗಿ ಮುಕ್ತಾಯಗೊಳಿಸಬೇಕಾಗಿರುವುದರಿಂದ ಈ ಬಗ್ಗೆ ಎಲ್ಲಾ ಅನುಷ್ಠಾನಾಧಿಕಾರಿಗಳೊಂದಿಗೆ ಕಾಮಗಾರಿಗಳ ಪ್ರಗತಿಯ ಪರಿಶೀಲನೆಯನ್ನು ಪ್ರತಿ ವಾರ ನಡೆಸುವಂತೆ ಜಿಲ್ಲಾಧಿಕಾರಿಯವರಿಗೆ ಸೂಚಿಸಿದರು. ಹಾಗೂ ಕಾಮಗಾರಿ ನಡೆಯುತ್ತಿರುವ ಬಗ್ಗೆ ಪರಿಶೀಲಿಸುವಂತೆ ಸಹಾಯಕ ಕಮೀಷನರ್ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಅಧೀಕ್ಷಕರು ದಂಡನಾ ಶಾಖೆ, ಸಹಾಯಕ ಕಮೀಷನರ್ ಕುಂದಾಪುರ)**

- NREGA (ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ) ತೋಟಗಾರಿಕೆ ಇಲಾಖೆಗೆ ಜಿಲ್ಲೆಯಲ್ಲಿ ಹೆಚ್ಚಿನ ಅವಕಾಶಗಳಿದ್ದು, ಅಡಿಕೆ ಪ್ರದೇಶ ವಿಸ್ತರಣೆ ಅಲ್ಲದೇ ಗೇರು ಪ್ರದೇಶ ವಿಸ್ತರಣೆಯನ್ನು ಕೂಡಾ ಕೈಗೊಳ್ಳಲು ಹಾಗೂ ಇದರಲ್ಲಿ ಇರುವ ಸಮಸ್ಯೆಗಳ ಬಗ್ಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿಲ್ಲಾ ಪಂಚಾಯತ್ ಇವರೊಂದಿಗೆ ಚರ್ಚಿಸಿ ಸೂಕ್ತ ಕ್ರಮ ವಹಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

  ಉಡುಪಿ ಮಲ್ಲಿಗೆ ಮತ್ತು ಗೇರು ರೈತ ಉತ್ಪಾದಕ ಸಂಸ್ಥೆ ಸ್ಥಾಪನೆಗೆ ಕೇಂದ್ರ ಕಛೇರಿಗೆ ಈಗಾಗಲೇ ಪ್ರಸ್ತಾವನೆಯನ್ನು ಕಳುಹಿಸಲಾಗಿರುವುದಾಗಿ ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ ಉಡುಪಿ ಇವರು ತಿಳಿಸಿದರು.

  **(ಕ್ರಮ : ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ ಉಡುಪಿ)**

- ಜಿಲ್ಲೆಯಲ್ಲಿ ಡೆಂಗ್ಯೂ ಹಾಗೂ ಮಲೇರಿಯಾದಿಂದ ಬಳಲುತ್ತಿರುವ ರೋಗಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಬಗ್ಗೆ ಚರ್ಚಿಸಲಾಗಿ, ರೋಗ ಹರಡಲು ಕಾರಣ ಹಾಗೂ ರೋಗ ತಡೆಗಟ್ಟಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವ ನಿಟ್ಟಿನಲ್ಲಿ ಸಾರ್ವಜನಿಕರಲ್ಲಿ ಸಾಕಷ್ಟು ಅರಿವು ಮೂಡಿಸುವ ಸಲುವಾಗಿ ಆರೋಗ್ಯ ಇಲಾಖೆಯ ವತಿಯಿಂದ ಡೆಂಗ್ಯೂ ಹಾಗೂ ಮಲೇರಿಯಾದಂತಹ ರೋಗಗಳ ನಿವಾರಣೆಗೆ ಡೆಂಗ್ಯೂ ಹಾಗೂ ಮಲೇರಿಯಾದ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಎಲ್ಲಾ ಶಾಲಾ ಕಾಲೇಜುಗಳಲ್ಲಿ ನಡೆಸುವಲ್ಲಿ ಕ್ರಮವಹಿಸುವಂತೆ ಹಾಗೂ ಡೆಂಗ್ಯೂ ಮತ್ತು ಮಲೇರಿಯಾದಂತಹ ರೋಗಗಳನ್ನು ತಡೆಗಟ್ಟುವ ಕ್ರಮಗಳ ಕುರಿತು ಚೆಕ್ ಲಿಸ್ಟ್ ತಯಾರಿಸಿ ಸಾರ್ವಜನಿಕರಲ್ಲಿ ಈ ಬಗ್ಗೆ ಅರಿವು ಮೂಡಿಸುವಲ್ಲಿ ಕ್ರಮ ವಹಿಸುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರಿಗೆ ಸೂಚಿಸಿದರು. SDG Dashboard ನ ಬಗ್ಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿಲ್ಲಾ ಪಂಚಾಯತ್ ಉಡುಪಿ ಇವರು ಪುನರಾವಲೋಕನ (review) ಮಾಡುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

  **(ಕ್ರಮ : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಉಡುಪಿ/ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ )**

- ಜಿಲ್ಲಾ ಆಸ್ಪತ್ರೆಗೆ ಸಮಾಜ ಸೇವಕರು ಮತ್ತು ಸಾರ್ವಜನಿಕರು ಅನಾಥ ರೋಗಿಗಳನ್ನು ದಾಖಲಿಸುತ್ತಿದ್ದು ರೋಗಿಗಳ ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಯಲ್ಲಿ ಸ್ಥಳಾವಕಾಶದ ಕೊರತೆ ಇರುವ ಬಗ್ಗೆ ಜಿಲ್ಲಾ ಶಸ್ತ್ರ ಚಿಕಿತ್ಸಕರು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಅನಾಥಾಲಯಗಳನ್ನು ಆರಂಭಿಸುವ ಕುರಿತು ಅಗತ್ಯ ಕ್ರಮ ಕೈಗೊಳ್ಳುವಂತೆ ಹಾಗೂ ಜಿಲ್ಲಾ ಖನಿಜ ನಿಧಿಯಲ್ಲಿರುವ ಅನುದಾನದ ಲಭ್ಯತೆಯ ಬಗ್ಗೆ ಪ್ರಶ್ನಿಸಿ ಜಿಲ್ಲಾ ಉಸ್ತುವಾರಿ ಸಚಿವರ ನಿಧಿಯಲ್ಲಿ ಅನುದಾನ ಲಭ್ಯವಿದ್ದಲ್ಲಿ ಅನಾಥಶ್ರಮವನ್ನು ಸ್ಥಾಪಿಸುವ ಕುರಿತು ಸೂಕ್ತ ಕ್ರಮವಹಿಸಲು ಜಿಲ್ಲಾ ಶಸ್ತ್ರ ಚಿಕಿತ್ಸಕರು ಉಡುಪಿ ಮತ್ತು ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಡುಪಿ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

  **(ಕ್ರಮ : ಜಿಲ್ಲಾ ಶಸ್ತ್ರ ಚಿಕಿತ್ಸಕರು, ಉಡುಪಿ/ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಡುಪಿ)**

- ಉಡುಪಿ ಜಿಲ್ಲಾ ಆಸ್ಪತ್ರೆಯು ಇದುವರೆಗೆ ತಾಲೂಕು ಆಸ್ಪತ್ರೆ ಮಾದರಿಯಲ್ಲಿಯೇ ಇದ್ದು, ಇದನ್ನು ಜಿಲ್ಲಾ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವಂತೆ ಜಿಲ್ಲಾಧಿಕಾರಿಯವರು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರನ್ನು ಕೋರಿದರು. ಈ ಕುರಿತಂತೆ ಸರಕಾರದ ಮಟ್ಟದಲ್ಲಿ ಕ್ರಮವಾಗಬೇಕಾಗಿದ್ದು, ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಾಗುವ ಒಳರೋಗಿಗಳ ಸಂಖ್ಯೆಯು ಹಾಗೂ ಹೊರ ರೋಗಿಗಳ ಸಂಖ್ಯೆಯು ಕುರಿತಂತೆ ಕಳೆದ ಒಂದು ವರ್ಷದ ಪ್ರತಿ ತಿಂಗಳ ಸ್ಪಷ್ಟವಾದ ವಿವರಗಳನ್ನು ನೀಡುವಂತೆ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಶಸ್ತ್ರ ಚಿಕಿತ್ಸಕರು ಉಡುಪಿ ಇವರಿಗೆ ಸೂಚಿಸಿದರು. ಜಿಲ್ಲಾ ಆಸ್ಪತ್ರೆ , ತಾಲೂಕು ಆಸ್ಪತ್ರೆ ಹಾಗೂ ಜಿಲ್ಲೆಯಲ್ಲಿರುವ ಇತರ ತಾಲೂಕು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಲಭ್ಯವಿರುವ ರೋಗನಿರೋಧಕ ಔಷಧಗಳ ಬಗ್ಗೆ ಹಾಗೂ ಹಾವು ಕಡಿತದ ಔಷಧಗಳ ಲಭ್ಯತೆಯ ಬಗ್ಗೆ ಪ್ರಶ್ನಿಸಿದರು. ಈ ಔಷಧಗಳು ಸಾಕಷ್ಟು ಸಂಖ್ಯೆಯಲ್ಲಿ ಜಿಲ್ಲಾ ಆಸ್ಪತ್ರೆ , ತಾಲೂಕು ಆಸ್ಪತ್ರೆ ಹಾಗೂ ಜಿಲ್ಲೆಯಲ್ಲಿರುವ ತಾಲೂಕು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಇರುವಂತೆ ಖಾತ್ರಿ ಪಡಿಸತಕ್ಕದ್ದು ಎಂದು ನಿರ್ದೇಶನ ನೀಡಿದರು. ಕಳೆದ ಹತ್ತು ವರ್ಷಗಳಿಂದ ಜಿಲ್ಲಾ ಆಸ್ಪತ್ರೆಗೆ ಖರೀದಿಸಿದ ವೈದ್ಯಕೀಯ ಉಪಕರಣಗಳ ಸಂಖ್ಯೆ, ಅವುಗಳಲ್ಲಿ ಉಪಯೋಗದಲ್ಲಿರುವ, ಉಪಯೋಗಿಸದೇ ಇರುವ ವೈದ್ಯಕೀಯ ಉಪಕರಣಗಳ ಹಾಗೂ ಉಪಯೋಗದಲ್ಲಿರುವ ವೈದ್ಯಕೀಯ ಉಪಕರಣಗಳ ಪೈಕಿ ಎಷ್ಟು ಸರಿಯಾಗಿ ಕಾರ್ಯನಿರ್ವಹಿಸುತ್ತಿದೆ ಹಾಗೂ ಎಷ್ಟು ಉಪಯೋಗಿಸದೇ ಅನುಪಯುಕ್ತವಾಗಿದೆ ಎಂಬ ಬಗ್ಗೆ Inventory ತಯಾರಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಜಿಲ್ಲಾ ಶಸ್ತ್ರ ಚಿಕಿತ್ಸಕರು ಉಡುಪಿ ಇವರಿಗೆ ಸೂಚಿಸಿದರು.

  **(ಕ್ರಮ : ಜಿಲ್ಲಾ ಶಸ್ತ್ರ ಚಿಕಿತ್ಸಕರು, ಉಡುಪಿ/ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಉಡುಪಿ ಜಿಲ್ಲೆ)**

- ಜಿಲ್ಲೆಯ ಎಲ್ಲಾ ಅಂಗನವಾಡಿಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳು ಇರುವ ಬಗ್ಗೆ ಹಾಗೂ ಅವುಗಳ ಸಮರ್ಪಕ ಕಾರ್ಯನಿರ್ವಹಣೆ ಮತ್ತು ಸರಕಾರದ ಎಲ್ಲಾ ಸೌಲಭ್ಯಗಳು ಅರ್ಹ ಫಲಾನುಭವಿಗಳಿಗೆ ತಲುಪುತ್ತಿರುವ ಬಗ್ಗೆ ಹಾಗೂ ಅಲ್ಲಿನ ಸ್ವಚ್ಛತೆ, ಮಕ್ಕಳ ಆರೋಗ್ಯ, ಹಾಗೂ ಪೌಷ್ಟಿಕ ಆಹಾರಗಳು ಮಕ್ಕಳಿಗೆ ಸಮರ್ಪಕವಾಗಿ ಪೂರೈಕೆಯಾಗುತ್ತಿರುವ ಬಗ್ಗೆ ಮತ್ತು ಮಕ್ಕಳಿಗೆ ನೀಡುತ್ತಿರುವ ಆಹಾರದ ಗುಣಮಟ್ಟದ ಕುರಿತು ವಿವರ ನೀಡುವಂತೆ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

  ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಂಬಂಧಿಸಿದ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಡಿ ಸಾಕಷ್ಟು ಅನುದಾನ ಲಭ್ಯವಿದ್ದು, ಫಲಾನುಭವಿಗಳ ಸಂಖ್ಯೆ ಕಡಿಮೆಯಿರುತ್ತದೆ. ಆದರೆ ಇತರೆ ವರ್ಗದಲ್ಲಿ ತುಂಬಾ ಫಲಾನುಭವಿಗಳಿದ್ದು, ಹೆಚ್ಚಿನ ಅನುದಾನದ ಅವಶ್ಯಕತೆಯಿದೆ ಎಂದು ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ತಿಳಿಸಿದರು. ಅಲ್ಲದೆ ಅಂಗನವಾಡಿಗಳ ಸ್ವಚ್ಛತೆ, ಮಕ್ಕಳ ಸ್ವಚ್ಛತೆ, ಸರಕಾರದ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ನೀಡಲಾಗುತ್ತಿರುವ ಬಗ್ಗೆ ತಿಳಿಸುತ್ತಾ ಮಕ್ಕಳಿಗೆ ಆಹಾರ ಪೂರೈಕೆಯಾಗುವ ಮೊದಲು ಅಲ್ಲಿನ ಸಿಬ್ಬಂದಿಗಳು ಸೇವಿಸಿದ ತರುವಾಯ ಮಕ್ಕಳಿಗೆ ಪೂರೈಕೆ ಮಾಡಲಾಗುತ್ತಿರುವುದಾಗಿ ತಿಳಿಸಿದರು. ಹಾಗೂ ಗರ್ಭಿಣಿ ಮಹಿಳೆಯರಿಗೆ ಸರಕಾರದಿಂದ ನೀಡಲಾಗುತ್ತಿರುವ ಎಲ್ಲಾ ರೀತಿಯ ಸೌಲಭ್ಯವನ್ನು ಸಮರ್ಪಕವಾಗಿ ನೀಡಲಾಗುತ್ತಿರುವುದಲ್ಲದೆ ಸರಕಾರದ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ನೀಡಲಾಗುತ್ತಿರುವ ಬಗ್ಗೆ ದಾಖಲೆ ಪುಸ್ತಕಗಳನ್ನು ನಿರ್ವಹಿಸಿರುವುದಾಗಿ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ತಿಳಿಸಿದರು.

  ಈ ಬಗ್ಗೆ ಸಮಗ್ರ ಹಾಗೂ ಅನಿರೀಕ್ಷಿತ ಪರಿಶೀಲನೆ ನಡೆಸುವ ಅವಶ್ಯಕತೆ ಇದೆ. ಹಾಗಾಗಿ ವಾರದಲ್ಲಿ ಒಂದು ದಿನ ಜಿಲ್ಲಾ ಮಟ್ಟದ ಅಧಿಕಾರಿಗಳು ಅಂಗನವಾಡಿಗಳಿಗೆ ಭೇಟಿ ನೀಡಿ ಅಲ್ಲಿ ನೀಡುವ ಆಹಾರದ ಗುಣಮಟ್ಟ, ನೈರ್ಮಲ್ಯ ಹಾಗೂ ಸರಕಾರದ ಸೌಲಭ್ಯಗಳು ಅರ್ಹ ಫಲಾನುಭವಿಗಳಿಗೆ ಸಮರ್ಪಕವಾಗಿ ಪೂರೈಕೆಯಾಗುತ್ತಿರುವ ಬಗ್ಗೆ ನಿರ್ವಹಿಸಲಾಗಿರುವ ದಾಖಲೆ ಪುಸ್ತಕಗಳನ್ನು ಪರಿಶೀಲನೆ ಮುಂತಾದವುಗಳ ಕುರಿತು ಪರಿಶೀಲಿಸಿ ವರದಿ ನೀಡುವಂತೆ ಹಾಗೂ ತಪಾಸಣೆ ವೇಳೆ ಪರಿಶೀಲಿಸಬೇಕಾದ ಅಂಶಗಳ ಕುರಿತು ಚೆಕ್ ಲಿಸ್ಟ್ ಸಿದ್ಧಪಡಿಸಿ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ ಈ ಬಗ್ಗೆ ಸೂಕ್ತ ಕ್ರಮವಹಿಸುವಂತೆ ಮತ್ತು ಮಕ್ಕಳ ಅಪೌಷ್ಟಿಕತೆಯ ಕುರಿತು ವಾರದಲ್ಲಿ ಒಂದು ದಿನ ಕಡ್ಡಾಯವಾಗಿ ಪರಿಶೀಲನೆ ಮಾಡಲು ಸೂಕ್ತ ಕ್ರಮವಹಿಸುವಂತೆ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ / ಅಧೀಕ್ಷಕರು, ಸಿ ಶಾಖೆ)**

- ರಾಷ್ಟ್ರೀಯ ಹೆದ್ದಾರಿ ಸಮಸ್ಯೆಯ ಕುರಿತಂತೆ ಚರ್ಚಿಸಲಾಗಿ ಪ್ರಸ್ತುತ ಕುಂದಾಪುರದ ಶಾಸ್ತ್ರೀ ಸರ್ಕಲ್ ಬಳಿಯ ಫ್ಲೈಓವರ್ ಕಾಮಗಾರಿಯು ಕಳೆದ ಹತ್ತು ವರ್ಷದಿಂದ ಪ್ರಗತಿಯಲ್ಲಿದ್ದು ಈವರೆಗೂ ಪೂರ್ಣಗೊಂಡಿರುವುದಿಲ್ಲ. ಕುಂದಾಪುರ ತಾಲೂಕು ಬಸ್ರೂರು ಮೂರುಕೈ ಜಂಕ್ಷನ್ ನ Under pass ಕಾಮಗಾರಿಯು ತೀರಾ ವಿಳಂಬವಾಗಿ ನಡೆಯುತ್ತಿರುವುದರಿಂದ ಸಾರ್ವಜನಿಕರಿಗೆ ತೀವ್ರ ಅನಾನುಕೂಲವಾಗಿದೆ ಹಾಗೂ ಪಡುಬಿದ್ರಿ ಸೇತುವೆಯ ಕಾಮಗಾರಿಯು ಪ್ರಗತಿಯಲ್ಲಿದ್ದು, ಜನವರಿ ಅಂತ್ಯದೊಳಗಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಚಿಸಿರುವುದಾಗಿದೆ ಎಂದು ಜಿಲ್ಲಾಧಿಕಾರಿಯವರು ತಿಳಿಸಿದರು. ಅಲ್ಲದೇ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಇವರು ತಿಳಿಸಿರುವಂತೆ ಅವಧಿಯೊಳಗೆ ಈ ಕಾಮಗಾರಿಯನ್ನು ಪೂರ್ಣಗೊಳಿಸದಿದ್ದಲ್ಲಿ ಟೋಲ್ ಸಂಗ್ರಹಣೆಯನ್ನು ನಿಲ್ಲಿಸುವುದಾಗಿ ತಿಳಿಸಲಾಗಿದೆಯೆಂದು ಜಿಲ್ಲಾದಿಕಾರಿಯವರು ತಿಳಿಸಿದರು. ಅದರಂತೆ ಸದ್ರಿ ಸಮಸ್ಯೆಗಳ ಕುರಿತು ಇಲಾಖೆಯ ಉನ್ನತ ಅಧಿಕಾರಿಗಳೊಂದಿಗೆ ಚರ್ಚಿಸುವುದಾಗಿ ತಿಳಿಸುತ್ತಾ ಜಿಲ್ಲೆಯಲ್ಲಿ ಫಾಸ್ಟ್ ಟ್ಯಾಗ್ ಗಳು ನಿಗಧಿತ ಪ್ರಮಾಣದಲ್ಲಿ ದೊರೆಯದ ಕುರಿತು ಸಹ ಚರ್ಚಿಸುವುದಾಗಿ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ತಿಳಿಸಿ ಈ ಸಮಸ್ಯೆಗಳ ಬಗ್ಗೆ ಒಂದು ಟಿಪ್ಪಣಿ ನೀಡಲು ತಿಳಿಸಿದರು.

**(ಕ್ರಮ: ಯೋಜನಾ ನಿರ್ದೇಶಕರು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮಂಗಳೂರು)**

- ಬಂದರು ಮತ್ತು ಮೀನುಗಾರಿಕಾ ಇಲಾಖೆಗೆ ಸಂಬಂಧಿಸಿದಂತೆ ಪ್ರಸ್ತುತ ಸಮಸ್ಯೆಗಳನ್ನು ಚರ್ಚಿಸಲಾಗಿ ಪ್ರಸ್ತುತ ಕಾಪುವಿನಲ್ಲಿ NABARD ನಿಧಿಯಿಂದ ಹೊಸ ಸೇತುವೆಯ ಕಾಮಗಾರಿ ಪೂರ್ಣಗೊಂಡಿದ್ದು, ಅವೈಜ್ಞಾನಿಕವಾಗಿ ನಿರ್ಮಾಣವಾಗಿರುವ ಕಾಮಗಾರಿಯಿಂದಾಗಿ ಈಗಾಗಲೇ ಇರುವ ಹಳೆಯ ಸೇತುವೆಯನ್ನು ಸಂಚಾರಕ್ಕೆ ಉಪಯೋಗಿಸಲು ಅಸಾಧ್ಯವಾಗಿರುವ ಬಗ್ಗೆ ಹಾಗೂ ಹೆಜಮಾಡಿ ಬಂದರಿನ ಅಭಿವೃದ್ಧಿಯ ಕುರಿತು ಜಿಲ್ಲಾಧಿಕಾರಿಯವರು ಸಭೆಗೆ ತಿಳಿಸಿದರು. ಹೆಜಮಾಡಿ ಬಂದರಿಗೆ ಜಮೀನಿನ ಅವಶ್ಯಕತೆ ಬಗ್ಗೆ ಕೂಡಲೇ ಕ್ರಮವಹಿಸುವಂತೆ ಉಪನಿರ್ದೇಶಕರು ಮೀನುಗಾರಿಕಾ ಇಲಾಖೆ ಉಡುಪಿ ಇವರಿಗೆ ತಿಳಿಸಿದರು.

ಸಮುದ್ರಕ್ಕೆ ಹೋಗುವ ಬೋಟುಗಳಿಗೆ Transponder ಅಳವಡಿಕೆಗೆ ಸಂಬಂಧಿಸಿದಂತೆ ಸ್ವೀಕೃತವಾದ 476 ಅರ್ಜಿಗಳಲ್ಲಿ 97 ಅರ್ಜಿಗಳಿಗೆ MMSI Number ಸ್ವೀಕೃತವಾಗಿರುವುದಾಗಿ ಉಪನಿರ್ದೇಶಕರು ಮೀನುಗಾರಿಕೆ ಇಲಾಖೆ ಇವರು ತಿಳಿಸಿದರು. ಬೋಟುಗಳಿಗೆ Boat Tracking system ನ್ನು ಅಳವಡಿಸಲು ಕೇಂದ್ರ ಕಛೇರಿಗೆ ಪತ್ರ ಬರೆಯಲಾಗಿದ್ದು, ಇದು ಸರಕಾರದ ಹಂತದಲ್ಲಿ ಅನುಮೋದನೆಗೆ ಬಾಕಿ ಇರುವುದಾಗಿ ಉಪನಿರ್ದೇಶಕರು ಮೀನುಗಾರಿಕೆ ಇಲಾಖೆ ಇವರು ತಿಳಿಸಿದ್ದು, ಈ ಬಗ್ಗೆ ಸರಕಾರದ ಹಂತದಲ್ಲಿ ಚರ್ಚಿಸುವುದಾಗಿ ಉಸ್ತುವಾರಿ ಕಾರ್ಯದರ್ಶಿಯವರು ತಿಳಿಸಿದರು.

ಮೀನುಗಾರಿಕಾ ಬಂದರಿನ ಒಳಗೆ ಜನರೇಟರ್ ತೆಗೆದುಕೊಂಡು ಹೋಗದ ಹಾಗೆ ಕಟ್ಟುನಿಟ್ಟಿನ ಎಚ್ಚರಿಕೆ ವಹಿಸುವಂತೆ ಹಾಗೂ ಮೀನುಗಾರಿಕೆ ಮಾಡುವಾಗ 35 mm ಗಿಂತ ಕಡಿಮೆ Hole ಇರುವ ನೆಟ್ ಬಳಸಬಾರದೆಂಬ ನಿಯಮ ಇದೆ ಆದರೆ 5 mm ಗಿಂತ ಕಡಿಮೆ ಇರುವ ಫಿಶ್ ನೆಟ್ ಬಳಸುವ ಕಾನೂನುಬಾಹಿರ ಕ್ರಮಗಳು ನಡೆಯುತ್ತಿದ್ದು, ಇದರಿಂದ ಸಣ್ಣ ಮೀನುಗಳ ಸಂತತಿ ನಾಶಾ ಅಗುವ ಸಾಧ್ಯತೆ ಇದ್ದು, ಜಿಲ್ಲೆಯ ಎಲ್ಲಾ Net manufacturer ಗಳ ಸಭೆಯನ್ನು ಕರೆದು ವಿಮರ್ಶೆ (review) ಮಾಡುವಂತೆ ಉಪನಿರ್ದೇಶಕರು ಮೀನುಗಾರಿಕಾ ಇಲಾಖೆ ಇವರಿಗೆ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

ಜಿಲ್ಲೆಯಲ್ಲಿ ಮೀನುಗಾರಿಕೆಗೆ ಸಂಬಂಧಿಸಿದಂತೆ ನಿಗಧಿತ ಪ್ರಮಾಣಕ್ಕಿಂತ ಹೆಚ್ಚಿನ ಇಂಜಿನ್ ಅಳವಡಿಕೆ, ಬುಲ್ ಟ್ರಾಲ್ , ಲೈಟ್ ಫಿಶಿಂಗ್ ಮುಂತಾದ ಸಮಸ್ಯೆಗಳ ಬಗ್ಗೆ ಚರ್ಚಿಸಲಾಗಿ, ಕಾನೂನು ಬಾಹಿರವಾಗಿ Light Fishing ಮಾಡುವವರ ವಿರುದ್ಧ ಸೂಕ್ತ ಕ್ರಮಗಳ ಬಗ್ಗೆ ಈ ಹಿಂದಿನ ಸಭೆಗಳಲ್ಲಿ ಚರ್ಚಿಸಲಾಗಿದ್ದು, ಅದರಂತೆ ಪ್ರಸ್ತುತ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದ್ದರೂ, ಕೆಲವೊಂದು ಮೀನುಗಾರರು ಯಾವುದೇ ಕ್ರಮಗಳನ್ನು ಗಣನೆಗೆ ತೆಗೆದುಕೊಳ್ಳದೇ ಕಾನೂನುಬಾಹಿರ ಚಟುವಟಿಕೆಗಳನ್ನು ಮುಂದುವರೆಸಿರುವುದಾಗಿ ಉಪನಿರ್ದೇಶಕರು, ಮೀನುಗಾರಿಕಾ ಇಲಾಖೆ ಇವರು ಸಭೆಯಲ್ಲಿ ತಿಳಿಸಿದರು. ಈ ಬಗ್ಗೆ ಜಿಲ್ಲಾಧಿಕಾರಿಯವರು ಎಲ್ಲಾ ಸಂಘ ಸಂಸ್ಥೆಯವರ ಸಭೆ ಕರೆದು ಸರಕಾರದ ಆದೇಶವನ್ನು ಪಾಲಿಸಲು ಕಟ್ಟುನಿಟ್ಟಿನ ಸೂಚನೆಯನ್ನು ನೀಡಿರುವುದಾಗಿ ತಿಳಿಸಿದರು. ಅಕ್ರಮ ಮೀನುಗಾರಿಕೆ ತಡೆಗಟ್ಟಲು ಸೂಕ್ತ ಕ್ರಮ ತೆಗದುಕೊಳ್ಳಲು ಜಿಲ್ಲಾಧಿಕಾರಿ/ಪೊಲೀಸ್ ಅಧೀಕ್ಷಕರು ಉಡುಪಿ/ಪೊಲೀಸ್ ಅಧೀಕ್ಷಕರು ಕರಾವಳಿ ಕಾವಲು ಪಡೆ/ ಉಪನಿರ್ದೇಶಕರು ಮೀನುಗಾರಿಕೆ ಇಲಾಖೆ ಇವರುಗಳಿಗೆ ಸೂಚಿಸಿದರು.

**(ಕ್ರಮ : ಪೊಲೀಸ್ ಅಧೀಕ್ಷಕರು, ಉಡುಪಿ ಜಿಲ್ಲೆ/ ಪೊಲೀಸ್ ಅಧೀಕ್ಷಕರು ಕರಾವಳಿ ಕಾವಲು ಪಡೆ/ ಉಪ ನಿರ್ದೇಶಕರು, ಮೀನುಗಾರಿಕಾ ಇಲಾಖೆ)**

- ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಶಾಲೆಗಳಲ್ಲಿ ಪ್ರಸ್ತುತ ಶಿಕ್ಷಕರ ಹುದ್ದೆಗಳು ಖಾಲಿ ಇರುವುದರ ಬಗ್ಗೆ ಚರ್ಚಿಸಲಾಗಿ, ಹೆಚ್ಚಿನ ಸಂಖ್ಯೆಯಲ್ಲಿ ಟಿಇಟಿ ಪರೀಕ್ಷೆ ಬರೆಯಲು D.Ed ಹಾಗೂ B.Ed ಪಾಸಾದ ಅಭ್ಯರ್ಥಿಗಳಿಗೆ ಅಗತ್ಯ ತರಭೇತಿ ನೀಡಲು ಹಾಗೂ ಟಿಇಟಿ ಬಗ್ಗೆ ಅವರಿಗೆ ಪ್ರೇರೇಪಿಸಲು ತರಬೇತಿ ಕಾರ್ಯಕ್ರಮಗಳನ್ನು ನಡೆಸುವಂತೆಯೂ ಹಾಗೂ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ತೋರುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ)**

- ಶಾಲೆಗಳಲ್ಲಿ ಅಟಲ್ ಇನ್ನೋವೇಶನ್ ಲ್ಯಾಬ್ ಗಳ ಅನುಷ್ಠಾನದ ಬಗ್ಗೆ ಚರ್ಚಿಲಾಗಿ, ಈಗಾಗಲೇ 39 ಶಾಲೆಗಳಲ್ಲಿ ಇದನ್ನು ಅನುಷ್ಠಾನಮಾಡಿರುವುದಾಗಿ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ತಿಳಿಸಿದರು. ಈ ಬಗ್ಗೆ ಯಾವುದಾದರೂ ಶಾಲೆಗೆ ಭೇಟಿ ನೀಡಿ ತಪಾಸಣೆ ನಡೆಸುವಂತೆ ಜಿಲ್ಲಾಧಿಕಾರಿಯವರಿಗೆ ಸೂಚಿಸಿದರು. ಹಾಗೂ ಇದರ ಉಪಯೋಗದ ಕುರಿತು ವ್ಯಾಪಕ ಪ್ರಚಾರ ನೀಡುವಂತೆ ವಾರ್ತಾಧಿಕಾರಿಯವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಸಹಾಯಕ ನಿರ್ದೇಶಕರು, ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಉಡುಪಿ)**

- Blue Flag ಬೀಚ್‌ಗೆ ಸ್ಥಳದ ದಕ್ಷಿಣ ಭಾಗದಿಂದ ಉತ್ತರ ಭಾಗಕ್ಕೆ ಸ್ಥಳಾಂತರಿಸಲು BMC Committee ಯಲ್ಲಿ ನಿರ್ಣಯಿಸಲಾಗಿರುವುದಾಗಿ ಸಹಾಯಕ ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ ಇವರು ತಿಳಿಸಿದರು. Blue Flag ಅನುಷ್ಠಾನಕ್ಕೆ ರಾಜ್ಯ ಸರಕಾರದಿಂದ 268 ಲಕ್ಷ ಬಿಡುಗಡೆಯಾಗಿರುತ್ತದೆ. ಇನ್ನು ಹೆಚ್ಚುವರಿಯಾಗಿ 248.3 ಲಕ್ಷ ಅನುದಾನದ ಬಿಡುಗಡೆ ಮಾಡುವಂತೆ ಕೋರಿ ಪ್ರಸ್ತಾವನೆಯನ್ನು ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ ಇವರಿಗೆ ಸಲ್ಲಿಸಲಾಗಿರುವುದಾಗಿ ಸಹಾಯಕ ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ ಇವರು ಸಭೆಯಲ್ಲಿ ತಿಳಿಸಿದರು.
- ಕೃಷಿ ಇಲಾಖೆಗೆ ಸಂಬಂಧಿಸಿದಂತೆ ಕೃಷಿ ಹೊಂಡ ರಚನೆಯ ಭೌತಿಕ ಕಾಮಗಾರಿಯನ್ನು NREGA Fund ಮೂಲಕ ಮಾಡಲು ಜಂಟಿ ಕೃಷಿ ನಿರ್ದೇಶಕರು ಉಡುಪಿ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಜಂಟಿ ಕೃಷಿ ನಿರ್ದೇಶಕರು, ಉಡುಪಿ)**

- ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ(ನರೇಗಾ) ಕಾಮಗಾರಿಗಳ ಪ್ರಗತಿ ಬಗ್ಗೆ ಚರ್ಚಿಸಲಾಗಿ, ಈ ಆರ್ಥಿಕ ಸಾಲಿನಲ್ಲಿ 5 ಲಕ್ಷ ಮಾನವ ದಿನಗಳ ಸೃಜನೆಯ ಗುರಿಯನ್ನು ನೀಡಿದ್ದು, ಈಗಾಗಲೇ 2.44 ಲಕ್ಷ ಮಾನವ ದಿನಗಳನ್ನು ಸೃಜಿಸಲಾಗಿರುವುದಾಗಿ, ಮತ್ತು 22 ಕೋಟಿ ಆರ್ಥಿಕ ಗುರಿ ಇದ್ದು ಈಗಾಗಲೇ 11.53 ಕೋಟಿ ಖರ್ಚಾಗಿರುವುದಾಗಿ ಜಿಲ್ಲಾ ಪಂಚಾಯತ್ ಅಧಿಕಾರಿಗಳು ಸಭೆಗೆ ತಿಳಿಸಿದರು. ಈ ಬಗ್ಗೆ 5ಲಕ್ಷ ಮಾನವ ದಿನಗಳ ಗುರಿಯನ್ನು ತಲುಪುವಲ್ಲಿ ಕ್ರಮ ವಹಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ)**

- ಸಮಗ್ರ ಕೃಷಿ ಬೇಸಾಯ ಪದ್ಧತಿಯನ್ನು (Integrated Farming System) ಕನಿಷ್ಟ 50 ಗ್ರಾಮ ಪಂಚಾಯತುಗಳಲ್ಲಿ ತೆಗೆದುಕೊಳ್ಳಲು ಜಂಟಿ ಕೃಷಿ ನಿರ್ದೇಶಕರಿಗೆ ಸೂಚಿಸಿದರು. ಅನುಷ್ಠಾನ ಇಲಾಖೆಗಳಿಗೆ ಈ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಿದರು. ಮುಂದಿನ ದಿನಗಳಲ್ಲಿ ಪ್ರಗತಿ ಪರಿಶೀಲನೆ ನಡೆಸುವುದಾಗಿ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ/ಜಂಟಿ ಕೃಷಿ ನಿರ್ದೇಶಕರು, ಉಡುಪಿ)**

- ಜಲಾಮೃತ ಯೋಜನೆಯ ಬಗ್ಗೆ ಚರ್ಚಿಸಲಾಗಿ, ಜಲಾಮೃತ ಯೋಜನೆಯಡಿ ಅಭಿವೃದ್ಧಿ ಪಡಿಸಲಾಗುವ ಕೆರೆಗಳನ್ನು ಈಗಾಗಲೇ ಜಿಲ್ಲಾ ಮಟ್ಟದ ಸಮಿತಿಯಲ್ಲಿ ಅನುಮೋದನೆ ಪಡೆದು ಸರಕಾರಕ್ಕೆ ಸಲ್ಲಿಸಲಾಗಿರುವುದಾಗಿ ಹಾಗೂ ಸರಕಾರದಿಂದ ಮೊದಲ ಕಂತಿನ ಹಣ ಬಿಡುಗಡೆಯಾಗಿರುವ ಬಗ್ಗೆ ಜಿಲ್ಲಾ ಪಂಚಾಯತ್ ಅಧಿಕಾರಿಗಳು ತಿಳಿಸಿದರು. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಪಂಚಾಯತ್ ಅಧಿಕಾರಿಯವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ)**

- ಕೈಗಾರಿಕಾ ಪ್ರದೇಶಗಳಲ್ಲಿ ಪ್ರಸ್ತುತ ಸ್ವೇಚ್ಛಾಚಾರವಾಗಿ ಆಸ್ತಿ ತೆರಿಗೆಯನ್ನು ವಸೂಲಿ ಮಾಡುತ್ತಿರುವ ಬಗ್ಗೆ ದೂರುಗಳು ಬಂದಿರುವುದಾಗಿ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸಭೆಯಲ್ಲಿ ತಿಳಿಸಿದರು. ಆದ್ದರಿಂದ ಕೂಡಲೇ ಸಮಂಜಸವಾದ ದರವನ್ನು ನಿಗದಿಪಡಿಸಿ ತೆರಿಗೆ ವಸೂಲಿ ಮಾಡಿಕೊಂಡು ಆ ಪ್ರದೇಶಗಳ ಮೂಲಭೂತ ಅವಶ್ಯಕತೆಗಳನ್ನು ಪೂರೈಸಲು ಸೂಕ್ತ ಕ್ರಮವಹಿಸುವಂತೆ ಪೌರಾಯುಕ್ತರು ನಗರಸಭೆ ಉಡುಪಿ ಹಾಗೂ ಜಂಟಿ ನಿರ್ದೇಶಕರು ಕೈಗಾರಿಕಾ ಇಲಾಖೆ ಇವರಿಗೆ ಸೂಚಿಸಿದರು. ಹಾಗೂ ತೆರಿಗೆ ವಸೂಲಿಗೆ ಸಂಬಂಧಿಸಿದಂತೆ ನಗರ ಪ್ರದೇಶದ ಹಾಗೂ ಗ್ರಾಮ ಪಂಚಾಯತ್ ವ್ಯಾಪ್ತಿಯ ಕೈಗಾರಿಕಾ ಪ್ರದೇಶದಲ್ಲಿ ಸಮಂಜಸವಾದ ದರವನ್ನು ನಿಗದಿಪಡಿಸುವಂತೆ ಹಾಗೂ ಕೈಗಾರಿಕಾ ಪ್ರದೇಶಗಳಲ್ಲಿ ರಸ್ತೆ ಕಾಮಗಾರಿಗಳನ್ನು, ಬೀದಿ ದೀಪಗಳನ್ನು ಸರಿಪಡಿಸಲು ಸೂಕ್ತ ಕ್ರಮವಹಿಸುವಂತೆ ಪೌರಾಯುಕ್ತರು ನಗರಸಭೆ, ಯೋಜನಾ ನಿರ್ದೇಶಕರು ನಗರಾಭಿವೃದ್ಧಿ ಕೋಶ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ / ಪೌರಾಯುಕ್ತರು ನಗರಸಭೆ/ ಯೋಜನಾ ನಿರ್ದೇಶಕರು ನಗರಾಭಿವೃದ್ಧಿ ಕೋಶ/ ಜಂಟಿ ನಿರ್ದೇಶಕರು ಕೈಗಾರಿಕಾ ಇಲಾಖೆ)**

- ಸಹಕಾರಿ ಸಂಘಗಳ liquidation ಬಗ್ಗೆ ಚರ್ಚಿಸಲಾಗಿ, ಎಷ್ಟು ಪ್ರಕರಣಗಳು ಇದೆ, ಎಷ್ಟು ಪ್ರಕರಣಗಳು ಬಾಕಿ ಇದೆ ಎಂಬ ಬಗ್ಗೆ ಪ್ರಸ್ತುತ ವಸ್ತುಸ್ಥಿತಿ ವರದಿ ನೀಡಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ: ಸಹಕಾರಿ ಸಂಘಗಳ ಉಪನಿಂಬಂಧಕರು, ಉಡುಪಿ )**

- ವಾರಾಹಿಯಿಂದ ಉಡುಪಿ ಜಿಲ್ಲೆಗೆ ನೀರು ಸರಬರಾಜು ಬಗ್ಗೆ KUIDFC ಅಭಿಯಂತರರಿಂದ ವಿವರಣೆ ಪಡೆಯಲಾಗಿದ್ದು, ಕುಡಿಯುವ ನೀರಿನ ಕಾಮಗಾರಿಯಾಗಿದ್ದು, ತ್ವರಿತಗತಿಯಲ್ಲಿ ಅನುಷ್ಠಾನಗೊಳಿಸುವಂತೆ KUIDFC ಅಭಿಯಂತರರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : KUIDFC ಅಭಿಯಂತರರು)**

- ಮೂಕಾಂಬಿಕಾ ದೇವಸ್ಥಾನದ ವಿವಿಧ ಕಾಮಗಾರಿಗಳು ಸಮರ್ಪಕವಾಗಿ ಆಗದಿರುವುದು, ಹೊಸ ಭೋಜನ ಶಾಲೆಯ ಅಡುಗೆ ಮನೆಯ boiler ಗಳ ಸಮಸ್ಯೆ, ಮೆಟ್ಟಿಲುಗಳು ಜಾರುವ ಸಮಸ್ಯೆ, ಭಕ್ತಾಧಿಗಳಿಗೆ ಸರಿಯಾದ ಸಮಯಕ್ಕೆ ಅನ್ನಪ್ರಸಾದ ದೊರೆಯುವುದು ವಿಳಂಬವಾಗುತ್ತಿರುವ ಬಗ್ಗೆ ದೂರುಗಳು ಬರುತ್ತಿರುವ ವಿಷಯಗಳ ಬಗ್ಗೆ ಚರ್ಚಿಸಲಾಗಿ, ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದಲ್ಲಿ ಕೈಗೊಳ್ಳಲಾದ ನೂತನ ಭೋಜನ ಶಾಲೆ, ಒಳಚರಂಡಿ , ಕುಡಿಯುವ ನೀರಿನ ಸಮಸ್ಯೆ, ಅನ್ನ ಪ್ರಸಾದ ವಿಳಂಬದ ಸಮಸ್ಯೆ ಹಾಗೂ ವಿವಿಧ ಸಮಸ್ಯೆಗಳ ಬಗ್ಗೆ ಪರಿಶೀಲನೆ ನಡೆಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ಕರೆದು ಅಗತ್ಯ ಕ್ರಮ ವಹಿಸಿ ತುರ್ತಾಗಿ ಭೋಜನಾ

ಶಾಲೆಯ ವ್ಯವಸ್ಥೆಯನ್ನು ಸರಿಪಡಿಸಲು ಹಾಗೂ ಕ್ಲಪ್ತ ಸಮಯದಲ್ಲಿ ಅನ್ನಪ್ರಸಾದ ಸಿಗುವಲ್ಲಿ ಕ್ರಮ ವಹಿಸಲು ಕಾರ್ಯನಿರ್ವಹಣಾಧಿಕಾರಿ, ಮೂಕಾಂಬಿಕಾ ದೇವಸ್ಥಾನ, ಕೊಲ್ಲೂರು ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಕಾರ್ಯನಿರ್ವಹಣಾಧಿಕಾರಿ, ಮೂಕಾಂಬಿಕಾ ದೇವಸ್ಥಾನ, ಕೊಲ್ಲೂರು)**

- ಡೀಮ್ಡ್ ಫಾರೆಸ್ಟ್ ಗೆ ಸಂಬಂಧಿಸಿದಂತೆ ಚರ್ಚಿಸಲಾಗಿ ಡೀಮ್ಡ್ ಫಾರೆಸ್ಟ್ ವ್ಯಾಪ್ತಿಗೆ ಬರುವ ಸರ್ವೆ ನಂಬ್ರಗಳ ಅಧಿಸೂಚನೆ ಹೊರಡಿಸಲಾಗಿದೆಯೇ? ಅಧಿಸೂಚನೆ ಹೊರಡಿಸದಿದ್ದರೆ ಡೀಮ್ಡ್ ಫಾರೆಸ್ಟ್ ಪಟ್ಟಿಯನ್ನು ಅಧಿಕೃತವಾಗಿಹೊರಡಿಸಿದವರು ಯಾರು? ಡೀಮ್ಡ್ ಫಾರೆಸ್ಟ್ ಪಟ್ಟಿಯ ಬಗ್ಗೆ ಸಮಂಜಸವಾದ, ಸಮರ್ಪಕವಾದ ವಿವರಣೆ ನೀಡಲು ಹಾಗೂ ಈ ಬಗ್ಗೆ ಪರಿಶೀಲಿಸಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ: ಉಪ ಅರಣ್ಯ ಸಂರಕ್ಷಣಾಧಿಕಾರಿ, ಕುಂದಾಪುರ, ಸಹಾಯಕ ಕಮೀಷನರ್ ಉಡುಪಿ)**

(ಎಂ.ಮಹೇಶ್ವರ ರಾವ್, ಭಾ.ಆ.ಸೇ)
ಸರ್ಕಾರದ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
ಹಾಗೂ
ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ